
ಸಾಲಗುಂದೆ ಎಪ್ಪತ್ತು : ಸಾಂಸ್ಕೃತಿಕ ಅಧ್ಯಯನ

(ಎಂ.ಫಿಲ್ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯದ ಸಮಾಜ ವಿಜ್ಞಾನಗಳ ನಿಕಾಯದ
ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗಕ್ಕೆ ಸಾದರಪಡಿಸಿದ ಪ್ರೌಢಪ್ರಬಂಧ)

ಸಂಶೋಧಕರು
ರಡ್ಡೆಪ್ಪ
ನೋಂದಣಿ ಸಂಖ್ಯೆ : ೧೬೦೧೦೬೦೩೦೦೧೩



ಮಾರ್ಗದರ್ಶಕರು
ಡಾ. ವಾಸುದೇವ ಬಡಿಗೇರ
ಪ್ರಾಧ್ಯಾಪಕರು

ಸಮಾಜ ವಿಜ್ಞಾನಗಳ ನಿಕಾಯ
ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ – ೫೮೩ ೨೭೬
೨೦೧೯

Valuated by

[illegible]

28/11/2019

ಸಾಲಗುಂದೆ ಎಪ್ಪತ್ತು : ಸಾಂಸ್ಕೃತಿಕ ಅಧ್ಯಯನ

(ಎಂ.ಫಿಲ್ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯದ ಸಮಾಜ ವಿಜ್ಞಾನಗಳ ನಿಕಾಯದ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗಕ್ಕೆ ಸಾದರಪಡಿಸಿದ ಪ್ರೌಢಪ್ರಬಂಧ)

ಸಂಶೋಧಕರು

ರಡ್ಡೆಪ್ಪ

ನೋಂದಣಿ ಸಂಖ್ಯೆ : ೧೮೦೧೦೮೦೩೦೦೧೩

ಮಾರ್ಗದರ್ಶಕರು

ಡಾ. ವಾಸುದೇವ ಬಡಿಗೇರ

ಪ್ರಾಧ್ಯಾಪಕರು

ಸಮಾಜ ವಿಜ್ಞಾನಗಳ ನಿಕಾಯ

ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ-೫೮೩ ೨೭೬.

೨೦೧೯

ಸಂಶೋಧಕರ ಪ್ರಮಾಣ ಪತ್ರ

"ಸಾಲಗುಂದೆ ಎಪ್ಪತ್ತು : ಸಾಂಸ್ಕೃತಿಕ ಅಧ್ಯಯನ" ಎಂಬ ಶೀರ್ಷಿಕೆಯ ಪ್ರೌಢಪ್ರಬಂಧವನ್ನು **ಡಾ. ವಾಸುದೇವ ಬಡಿಗೇರ** ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದೇನೆ. ಕನ್ನಡ ವಿಶ್ವವಿದ್ಯಾಲಯ, ಹಂಪಿ, **ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗಕ್ಕೆ** ಎಂ.ಫಿಲ್ ಪದವಿಗಾಗಿ ಸಲ್ಲಿಸುತ್ತಿರುವ ಪ್ರಸ್ತುತ ಪ್ರೌಢಪ್ರಬಂಧವನ್ನು ಅಥವಾ ಈ ಪ್ರಬಂಧದ ಯಾವುದೇ ಭಾಗವನ್ನು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ.

ದಿನಾಂಕ : ೨೭/೦೮/೨೦೧೯

ಸ್ಥಳ : ವಿದ್ಯಾರಣ್ಯ

ರ. [signature]

ಸಂಶೋಧನಾ ವಿದ್ಯಾರ್ಥಿ

(ರಡ್ಡೆಪ್ಪ)

ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ-೫೮೩ ೨೭೬.

ಮಾರ್ಗದರ್ಶಕರ ದೃಢೀಕರಣ ಪತ್ರ

ರಡ್ಡೆಪ್ಪ ಇವರು **"ಸಾಲಗುಂದೆ ಎಪ್ಪತ್ತು : ಸಾಂಸ್ಕೃತಿಕ ಅಧ್ಯಯನ"** ಎಂಬ ಶೀರ್ಷಿಕೆಯ ಪ್ರೌಢಪ್ರಬಂಧವನ್ನು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದು, ಎಂ.ಫಿಲ್ ಪದವಿಯ ಅವಶ್ಯಕತೆಗಾಗಿ ಕನ್ನಡ ವಿಶ್ವವಿದ್ಯಾಲಯ, ಹಂಪಿ, **ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗಕ್ಕೆ** ಸಲ್ಲಿಸಿದ್ದಾರೆ. ಪ್ರಸ್ತುತ ಪೌಢಪ್ರಬಂಧವು ಅವರ ಸ್ವಂತ ಪರಿಶ್ರಮದ ಫಲವಾಗಿದ್ದು, ಈ ಮೊದಲು ಇದನ್ನು ಯಾವುದೇ ಬಗೆಯ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಈ ಮೂಲಕ ದೃಢೀಕರಿಸುತ್ತೇನೆ.

ದಿನಾಂಕ : ೨೪/೦೮/೨೦೧೯

ಸ್ಥಳ : ವಿದ್ಯಾರಣ್ಯ

ಮಾರ್ಗದರ್ಶಕರು

(ಡಾ. ವಾಸುದೇವ ಬಡಿಗೇರ)

ಪ್ರಾಧ್ಯಾಪಕರು

ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ-೫೮೩ ೨೭೬.

ಸಂಕೇತ ಸೂಚಿ

ಕ.ದೇ.ಕೋ.ರಾ. – ಕರ್ನಾಟಕ ದೇವಾಲಯ ಕೋಶ ರಾಯಚೂರು ಜಿಲ್ಲೆ.

ಕ.ಪು.ನೆ. – ಕರ್ನಾಟಕದ ಪುರಾತತ್ವ ನೆಲೆಗಳು.

ಕ.ವಿ.ಶಾ.ಸಂ.ರಾ. – ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ: ೭ ರಾಯಚೂರು ಜಿಲ್ಲೆ.

ಕು.ಸಿಂ. – ಕರುಗೋಡು ಸಿಂಧರು.

ಮು.ಇ. – ಮುಕ್ಕುಂದಿ ಇತಿಹಾಸ ದೇವಾಲಯ ಮತ್ತು ಶಾಸನಗಳನ್ನು ಅನುಲಕ್ಷಿಸಿ.

ರಾ.ಕೋ.ಜಿ.ಕೋ.ಅ. – ರಾಯಚೂರು ಮತ್ತು ಕೊಪ್ಪಳ ಜಿಲ್ಲೆಗಳ ಕೋಟೆಗಳು: ಒಂದು ಅಧ್ಯಯನ.

A.R. - Annual Reports of Indian Epigraphy.

E.I. - Epigraphia Indica.

I.A. - Indian Antiquery.

I.K. - Inscriptions of Karnataka Vol. III and IV.

ಸಾಲಗುಂದೆ ಎಪ್ಪತ್ತು : ಸಾಂಸ್ಕೃತಿಕ ಅಧ್ಯಯನ

ವಿಷಯ ಸೂಚಿ

೧. ಪೀಠಿಕೆ

೧.೧ ಅಧ್ಯಯನದ ಸಮೀಕ್ಷೆ

೧.೨ ಅಧ್ಯಯನದ ಉದ್ದೇಶ

೧.೩ ಅಧ್ಯಯನದ ವ್ಯಾಪ್ತಿ

೧.೪ ಅಧ್ಯಯನದ ವಿಧಾನ

೧.೫ ಅಧ್ಯಯನದ ಸ್ವರೂಪ

೧. ಪೀಠಿಕೆ

ಒಂದು ಕಾಲಘಟ್ಟದಲ್ಲಿ ನಿರ್ಲಕ್ಷ್ಯಕ್ಕೆ ಒಳಗಾದ ವಿಷಯ, ಮತ್ತೊಂದು ಕಾಲಘಟ್ಟದಲ್ಲಿ ಮಹತ್ವ ಪಡೆದುಕೊಳ್ಳುತ್ತದೆಎನ್ನುವಂತೆ ಹಿಂದಿನ ಶತಮಾನದಲ್ಲಿದ್ದ ಇತಿಹಾಸ ರಚನೆಯ ಅಧ್ಯಯನ ಜಾಗತಿಕವಾಗಿ ನಗರ, ಪಟ್ಟಣ ಹಾಗೂ ರಾಜಕೇಂದ್ರಿತ ಹಿನ್ನೆಲೆಯಲ್ಲಿ ರೂಪಗೊಂಡರು, ಕಾಲಾನಂತರದಲ್ಲಿ ಸ್ಥಳೀಯವಾಗಿ ಹಳ್ಳಿ, ಗ್ರಾಮ ಹಾಗೂ ಜನಕೇಂದ್ರಿತ ಹಿನ್ನೆಲೆಯ ರೂಪಕ್ಕೆ ಬದಲಾಯಿತು. ಈ ಹಿಂದೆ ಕಡೆಗಣನೆಗೆ ಒಳಗಾಗಿದ್ದ ಸ್ಥಳೀಯ ಅಧ್ಯಯನ ನಂತರದ ದಿನಮಾನಗಳಲ್ಲಿ ಹೆಚ್ಚು ಮಹತ್ವ ಪಡೆದುಕೊಂಡಿತು. ಕಟ್ಟಡ ನಿರ್ಮಿಸುವಾಗ ಗಾರೆಯವನೊಬ್ಬ ಕೆಳಹಂತದ ತಳಪಾಯ ಗಟ್ಟಿಗೊಳಿಸಿ ಅದರ ಮೇಲೆ ಗೋಡೆಯನ್ನು ನಿರ್ಮಿಸುವಂತೆ, ಕೆಳಹಂತದಿಂದ ಮೂಡಿಬರುವ ಸ್ಥಳೀಯ ಇತಿಹಾಸದ ನಿರ್ಮಾಣದಿಂದ, ನಾಡಿನ ಹಾಗೂ ದೇಶದ ಇತಿಹಾಸ ಕಟ್ಟಲು ಸಾಧ್ಯ. ಸ್ಥಳೀಯ ಇತಿಹಾಸ ಹಲವು ವೈವಿಧ್ಯತೆಗಳಿಂದ ಕೂಡಿದ ವಿಷಯ ವಸ್ತು ಹೊಂದಿರುವುದರ ಜೊತೆಗೆ ಆ ಪ್ರದೇಶದ ಸಂಸ್ಕೃತಿಯನ್ನು ಪ್ರತಿನಿಧಿಸುತ್ತದೆ.

"ಸ್ಥಳೀಯ ಚರಿತ್ರೆಯೆಂಬುದು ಒಂದು ನಿರ್ದಿಷ್ಟ ಭೌಗೋಳಿಕ ಪರಿಸರದಲ್ಲಿ ಹಿಂದೆ ಸಂಭವಿಸಿದ ಘಟನೆಗಳ ಅಥವಾ ಬದುಕಿ ಬಾಳಿದ ಜನಾಂಗಗಳ ಅಥವಾ ಸಮುದಾಯಗಳ ಅಧ್ಯಯನ; ಎಲ್ಲ ಕಾಲಘಟ್ಟಗಳಲ್ಲಿಯ ಮನುಷ್ಯನ ಸ್ಥಿತಿ-ಗತಿಗಳ ಅಧ್ಯಯನ; ಹಾಗೂ ಗತಕಾಲದ ಎಲ್ಲ ಆಗು-ಹೋಗುಗಳ ಬಗೆಗಿನ ಕಾರಣ, ಉದ್ದೇಶ ಹಾಗೂ ಪರಸ್ಪರ ಸಂಬಂಧಗಳನ್ನು ನಿಖರವಾಗಿ ಅರಿತುಕೊಳ್ಳುವ ಪ್ರಯತ್ನ. ಇದು ವಿಪುಲ ದಾಖಲಿತ ಮಾಹಿತಿಯನ್ನು ಅವಲಂಬಿಸಿರುವಂಥಾದ್ದು ಮಾತ್ರವಲ್ಲ, ಸ್ಥಳೀಯ ಹಾಗೂ ರಾಷ್ಟ್ರೀಯ ಸಂದರ್ಭಗಳನ್ನು ಹೋಲಿಕೆಯ ಸ್ವರೂಪದಲ್ಲಿ ಮಂಡಿಸುವಂಥಾದ್ದು" ಎಂದು ಪ್ರೊ. ಲಕ್ಷ್ಮಣ ತೆಲಗಾವಿ ಅವರು ಸ್ಥಳೀಯ ಇತಿಹಾಸವನ್ನು ವ್ಯಾಖ್ಯಾನಿಸಿದ್ದಾರೆ.[೧] ಪ್ರಸ್ತುತ ದಿನಮಾನಗಳಲ್ಲಿ ಸ್ಥಳೀಯ ಇತಿಹಾಸ ಬರವಣಿಗೆಯ ಮಹತ್ವ ಹೆಚ್ಚಾಗಿದೆ. ಕಾರಣ ಜನಸಾಮಾನ್ಯರ ಜೊತೆಗೆ ಬೆಸೆದುಕೊಂಡ ವಿಷಯಗಳು ಒಳಗೊಂಡಂತೆ ಸ್ಥಳೀಯ ಸಾಂಸ್ಕೃತಿಕ ಇತಿಹಾಸವನ್ನು ಕಟ್ಟಿಕೊಡುತ್ತದೆ. ಈ ಹಿನ್ನೆಲೆಯಲ್ಲಿ ಪ್ರಸ್ತುತ ಪ್ರಬಂಧವು ಒಂದು ಭೌಗೋಳಿಕ ಪರಿಸರದಲ್ಲಿ ನಿರ್ಲಕ್ಷ್ಯಕ್ಕೆ ಒಳಗಾದ ಅಲಕ್ಷಿತ ವಿಷಯ ಹಾಗೂ ಕುರುಹುಗಳನ್ನು ಬಳಸಿಕೊಂಡು ಇತಿಹಾಸದ ವಿವಿಧ ಆಯಾಮಗಳನ್ನು ಅಧ್ಯಯನ ಮಾಡಲು ಬಯಸಿದೆ.

ಕರ್ನಾಟಕದ ಇತಿಹಾಸದಲ್ಲಿ ಪ್ರಾಗಿತಿಹಾಸಕಾಲದಿಂದಲೂ ತನ್ನ ಇರುವಿಕೆಯನ್ನು ಗುರುತಿಸಿಕೊಂಡಿರುವ ಸಾಲಗುಂದ, ಶಾಸನಗಳಲ್ಲಿ ಸಾಲಗುಂದೆ ಎಂದೂ ಉಲ್ಲೇಖವಾಗಿದೆ. ಇತಿಹಾಸ ಕಾಲಘಟ್ಟದಲ್ಲಿ ವಿವಿಧ ಮನೆತನಗಳ ಆಳ್ವಿಕೆಗೆ ಒಳಪಟ್ಟು, ಕಲ್ಯಾಣ ಚಾಲುಕ್ಯರ ಆಳ್ವಿಕೆಯ ಕಾಲದಲ್ಲಿ

ಅಗ್ರಹಾರ ಮತ್ತು ಆಡಳಿತ ಘಟಕವಾಗಿತ್ತು. ಕಲ್ಯಾಣ ಚಾಲುಕ್ಯರ ಸಾಮಂತರಾಗಿ ಸಾಲಗುಂದೆಯ ಸಿಂಧರು ಈ ಪರಿಸರವನ್ನು ಆಳಿದ್ದಾರೆ. ಈ ಅವಧಿಯಲ್ಲಿ ಸಾಲಗುಂದೆ ೭೦ ಎಂಬುದಾಗಿ ಕರೆಯಲ್ಪಟ್ಟಿದ್ದು, ೭೦ ಗ್ರಾಮಗಳ ಆಡಳಿತ ಕೇಂದ್ರವಾಗಿತ್ತು. ಮುಂದೆ ವಿಜಯನಗರ ಕಾಲದಲ್ಲಿಯೂ ಸಾಲಗುಂದ ಪ್ರಮುಖ ಸ್ಥಳವಾಗಿದ್ದು, ರವುಡಿಕುಂದೆ ಸೀಮೆಯ ವ್ಯಾಪ್ತಿಯಲ್ಲಿ ಒಳಗೊಂಡಿತು. ಸಾಲಗುಂದವು ಪ್ರಾಗಿತಿಹಾಸಕಾಲದಿಂದಲೂ ವಿವಿಧ ಕಾಲಘಟ್ಟಗಳಲ್ಲಿ ತನ್ನದೇ ಆದ ಸಾಂಸ್ಕೃತಿಕ ಪರಂಪರೆಯನ್ನು ಉಳಿಸಿ ಬೆಳೆಸಿಕೊಂಡು ಬಂದಿದೆ. ಈ ಹಿನ್ನೆಲೆಯಲ್ಲಿ ಪ್ರಸ್ತುತ ಪ್ರಬಂಧವು **"ಸಾಲಗುಂದೆ ಎಪ್ಪತ್ತು: ಸಾಂಸ್ಕೃತಿಕ ಅಧ್ಯಯನ"** ಎಂಬ ಶೀರ್ಷಿಕೆಯಡಿಯಲ್ಲಿ ಸಾಲಗುಂದ ಪರಿಸರವನ್ನು ಚಾರಿತ್ರಿಕವಾಗಿ ಹಾಗೂ ಸಾಂಸ್ಕೃತಿಕವಾಗಿ ಅಧ್ಯಯನ ಮಾಡಲು ಉದ್ದೇಶಿಸಿದೆ.

ಈ ಪರಿಸರದ ಪ್ರತಿಯೊಂದು ಗ್ರಾಮವು ನಾಡಿನ ಸಂಸ್ಕೃತಿಯನ್ನು ಪ್ರತಿನಿಧಿಸುವ ವಾಹಕಗಳು. ಈ ಪರಿಸರದ ಚಾರಿತ್ರಿಕ, ಸಾಂಸ್ಕೃತಿಕ ಇತಿಹಾಸ ನಿರ್ಮಾಣದಲ್ಲಿ ಇಲ್ಲಿನ ಐತಿಹಾಸಿಕ ಕುರುಹುಗಳು ಅಮೂಲಾಗ್ರ ಪಾತ್ರವಹಿಸುತ್ತವೆ. ಇಲ್ಲಿನ ಪುರಾತತ್ವ ನೆಲೆಗಳು, ಶಾಸನಗಳು, ದೇವಾಲಯಗಳು, ವೀರಗಲ್ಲುಗಳು, ಕೋಟೆ ಕೊತ್ತಲುಗಳು, ಐತಿಹ್ಯಗಳು ಸಾಲಗುಂದ ಪರಿಸರದ ಇತಿಹಾಸ ಮತ್ತು ಪುರಾತತ್ವ ಅಧ್ಯಯನದ ಆಕರ ಸಂಪತ್ತುಗಳಾಗಿವೆ. ಮೌಖಿಕ ಪರಂಪರೆಯಲ್ಲಿ ಅಡಕವಾಗಿರುವ ಈ ಪರಿಸರದಲ್ಲಿನ ಐತಿಹ್ಯ, ನಂಬಿಕೆ, ಆಚರಣೆ, ಜಾತ್ರೆ ಮತ್ತು ಉತ್ಸವಗಳು ಈ ಪರಿಸರದ ಸಾಂಸ್ಕೃತಿಕ ವೈಶಿಷ್ಟ್ಯತೆಗೆ ಸಾಕ್ಷಿಯಾಗಿ ನಿಂತಿವೆ.

೧.೧ ಅಧ್ಯಯನದ ಸಮೀಕ್ಷೆ

ಪ್ರಸ್ತುತ ಅಧ್ಯಯನಕ್ಕೆ ಸಂಬಂಧಪಟ್ಟಂತೆ ಇದುವರೆಗೆ ಪ್ರತ್ಯೇಕವಾದ ಯಾವುದೇ ಸಂಶೋಧನಾ ಗ್ರಂಥವೂ ಹೊರಬಂದಿರುವುದಿಲ್ಲ. ಆದರೆ ಪ್ರಸ್ತುತ ಅಧ್ಯಯನದ ಕೆಲವು ವಿಷಯಗಳಿಗೆ ಸಂಬಂಧಿಸಿದಂತೆ ಲೇಖನಗಳು, ಪತ್ರಿಕಾ ವರದಿಗಳು, ಪ್ರಕಟಿತ ಕೃತಿಗಳಿವೆ. ಈ ವಿಷಯಕ್ಕೆ ಪೂರಕವಾಗಿ ಚಾರಿತ್ರಿಕ ಮತ್ತು ಮೌಖಿಕ ಆಕರಗಳೊಂದಿಗೆ ಪ್ರಕಟಿತ ಗ್ರಂಥಗಳು ಹಾಗೂ ಲೇಖನಗಳನ್ನು ಪರೀಶಿಲಿಸಲಾಗಿದ್ದು ಇಲ್ಲಿನ ಇತಿಹಾಸ, ಪುರಾತತ್ವ ಹಾಗೂ ಸಾಂಸ್ಕೃತಿಕ ಇತಿಹಾಸದ ಕುರಿತು ಸಮಗ್ರ ಮಾಹಿತಿ ಪ್ರಸ್ತಾಪವಾಗಿರುವುದಿಲ್ಲ. ಈ ಪರಿಸರದಲ್ಲಿ ಸಿಗುವ ಶಾಸನಗಳು, ದೇವಾಲಯಗಳು, ಬೆಟ್ಟಗುಡ್ಡಗಳ ಮಾಹಿತಿ ದೊರೆತರೂ, ಇಲ್ಲಿ ಇನ್ನೂ ಸಿಗಬಹುದಾದ ಪುರಾತತ್ವ ನೆಲೆಗಳು, ದೇವಾಲಯಗಳು, ಮೂರ್ತಿಶಿಲ್ಪಗಳು, ವೀರಗಲ್ಲುಗಳು, ನಂಬಿಕೆ ಮತ್ತು ಆಚರಣೆಗಳು ಇತಿಹಾಸದ ಪುಟಗಳಲ್ಲಿ ಸೇರದೆ ಹೊರಗುಳಿದಿವೆ. ಆದ್ದರಿಂದ ಪ್ರಸ್ತುತ ವಿಷಯಕ್ಕೆ ಸಂಬಂಧಿಸಿದಂತೆ ಪ್ರಮುಖ

ಹಾಗೂ ಪೂರಕ ಮಾಹಿತಿ ಸಂಗ್ರಹಿಸಿ, ವಿಶ್ಲೇಷಿಸುವ ಮೂಲಕ ಇದುವರೆಗೆ ನಡೆದ ಅಧ್ಯಯನಗಳ ಸಮೀಕ್ಷೆ ಮಾಡಲಾಗಿದೆ. ಅವುಗಳ ಲೇಖಕರು, ಕೃತಿ ಹಾಗೂ ಒಳಗೊಂಡ ವಿಷಯ ಈ ಕೆಳಗಿನಂತಿದೆ.

ಶಾಶ್ವತಸ್ವಾಮಿ ಮುಕ್ಕುಂದಿಮಠ ಅವರ ಸಂಪಾದಕತ್ವದಲ್ಲಿ ಹೊರಬಂದ 'ಹೊನ್ನಸಿರಿ' (೧೯೯೪) ಕೃತಿ ಈ ಭಾಗದ ಕೆಲವು ದೇವಾಲಯಗಳ ಕುರಿತಾದ ಮಾಹಿತಿ ದೊರೆಯುತ್ತದೆ. ಚನ್ನಬಸಪ್ಪ ಎಸ್ ಪಾಟೀಲ್ ಮತ್ತು ವಿನೋದ ಸಿ ಪಾಟೀಲ್ ಅವರ ಸಂಪಾದಕತ್ವದಲ್ಲಿ ಹೊರಬಂದ *'Inscription of Karnataka VOL. IV, Raichur District' (1998)* ಕೃತಿಯಲ್ಲಿ ಈ ಪರಿಸರದ ಕೆಲವು ಶಾಸನಗಳನ್ನು ವಿಶ್ಲೇಷಿಸಿದ್ದಾರೆ. ಚನ್ನಬಸಪ್ಪ ಹೀರೆಮಠ ಅವರು 'ರಾಯಚೂರು ಕೊಪ್ಪಳ ಜಿಲ್ಲೆಯ ಶಾಸನಗಳು' (೧೯೯೯) ಎಂಬ ಕೃತಿಯಲ್ಲಿ ಈ ಪರಿಸರದ ಶಾಸನಗಳನ್ನು ವಿವರಿಸಿದ್ದಾರೆ. ಸುಜಾತ ಮಲ್ಲನಗೌಡ ಅವರು 'ರಾಯಚೂರು ಮತ್ತು ಕೊಪ್ಪಳ ಜಿಲ್ಲೆಗಳ ಕೋಟೆಗಳು: ಒಂದು ಅಧ್ಯಯನ' (೨೦೦೦) ಎಂಬ ಪಿಎಚ್.ಡಿ ಮಹಾಪ್ರಬಂಧದಲ್ಲಿ ಈ ಪರಿಸರದ ಮುಕ್ಕುಂದ, ರವುಡಕುಂದ ಕೋಟೆಗಳನ್ನು ಸಂಕ್ಷಿಪ್ತವಾಗಿ ವಿಶ್ಲೇಷಿಸಿದ್ದಾರೆ. ಆದರೆ ಸಾಲಗುಂದ ಕೋಟೆಯ ಉಲ್ಲೇಖಗಳಿಲ್ಲ. ಕೆ.ಬಿ. ಶಿವತಾರಕ್ ಅವರು ತಮ್ಮ 'ಕರ್ನಾಟಕದ ಪುರಾತತ್ವ ನೆಲೆಗಳು' (೨೦೦೧) ಎಂಬ ಗ್ರಂಥದಲ್ಲಿ ಸಾಲಗುಂದ ಪರಿಸರದಲ್ಲಿ ಬರುವ ರವುಡಕುಂದ, ಗೊಬ್ಬರಕಲ್ ನೆಲೆಗಳ ಬಗ್ಗೆ ಉಲ್ಲೇಖಿಸಿದ್ದಾರೆ. ತಿರುಪತಿ.ಜಿ ಅವರ 'ಮುಕ್ಕುಂದಿ ಇತಿಹಾಸ ಶಾಸನ ಮತ್ತು ದೇವಾಲಯಗಳನ್ನು ಅನುಲಕ್ಷಿಸಿ' (೨೦೦೭) ಎಂಬ ಎಂ.ಫಿಲ್ ಪ್ರೌಢಪ್ರಬಂಧದಲ್ಲಿ ಸಾಲಗುಂದೆ ಸಿಂಧರ ಸಂಕ್ಷಿಪ್ತ ವಿವರಣೆಯನ್ನು ನೀಡುವ ಪ್ರಯತ್ನ ಮಾಡಿದ್ದಾರೆ.

ಚನ್ನಬಸಪ್ಪ ಬಿ ಅವರ 'ರಾಯಚೂರು ಜಿಲ್ಲೆಯ ಚರಿತ್ರೆ, ಶಾಸನಗಳ ಹಿನ್ನೆಲೆಯಲ್ಲಿ' (೨೦೧೦) ಎಂಬ ಕೃತಿಯಲ್ಲಿ ಈ ಪರಿಸರದ ಅಗ್ರಹಾರ, ಮತ್ತು ಶಾಸನಗಳ ಕುರಿತು ವಿವರಿಸಿದ್ದಾರೆ. ಚನ್ನಬಸಪ್ಪ ಎಸ್.ಪಾಟೀಲ್ ಅವರ *'Temples of Bellary And Raichur Districts'* ಕೃತಿಯಲ್ಲಿ ಈ ಪರಿಸರದ ದೇವಾಲಯಗಳ ಕುರಿತು ವಿವರಿಸಿದ್ದಾರೆ. ಬಸವಪ್ರಭು ಪಾಟೀಲ್ ಬೆಟ್ಟದೂರು ಅವರ ಸಂಪಾದಕತ್ವದಲ್ಲಿ ಪ್ರಕಟಗೊಂಡ 'ಎಡೆದೊರೆ ರಾಯಚೂರು ಜಿಲ್ಲಾ ದರ್ಶನ' (೨೦೧೦) ಕೃತಿಯಲ್ಲಿ ಈ ಪರಿಸರದ ಪ್ರೇಕ್ಷಣೀಯ ಸ್ಥಳವಾದ ಸಿದ್ಧಪರ್ವತ ಅಂಭಾಮಠದ ಕುರಿತಾದ ಸಂಕ್ಷಿಪ್ತ ಮಾಹಿತಿ ದೊರೆಯುತ್ತದೆ. ಅಮರೇಶ ಯತಗಲ್ ರವರ ಸಂಪಾದಕತ್ವದಲ್ಲಿ ಪ್ರಕಟಗೊಂಡ 'ದೋ-ಅಬ್ ರಾಯಚೂರು ಇತಿಹಾಸ' (೨೦೧೦) ಕೃತಿ ಈ ಪರಿಸರಕ್ಕೆ ಸಂಬಂಧಿಸಿದ ಕೆಲವು ವಿಷಯಗಳನ್ನು ಒಳಗೊಂಡಿದೆ.

ದೇವರಕೊಂಡಾರೆಡ್ಡಿ ಅವರ ಸಂಪಾದಕತ್ವದಲ್ಲಿ ರಚಿತವಾದ 'ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೭ ರಾಯಚೂರು ಜಿಲ್ಲೆ' (೨೦೧೨) ಕೃತಿಯಲ್ಲಿ ರಾಯಚೂರು ಜಿಲ್ಲೆಯ ೮೧೮ ಶಾಸನಗಳ ಜೊತೆಗೆ ಸಾಲಗುಂದ ಪರಿಸರದ ಶಾಸನಗಳನ್ನು ಗುರುತಿಸಿ, ವಿಶ್ಲೇಷಿಸಲಾಗಿದೆ. ಈ ಕೃತಿಯ ಪ್ರಸ್ತಾವನೆಯಲ್ಲಿ ಸಾಲಗುಂದೆ ಸಿಂಧರನ್ನು ಒಳಗೊಂಡಂತೆ ಶಾಸನಗಳ ಆಧಾರದ ಮೇಲೆ ರಚಿತವಾಗಿರುವ ರಾಯಚೂರು ಜಿಲ್ಲೆಯ ರಾಜಕೀಯ ಇತಿಹಾಸವನ್ನು ವಿಶ್ಲೇಷಿಸಲಾಗಿದೆ. ಸಿ.ಎಸ್.ವಾಸುದೇವನ್ ಅವರು 'ಕರ್ನಾಟಕ ದೇವಾಲಯ ಕೋಶ ರಾಯಚೂರು ಜಿಲ್ಲೆ' (೨೦೧೨) ಎನ್ನುವ ಕೃತಿಯಲ್ಲಿ ಈ ಪರಿಸರದ ಕೆಲವು ದೇವಾಲಯಗಳ ಬಗ್ಗೆ ವಿವರಿಸಿದ್ದಾರೆ. ಚನ್ನಬಸವಯ್ಯ ಹೀರೆಮಠ ಅವರು 'ಪ್ರಾಚೀನ ಕರ್ನಾಟಕದ ರಾಜಕೀಯ ವಿಭಾಗಗಳು' (೨೦೧೪) ಎಂಬ ಕೃತಿ ಸಾಲಗುಂದೆ ಎಪ್ಪತ್ತು ಕುರಿತಾದ ಮಾಹಿತಿಯನ್ನು ಒದಗಿಸುತ್ತದೆ. ಹೆಚ್.ಎನ್.ಚಿತ್ರಗಾರ ಅವರು 'ರಾಯಚೂರು ಜಿಲ್ಲೆಯ ಪ್ರಾಚೀನ ದೇವಾಲಯಗಳು' ಎಂಬ ಕೃತಿಯಲ್ಲಿ ಈ ಪರಿಸರದ ಕೆಲವು ದೇವಾಲಯಗಳನ್ನು ವಿಶ್ಲೇಷಿಸಿದ್ದಾರೆ.

ದೀಪಕ ಆಲೂರ ಅವರ 'ಸಿಂಧ ಮನೆತನಗಳ ರಾಜಕೀಯ ಮತ್ತು ಸಾಂಸ್ಕೃತಿಕ ಅಧ್ಯಯನ' (೨೦೧೨) ಎಂಬ ಪಿಎಚ್.ಡಿ ಮಹಾಪ್ರಬಂಧವು ಇತರ ಶಾಖೆಯ ಸಿಂಧ ಮನೆತನಗಳ ಬಗ್ಗೆ ಮಾಹಿತಿಯನ್ನು ತಿಳಿಸುತ್ತದೆ. ಆದರೆ ಸಾಲಗುಂದೆ ಸಿಂಧ ಮನೆತನದ ಕುರಿತಾದ ಯಾವ ಮಾಹಿತಿಯನ್ನು ತಿಳಿಸುವುದಿಲ್ಲ. ಅಮರೇಶ ಹನುಮಂತ ಅವರ 'ರಾಯಚೂರು ದೋ-ಅಬ್ ಪ್ರದೇಶ: ಅಧಿಕಾರ ಮತ್ತು ಹೋರಾಟ' (೨೦೧೪) ಎಂಬ ಪಿಎಚ್.ಡಿ ಮಹಾಪ್ರಬಂಧ ಸಾಲಗುಂದೆ ಸಿಂಧರ ಕುರಿತಾದ ಸಂಕ್ಷಿಪ್ತ ರಾಜಕೀಯ ಇತಿಹಾಸವನ್ನು ಪರಿಚಯ ಮಾಡಿಕೊಡುತ್ತದೆ.

ಒಟ್ಟಾರೆಯಾಗಿ ಸಾಲಗುಂದ ಕುರಿತು ಏನೇ ಅಧ್ಯಯನಗಳು ನಡೆದಿದ್ದರೂ, ಅವುಗಳಲ್ಲಿ ಕೆಲವು ಅಂಶಗಳು ಮಾತ್ರ ಉಲ್ಲೇಖಗೊಂಡಿವೆ. ಈ ಮೇಲ್ಕಂಡ ಲೇಖನಗಳು ಹಾಗೂ ಕೃತಿಗಳು ಈ ಪ್ರದೇಶದ ಕೆಲ ವಿಷಯಗಳನ್ನು ಮಾತ್ರ ಒಳಗೊಂಡಿದ್ದು, ಈ ಪರಿಸರದಲ್ಲಿರುವ ಹಲವಾರು ಮಹತ್ವದ ಐತಿಹಾಸಿಕ ಕುರುಹುಗಳನ್ನು ಕ್ರೋಢಿಕರಿಸಿ ದಾಖಲಿಸುವ ಕಾರ್ಯ ಸಮಗ್ರವಾಗಿ ನಡೆದಿಲ್ಲ. ಈ ಹಿನ್ನೆಲೆಯಲ್ಲಿ ಇಲ್ಲಿನ ಕುರುಹುಗಳನ್ನು ದಾಖಲೆಗಳಾಗಿ ಪರಿಗಣಿಸಿ, ಪ್ರಸ್ತುತ ಅಧ್ಯಯನಕ್ಕೆ ಸಂಬಂಧಿಸಿದ ಚಾರಿತ್ರಿಕ, ಸಾಂಸ್ಕೃತಿಕ ಹಾಗೂ ಇತರೆ ಮೌಖಿಕ ಪರಂಪರೆಯ ಅಂಶಗಳನ್ನಾಧರಿಸಿ; ಸ್ಮಾರಕಗಳನ್ನಾಧರಿಸಿ; ವಿಭಿನ್ನ ದೃಷ್ಟಿಕೋನಗಳಿಂದ ವಿಶ್ಲೇಷಿಸುವ ಪ್ರಯತ್ನವಾಗಿ ಈ ಪರಿಸರದ ಇತಿಹಾಸ ಮತ್ತು ಪುರಾತತ್ವ ಹಾಗೂ ಸಾಂಸ್ಕೃತಿಕಅಧ್ಯಯನ ಕಟ್ಟುವ ಸಲುವಾಗಿ **"ಸಾಲಗುಂದೆ ಎಪ್ಪತ್ತು: ಸಾಂಸ್ಕೃತಿಕ ಅಧ್ಯಯನ"** ಎಂಬ ಶೀರ್ಷಿಕೆಯೊಂದಿಗೆ ಸಂಶೋಧನೆಯನ್ನು ಕೈಗೊಳ್ಳಲಾಗಿದೆ.

೧. ೨ ಅಧ್ಯಯನದ ಉದ್ದೇಶ

ಪ್ರಸ್ತುತ ಅಧ್ಯಯನ **"ಸಾಲಗುಂದೆ ಎಪ್ಪತ್ತು: ಸಾಂಸ್ಕೃತಿಕ ಅಧ್ಯಯನ"**ಎಂಬ ಶೀರ್ಷಿಕೆಯೊಂದಿಗೆ ಸಾಲಗುಂದ ಪರಿಸರದ ಚರಿತ್ರೆ ಮತ್ತು ಸಂಸ್ಕೃತಿಯನ್ನು ಈ ಮೂಲಕ ಬೆಳಕಿಗೆ ತರುವ ಉದ್ದೇಶವನ್ನು ಹೊಂದಿದೆ.

ನಾಡಿನ ಇತಿಹಾಸದಲ್ಲಿ ರಾಯಚೂರು ಜಿಲ್ಲೆಯ ಇತಿಹಾಸ ತುಂಬಾ ಮಹತ್ವತೆಯನ್ನು ಪಡೆದುಕೊಂಡಿದೆ. ಈ ಜಿಲ್ಲೆಯಲ್ಲಿ ಬಂದುಹೋಗುವ ಸಣ್ಣ ಪುಟ್ಟ ಮನೆತನಗಳ ಸಾಂಸ್ಕೃತಿಕ ಕೊಡುಗೆ ತುಂಬಾ ಅವಿಸ್ಮರಣೀಯವಾದದ್ದು. ಅದರಲ್ಲಿ ಸಾಲಗುಂದೆಯನ್ನು ಕೇಂದ್ರಸ್ಥಾನವನ್ನಾಗಿ ಮಾಡಿಕೊಂಡು ಆಳ್ವಿಕೆ ನಡೆಸಿದ ಸಾಲಗುಂದೆಯ ಸಿಂಧರು ರಾಯಚೂರು ಜಿಲ್ಲೆ ಇತಿಹಾಸದಲ್ಲಿ ತಮ್ಮದೆ ಆದ ಮಹತ್ವ ಪಡೆದಿರುವರು. ಆದರೆ ಇವರ ಕುರಿತಾದ ಸರಿಯಾದ ಇತಿಹಾಸ ತಿಳಿಸುವ ಅಧ್ಯಯನಗಳು ಶೂನ್ಯ ಅಥವಾ ಕೆಲವೇ ಕೆಲವು ಅಧ್ಯಯನಗಳು ಮಾತ್ರವೆಂದೂ ಹೇಳಬಹುದು. ಆದ್ದರಿಂದ, ಪ್ರಸ್ತುತ ಈ ಅಧ್ಯಯನ ಈ ಪರಿಸರದ ಸಂಸ್ಕೃತಿಯನ್ನು ಪ್ರತಿನಿಧಿಸುವ ನಿಟ್ಟಿನಲ್ಲಿ ತನ್ನ ಉದ್ದೇಶಗಳನ್ನು ಹೊಂದಿದೆ.

ಉದ್ದೇಶ ಅಧ್ಯಯನದ ಮಾರ್ಗವಿದ್ದಂತೆ, ಸರಿಯಾದ ಮಾರ್ಗವನ್ನು ಆಯ್ದುಕೊಂಡು ಹೋದರೆ ನೆಲೆ ತಲುಪಲು ಹೇಗೆ ಸಾಧ್ಯವೋ ಹಾಗೆ ಸರಿಯಾದ ಗುರಿ ಉದ್ದೇಶಗಳನ್ನು ಹೊಂದಿದ್ದರೆ, ಅಧ್ಯಯನವು ನೆಲೆ ತಲುಪಲು ಸಾಧ್ಯ. ಅದರಂತೆ ಪ್ರಸ್ತುತ ಅಧ್ಯಯನವು ಸಮಸ್ಯೆಯ ರೂಪದಲ್ಲಿ ಎತ್ತಿದ ಪ್ರಶ್ನೆಗಳಿಗೆ ಉತ್ತರ ಹುಡುಕುವ ಕಾರ್ಯವನ್ನು ಮಾಡುತ್ತದೆ. ಅಂದರೆ ಅಧ್ಯಯನದಲ್ಲಿ ಏನನ್ನು ಶೋಧಿಸಲು, ಪರೀಕ್ಷಿಸಲು ಮತ್ತು ಅರ್ಥಮಾಡಿಕೊಳ್ಳಲು ಪ್ರಯತ್ನಿಸಿದೆ ಎನ್ನುವುದನ್ನು ಹೇಳುತ್ತದೆ.

ಸ್ಥಳೀಯ ಭೌಗೋಳಿಕ ಅಂಶಗಳು ಇಲ್ಲಿನ ಇತಿಹಾಸ ಮತ್ತು ಸಂಸ್ಕೃತಿಯ ಮೇಲೆ ಬೀರಿರುವ ಪ್ರಭಾವವನ್ನು ವಿವರವಾಗಿ ಚರ್ಚಿಸಲಾಗಿದೆ. ಪ್ರಾಗಿತಿಹಾಸ ಕಾಲದಿಂದ ಹಳೆಶಿಲಾಯುಗ, ನವಶಿಲಾಯುಗ, ತಾಮ್ರಶಿಲಾಯುಗ, ಬೃಹತ್ ಶಿಲಾಯುಗ ಮತ್ತು ಆದಿಚಾರಿತ್ರಿಕ ಕಾಲದ ಕುರುಹುಗಳನ್ನು ವಿಶ್ಲೇಷಿಸಲಾಗಿದೆ. ಐತಿಹಾಸಿಕವಾಗಿ ಮೌರ್ಯರು, ಸಾತವಾಹನರು, ರಾಷ್ಟ್ರಕೂಟರು, ಕಲ್ಯಾಣ ಚಾಲುಕ್ಯರು, ದೇವಗಿರಿಯ ಸೇವುಣರು, ವಿಜಯನಗರದ ಅರಸರು, ಬಹಮನಿ ಸುಲ್ತಾನರು, ಕರಡಿಕಲ್ಲಿನ ಕದಂಬರು, ಐಹೇಯರು, ಸಾಲಗುಂದೆಯ ಸಿಂಧರು ಮತ್ತು ಇತರೆ ಸ್ಥಳೀಯ ಪಾಳೆಗಾರರ ಆಳ್ವಿಕೆಯನ್ನು ಪುರಾತತ್ವ ಕುರುಹುಗಳೊಂದಿಗೆ, ಚಾರಿತ್ರಿಕ ಮತ್ತು ಸಾಹಿತ್ಯಿಕ ಆಧಾರಗಳನ್ನು ಪ್ರಧಾನವಾಗಿಟ್ಟುಕೊಂಡು ವಿಶ್ಲೇಷಿಸಲಾಗಿದೆ.

ಭೌಗೋಳಿಕವಾಗಿ ತನ್ನದೆ ಆದ ವಿಶಿಷ್ಟ ಲಕ್ಷಣಗಳನ್ನು ಒಳಗೊಂಡ ಸಾಲಗುಂದ ಪರಿಸರದ ಸುತ್ತಮುತ್ತ ಹಳೆಶಿಲಾಯುಗದಿಂದ ಆದಿ ಚಾರಿತ್ರಿಕ ಕಾಲದ ಅವಶೇಷಗಳನ್ನು ಬೆಳಕಿಗೆ ತರುವುದರ ಮೂಲಕ ಆದಿಮಾನವನಿಂದ ಹಿಡಿದು ಆದಿ ಚಾರಿತ್ರಿಕ ಕಾಲದ ಸಂಸ್ಕೃತಿಯನ್ನು ವಿವೇಚಿಸುವ ಪ್ರಯತ್ನಮಾಡಲಾಗಿದೆ. ನೈಸರ್ಗಿಕವಾಗಿ ಮತ್ತು ಸಾಂಸ್ಕೃತಿಕವಾಗಿ ಈ ಪರಿಸರ ವಿಶಿಷ್ಟತೆಯನ್ನು ಪಡೆದಿದೆ. ಈ ಪರಿಸರದ ವ್ಯಾಪ್ತಿಯಲ್ಲಿ ಬರುವ ಕೆಲವು ಗ್ರಾಮಗಳು ಪ್ರಾಗೈತಿಹಾಸಿಕ ಹಾಗೂ ಐತಿಹಾಸಿಕವಾಗಿ ಮಹತ್ವ ಪಡೆದಿವೆ. ಅದರಂತೆ ಹಲವು ಕುರುಹುಗಳು ದೊರೆತಿವೆ. ಇಂತಹ ಸಂಸ್ಕೃತಿಯನ್ನು ಬಿಂಬಿಸುವ ಪ್ರತಿಯೊಂದು ಐತಿಹಾಸಿಕ ಅಂಶಗಳನ್ನು ದಾಖಲಿಸುವುದರ ಜೊತೆಗೆ, ಜನರಲ್ಲಿ ಐತಿಹಾಸಿಕ ಪ್ರಜ್ಞೆ ಮೂಡಿಸುವ ಮತ್ತು ಮುಂದಿನ ಪೀಳಿಗೆಗೆ ದಾಖಲೆಯನ್ನು ಒದಗಿಸುವುದು ಈ ಅಧ್ಯಯನದ ಮಹತ್ವದ ಉದ್ದೇಶವಾಗಿದೆ.

ಆಡಳಿತ ಘಟಕವಾಗಿದ್ದ ಸಾಲಗುಂದೆ ಎಪ್ಪತ್ತರಲ್ಲಿ ಬರಬಹುದಾದ ಗ್ರಾಮಗಳನ್ನು ಗುರುತಿಸುವಲ್ಲಿ ಅಥವಾ ಹೆಸರಿಸುವಲ್ಲಿ ಈ ಪೂರ್ವದ ಅಧ್ಯಯನಗಳು ವಿಫಲವಾಗಿವೆ ಎಂದು ಹೇಳಬಹುದು. ಈ ನಿಟ್ಟಿನಲ್ಲಿ ಪ್ರಸ್ತುತ ಅಧ್ಯಯನವು ವಿವಿಧ ಮಗ್ಗಲುಗಳಿಂದ ದತ್ತಾಂಶಗಳನ್ನು ಬಳಸಿಕೊಂಡು ಇದರ ವ್ಯಾಪ್ತಿಯಲ್ಲಿ ಬರಬಹುದಾದ ೭೦ ಗ್ರಾಮಗಳನ್ನು ಗುರುತಿಸುವ ಉದ್ದೇಶವನ್ನು ಸಹಃ ಹೊಂದಿದೆ.

ಚಾರಿತ್ರಿಕವಾಗಿ ಅಧ್ಯಯನ ಮಾಡುವ ಸಂದರ್ಭದಲ್ಲಿ ಇಲ್ಲಿನ ಪ್ರಾಚೀನ ವಾಸ್ತುಶಿಲ್ಪ ಮತ್ತು ಮೂರ್ತಿಶಿಲ್ಪ, ದೇವಾಲಯ, ಸ್ಮಾರಕಶಿಲ್ಪ, ಹಾಗೂ ರಕ್ಷಣಾ ವಾಸ್ತುಶಿಲ್ಪದ ಕುರಿತು ವಿವರವಾಗಿ ಚರ್ಚಿಸಲಾಗಿದೆ. ಈ ಪರಿಸರದ ಪ್ರಾಚೀನ ದೇವಾಲಯಗಳು ಚಾರಿತ್ರಿಕವಾಗಿ, ಧಾರ್ಮಿಕವಾಗಿ ಪ್ರಮುಖ ಪಾತ್ರ ವಹಿಸಿದ್ದು ಅವುಗಳ ರಚನೆ, ನಿರ್ಮಾಣದ ಉದ್ದೇಶ, ಕಾಲಮಾನ, ಇವುಗಳ ಪ್ರಸ್ತುತ ಸ್ಥಿತಿಗತಿ ಇತ್ಯಾದಿ ವಿಷಯಗಳ ಕುರಿತು ಚರ್ಚಿಸಲಾಗಿದೆ. ಮೌಖಿಕ ಪರಂಪರೆಯ ಮೂಲಕ ಉಳಿದುಕೊಂಡು ಬಂದಿರುವ ಐತಿಹ್ಯ, ನಂಬಿಕೆ ಆಚರಣೆಗಳನ್ನು ವಿಶ್ಲೇಷಿಸಿ ದಾಖಲಿಸಲಾಗಿದೆ.

ಈ ಹಿಂದೆ ಸಾಲಗುಂದ ಪರಿಸರದ ಕುರಿತು ಬಿಡಿ ಅಧ್ಯಯನಗಳು ನಡೆದಿದ್ದರೂ ಅವು ವಿಸ್ತೃತವಾಗಿ ನಡೆದಿಲ್ಲ. ಆದ್ದರಿಂದ ಇಲ್ಲಿನ ಪ್ರಾಗಿತಿಹಾಸ, ಐತಿಹಾಸಿಕ, ಸಾಹಿತ್ಯಿಕ ಹಾಗೂ ಮೌಖಿಕ ಆಕಾರಗಳ ಮೂಲಕ ಇಡೀ ಸಾಲಗುಂದ ಪರಿಸರದ ಸಮಗ್ರ ಚಾರಿತ್ರಿಕ ಅಧ್ಯಯನ ನಡೆಸುವ ಉದ್ದೇಶವನ್ನೊಳಗೊಂಡಿದೆ.

೧.೩ ಅಧ್ಯಯನದ ವ್ಯಾಪ್ತಿ

ಒಂದು ದೇಶದ ಇತಿಹಾಸವನ್ನು ಒಬ್ಬ ವ್ಯಕ್ತಿ ಸಮಗ್ರವಾಗಿ ಅಧ್ಯಯನ ಮಾಡುವುದು ಕಷ್ಟಸಾಧ್ಯ. ಆದರೆ ಸಂಸ್ಕೃತಿಯನ್ನು ಬಿಡಿ-ಬಿಡಿಯಾಗಿ ತೋರಿಸುವ ಸಲುವಾಗಿ ಇತಿಹಾಸವನ್ನು ವಿವಿಧ ಆಯಾಮಗಳಾಗಿ ವಿಶ್ಲೇಷಣೆ ಮಾಡಲಾಗುತ್ತದೆ. ಅದೇ ರೀತಿಯಾಗಿ ಈ ಅಧ್ಯಯನವನ್ನು ಕಾಲ ಮತ್ತು ಭೂ ಪ್ರದೇಶದ ವ್ಯಾಪ್ತಿಗೆ ಸೀಮಿತಗೊಳಿಸಿ ಅಧ್ಯಯನ ಕೈಗೊಳ್ಳಲಾಗಿದೆ.

ಸಾಲಗುಂದ ಈ ಮೊದಲು ಎಡೆದೊರೆ ನಾಡಿನ ಆಡಳಿತದಲ್ಲಿ ಬರುವ ನಿಟ್ಟರವೆ ೭೦ರ ಅಗ್ರಹಾರವಾಗಿತ್ತು. ನಂತರ ಸಾಲಗುಂದೆ ೭೦ ಎಂಬ ಆಡಳಿತ ಘಟಕವಾಯಿತು. ಆದ್ದರಿಂದ ಇದೇ ಶೀರ್ಷಿಕೆಯನ್ನಿಟ್ಟುಕೊಂಡು, ಇದರ ಭೌಗೋಳಿಕ ವ್ಯಾಪ್ತಿಯನ್ನು ಸಾಲಗುಂದ ಹೋಬಳಿ ಪರಿಸರಕ್ಕೆ ಹಾಗೂ ಇದರಲ್ಲಿ ಬರುವ ಎಪ್ಪತ್ತು ಹಳ್ಳಿಗಳಿಗೆ ಸೀಮಿತಗೊಳಿಸಲಾಗಿದೆ. ಸಾಲಗುಂದೆ ೭೦ರ ಆಡಳಿತ ಘಟಕದ ಪರಿಸರಕ್ಕೆ ಇದರ ವ್ಯಾಪ್ತಿ ಸೀಮಿತಗೊಳಿಸಬಹುದಾಗಿತ್ತು. ಆದರೆ, ಇದರಲ್ಲಿ ಬರಬಹುದಾದ ಗ್ರಾಮಗಳ ಉಲ್ಲೇಖ ಅಥವಾ ಮಾಹಿತಿ ದೊರೆಯದಿದ್ದ ಕಾರಣ, ಸಾಲಗುಂದೆ ೭೦ರ ಆಡಳಿತ ಘಟಕದ ವ್ಯಾಪ್ತಿಗೆ ಬರಬಹುದಾದ ಗ್ರಾಮಗಳನ್ನು ಈ ಅಧ್ಯಯನದ ಮೂಲಕ ಗುರುತಿಸಿ ಅವುಗಳನ್ನು ಸಹಃ ಅಧ್ಯಯನದ ವ್ಯಾಪ್ತಿಗೆ ಒಳಪಡಿಸಲಾಗಿದೆ.

ಜೊತೆಗೆ ಈ ಪರಿಸರದಲ್ಲಿ ದೊರೆಯುವ ಪುರಾತತ್ವ ನೆಲೆಗಳನ್ನು ಗಮನದಲ್ಲಿರಿಸಿಕೊಂಡು ಪ್ರಾಗಿತಿಹಾಸ ಕಾಲದಿಂದ ೨೦ನೆ ಶತಮಾನದವರೆಗೆ ಈ ಅಧ್ಯಯನವು ತನ್ನ ಕಾಲ ವ್ಯಾಪ್ತಿಯನ್ನು ಹೊಂದಿದೆ.

ಪ್ರಸ್ತುತ ಈ ಮೇಲ್ಕಂಡ ಭೌಗೋಳಿಕ ಮತ್ತು ಕಾಲ ವ್ಯಾಪ್ತಿಗೆ ಸಂಬಂಧಿಸಿದಂತೆ ಇಲ್ಲಿಯವರೆಗೆ ಯಾವುದೇ ರೀತಿಯ ಸಮಗ್ರ ಅಧ್ಯಯನ ನಡೆದಿರುವುದಿಲ್ಲ. ಆದ ಕಾರಣದಿಂದಸಾಲಗುಂದ ಪರಿಸರದಲ್ಲಿರುವ ಐತಿಹಾಸಿಕ ಕುರುಹುಗಳು, ಶಾಸನಗಳು, ಐತಿಹ್ಯಗಳು ಮುಂತಾದವು ಅಧ್ಯಯನದ ವ್ಯಾಪ್ತಿಗೆ ಒಳಗೊಂಡಿವೆ, ಸಂದರ್ಭಕ್ಕನುಸಾರವಾಗಿ ಅಕ್ಕಪಕ್ಕದ ಗ್ರಾಮಗಳನ್ನು ಸಹಃ ಅಧ್ಯಯನಕ್ಕೆ ಒಳಪಡಿಸಲಾಗಿದೆ.

೧.೪ ಅಧ್ಯಯನದ ವಿಧಾನ

ಹಾಕಿಕೊಂಡ ಯೋಜನೆ ಸಫಲತೆ ಸಾಧಿಸಬೇಕಾದರೆ ಆ ಯೋಜನೆಗೆ ಸಂಬಂಧಿಸಿದ ನಿಯೋಜಿತ ಕ್ರಮಬದ್ಧತೆ ಪ್ರಮುಖವಾಗಿರುತ್ತದೆ. ಅದರಂತೆ ಯಾವುದೇ ಸಂಶೋಧನಾ ಚಟುವಟಿಕೆಗಳು ಸಫಲತೆ ಸಾಧಿಸಬೇಕಾದರೆ ಆ ಸಂಶೋಧನೆಗೆ ಸಂಬಂಧಿಸಿದ ಕ್ರಮಬದ್ಧ ಅಧ್ಯಯನ

ಅಲ್ಲಿ ಪ್ರಮುಖವಾಗಿರುತ್ತದೆ. ಈ ನಿಟ್ಟಿನಲ್ಲಿ ಈ ಅಧ್ಯಯನವನ್ನು ವೈಜ್ಞಾನಿಕವಾಗಿ ಕ್ಷೇತ್ರಕಾರ್ಯ ಕೈಗೊಂಡು ಪೂರೈಸಲಾಗಿದ್ದು, ಅದರ ಮೂಲಕ ಪ್ರಾಥಮಿಕ ಹಾಗೂ ಅನುಷಂಗಿಕ ಆಕರಗಳ ಮಾಹಿತಿ ಸಂಗ್ರಹಿಸಿಕೊಂಡು ಪ್ರತಿಯೊಂದು ಗ್ರಾಮದ ಪುರಾತತ್ವ ಅವಶೇಷಗಳ ಜೊತೆಗೆ ಐತಿಹ್ಯಗಳನ್ನು ಸಂಗ್ರಹಿಸಿ, ಸಮಗ್ರವಾಗಿ ಅವಲೋಕಿಸಿ ಮತ್ತು ವಿಶ್ಲೇಷಿಸುವ ಕಾರ್ಯವಿಧಾನಗಳನ್ನು ಅಳವಡಿಸಿಕೊಳ್ಳಲಾಗಿದೆ.

ಈ ಪರಿಸರದ ವ್ಯಾಪ್ತಿಯಲ್ಲಿ ಬರುವ ಪ್ರತಿಯೊಂದು ಗ್ರಾಮಗಳಿಗೆ ಬೇಟಿ ನೀಡಿ ಅಲ್ಲಿನ ವಿವರಗಳನ್ನು ಪರಿಶೀಲಿಸಿ ದಾಖಲಿಸಿಕೊಳ್ಳಲಾಗಿದೆ. ಜೊತೆಗೆ ಈ ಪೂರ್ವದ ಅಧ್ಯಯನಗಳನ್ನು ಗಮನದಲ್ಲಿದರಿಸಿಕೊಂಡು ಪೂರಕವಾದ ಮಾಹಿತಿಯನ್ನು ಬೇರೆ ಬೇರೆ ಆಯಾಮಗಳಿಂದ ಮತ್ತು ಮೌಖಿಕ ಸಂದರ್ಶನದ ಮೂಲಕ ಸ್ಥಳೀಯರಿಂದ ಕೆಲವು ವಿಷಯಗಳನ್ನು ಪಡೆದುಕೊಳ್ಳಲಾಗಿದೆ. ಕ್ಷೇತ್ರಕಾರ್ಯದಲ್ಲಿ ಕಂಡುಬರುವ ಹೊಸ ನೆಲೆಗಳಲ್ಲಿನ ಅವಶೇಷಗಳನ್ನು ಸಂಗ್ರಹಿಸಿಕೊಂಡು ಕಾಲಾನುಕ್ರಮದಲ್ಲಿ ವಿಂಗಡಿಸಿ, ಸಂಶೋಧನೆಗೆ ಒಳಪಡಿಸಲಾಗಿದೆ. ಜೊತೆಗೆ ಇತಿಹಾಸ, ಪುರಾತತ್ವ ಹಾಗೂ ಸಾಂಸ್ಕೃತಿಕ ಅಧ್ಯಯನಗಳಲ್ಲಿ ಅಳವಡಿಸಿಕೊಂಡು ಅಧ್ಯಯನದ ವಿಧಾನಗಳನ್ನು ಪರಿಗಣಿಸಿಕೊಂಡು ಅಧ್ಯಯನವನ್ನು ಕೈಗೊಳ್ಳಲಾಗಿದೆ.

ಪ್ರಸ್ತುತ ಅಧ್ಯಯನದ ವ್ಯಾಪ್ತಿಗೆ ಬರುವ ದೇವಾಲಯಗಳ ಕಲೆ ಮತ್ತು ವಾಸ್ತುಶಿಲ್ಪ, ಅವುಗಳ ಆಡಳಿತ ವ್ಯವಸ್ಥೆ, ಬಿಟ್ಟಂತಹ ದಾನದತ್ತಿ ಮುಂತಾದ ವಿಷಯಗಳನ್ನು ಗಮನಿಸಿ ವಿವಿಧ ಆಯಾಮಗಳಿಂದ ವಿವೇಚಿಸುವ ಪ್ರಯತ್ನ ಮಾಡಲಾಗಿದೆ. ಪ್ರಾಗಿತಿಹಾಸ ಕಾಲದ ನೆಲೆಗಳು ಮತ್ತು ಶಾಸನಗಳು ಪ್ರಸ್ತುತ ಅಧ್ಯಯನದ ಪ್ರಧಾನ ಆಕರಗಳು. ಈ ಪರಿಸರದಲ್ಲಿರುವ ಪ್ರಾಗಿತಿಹಾಸ ಕಾಲದ ಮಾನವನ ನೆಲೆಗಳು ಮತ್ತು ಇತರೆ ಕುರುಹುಗಳನ್ನು ದಾಖಲಿಸಲಾಗಿದೆ.

ಸಾಲಗುಂದ ಪರಿಸರದ ಭೌಗೋಳಿಕ, ಪ್ರಾಗೈತಿಹಾಸಿಕ, ಚಾರಿತ್ರಿಕ ಮತ್ತು ಸಾಂಸ್ಕೃತಿಕ ಅಂಶಗಳನ್ನು ಕ್ಷೇತ್ರಕಾರ್ಯದ ಮೂಲಕ ದಾಖಲಿಸಿಕೊಳ್ಳಲಾಗಿದೆ. ಅದರ ಜೊತೆಗೆ ಕ್ಷೇತ್ರಕಾರ್ಯದಲ್ಲಿ ಸಂಶೋಧನೆಗೆ ಪೂರಕವಾದ ಪ್ರಾಥಮಿಕ ಆಕರಗಳನ್ನು ಸಂಗ್ರಹಿಸಿ, ಇದಕ್ಕೆ ಪೂರಕವಾಗಿ ಅನುಷಂಗಿಕ ಆಕರಗಳನ್ನು ಸಹಃ ಗ್ರಂಥಾಲಯಗಳಿಗೆ ಭೇಟಿ ನೀಡಿ ಮಾಹಿತಿ ಸಂಗ್ರಹಿಸಲಾಗಿದೆ. ಜೊತೆಗೆ ಸಂಬಂಧಪಟ್ಟ ವಿದ್ವಾಂಸರನ್ನು ಭೇಟಿಮಾಡಿ ಅವರಿಂದ ಮಾಹಿತಿ ಪಡೆದು, ವಿಮರ್ಶೆಗೆ ಒಳಪಡಿಸಿ ವಿಶ್ಲೇಷಿಸಿ ಪ್ರಬಂಧವನ್ನು ರಚಿಸಲಾಗಿದೆ.

೧.೫ ಅಧ್ಯಯನದ ಸ್ವರೂಪ

ಪ್ರಸ್ತುತ ಅಧ್ಯಯನದ ಸ್ವರೂಪವು ಒಟ್ಟು ಆರು ಅಧ್ಯಾಯಗಳನ್ನು ಒಳಗೊಂಡಿದೆ. ಮೊದಲನೆಯ ಅಧ್ಯಾಯದಲ್ಲಿ ಅಧ್ಯಯನದ ಸಮೀಕ್ಷೆ, ಉದ್ದೇಶ, ವ್ಯಾಪ್ತಿ, ವಿಧಾನ ಹಾಗೂ ಅಧ್ಯಯನದ ಸ್ವರೂಪವನ್ನು ವಿವರಿಸಲಾಗಿದೆ.

ಎರಡನೆಯ ಅಧ್ಯಾಯದಲ್ಲಿ ಸಾಲಗುಂದ ಇತಿಹಾಸದ ಮೇಲೆ ಭೌಗೋಳಿಕ ಲಕ್ಷಣಗಳು ಇಲ್ಲಿನ ಇತಿಹಾಸದ ಮೇಲೆ ಬೀರಿದ ಪ್ರಭಾವವನ್ನು ವಿವರಿಸಲಾಗಿದೆ. ಸಾಲಗುಂದ ಗ್ರಾಮದ ಸ್ಥಳನಾಮ ಹಾಗೂ ಪದ ವ್ಯುತ್ಪತ್ತಿಯ ಬಗ್ಗೆ ವಿಶ್ಲೇಷಿಸಲಾಗಿದೆ. ನಂತರ ಈ ಪರಿಸರದ ಚಾರಿತ್ರಿಕ ಹಿನ್ನೆಲೆ, ನವಶೋಧಿತ ಪ್ರಾಗಿತಿಹಾಸ ಕಾಲದ ನೆಲೆಗಳು, ಪ್ರಾಚ್ಯಾವಶೇಷಗಳ ವಿವರಣೆ, ವಿಶ್ಲೇಷಣೆ, ಹಾಗೂ ರಾಜಮನೆತನಗಳ ಆಳ್ವಿಕೆಯ ರಾಜಕೀಯ ಇತಿಹಾಸ ಮತ್ತು ಆಡಳಿತ ಘಟಕವಾಗಿ ಸಾಲಗುಂದೆ ೭೦ರ ಕುರಿತಾಗಿ ವಿವರಿಸಲಾಗಿದೆ.

ಮೂರನೆಯ ಅಧ್ಯಾಯದಲ್ಲಿ ಈ ಪರಿಸರದ ಶಾಸನಗಳನ್ನು ಪ್ರಕಟಿತ ಮತ್ತು ಅಪ್ರಕಟಿತವೆಂದೂ ವಿಂಗಡಿಸಿಕೊಂಡು ಮೂಲ ಆಕಾರಗಳೊಂದಿಗೆ ವಿವರಿಸಲು ಪ್ರಯತ್ನಿಸಲಾಗಿದೆ.

ಪ್ರಸ್ತುತ ಅಧ್ಯಯನದ ನಾಲ್ಕನೆ ಅಧ್ಯಾಯವು ವಾಸ್ತುಶಿಲ್ಪ ಮತ್ತು ಮೂರ್ತಿಶಿಲ್ಪದ ಕುರಿತಾಗಿದ್ದು ಇದರಲ್ಲಿ ದೇವಾಲಯಗಳು, ಮೂರ್ತಿಶಿಲ್ಪಗಳು, ಸ್ಮಾರಕಶಿಲ್ಪಗಳು ಹಾಗೂ ರಕ್ಷಣಾ ವಾಸ್ತುಶಿಲ್ಪದ ಕುರಿತು ವಿವರಿಸಲಾಗಿದೆ.

ಐದನೆ ಅಧ್ಯಾಯದಲ್ಲಿ ಈ ಭಾಗದ ನಂಬಿಕೆ, ಆಚರಣೆ, ಐತಿಹ್ಯ, ಜಾತ್ರೆ ಮತ್ತು ಉತ್ಸವಗಳ ಮೂಲಕ ಈ ಪರಿಸರದ ಜನರ ಸಾಮಾಜಿಕ, ಆರ್ಥಿಕ ಹಾಗೂ ಧಾರ್ಮಿಕ ಜೀವನ ಕುರಿತು ಅಧ್ಯಯನ ಕೈಗೊಂಡು ಆ ಮೂಲಕ ಈ ಭಾಗದ ಇತಿಹಾಸವನ್ನು ವಿವರಿಸುವ, ವಿಶ್ಲೇಷಿಸುವ ಪ್ರಯತ್ನ ಮಾಡಲಾಗಿದೆ.

ಆರನೆಯ ಅಧ್ಯಾಯ ಸಮಾರೋಪವಾಗಿದ್ದು, ಇದರಲ್ಲಿ ಸಾಲಗುಂದೆ ಎಪ್ಪತ್ತು ಸಾಂಸ್ಕೃತಿಕ ಅಧ್ಯಯನ ಎಂಬ ವಿಷಯ ಶೀರ್ಷಿಕೆಲಡಿಯಲ್ಲಿ ಅಧ್ಯಯನಕ್ಕೆ ಸಂಬಂಧಿಸಿದ; ಒಟ್ಟಾರೆಯಾಗಿ ಈ ಅಧ್ಯಯನದಿಂದ ಕಂಡುಕೊಂಡ ಸಂಶೋಧನಾ ಫಲಿತಗಳ ಸಂಕ್ಷಿಪ್ತ ರೂಪವಾಗಿದೆ. ಪ್ರಸ್ತುತ ಅಧ್ಯಯನಕ್ಕೆ ಬಳಸಿಕೊಂಡ ಕೃತಿಗಳು, ಶಾಸನ ಸಂಪುಟಗಳು, ಲೇಖನಗಳು, ಪ್ರಕಟಿತ ಮತ್ತು ಅಪ್ರಕಟಿತ ಸಂಶೋಧನಾ ಗ್ರಂಥಗಳು, ದಿನಪತ್ರಿಕೆಗಳು, ಸ್ಮರಣಾ ಸಂಚಿಕೆಗಳು, ಸಂಶೋಧನಾ ನಿಯತಕಾಲಿಕೆಗಳು ಮುಂತಾದ ವಿವರಗಳನ್ನು ಪರಾಮರ್ಶನ ಗ್ರಂಥಗಳಲ್ಲಿ ನೀಡಲಾಗಿದೆ. ಅಧ್ಯಯನಕ್ಕೆ

ಸಂಬಂಧಿಸಿದ ಅಗತ್ಯ ನಕ್ಷೆಗಳು, ತಲ ನಕ್ಷೆಗಳು, ಫೈ ನಕ್ಷೆಗಳು, ಕೋಷ್ಟಕಗಳು ಹಾಗೂ ಛಾಯಾಚಿತ್ರಗಳನ್ನು ಅನುಬಂಧಗಳಲ್ಲಿ ಅಳವಡಿಸಲಾಗಿದೆ.

ಕೊನೆ ಟಿಪ್ಪಣಿ

೧. ಲಕ್ಷ್ಮಣ ತೆಲಗಾವಿ (ಸಂ), ೨೦೦೧, ಸ್ಥಳೀಯರ ಚರಿತ್ರೆ-ಅಧ್ಯಯನದ ತಾತ್ವಿಕತೆ ಮತ್ತು ಸ್ವರೂಪ, ಪು.೬.

೨. ಭೌಗೋಳಿಕ ಪರಿಸರ ಮತ್ತು ಚಾರಿತ್ರಿಕ ಹಿನ್ನೆಲೆ

೨. ಭೌಗೋಳಿಕ ಪರಿಸರ ಮತ್ತು ಚಾರಿತ್ರಿಕ ಹಿನ್ನೆಲೆ

ಒಂದು ಪ್ರದೇಶದ ಭೌಗೋಳಿಕ ಪರಿಸರವು ಆ ಪ್ರದೇಶದ ಇತಿಹಾಸವನ್ನು ನಿರ್ಮಿಸುವಲ್ಲಿ ಮಹತ್ವದ ಪಾತ್ರ ವಹಿಸುತ್ತದೆ ಎಂಬ ಮಾತು ಅಕ್ಷರಶಃ ಸತ್ಯವಾದದ್ದು. ಪರಿಸರದ ಹವಾಮಾನ ಮತ್ತು ವಾಯುಗುಣಕ್ಕೆ ತಕ್ಕಂತೆ ಜನರ ಬದುಕು, ಜೀವನ ರೂಪುಗೊಂಡಿರುತ್ತದೆ ಎಂಬುದು ನಾವು ಅಲ್ಲಗಳೆಯುವಂತಿಲ್ಲ. ಇತಿಹಾಸಕ್ಕೆ ಭೂಗೋಳವೇ ನೆಲೆಯಾಗಿರುವುದರಿಂದ ಸಾಲಗುಂದೆ ಇತಿಹಾಸ ರಚನೆಯಲ್ಲಿಯೂ ಸಹಃ ತನ್ನದೆ ಆದ ಪಾತ್ರವಹಿಸಿರುವ ಇಲ್ಲಿನ ಭೌಗೋಳಿಕ ಪರಿಸರದ ತಿಳುವಳಿಕೆಯು ಅವ್ಯಶಕವಾಗಿದೆ.

ಭೌಗೋಳಿಕ ಪರಿಸರ

ಹಲವು ಪ್ರಾಚೀನ ಅವಶೇಷಗಳನ್ನು ಒಳಗೊಂಡಿರುವ ಸಾಲಗುಂದಪರಿಸರವು ರಾಯಚೂರು ಜಿಲ್ಲೆಯ ದಕ್ಷಿಣ ಭಾಗದಲ್ಲಿದೆ. ಇದು ೭೬°೪೯'೩೭" ಉತ್ತರ ಅಕ್ಷಾಂಶ ಮತ್ತು ೧೫°೪೦'೨೧" ಪೂರ್ವ ರೇಖಾಂಶಗಳ ನಡುವೆ ಇದೆ. ಸಮುದ್ರ ಮಟ್ಟದಿಂದ ೪೦೨.೭೬ ಕಿ.ಮೀ ಎತ್ತರದಲ್ಲಿದೆ. ಸಾಲಗುಂದ ಪ್ರಸ್ತುತ ಹೋಬಳಿ ಕೇಂದ್ರವಾಗಿದ್ದು, ಇದು ಕರ್ನಾಟಕ ರಾಜಧಾನಿ ಬೆಂಗಳೂರು ನಿಂದ ೩೯೪.೦ ಕಿ.ಮೀ., ಜಿಲ್ಲಾ ಕೆಂದ್ರ ರಾಯಚೂರು ನಿಂದ ೧೦೮.೫ ಕಿ.ಮೀ ಹಾಗೂ ತಾಲೂಕು ಕೇಂದ್ರ ಸಿಂಧನೂರು ನಿಂದ ೧೯.೨ ಕಿ.ಮೀ ದೂರದಲ್ಲಿದೆ.

ಹಲವು ರೀತಿಯ ಭೌಗೋಳಿಕ ವೈಶಿಷ್ಟ್ಯತೆಗಳನ್ನು ಹೊಂದಿರುವ ಈ ಪರಿಸರದ ಪೂರ್ವದಲ್ಲಿ ತುಂಗಭದ್ರಾ ನದಿ, ಪಶ್ಚಿಮದಲ್ಲಿಸಿಂಧನೂರು, ಜವಳಗೇರ ಹಾಗೂ ಮಾಡಶಿರವಾರ ಗ್ರಾಮಗಳು, ದಕ್ಷಿಣದಲ್ಲಿ ಕಾರಟಗಿ ತಾಲೂಕು ಉತ್ತರದಲ್ಲಿ ಮಾಡಶಿರವಾರ, ಬಾದರ್ಲಿ ಗ್ರಾಮಗಳಿಂದ ಸುತ್ತುವರೆದಿದ್ದು, ಇವು ಈ ಸಾಲಗುಂದ ಪರಿಸರದ ಗಡಿಗಳಾಗಿವೆ. ಈ ಪರಿಸರದ ಪೂರ್ವದಿಂದ ಉತ್ತರದವರೆಗೂ ಸು.೪.೩ ಕಿ.ಮೀ ದೂರದಲ್ಲಿ ತುಂಗಭದ್ರಾ ನದಿಯು ಹರಿಯುತ್ತದೆ. ತುಂಗಭದ್ರಾ ನದಿ ಪರಿಸರದಲ್ಲಿ ಹರಿಯುವುದರ ಮೂಲಕ ಇಲ್ಲಿನ ಕೆಲವು ರೈತರ ಕೃಷಿ ಚಟುವಟಿಕೆಗಳಿಗೆ ಸಹಾಯಕವಾಗಿದೆ. ಮತ್ತು ಈ ಭಾಗದ ಜನರ ಕುಡಿಯುವ ನೀರಿನ ಅವಶ್ಯಕತೆಯನ್ನು ಪೂರೈಸುತ್ತದೆ.

ಜನಸಾಂದ್ರತೆ

೨೦೧೧ ರ ಜನಗಣತಿ ಪ್ರಕಾರ, ಸಾಲಗುಂದಪರಿಸರವುಸುಮಾರು ೫೦,೦೦೦ ಜನಸಂಖ್ಯೆ ಹೊಂದಿದೆ. ಅದರಲ್ಲಿ ೬೦% ಪುರುಷರು ಹಾಗೂ ೪೦% ಮಹಿಳೆಯರು ಕಂಡುಬರುತ್ತಾರೆ.[೧]

ಬೆಟ್ಟ-ಗುಡ್ಡಗಳು

ಕಲ್ಲು ಬಂಡೆಗಳೆ ಹೆಚ್ಚಾಗಿ ಕಂಡುಬರುವ ಈ ಪರಿಸರದ ಗ್ರಾಮಗಳಲ್ಲಿ ಹಲವು ಬೆಟ್ಟ ಗುಡ್ಡಗಳು ಕಂಡು ಬರುತ್ತವೆ. ಈ ಪರಿಸರದ ಊರುಗಳನ್ನು ಪ್ರವೇಶಿಸುತ್ತಿದ್ದಂತೆ ಊರಿನ ಹೊರವಲಯದಲ್ಲಿ ಬೆಟ್ಟಗಳು ಕಾಣಸಿಗುತ್ತವೆ. ಉದಾಹರಣೆ ರವುಡಕುಂದ, ಸೋಮಲಾಪುರ, ಸಾಲಗುಂದ, ಗೊಬ್ಬರಕಲ್, ಸಿಂಗಾಪುರ ಗ್ರಾಮಗಳು. ಸಾಲಗುಂದ ಗ್ರಾಮದ ಹೊರ ವಲಯದಲ್ಲಿ ಸಾಲಾಗಿ ಕಂಡುಬರುವ ಗುಡ್ಡಗಳ ಹಿನ್ನೆಲೆಯಲ್ಲಿ ಸಾಲಗುಂದೆ ಎಂದೂ ಈ ಗ್ರಾಮದ ಸ್ಥಳನಾಮ ಬಂದಿರಬಹುದು.ಸಾಲಗುಂದ ಗ್ರಾಮದ ವಾಯುವ್ಯ ದಿಕ್ಕಿನಿಂದ ನೈರುತ್ಯ ದಿಕ್ಕಿಗೆ ಇವು ಚಾಚಿಕೊಂಡಿವೆ. ಈ ಪರಿಸರದ ಮತ್ತೊಂದು ಗ್ರಾಮವಾದ ಸೋಮಲಾಪುರದಲ್ಲಿ ಹಲವು ಬೆಟ್ಟಗಳಿದ್ದು, ಅದರಲ್ಲಿ ಭಟ್ಟರಗುಡ್ಡದ ಕೆಳಭಾಗದಲ್ಲಿ ಕಂಡುಬರುವ ಹಾಳೂರಿನಲ್ಲಿ ಕ್ಷೇತ್ರಕಾರ್ಯ ಕೈಗೊಂಡಾಗ ಪ್ರಾಗಿತಿಹಾಸಕಾಲದ ಹಲವು ಪ್ರಾಚ್ಯಾವಶೇಷಗಳು ದೊರೆತಿವೆ. ಇದೇ ಗ್ರಾಮದ ಹಾಳೂರಿನ ೨ ಕಿ.ಮೀ ಮುಂದೆ ಕಡತುರ ಕಂಟಿ ಎಂದೂ ಕರೆಯುವ ಮತ್ತೊಂದು ಬೆಟ್ಟಗಳ ಶ್ರೇಣಿಯ ಕೆಳಭಾಗದಲ್ಲಿ ಪ್ರಾಗಿತಿಹಾಸಕಾಲ ಹಾಗೂ ಇತಿಹಾಸ ಕಾಲದ ಕುರುಹುಗಳು ದೊರೆತಿವೆ.

ಈ ಪರಿಸರದಲ್ಲಿ ಸಿದ್ದಗಿರಿ ಅಥವಾ ಸಿದ್ದಪರ್ವತವೆಂದೂ ಕರೆಯಲ್ಪಡುವ ಬೆಟ್ಟಗಳ ಕೆಳಭಾಗದಲ್ಲಿ ಶಾಕ್ತ ಪರಂಪರೆಯ ಅಂಭಾದೇವಿ ದೇವಸ್ಥಾನ ಹಾಗೂ ಚಿದಾನಂದ ಅವಧೂತರ ಮಠ ಕಂಡು ಬರುತ್ತದೆ, ಈ ಸ್ಥಳಕ್ಕೆ ಅಂಭಾಮಠವೆಂದೂ ಕರೆಯಲಾಗುತ್ತದೆ. ಇತರೆ ಗ್ರಾಮಗಳಾದ ಗೊಬ್ಬರಕಲ್ ಗ್ರಾಮದ ಬೆಟ್ಟದಲ್ಲಿ ಶಿಲಾ-ತಾಮ್ರಯುಗದ ಆಯುಧಗಳು ದೊರೆತಿವೆ. ರವುಡಕುಂದ ಗ್ರಾಮದಲ್ಲಿ ಎರಡು ಬೆಟ್ಟಗಳಿದ್ದು, ಬಲಗಡೆ ಭಾಗದ ಬೆಟ್ಟದಲ್ಲಿ ಬಂಡೆರಂಗನಾಥ ದೇವಾಲಯ, ಮುಕ್ಕುಂದದಲ್ಲಿ ಮೂರು ಬೆಟ್ಟಗಳಿದ್ದು, ಇಲ್ಲಿಕೋಟೆ, ಶಾಸನಗಳು, ದೇವಾಲಯಗಳು ಹಾಗೂ ಇತರೆ ಅವಶೇಷಗಳನ್ನು ಕಾಣಬಹುದು.

ಹುಡಾ, ಸಿಂಗಾಪೂರ ಇತ್ಯಾದಿ ಗ್ರಾಮಗಳ ಹಾಳೂರು ಹಾಗೂ ಬೆಟ್ಟ-ಗುಡ್ಡಗಳಲ್ಲಿ ಜನವಸತಿ ಮೊದಲಿಂದಲೂ ಇತ್ತೆಂದೂ ತೋರಿಸುವ ಲಕ್ಷಣಗಳು ಕಂಡುಬರುತ್ತವೆ. ಅಂದರೆ ಪ್ರಾಗಿತಿಹಾಸ ಕಾಲದಿಂದಲೂ ಬೆಟ್ಟ-ಗುಡ್ಡಗಳು ಜನವಸತಿಗೆ ಸಹಾಯಕವಾಗಿ ಈ ಪರಿಸರದ ಇತಿಹಾಸ ನಿರ್ಮಿಸುವಲ್ಲಿ ಪ್ರಮುಖ ಪಾತ್ರವಹಿಸಿವೆ.

ವಾರ್ಷಿಕ ಮಳೆ

ಸಾಲಗುಂದ ಪರಿಸರದಲ್ಲಿ ಹಿಂಗಾರು ಮತ್ತು ಮುಂಗಾರು ಮಳೆಯಾಗುತ್ತಿದ್ದು, ವಾರ್ಷಿಕ ಸರಾಸರಿ ೬೨೧.೧೦ ಮೀ.ಮೀ. ಮಳೆಯಾಗುತ್ತದೆ. ಇಲ್ಲಿ ಮುಖ್ಯ ಬೆಳೆಗಳಾದ ಭತ್ತ, ಹತ್ತಿ, ಜೋಳ, ಮೆಕ್ಕೆಜೋಳ, ಶೇಂಗಾ, ಸೂರ್ಯಕಾಂತಿ ಹಾಗೂ ಭತ್ತ ಬೆಳೆಯುತ್ತಾರೆ. ಅಷ್ಟೇ ಅಲ್ಲದೇ ಜೀವ ಸಂಕುಲದ ಅಳಿವು ಉಳಿವು ಇಲ್ಲಿನ ಪರಿಸರವನ್ನು ಅವಲಂಬಿಸಿದೆ ಎಂಬುದನ್ನು ಅಲ್ಲಗಳೆಯುವಂತಿಲ್ಲ. ಇಲ್ಲಿನ ಭೂರಚನೆ ಕಪ್ಪು, ಕೆಂಪು ಮತ್ತು ಜೇಡಿ ಮಣ್ಣಿನ ಸ್ವರೂಪತೆಯನ್ನು ಹೊಂದಿದೆ. ಅಲ್ಲದೆ ಮರಳು ಮಿಶ್ರಿತ ಕೆಂಪು ಮಣ್ಣು ಸಾಮಾನ್ಯವಾಗಿ ತುಂಗಭದ್ರಾ ನದಿ ಪ್ರದೇಶದ ಸುತ್ತಮುತ್ತ ಕಂಡುಬರುತ್ತದೆ. ಇಲ್ಲಿ ಸಿಗುವ ಫಲವತ್ತಾದ ಮಣ್ಣು ಕೃಷಿ ಚಟುವಟಿಕೆಗಳಿಗೆ ಸಹಕಾರಿಯಾಗಿದೆ. ಈ ಪ್ರದೇಶದಲ್ಲಿ ಪ್ರಧಾನವಾಗಿ ಗ್ರಾನೈಟ್ ಶಿಲೆ ದೊರೆಯುತ್ತದೆ.

ನದಿಗಳು

ಇಲ್ಲಿ ಹರಿಯುವ ನದಿಗಳಲ್ಲಿ ತುಂಗಭದ್ರಾ ನದಿಯು ಮುಖ್ಯವಾಗಿದ್ದು, ಇದು ದಕ್ಷಿಣದಿಂದ ಉತ್ತರಕ್ಕೆ ಹರಿಯುತ್ತದೆ. ಚಿಕ್ಕಮಗಳೂರು ಜಿಲ್ಲೆಯ ಪಶ್ಚಿಮ ಘಟ್ಟಗಳ ಸಾಲಿನ ವರಹಾ ಪರ್ವತದಲ್ಲಿ ಉಗಮವಾದ ಎರಡು ನದಿಗಳು ಶಿವಮೊಗ್ಗ ಜಿಲ್ಲೆಯ ಕೂಡಲಿಯಲ್ಲಿ ಬಂದು ಸೇರುತ್ತವೆ. ಅವುಗಳಲ್ಲಿ ಒಂದು ತುಂಗ ಇನ್ನೊಂದು ಭದ್ರಾ, ಇವರೆಡೂ ಕೂಡಿಕೊಂಡು ಮುಂದೆ ಸಾಗಿ ತುಂಗಭದ್ರಾ ಎಂಬ ಹೆಸರಿನಿಂದ ಕರೆಯಲ್ಪಟ್ಟಿವೆ. ಈ ನದಿ ಪಶ್ಚಿಮದಲ್ಲಿ ಧಾರವಾಡ ಉತ್ತರದಲ್ಲಿ ಕೊಪ್ಪಳ ಹಾಗೂ ರಾಯಚೂರು ಜಿಲ್ಲೆಗಳನ್ನು ಗಡಿಯಾಗಿ ವಿಭಾಗಿಸಿದೆ. ತುಂಗಭದ್ರಾ ನದಿಯ ದಡದಲ್ಲಿರುವ ಸಿಂಗಾಪೂರ, ಹುಡಾ, ಮುಕ್ಕುಂದ, ಸಾಲಗುಂದ, ಕೆಂಗಲ್, ದಢೇಸೂಗೂರು ಮತ್ತು ಉಪ್ಪಳ ಗ್ರಾಮಗಳುಪ್ರಾಚೀನ ಕಾಲದಿಂದಲೂ ಕೃಷಿ ಚಟುವಟಿಕೆಯಲ್ಲಿ ನಿರತವಾಗಿರುವ ಗ್ರಾಮಗಳಾಗಿವೆ.[೨]

ನಿಟ್ಟರವೆ ಎಪ್ಪತ್ತರ ಆಡಳಿತ ಘಟಕದಲ್ಲಿ ಬರುವ ಜಾಲಿಹಾಳು ಗ್ರಾಮದ ಈಶ್ವರದೇವರ ಗುಡಿಯ ನವರಂಗದ ಗೋಡೆಯಲ್ಲಿನ ಕ್ರಿ.ಶ. ೧೧೦೬ರ ಶಾಸನ ತುಂಗಭದ್ರಾ ನದಿಯನ್ನು 'ದಕ್ಷಿಣ ಗಂಗೆ' ಎಂದೂ ಉಲ್ಲೇಖಿಸಿದೆ. ದಢೇಸೂಗೂರು ಗ್ರಾಮದ ಪಕ್ಕದಲ್ಲಿ ಹರಿದುಹೋಗುವ ತುಂಗಭದ್ರಾ ನದಿಗೆ ಸಿರುಗುಪ್ಪ, ಬಳ್ಳಾರಿ ತಲುಪಲು ಸೇತುವೆ ನಿರ್ಮಿಸಲಾಗಿದೆ. ಈ ಪರಿಸರದಲ್ಲಿ ಹಾದು ಹೋಗುವ *NH150A* ರಾಷ್ಟ್ರಿಯ ಹೆದ್ದಾರಿಯಾಗಿದೆ. ಇದು ಸಿರುಗುಪ್ಪ ಹಾಗೂ ಬಳ್ಳಾರಿಗೆ ಸಂಪರ್ಕ ಕಲ್ಪಿಸುತ್ತದೆ. ಮುಕ್ಕುಂದ, ಸಿಂಗಾಪೂರ, ಸಾಲಗುಂದ, ಕೆಂಗಲ್, ಬಸ್ಸಾಪೂರ ಡಿ, ದಢೇಸೂಗೂರು, ಉಪ್ಪಳ ಗ್ರಾಮಗಳು ತುಂಗಭದ್ರಾ ನದಿ ದಂಡೆಯ ಮೇಲೆ ಕಂಡುಬರುತ್ತವೆ.

ವಾಯುಗುಣ

ಇಲ್ಲಿನ ಪರಿಸರದಲ್ಲಿ ಬೇಸಿಗೆ ಕಾಲವು ಫೆಬ್ರುವರಿ ತಿಂಗಳ ಅಂತ್ಯದಿಂದ ಪ್ರಾರಂಭವಾಗಿ ಜೂನ್ ತಿಂಗಳವರೆಗೆ ಇರುತ್ತದೆ. ಆಗ ಶಾಖವು ಸರಾಸರಿ ೪೫° ಸೆಂಟಿಗ್ರೇಡ್‌ವರೆಗೂ ಇರುತ್ತದೆ. ರಾಯಚೂರು ಜಿಲ್ಲೆ ಕರ್ನಾಟಕ ರಾಜ್ಯದಲ್ಲಿಯೇ ಅತಿ ಹೆಚ್ಚು ಉಷ್ಣಾಂಶ ಹೊಂದಿದ ಜಿಲ್ಲೆಯಾಗಿದೆ. ಇದೇ ಕಾರಣಕ್ಕಾಗಿ ರಾಯಚೂರನ್ನು ಬಿಸಿಲೂರು ಎಂದು ಕರೆಯುತ್ತಾರೆ. ಜುಲೈ ತಿಂಗಳಿನಲ್ಲಿ ಆರಂಭವಾಗುವ ಮಳೆಗಾಲ ನವೆಂಬರ್ ತಿಂಗಳವರೆಗೆ ಇರುತ್ತದೆ. ನವೆಂಬರ್ ಕೊನೆಯಿಂದ ಫೆಬ್ರುವರಿವರೆಗೆ ಚಳಿಗಾಲವಿರುತ್ತದೆ. ಶುಷ್ಕ ವಾತಾವರಣ ಇರುವ ಈ ಪ್ರದೇಶ ಪ್ರಾಗಿತಿಹಾಸ ಕಾಲದಿಂದಲೂ ಮನುಷ್ಯನ ವಾಸಕ್ಕೆ ಅನುಕೂಲಕರವಾದ ಲಕ್ಷಣಗಳನ್ನು ಹೊಂದಿದೆ.

ಪ್ರಾಣಿ ಪಕ್ಷಿಗಳು

ಈ ಪ್ರದೇಶದ ಬೆಟ್ಟ ಗುಡ್ಡಗಳಲ್ಲಿ ಕೋತಿ, ನರಿ, ತೋಳ, ಮೊಲ, ಕರಡಿ, ಹಂದಿ ಮತ್ತು ಮುಳ್ಳು ಹಂದಿ ಮೊದಲಾದ ಪ್ರಾಣಿಗಳು ಹಾಗೂ ಕಾಗೆ, ಗುಬ್ಬಿ, ಪಾರಿವಾಳ, ಗೂಬೆ, ಕೊಕ್ಕರೆ, ಬಾತುಕೋಳಿ, ನವಿಲು, ಕೋಗಿಲೆ ಮತ್ತು ಗಿಳಿ ಮುಂತಾದ ಬಗೆಯ ಪಕ್ಷಿಗಳು ಕಂಡು ಬರುತ್ತವೆ. ಈ ರೀತಿಯ ಸಂಪನ್ಮೂಲಗಳು ಈ ಭೂ ಭಾಗದಲ್ಲಿ ಇರುವುದರಿಂದ ಹಲವು ಮನೆತನಗಳು ಆಳ್ವಿಕೆ ಮಾಡಲು ಸಹಾಯಕವಾಯಿತು.

೨.೨ ಸಾಲಗುಂದೆ ಪದದ ನಿಷ್ಪತ್ತಿ

ಒಂದು ನಾಡಿನ ಸಾಂಸ್ಕೃತಿಕ ಇತಿಹಾಸ ಅಧ್ಯಯನದ ಹಿನ್ನೆಲೆಯಲ್ಲಿ ಸ್ಥಳನಾಮ ಇಂದು ತನ್ನದೇ ಆದ ಮಹತ್ವ ಪಡೆಯುತ್ತಿದೆ. ಕರ್ನಾಟಕದ ಅನೇಕ ಗ್ರಾಮಗಳ ಹೆಸರುಗಳನ್ನು ವಿಮರ್ಶಿಸಿದಾಗ ಅವುಗಳ ಹಿಂದಿನ ಇತಿಹಾಸ ಅಥವಾ ಆ ಊರಿನ ವಿಶೇಷತೆ ತಿಳಿಯಬಹುದು. ಸ್ಥಳನಾಮಗಳನ್ನು ಒಂದು ರೀತಿಯಲ್ಲಿ ನಾಡಿನ ಸಾಂಸ್ಕೃತಿಕ ದಾಖಲೆಗಳೆಂದು ಕರೆಯಬಹುದಾಗಿದೆ. ಪ್ರಸ್ತುತ ದಿನಮಾನಗಳಲ್ಲಿ ಈ ಸ್ಥಳನಾಮಗಳ ಅಧ್ಯಯನವನ್ನು ನಾಡಿನಲ್ಲಿ ಒಂದು ಪ್ರಮುಖ ಅಧ್ಯಯನವೆಂದು ಪರಿಗಣಿಸಿರುವುದು ಸ್ವಾಗತಾರ್ಹ.

ಈ ಪರಿಸರದ ಸ್ಥಳನಾಮಗಳ ಕುರಿತಾಗಿ ಅಧ್ಯಯನ ನಡೆಯದಿರುವುದು ವಿಷಾದನೀಯ, ಪ್ರಸ್ತುತ ಸಾಲಗುಂದ ಸ್ಥಳನಾಮದ ಬಗ್ಗೆ ಚರ್ಚೆಗಳು ನಡೆಯಬೇಕಿದ್ದು, ಐತಿಹಾಸಿಕ ಮತ್ತು ಸಾಂಸ್ಕೃತಿಕ ಕ್ಷೇತ್ರದಲ್ಲಿ ಪ್ರಮುಖವೆನಿಸಿರುವ ಸಾಲಗುಂದ ಹೆಸರಿನ ವೈಶಿಷ್ಟ್ಯತೆ ಅರಿತುಕೊಳ್ಳುವುದು ವಿಶೇಷವೆನಿಸಿದೆ. ಒಂದು ಪ್ರದೇಶದ ಅಧ್ಯಯನ ಕೈಗೊಳ್ಳುವ ಮೊದಲು ಅದರ ಹೆಸರು ಹುಟ್ಟು ಇತ್ಯಾದಿಗಳನ್ನು

ಚರ್ಚಿಸುವುದರಿಂದ ಅನೇಕ ಮಾಹಿತಿಗಳು ದೊರಕುವವು. ಲಭ್ಯವಿರುವ ಆಧಾರಗಳನ್ನು ಬಳಸಿಕೊಂಡು ಶಾಸನಗಳು, ನೈಸರ್ಗಿಕ ಪರಿಸರ ಮತ್ತು ಜನಪದದ ಹೇಳಿಕೆಗಳೊಂದಿಗೆ ಸಾಲಗುಂದ ನಾಮದ ಹುಟ್ಟು ಮತ್ತು ಬೆಳವಣಿಗೆಯನ್ನು ಚರ್ಚಿಸಲು ಪ್ರಯತ್ನಿಸಿಲಾಗಿದೆ.

ಸಾಲಗುಂದೆ ಎನ್ನುವ ಪದವನ್ನು ವಿಭಾಗಿಸಿದಾಗ ಕನ್ನಡ ನಿಘಂಟಿನ ಪ್ರಕಾರ ಸಾಲ ಎಂದರೆ, ಸುತ್ತುಗೋಡೆ, ಪ್ರಾಕಾರ, ಶ್ರೇಣಿ ಎಂದರ್ಥ. ಗುಂದೆ ಎಂದರೆ, ಬೆಟ್ಟ, ಗುಡ್ಡ ಎಂದರ್ಥ. ಹೀಗೆ ಬೆಟ್ಟ ಗುಡ್ಡಗಳ ಶ್ರೇಣಿ ಹೊಂದಿರುವ; ಅವುಗಳಿಂದ ಸುತ್ತುವರೆದಿರುವ ಗ್ರಾಮವೇ ಸಾಲಿಗುಂದೆ. ಇಲ್ಲಿ ಸಾಲ ಎಂಬ ಪದ ಸಂಖ್ಯಾವಾಚಿಯ ದೃಷ್ಟಿಕೋನದಿಂದ ನೋಡಿದಾಗ ಅನಿಯಮಿತ, ಹಲವು ಎಂಬ ಅರ್ಥವನ್ನು ಕೊಡುತ್ತದೆ. ಹಲವು ಬೆಟ್ಟಗುಡ್ಡಗಳಿಂದ ಪ್ರಾಕಾರ ಹೊಂದಿರುವ; ಸುತ್ತುವರೆದಿರುವ ಗ್ರಾಮ ಸಾಲಗುಂದೆ ಎಂದೂ ಕರೆಯಬಹುದು.

ಇದೆ ಅರ್ಥದ ರೀತಿಯಲ್ಲಿ ಹೋಲಿಕೆ ಬರುವಂತೆ ಈ ಪರಿಸರದಲ್ಲಿ ಎರಡು ಗ್ರಾಮಗಳು ಸಿಗುತ್ತವೆ, ಎರಡು ಬೆಟ್ಟಗಳಿಂದ ಆವೃತ್ತವಾಗಿರುವ ಊರು ರವುಡಕುಂದ, ಮೂರು ಬೆಟ್ಟಗಳಿಂದ ಆವೃತ್ತವಾಗಿರುವ ಊರು ಮುಕ್ಕುಂದ ಎಂಬ ಗ್ರಾಮಗಳು ಸಮೀಪದಲ್ಲಿ ಕಂಡುಬರುತ್ತವೆ. ಸಾಲಗುಂದ ಗ್ರಾಮದ ವಾಯುವ್ಯ ದಿಕ್ಕಿನಿಂದ ನೈರುತ್ಯ ದಿಕ್ಕಿಗೆ ಸಾಲಾಗಿ ಚಾಚಿಕೊಂಡಂತೆ ಕಂಡುಬರುವ ಬೆಟ್ಟ ಗುಡ್ಡಗಳ ಶ್ರೇಣಿಯಿಂದಾಗಿ ಇಲ್ಲಿನ ನೈಸರ್ಗಿಕ ಪರಿಸರದ ಹಿನ್ನೆಲೆಯಲ್ಲಿ ಸಾಲಗುಂದೆ ಎನ್ನುವ ಪದ ನಿಷ್ಪತ್ತಿಯಾಗಿದೆ.

ಶಾಸನಗಳಲ್ಲಿ

ಸಾಲಗುಂದ ಗ್ರಾಮದ ಜಕ್ಕಮ್ಮನ ಬಾವಿ ಸಮೀಪದ ನೀಲಕಂಠೇಶ್ವರ ದೇವಾಲಯದಲ್ಲಿನ ಕ್ರಿ.ಶ ೧೦೬೩ರ ಕಲ್ಯಾಣ ಚಾಲುಕ್ಯರ ಕಾಲದ ಶಾಸನದಲ್ಲಿ 'ನಿಟ್ಟರವೆ-೭೦'ರ ಆಡಳಿತ ಭಾಗವಾಗಿ 'ಸಾಲಿಗುಂದೆ ಅಗ್ರಹಾರ'ವಾಗಿತ್ತೆಂಬ ಉಲ್ಲೇಖವಿದೆ. ಅದೇ ಗ್ರಾಮದ ಕಾಲಕಾಲೇಶ್ವರ ದೇವಾಲಯದ ನವರಂಗದಲ್ಲಿ ಕಂಡುಬರುವ ಕ್ರಿ.ಶ ೧೧೫೩ರ ಶಾಸನದಲ್ಲಿ 'ಎಡೆದೊರೆ-೨೦೦೦'ವನ್ನು ಚಾಳುಕ್ಯರ ದಂಡನಾಯಕ ನಾಚಣನು ಆಳುತ್ತಿದ್ದಾಗ 'ಸಾಲಿಗುಂದೆ-೭೦'ನ್ನು ಬಾಚಿದೇವ ಆಳುತ್ತಿದ್ದ ಎನ್ನುವ ಉಲ್ಲೇಖವನ್ನು ಕಾಣಬಹುದು. ಹಾಗೆಯೇ ಗ್ರಾಮದ ಮಾಬಮ್ಮನ ಮನೆ ಸಮೀಪ ಚಿಕ್ಕಗುಡ್ಡದ ಬಂಡೆಯಲ್ಲಿನ ಕ್ರಿ.ಶ ೧೫೨೮ರ ಶಾಸನದಲ್ಲಿ ವಿಜಯನಗರದ ಅರಸ ವೀರ ಕೃಷ್ಣರಾಯನು ರಾಜ್ಯವಾಳುತ್ತಿದ್ದಾಗ 'ರವುಡುಕುಂದಿ ಸೀಮೆ'ಯ 'ಸಾಲಿಗುಂದೆ ಗ್ರಾಮ'ವು ಅಬ್ಬರಾವು ಅಯ್ಯನ

ಕುದುರೆಯ ನಾಯಕತನಕ್ಕೆ ಸೇರಿತ್ತು ಎನ್ನುವ ಉಲ್ಲೇಖವಿದೆ. ಸಾಲಿಗುಂದೆ ಕ್ರಮೇಣ ಸಾಲಗುಂದೆ, ಸಾಲಗುಂದಿ, ಸಾಲಗುಂದ, ಸಾಲ್ಗುಂದಾ ಎಂಬಿತ್ಯಾದಿ ಹೆಸರುಗಳಿಂದ ಕರೆಯಲ್ಪಡುತ್ತಿದೆ.

ಈ ಮೇಲ್ಕಂಡಂತೆ ನೈಸರ್ಗಿಕ ಪರಿಸರ ಮತ್ತುಶಾಸನಗಳ ಹಿನ್ನೆಲೆಯಲ್ಲಿ ನೋಡುವುದಾದರೆ, ಇದರ ಪ್ರಾಚೀನ ಹೆಸರು ಸ್ಪಷ್ಟವಾಗಿ ಸಾಲಿಗುಂದೆ ಎಂಬುದಾಗಿದೆ. ಕಾಲಕ್ರಮೇಣ 'ಲಿ' ಕಾರದ ಬದಲಾಗಿ 'ಲ' ಕಾರ, 'ದೆ' ಕಾರದ ಬದಲಾಗಿ 'ದ' ಕಾರವು ಸೇರ್ಪಡೆಯಾಗಿ ಪ್ರಸ್ತುತ ಸರಕಾರಿ ದಾಖಲೆಗಳಲ್ಲಿ ಸಾಲಗುಂದ, ಸಾಲ್ಗುಂದಾ ಎಂದಾಗಿದೆ. ಹೀಗೆ ಸಾಲಿಗುಂದೆ > ಸಾಲಗುಂದೆ > ಸಾಲಗುಂದಿ > ಸಾಲಗುಂದ > ಸಾಲಗುಂದಾ > ಸಾಲ್ಗುಂದಾ ಎಂದೂ ಈ ಪರಿಸರದ ಜನರ ಭಾಷೆಯಲ್ಲಿ ಬಳಕೆಯಲ್ಲಿದೆ.

ಕೆಲವು ಪ್ರಮುಖ ಸ್ಥಳನಾಮಗಳು

ಕನ್ನಡ ನಾಡಿನ ಪ್ರಾಚೀನ ಸ್ಥಳನಾಮಗಳಲ್ಲಿ ಒಂದೊಂದು ಸ್ಥಳನಾಮಗಳು ತಮ್ಮದೇ ಆದ ವಿಶಿಷ್ಟತೆ ಹಾಗೂ ಮಹತ್ವವನ್ನು ಪಡೆದಿವೆ. ಸ್ಥಳನಾಮಗಳು ಸಾಮಾನ್ಯವಾಗಿ ಆ ಪರಿಸರದ ಪ್ರಾಕೃತಿಕ, ಸಾಂಸ್ಕೃತಿಕ ಹಾಗೂ ಕೆಲವು ಸಂಕೀರ್ಣತೆಗಳಿಂದಲೂ ಉಗಮವಾಗಿರುತ್ತವೆ. ಸಾಲಗುಂದ ಪ್ರಾಕೃತಿಕವಾಗಿ ಉಗಮವಾದ ಸ್ಥಳನಾಮ. ಅದರಂತೆ ಇಲ್ಲಿನ ಪರಿಸರದಲ್ಲಿ ಕೆಲವು ಪ್ರಮುಖ ಸ್ಥಳನಾಮಗಳನ್ನು ವಿವೇಚಿಸಲಾಗಿದೆ. ವಿವಿಧ ರೀತಿಗಳಲ್ಲಿ ಸ್ಥಳನಾಮಗಳು ಕಂಡುಬರುತ್ತವೆ. ಅವುಗಳನ್ನು ಈ ಕೆಳಗಿನಂತೆ ಹೆಸರಿಸಬಹುದು.

- ಪ್ರಾಕೃತಿಕ ಸ್ಥಳನಾಮ
- ಸಾಂಸ್ಕೃತಿಕ ಸ್ಥಳನಾಮ
- ವ್ಯಕ್ತಿ ಆಧಾರಿತ ಸ್ಥಳನಾಮ
- ಸಂಕೀರ್ಣ ಸ್ಥಳನಾಮ

ಪ್ರಾಕೃತಿಕ ಸ್ಥಳನಾಮ

ಮಾನವ ಪ್ರಕೃತಿಯ ಕೂಸು ಎನ್ನುವಂತೆ ಅವನು ಪ್ರಕೃತಿಯ ಒಂದು ಪ್ರಮುಖ ಭಾಗವಾಗಿ ಬೆಳೆದುಕೊಂಡು ಬಂದಿದ್ದಾನೆ. ಆದ್ದರಿಂದ ಪ್ರಕೃತಿಯಲ್ಲಿ ಕಂಡುಬರುವ ಹಲವು ಅಂಶಗಳಿಂದ ಸ್ಥಳನಾಮಗಳನ್ನು ಬಳಸಿಕೊಳ್ಳುವ ವಾಡಿಕೆ ಬೆಳೆದು ಬಂದಿದೆ. ಎತ್ತರದ ಭೂ ಪ್ರದೇಶ, ಬೆಟ್ಟ ಗುಡ್ಡ, ಅರಣ್ಯ, ನದಿ, ಪ್ರಾದೇಶಿಕ ಭೂ ಲಕ್ಷಣಗಳು ಇತ್ಯಾದಿ ಅಂಶಗಳು ನಿರ್ದಿಷ್ಟವಾಗಿ ಅಥವಾ ವಾರ್ಗಿಕವಾಗಿ

ಕಾರ್ಯನಿರ್ವಹಿಸುತ್ತವೆ. ಮಾನವನು ತನ್ನ ಬುದ್ಧಿವಂತಿಕೆಯಿಂದ ಈ ವಿಶಿಷ್ಟತೆಗಳನ್ನು ಬಳಸಿಕೊಂಡಿದ್ದಾನೆ. ಪ್ರಾಕೃತಿಕ ಸ್ಥಳನಾಮಗಳಲ್ಲಿ ಹಲವು ಪ್ರಕಾರಗಳನ್ನು ಕಾಣುತ್ತೇವೆ.

- ಜಲವಾಚಿ ಸ್ಥಳನಾಮ
- ಶಿಲೆವಾಚಿ ಸ್ಥಳನಾಮ
- ಸಸ್ಯ, ಗಿಡ, ಮರ ಇತ್ಯಾದಿ ಸೂಚಕ ಸ್ಥಳನಾಮ

ಜಲವಾಚಿ ಸ್ಥಳನಾಮ

ಜಲಮೂಲ ಸಂಸ್ಕೃತಿಯಿಂದ ಆರಂಭವಾದ ಸಂಸ್ಕೃತಿಯಲ್ಲಿ ಜಲವನ್ನು ಅವಲಂಬಿಸಿ ಕೆಲವು ಗ್ರಾಮಗಳಿಗೆ ಹೆಸರು ಕರೆಯುವ ರೂಡಿ ಬಂದಿರಬಹುದು. ಅಂತಹ ಭೂ ಸ್ಥಿತಿಯನ್ನು ಹೇಳುವ ಸ್ಥಳನಾಮಗಳು ಸಾಲಗುಂದ ಪರಿಸರದಲ್ಲಿ ಕಾಣಸಿಗುತ್ತವೆ. ಉದಾಹರಣೆ ಉಪ್ಪಳ.

ಶಿಲೆವಾಚಿ ಸ್ಥಳನಾಮ

ಪ್ರಾಕೃತಿಕ ಲಕ್ಷಣಗಳನ್ನು ಸೂಚಿಸುವ ಸ್ಥಳನಾಮಗಳಲ್ಲಿ ಶಿಲೆವಾಚಿ ಸ್ಥಳನಾಮಗಳು ಪ್ರಾಚೀನವಾದವು. ಶಿಲೆಯ ಅರ್ಥವಿರುವ ಗುಡ್ಡ, ಕುಂದ, ಕಲ್ಲು, ಬಂಡೆ ಎಂಬ ಪದಗಳಿಂದ ಈ ಪರಿಸರದಲ್ಲಿನ ಕೆಲವು ಸ್ಥಳನಾಮಗಳನ್ನು ಗಮನಿಸಬಹುದು. ಉದಾಹರಣೆ ಸಾಲಗುಂದ, ಮುಕ್ಕುಂದ, ರವುಡಕುಂದ, ಗೊಬ್ಬರಕಲ್ಲು, ಕೆಂಗಲ್, ಕಗ್ಗಲ್ ಇತ್ಯಾದಿ.

ಸಸ್ಯ, ಗಿಡ, ಮರ ಇತ್ಯಾದಿ ಸೂಚಕ ಸ್ಥಳನಾಮ

ಸಸ್ಯ, ಗಿಡ, ಮರ ಇತ್ಯಾದಿ ಸೂಚಕ ಸ್ಥಳನಾಮಗಳು ಸಹಃ ಕಂಡು ಬರುತ್ತವೆ. ಉದಾಹರಣೆ ಜಾಲಿಹಾಳು, ಮಾವಿನಮಡುಗು, ಸಾಸಲಮರಿ, ಆಲಬನೂರು ಇತ್ಯಾದಿ.

ಸಾಂಸ್ಕೃತಿಕ ಸ್ಥಳನಾಮ

ವ್ಯಕ್ತಿವಾಚಿ ಸ್ಥಳನಾಮ ಸಾಮಾನ್ಯವಾಗಿ ಕೆಲವು ಊರುಗಳಿಗೆ ವ್ಯಕ್ತಿಯ ಹೆಸರಗಳು ಆಧಾರದ ಮೇಲೆ ಬಂದಿರುತ್ತವೆ. ಸ್ಥಳನಾಮಗಳ ಆರಂಭಿಕ ಹಂತ ನೈಸರ್ಗಿಕ ಅಂಶಗಳ ಆಧಾರದ ಮೇಲೆ ಅವಲಂಬನೆಯಾಗಿದ್ದು, ಸಂಸ್ಕೃತಿಯ ವಿಕಾಸದ ಹಾದಿಯಲ್ಲಿ ಜನಾಂಗಿಕವಾಗಿ ಸಾಗಿ ಬಂದಿತು. ಮುಂದೆ ಇದೇ ಪರಂಪರೆ ಮುಂದುವರೆಯಿತು.

ವ್ಯಕ್ತಿ ಆಧಾರಿತ ಸ್ಥಳನಾಮ

ಗ್ರಾಮವನ್ನು ನಿರ್ಮಿಸಿದವನ ನೆನಪಿಗಾಗಿ; ದತ್ತಿಯಾಗಿ ಕೊಟ್ಟವನ ಸ್ಮರಣಾರ್ಥವಾಗಿ; ಊರಿನ ಗೌರವವನ್ನು ರಕ್ಷಿಸಿದ್ದರ ಸಲುವಾಗಿ; ಅಥವಾ ಆ ನೆಲೆಯಲ್ಲಿ ನೆಲೆಸಿರುವ ದೇವತೆಗಳ ಹೆಸರಿನಲ್ಲಿ ವ್ಯಕ್ತಿ ಆಧಾರಿತ ಸ್ಥಳನಾಮಗಳು ಬೆಳೆದು ಬಂದಿವೆ. ಇಲ್ಲಿನ ಪರಿಸರದ ಕೆಲವು ಗ್ರಾಮಗಳಲ್ಲಿ ವ್ಯಕ್ತಿ ಆಧಾರಿತವಾದ ಕೆಲವು ಸ್ಥಳನಾಮಗಳನ್ನು ಕಾಣಬಹುದು. ಉದಾಹರಣೆಯಾಗಿ ವೆಂಕಟೇಶ್ವರ ಕ್ಯಾಂಪ್, ಲಕ್ಷ್ಮೀ ಕ್ಯಾಂಪ್, ರಾಮಕ್ಯಾಂಪ್, ರಂಗದಹಳ್ಳಿ, ಚನ್ನಳ್ಳಿ ಮತ್ತು ಸಿದ್ಧರಾಂಪುರ ಇತ್ಯಾದಿ.

ಸಂಕೀರ್ಣ ಸ್ಥಳನಾಮ

ಊರು, ಕಲ್ಲು, ಕ್ಯಾಂಪ್, ಪುರ, ಹಳ್ಳಿ, ಹಾಳ ಇತ್ಯಾದಿ ಕೆಲವು ಸಂಕೀರ್ಣತೆಗಳಿಂದ ಕೂಡಿರುವ ಸ್ಥಳನಾಮಗಳನ್ನು ಸಹಃ ಈ ಪರಿಸರದಲ್ಲಿ ಕಾಣಬಹುದು.

ಊರು : ದಢೇಸೂಗೂರು, ಆಲಬನೂರು.

ಕಲ್ಲು : ಗೊಬ್ಬರಕಲ್ಲು, ಕೆಂಗಲ್, ಕಗ್ಗಲ್.

ಕ್ಯಾಂಪ್: ಬಂಗಾರಿಕ್ಯಾಪ್, ಲಕ್ಷ್ಮೀ ಕ್ಯಾಂಪ್, ಮಲ್ಕಾಪುರ ಕ್ಯಾಂಪ್, ವೆಂಕಟೇಶ್ವರ ಕ್ಯಾಂಪ್, ಬೂದಿವಾಳ ಕ್ಯಾಂಪ್, ರಾಮಕ್ಯಾಂಪ್.

ಪುರ : ಸೋಮಲಾಪುರ, ಮಲ್ಕಾಪುರ, ಸಿಂಗಾಪುರ, ಸಿದ್ಧರಾಂಪುರ, ಬಸ್ಸಾಪೂರ.

ಹಳ್ಳಿ : ರಂಗದಹಳ್ಳಿ, ಹೊಸಳ್ಳಿ.

ಹಾಳ : ಬೂದಿವಾಳ, ಜಾಲಿಹಾಳು, ಹಂಚಿನಾಳ, ಉಪ್ಪಳ, ಗೋರೆಬಾಳ.

೨.೩. ಚಾರಿತ್ರಿಕ ಹಿನ್ನೆಲೆ

ಒಂದು ನಿರ್ದಿಷ್ಟವಾದ ಚಾರಿತ್ರಿಕ ಹಿನ್ನೆಲೆಯ ಅಧ್ಯಯನ ಆಯಾ ಸಂಸ್ಕೃತಿಯ ಪರಿಧಿಯನ್ನು ಅಳೆಯುವ ಮಾಪಕದಂತೆ. ಸಾಲಗುಂದ ಪರಿಸರದಲ್ಲಿ ಇತಿಹಾಸ ಪೂರ್ವ ಹಾಗೂ ಇತಿಹಾಸ ಕಾಲದಿಂದಲೂ ಕೆಲವು ಸ್ಥಳಗಳು ಗುರುತಿಸಲ್ಪಟ್ಟಿವೆ. ಇಲ್ಲಿಯ ಪರಿಸರದಲ್ಲಿ ಪ್ರಾಗೈತಿಹಾಸಿಕ ಕುರುಹುಗಳಿರುವುದನ್ನು ಸಂಶೋಧಕರು ಗುರುತಿಸಿದ್ದಾರೆ. ಇದಲ್ಲದೆ ಹಲವು ರಾಜಮನೆತನಗಳು, ವಿಜಯನಗರದ ಅರಸರು, ಸ್ಥಳೀಯ ಪಾಳೆಗಾರರು ಹಾಗೂ ಬ್ರಿಟಿಷರು ಈ ಪ್ರದೇಶವನ್ನು ಆಳ್ವಿಕೆ

ನಡೆಸಿದ್ದಾರೆ. ಅದರಂತೆ ಅನೇಕ ಐತಿಹಾಸಿಕ ಕುರುಹುಗಳನ್ನು ಸಾಲಗುಂದ ಪರಿಸರದಲ್ಲಿ ನಾವು ಕಾಣಬಹುದಾಗಿದ್ದು, ಇವು ಈ ನೆಲೆಯ ಹಿನ್ನೆಲೆಯನ್ನು ತಿಳಿಸಿ ಕೊಡುವ ಆಕರಗಳಾಗಿವೆ. ಅಧ್ಯಯನದ ಅನುಕೂಲ ದೃಷ್ಟಿಯಿಂದ ಪ್ರಾಗಿತಿಹಾಸ, ಆದಿ ಇತಿಹಾಸ ಕಾಲ ಮತ್ತು ಇತಿಹಾಸ ಕಾಲವೆಂದೂ ವಿಂಗಡಿಸಿಕೊಳ್ಳಲಾಗಿದೆ.

ಪ್ರಾಗಿತಿಹಾಸ ಕಾಲ

ಬರವಣಿಗೆಯ ಹಿಂದಿನ ಕಾಲವನ್ನು ಪ್ರಾಗಿತಿಹಾಸಕಾಲವೆಂದೂ ಕರೆಯಲಾಗುತ್ತದೆ. ಅಂದರೆ ಪ್ರಾಚೀನ ಮಾನವನು ಉಪಯೋಗಿಸಿ ಬಿಟ್ಟುಹೋದ ಅವಶೇಷಗಳನ್ನು ಬಳಸಿಕೊಂಡು ಅಧ್ಯಯನ ಮಾಡುವುದೇ ಪ್ರಾಗಿತಿಹಾಸ. ಪ್ರಾಗಿತಿಹಾಸ ಕಾಲವಿವಿಧ ಸಂಸ್ಕೃತಿಗಳೊಂದಿಗೆ ಬಹು ದೀರ್ಘಕಾಲ ಮುಂದುವರೆಯುವ ಹಂತ. ಭೂಮಿಯ ಉಗಮದಿಂದ ಹಿಡಿದು ಇತಿಹಾಸಕಾಲ ಆರಂಭವಾಗುವವರೆಗಿನ ಕಾಲಘಟ್ಟವನ್ನು ಪ್ರಾಗಿತಿಹಾಸಕಾಲ ಎಂದೂ ಕರೆಯಲಾಗುತ್ತದೆ.

ಮಾನವನು ತನ್ನ ಜೀವನ ಉಪಯೋಗಕ್ಕಾಗಿ ಮತ್ತು ತನ್ನ ಭಾವನೆಗಳನ್ನು ವ್ಯಕ್ತ ಪಡಿಸುವದಕ್ಕಾಗಿ ಉದ್ದೇಶಪೂರ್ವಕವಾಗಿ ರಚಿಸಿದ ಅಥವಾ ಉಪಯೋಗಿಸಿದ ವಸ್ತಗಳು, ಅವುಗಳ ಅವಶೇಷಗಳು ಪ್ರಾಚ್ಯಾವಶೇಷಗಳೆಂದೂ ಕರೆಯಲ್ಪಡುತ್ತವೆ.[3] ಈ ಪ್ರಾಚ್ಯಾವಶೇಷಗಳನ್ನು ಬಳಸಿಕೊಂಡು ಅಧ್ಯಯನ ಮಾಡುವುದೇ ಪ್ರಾಗಿತಿಹಾಸ.

ಸಾಲಗುಂದ ಪರಿಸರದಲ್ಲಿ ಪ್ರಾಗಿತಿಹಾಸಕಾಲದಲ್ಲಿ ಮಾನವ ವಾಸಮಾಡಿದ ಕುರುಹುಗಳು ದೊರೆತಿವೆ. ಆದಿ ಹಳೆಶಿಲಾಯುಗ, ಸೂಕ್ಷ್ಮಶಿಲಾಯುಗ, ನೂತನ ಶಿಲಾಯುಗ, ಶಿಲಾತಾಮ್ರಯುಗ ಹಾಗೂ ಬೃಹತ್ ಶಿಲಾಯುಗ ಸಂಸ್ಕೃತಿಗಳು ಕಂಡುಬರುತ್ತವೆ. ಆದಿ ಹಳೆಶಿಲಾಯುಗ ಕಾಲದಿಂದ ಆದಿ ಇತಿಹಾಸ ಕಾಲದವರೆಗೆ ಈ ಪರಿಸರದ ಬಹುಭಾಗಗಳಲ್ಲಿ ಆಯಾ ಸಂಸ್ಕೃತಿಯ ಜನರು ವಾಸಿಸುತ್ತಿದ್ದರು ಇಲ್ಲಿ ದೊರಕಿರುವ ಅವರ ಶಿಲಾಯುಧಗಳು, ಇತಿಹಾಸ ಕಾಲ ಆರಂಭದ ಮಣ್ಣಿನ ಕಟ್ಟಡಗಳ ತಳಪಾಯಗಳು ಮತ್ತು ಇತರೆ ಅವಶೇಷಗಳು ಈ ಪರಿಸರದ ಪ್ರಾಚೀನತೆಯನ್ನು ದೃಡಪಡಿಸುತ್ತವೆ.

ಆದಿ ಹಳೆಶಿಲಾಯುಗ ಸಂಸ್ಕೃತಿ

ಆದಿಮಾನವ ಸಂಸ್ಕೃತಿಯ ಪ್ರಾರಂಭದ ಹಂತ ಹಳೆಶಿಲಾಯುಗ. ಉಪಕರಣಗಳಲ್ಲಿ ಕಾಣಸಿಗುವ ಲಕ್ಷಣಗಳ ಹಿನ್ನೆಲೆಯಲ್ಲಿ ಇದನ್ನು ಮೂರು ವಿಭಾಗಗಳಾಗಿ ಮಾಡಲಾಗಿದೆ. ಆದಿ ಹಳೆ ಶಿಲಾಯುಗ, ಮದ್ಯ ಹಳೆಶಿಲಾಯುಗ ಹಾಗೂ ಅಂತ್ಯ ಹಳೆಶಿಲಾಯುಗ. ಈ ಹಂತದಲ್ಲಿ ಆದಿಮಾನವನ

ದೀರ್ಘಕಾಲ ಹಾಗೂ ಪ್ರಾಚೀನ ಹಂತ ಇದಾಗಿದೆ.[೪] ಈ ಸಂಸ್ಕೃತಿಯ ಉಪಕರಣಗಳು ಇಲ್ಲಿನ ಪರಿಸರದಲ್ಲಿ ದೊರೆಯದಿದ್ದರೂ ಈ ಕಾಲಘಟ್ಟದ್ದೆಂದೂ ಗುರುತಿಸುವ ಕೈಯಿಂದ ತಯಾರಿಸಿದ ಕಪ್ಪು ಮಿಶ್ರಿತ ಮಡಕೆ ಚೂರುಗಳು, ಬೂದು ಮತ್ತು ಕಪ್ಪು ಬಣ್ಣದ ಮಡಕೆ ಚೂರುಗಳು ಸೋಮಲಾಪುರದ ಹಾಳೂರಿನ ಮುಂದೆ ಸಿಗುವ ಕಡುತುರ ಕಂಟಿಯಲ್ಲಿ ದೊರೆತಿವೆ.

ಸೂಕ್ಷ್ಮ ಶಿಲಾಯುಗ ಸಂಸ್ಕೃತಿ

ಇದು ಹಳೆಶಿಲಾಯುಗ ಮತ್ತು ನವಶಿಲಾಯುಗದ ಮಧ್ಯದಲ್ಲಿ ಕಂಡುಬರುವ ಸಾಂಸ್ಕೃತಿಕ ಹಂತ. ಇದರ ಕಾಲಾವಧಿಯು ಹಿಂದಿನ ಹಳೆಶಿಲಾಯುಗ ಕಾಲಕ್ಕಿಂತ ಚಿಕ್ಕದು ಆದರೆ, ಸಾಂಸ್ಕೃತಿಕ ಮುನ್ನಡೆಯಲ್ಲಿ ಇದರ ಪಾತ್ರ ತುಂಬಾ ಮಹತ್ವವಾದದ್ದು. ಈ ಕಾಲಘಟ್ಟದಲ್ಲಿ ಮಾನವ ಅತ್ಯಂತ ಸೂಕ್ಷ್ಮ ಉಪಕರಣಗಳನ್ನು ಉಪಯೋಗಿಸಲು ಪ್ರಾರಂಭಿಸಿದ್ದರಿಂದ ಈ ಯುಗವನ್ನು ಸೂಕ್ಷ್ಮ ಶಿಲಾಯುಗ ಎಂದೂ; ಹಾಗೂ ಮುಂದಿನ ನವ ಶಿಲಾಯುಗದ ಉಗಮಕ್ಕೆ ಕಾರಣವಾದ ಹಿನ್ನೆಲೆಯಲ್ಲಿ ಸ್ಥಿತ್ಯಂತರ ಶಿಲಾಯುಗ ಹಂತವೆಂದೂ ವರ್ಣಿಸಲಾಗಿದೆ.[೫] ಸಾಲಗುಂದ ಪರಿಸರದಲ್ಲಿ ಸೋಮಲಾಪುರದ ಹಾಳೂರಿನ ಮುಂದೆ ಕಾಣಸಿಗುವ ಕಡುತುರ ಕಂಟಿಯಲ್ಲಿ ಈ ಸಂಸ್ಕೃತಿಯ ಚಕ್ಕೆ ಎಬ್ಬಿಸಿದ ಕೈ ಕೊಡಲಿ ದೊರೆತಿದೆ.

ನೂತನ ಶಿಲಾಯುಗ ಸಂಸ್ಕೃತಿ

ಮಾನವ ಬಳಸುವ ಆಯುಧಗಳ ಪರಿಕಲ್ಪನೆಯಲ್ಲಿ ಸಂಸ್ಕೃತಿಯ ಕಾಲಘಟ್ಟಗಳನ್ನು ಗುರುತಿಸಲಾಗುತ್ತದೆ.ಉಜ್ಜಿ ನಯಗೊಳಿಸಿದ ಉಪಕರಣಗಳು ಈ ಕಾಲಘಟ್ಟದಲ್ಲಿ ಕಂಡುಬಂದಿರುವುದರ ಪರಿಣಾಮವಾಗಿ ನೂತನ ಶಿಲಾಯುಗ ಎಂದೂ ಕರೆಯುತ್ತೇವೆ.ಈ ಹಿಂದೆ ಕಂಡುಬರುವ ಹಳೆ ಶಿಲಾಯುಗ ಹಾಗೂ ಸೂಕ್ಷ್ಮ ಶಿಲಾಯುಗದಲ್ಲಿ ಮಾನವ ತನಗೆ ಬೇಕಾದ ಆಹಾರದ ಸಲುವಾಗಿ ಅಲೆಮಾರಿಯಾಗಿದ್ದ ನಂತರ ಅವನ ಬುದ್ದಿಮಟ್ಟದಲ್ಲಿ ವಿಕಾಸಗೊಂಡು ಇತ್ಯಾದಿ ಲಕ್ಷಣಗಳಲ್ಲಿ ಬದಲಾವಣೆಯಾಗಿ ಒಂದೇಡೆ ನೆಲೆ ನಿಲ್ಲಲು ಪ್ರಯತ್ನಿಸಿದನು.[೬]

ಪ್ರಾಣಿಗಳನ್ನು ಪಳಗಿಸುವುದರ ಜೊತೆಗೆಕೃಷಿ ಸಂಸ್ಕೃತಿಯನ್ನು ಕಂಡುಕೊಂಡನು ಈ ಅವಧಿಯನ್ನೇ ನವಶಿಲಾಯುಗ ಅಥವಾ ನೂತನ ಶಿಲಾಯುಗ ಎಂದೂ ಕರೆಯಲಾಗುತ್ತದೆ.[೭] ಇದನ್ನು ಗ್ರಾಮ ಸಂಸ್ಕೃತಿಯ ಆರಂಭದ ಹಂತ ಎಂತಲೂ ಕರೆಯಲಾಗುತ್ತದೆ. ಸೋಮಲಾಪುರ, ರವುಡಕುಂದ ಗ್ರಾಮಗಳು ಈ ಪರಿಸರದಲ್ಲಿ ಕಂಡುಬರುವ ಈ ಯುಗದ ನೆಲೆಗಳಾಗಿವೆ.

ಶಿಲಾ ತಾಮ್ರಯುಗ ಸಂಸ್ಕೃತಿ

ಶಿಲೆಯ ಉಪಕರಣಗಳ ಜೊತೆಗೆ ತಾಮ್ರದ ಉಪಕರಣಗಳು ಕಂಡು ಬಂದಿದ್ದರ ಸಲುವಾಗಿ ಶಿಲಾ ತಾಮ್ರಯುಗ ಎಂದೂ ಕರೆಯಲಾಗುತ್ತದೆ. ಶಿಲಾ ತಾಮ್ರಯುಗ ನವಶಿಲಾಯುಗದ ಕಾಲಘಟ್ಟದ ಜೊತೆ ಜೊತೆಯಲ್ಲಿಯೇ ಕಂಡುಬರುತ್ತದೆ.[೮] ಈ ಪರಿಸರದಲ್ಲಿ ಗೊಬ್ಬರಕಲ್ ಶಿಲಾ ತಾಮ್ರಯುಗದ ನೆಲೆಯಾಗಿದ್ದಿರಬಹುದೆಂದು ತಿಳಿಯಲಾಗಿದೆ.

ಬೃಹತ್ ಶಿಲಾಯುಗ ಸಂಸ್ಕೃತಿ

ಬೃಹತ್ ಶಿಲಾಗೋರಿಗಳು ಈ ಕಾಲಘಟ್ಟದಲ್ಲಿ ಹೆಚ್ಚಾಗಿ ಸಿಗುವುದರಿಂದ ಈ ಯುಗವನ್ನು ಬೃಹತ್ ಶಿಲಾಯುಗ ಎಂದೂ ಕರೆಯಲಾಗುತ್ತದೆ. ಸಹಜವಾಗಿಯೇ ಗುಡ್ಡಬೆಟ್ಟಗಳಲ್ಲಿ ದೊಡ್ಡ ಪ್ರಮಾಣದಲ್ಲಿ ಸುಲಭವಾಗಿ ಕಲ್ಲು ಚಪ್ಪಡಿಗಳ ಗುಂಡುಗಳು ದೊರೆಯಬಹುದಾದ ಸನ್ನಿವೇಶದಲ್ಲಿಯೇ ಬೃಹತ್ ಶಿಲಾ ಗೋರಿಗಳ ನೆಲೆಗಳಿರುವುದು ಸಹಜ.[೯] ಈ ಕಾಲಘಟ್ಟದ ಕೆಲವು ಕಲ್ಲುವೃತ್ತ ಮಾದರಿಯ ಸಮಾಧಿಗಳು ಈ ಪರಿಸರದ ಸೋಮಲಾಪುರದ ಕಡಿತಿರ್ನ ಕಂಟಿ ಎಂದೂ ಕರೆಯಲ್ಪಡುವ ಪ್ರದೇಶದಲ್ಲಿ ಕಾಣಸಿಗುತ್ತವೆ.

ಪ್ರಾಗಿತಿಹಾಸಕಾಲದ ನೆಲೆಗಳು

ಸಾಲಗುಂದ ಪರಿಸರವು ಅನಾದಿಕಾಲದಿಂದಲೂ ಮಾನವ ವಾಸಸ್ಥಾನದ ನೆಲೆಯಾಗಿರುವುದರೊಂದಿಗೆ ಜನವಸತಿಗೆ ಯೋಗ್ಯ ಮತ್ತು ಅನುಕೂಲಕರವಾದ ಪರಿಸರವಾಗಿದೆ. ಇದಕ್ಕೆ ಪೂರಕವೆಂಬಂತೆ ಇಲ್ಲಿನ ಸುತ್ತಮುತ್ತಲಿನ ವಾತವರಣದಲ್ಲಿ ಹಲವು ವರ್ಷಗಳ ಹಿಂದೆ ವಾಸಮಾಡಿದ ಪ್ರಾಗಿತಿಹಾಸ ಕಾಲದ ಮಾನವನು ಬಳಸಿ ಬಿಟ್ಟು ಹೋದ ಅವಶೇಷಗಳು ದೊರೆತಿವೆ. ಈ ಅವಶೇಷಗಳ ಹಿನ್ನೆಲೆಯಲ್ಲಿ ಈ ಪರಿಸರದಲ್ಲಿ ಕಂಡುಬರುವ ವಿವಿಧ ಪ್ರಾಚೀನ ಸಂಸ್ಕೃತಿಯ ನೆಲೆಗಳನ್ನು ಗುರುತಿಸಲಾಗಿದೆ.

ಗೊಬ್ಬರಕಲ್

ಗ್ರಾಮ : ಸಾಲಗುಂದ
ತಾಲೂಕು : ಸಿಂಧನೂರು
ಜಿಲ್ಲೆ : ರಾಯಚೂರು

ನೆಲೆಯ ಹೆಸರು : ಸಾಲಗುಂದ
ನೆಲೆಯ ಸಂಸ್ಕೃತಿ : ಶಿಲಾ ತಾಮ್ರಯುಗ
ಸ್ಥಿತಿ : ಕನಿಷ್ಠ

ಉಲ್ಲೇಖ :*A.R Hyderabad Dept. of Arch. 1935-36. Page No-02* ; ಕ.ಪು.ನೆ.

ತಾಲೂಕು ಕೇಂದ್ರ ಸಿಂಧನೂರು ನಿಂದ ೧೮ ಕಿ.ಮೀ ದೂರದಲ್ಲಿದೆ. ೧೫°೩೮'೩೩" ಉತ್ತರ ಅಕ್ಷಾಂಶ ಮತ್ತು ೭೬°೪೭'೯" ಪೂರ್ವ ರೇಖಾಂಶದಲ್ಲಿದೆ. ಪ್ರಸ್ತುತ ಸೋಮಲಾಪುರ ಗ್ರಾಮ ಪಂಚಾಯತ ವ್ಯಾಪ್ತಿಗೆ ಒಳಪಡುತ್ತದೆ. ಇಲ್ಲಿನ ದ್ಯಾವಮ್ಮ ಗುಡ್ಡದ ಮೇಲೆ ಹಲವು ಪ್ರಾಚ್ಯಾವಶೇಷಗಳು ಕಾಣಸಿಗುತ್ತವೆ. ಇದು ಶಿಲೆಯ ಉಪಕರಣಗಳ ನೆಲೆಯಾಗಿದ್ದು, ತಾಮ್ರಶಿಲಾಯುಗ ಸಂಸ್ಕೃತಿಗೆ ಸೇರಿದ್ದಿರಬಹುದೆಂದು ತಿಳಿಯಲಾಗಿದೆ.[೧೦]

ರವುಡಕುಂದ

ಗ್ರಾಮ	: ರವುಡಕುಂದ	ನೆಲೆಯ ಹೆಸರು	: ರವುಡಕುಂದ
ತಾಲೂಕು	: ಸಿಂಧನೂರು	ನೆಲೆಯ ಸಂಸ್ಕೃತಿ	: ನವ ಶಿಲಾಯುಗ
ಜಿಲ್ಲೆ	: ರಾಯಚೂರು	ಸ್ಥಿತಿ	: ಕನಿಷ್ಠ

ಉಲ್ಲೇಖ :*A.I.4 1943-48. Page No-298; ಕ.ಪು.ನೆ.*

ತಾಲೂಕು ಕೇಂದ್ರ ಸಿಂಧನೂರು ನಿಂದ ೧೬.೪ ಕಿ.ಮೀ ದೂರದಲ್ಲಿದೆ. ೧೫°೪೧'೩೮" ಉತ್ತರ ಅಕ್ಷಾಂಶ ಮತ್ತು ೭೬°೪೪'೪೦" ಪೂರ್ವ ರೇಖಾಂಶದಲ್ಲಿದೆ. ಗ್ರಾಮವನ್ನು ಪ್ರವೇಶಿಸುತ್ತಿದ್ದಂತೆ, ಅಂಟಿಕೊಂಡತ್ತಿರುವ ಎರಡು ಬೆಟ್ಟಗಳು ಕಾಣಸಿಗುತ್ತವೆ. ಬೆಟ್ಟದ ಮೇಲೆ ಶಿಥಿಲಾವಸ್ಥೆಯಲ್ಲಿರುವ ಕಾವಲುಗೋಪುರ ಹಾಗೂ ಕೋಟೆಯ ಗೋಡೆ ಕಂಡುಬರುತ್ತದೆ. ಇದು ನೂತನ ಶಿಲಾಯುಗ ಸಂಸ್ಕೃತಿಯ ನೆಲೆಯಾಗಿದ್ದು, ಇಲ್ಲಿ ಉಜ್ಜಿ ನಯಗೊಳಿಸಿದ ಕೊಡಲಿಗಳು ಬಟ್ಟತಲೆಯನ್ನು ಹೊಂದಿವೆ.[೧೧]

ಸಾಲಗುಂದ

ಗ್ರಾಮ	: ಸಾಲಗುಂದ	ನೆಲೆಯ ಹೆಸರು	: ಸಾಲಗುಂದ
ತಾಲೂಕು	: ಸಿಂಧನೂರು	ನೆಲೆಯ ಸಂಸ್ಕೃತಿ	: ನವ ಶಿಲಾಯುಗ
ಜಿಲ್ಲೆ	: ರಾಯಚೂರು	ಸ್ಥಿತಿ	: ಕನಿಷ್ಠ

ಉಲ್ಲೇಖ : *Raichur District Gazetter, 1970. Page No-31.*

ಬಹುಶಃ ಇದು ನವ ಶಿಲಾಯುಗದ ನೆಲೆಯಾಗಿದ್ದಿರಬಹುದು, ೧೯೭೦ರ ರಾಯಚೂರು ಜಿಲ್ಲೆ ಗೆಜೆಟಿಯರ್ ಅಲ್ಲಿ ಪ್ರಾಗಿತಿಹಾಸ ಕಾಲದ ನೆಲೆಯೆಂದು ಉಲ್ಲೇಖವಾಗಿದೆ. ಅದರೆ ಸಂಸ್ಕೃತಿ ಯಾವುದೆಂದೂ ಉಲ್ಲೇಖವಾಗಿಲ್ಲ. ಇಲ್ಲಿನ ಬೆಟ್ಟಗಳ ಮೇಲೆ ಹಾಗೂ ಬೆಟ್ಟಗಳ ಅಂಚಿನ ಪರಿಸರದಲ್ಲಿ ನವಶಿಲಾಯುಗದ ಲಕ್ಷಣಗಳು ಕಾಣಿಸುತ್ತಿವೆ.

ಸೋಮಲಾಪುರ

ಗ್ರಾಮ : ಸೋಮಲಾಪುರ | ನೆಲೆಯ ಹೆಸರು : ಸೋಮಲಾಪುರ

ತಾಲೂಕು : ಸಿಂಧನೂರು | ಸ್ಥಿತಿ : ಕನಿಷ್ಠ

ಜಿಲ್ಲೆ : ರಾಯಚೂರು | ಉಲ್ಲೇಖ : -----

ನೆಲೆಯಸಂಸ್ಕೃತಿ : ಆದಿಹಳೆಶಿಲಾಯುಗ, ಸೂಕ್ಷ್ಮಶಿಲಾಯುಗ, ನವಶಿಲಾಯುಗ, ತಾಮ್ರಶಿಲಾಯುಗ, ಬೃಹತ್ ಶಿಲಾಯುಗ ಮತ್ತು ಆದಿ ಇತಿಹಾಸಕಾಲ ಸಂಸ್ಕೃತಿ.

ತಾಲೂಕು ಕೇಂದ್ರದಿಂದ ೧೫.೪ ಕಿ.ಮೀ ದೂರದಲ್ಲಿದೆ. ೧೫°೪೧'೧೨" ಉತ್ತರ ಅಕ್ಷಾಂಶ ಮತ್ತು ೭೬°೪೭'೨೧" ಪೂರ್ವ ರೇಖಾಂಶ ನಡುವೆ ಇದೆ. ಬೆಟ್ಟಗಳ ಅಂಚಿನಲ್ಲಿರುವ ಈ ಗ್ರಾಮದ ದಕ್ಷಿಣ ದಿಕ್ಕಿಗೆ ಹಾಳೂರು ಹಾಗೂ ಸಾಲಾಗಿ ಕಂಡುಬರುವ ಹಲವು ಬೆಟ್ಟಗುಡ್ಡಗಳಿವೆ. ಇಲ್ಲಿಂದ ಸಾಲಗುಂದೆ ವರೆಗೂ ಬೆಟ್ಟಗಳ ಸಾಲು ಹಬ್ಬಿದೆ. ಈ ಊರಿನ ಹಾಳೂರಿನಲ್ಲಿ ಹಾಗೂ ಇಲ್ಲಿಂದ ಸುಮಾರು ೧.೫ ಕಿ.ಮೀ ದೂರದಲ್ಲಿರುವ ಕಡತುರ ಕಂಟಿ ಎಂದೂ ಕರೆಯಲ್ಪಡುವ ಪ್ರದೇಶದಲ್ಲಿ ಕ್ಷೇತ್ರಕಾರ್ಯ ಕೈಗೊಂಡ ಸಂದರ್ಭದಲ್ಲಿ ಹಲವು ಪ್ರಾಚ್ಯಾವಶೇಷಗಳು ದೊರೆತಿವೆ. ಕಂಟಿ ಎಂದರೆ, ಗಿಡಗಳ ಪೊದೆ ಎಂದರ್ಥ. ಕಡತುರ ಹುಳುಗಳಿಂದ ಕೂಡಿರುವ ಪೊದೆಗಳಿಗೆ ಕಡುತುರ ಕಂಟಿ ಎಂದೂ ಕರೆಯಲಾಗುತ್ತದೆ.

ಇದು ವಿವಿಧ ಕಾಲಘಟ್ಟದ ಸಂಸ್ಕೃತಿಗಳಿಗೆ ಒಳಪಟ್ಟಿದೆ. ಹಾಳೂರಿನಲ್ಲಿ ನವಶಿಲಾಯುಗ ಹಾಗೂ ಶಿಲಾ ತಾಮ್ರಯುಗಕ್ಕೆ ಸಂಬಂಧಿಸಿದ ಉಜ್ಜಿ ನಯಗೊಳಿಸಿದ ಕೈ ಕೊಡಲಿಗಳು, ಮಡಕೆ ಚೂರುಗಳು ದೊರೆತಿದ್ದು, ಇಲ್ಲಿಂದ ಮುಂದೆ ಸಿಗುವ ಕಡತುರ ಕಂಟಿಯಲ್ಲಿ ಆದಿ ಹಳೆ ಶಿಲಾಯುಗದ ಮಡಕೆ ಚೂರುಗಳು, ಸೂಕ್ಷ್ಮ ಶಿಲಾಯುಗದ ಕೈ ಕೊಡಲಿ, ನವಶಿಲಾಯುಗ, ತಾಮ್ರ ಶಿಲಾಯುಗದ ಉಪಕರಣಗಳು, ಬೃಹತ್ ಶಿಲಾಯುಗದ ಕಲ್ಲುವೃತ್ತ ಮಾದರಿಯ ಸಮಾಧಿಗಳು ಹಾಗೂ ಆದಿ ಇತಿಹಾಸಕಾಲದ ಒರುಳು ಕಲ್ಲುಗಳು, ಮಣ್ಣಿನ ಮನೆಗಳ ಅವಶೇಷಗಳು, ಮಡಕೆ ಚೂರುಗಳು ಕಂಡುಬಂದಿವೆ. ಸುತ್ತಲೂ ಬೆಟ್ಟಗಳಿದ್ದು, ಆ ಬೆಟ್ಟಗಳ ಕೆಳಗಿನ ಜಾಗದಲ್ಲಿ ಈ ಎಲ್ಲಾ ಅವಶೇಷಗಳಿವೆ. ಹೀಗೆ ಈ ನೆಲೆಯಲ್ಲಿ ದೊರೆತ ಅಥವಾ ಕಾಣಸಿಗುವ ಪ್ರಾಚ್ಯಾವಶೇಷಗಳು ಈ ಕೆಳಗಿನಂತಿವೆ.

ದೊರೆತ ಉಪಕರಣಗಳು

- ಚಕ್ಕೆ ಎಬ್ಬಿಸಿದ ಕೈ ಕೊಡಲಿ.
- ತ್ರಿಕೋನಾಕಾರದ ಉಪಕರಣ.

- ಉಜ್ಜಿ ನಯಗೊಳಿಸಿದ ಕೈ ಕೊಡಲಿಗಳು.
- ಬಟ್ಟ ತಲೆಯ ಉಪಕರಣಗಳು.
- ಇತರೆ ತುಂಡಾಗಿ ಬಿದ್ದಿರುವ ಉಪಕರಣಗಳು.

ದೊರೆತ ಮಡಕೆಗಳು

- ಕಪ್ಪು, ಬೂದು ಮಿಶ್ರಿತ ಕೈಯಿಂದ ತಯಾರಿಸಿದ ಮಡಕೆ ಚೂರುಗಳು.
- ಕಪ್ಪು ಮತ್ತು ಕೆಂಪು ಮಿಶ್ರಿತ ಕೈಯಿಂದ ತಯಾರಿಸಿದ ಮಡಕೆ ಚೂರುಗಳು*(Black and Red Ware Hand Made Potterys)*.
- ಕಪ್ಪು ಮತ್ತು ಕೆಂಪು ಮಣ್ಣಿನ ಮಣ್ಪಾತ್ರೆಗಳು.
- ನುಣಪಾಗಿ ಕಾಣುವ ಕಪ್ಪು ಮತ್ತು ಕಂದು ಬಣ್ಣದ ಮಡಕೆ ಚೂರುಗಳು.

ಸಮಾಧಿಗಳು

- ಕಲ್ಲು ವೃತ್ತ ಮಾದರಿಯ ಸಮಾಧಿಗಳು (*Stone Circle Burials*).

ಇತರೆ ಅವಶೇಷಗಳು

- ಮಣ್ಣಿನ ಮನೆಯ ತಳಪಾಯಗಳು.
- ಒರಳು ಕಲ್ಲುಗಳು.
- ಮನೆಗೆ ಬಳಸಿರಬಹುದಾದ ಕೊಳೆತ ಮರದ ಅವಶೇಷಗಳು.
- ಮಣ್ಣಿನ ದಿಬ್ಬಗಳು.

ಭೂ ಲಕ್ಷಣಗಳು

- ಈ ನೆಲೆಯ ಪರಿಸರದ ಸುತ್ತಲೂಬೃಹತ್ ಬೆಟ್ಟ ಗುಡ್ಡಗಳಿವೆ.
- ಗವಿ ಕಲ್ಲಾಸರೆಗಳು ಕಾಣಸಿಗುತ್ತವೆ.
- ಬೂದು ಬಣ್ಣದ ಹಾಳು ಮಣ್ಣು ಕಂಡು ಬರುತ್ತದೆ.

ಈ ಪರಿಸರದಲ್ಲಿ ಬರುವ ಅಪರೂಪದ ನೆಲೆ, ಇಲ್ಲಿಂದಲೇ ಈ ಪರಿಸರದ ಸುತ್ತಮುತ್ತಲಿನ ಗ್ರಾಮಗಳಿಗೆ ಸಂಸ್ಕೃತಿ ಪಸರಿದಂತೆ ಕಾಣುತ್ತದೆ. ಇದನ್ನು ಸಂರಕ್ಷಿಸುವ ಕಾರ್ಯ ಆಗಬೇಕಾಗಿದೆ. ಇಲ್ಲಿ ನಿಧಿ ಆಸೆಗಾಗಿ ಮನಬಂದಂತೆ ಗುಂಡಿಗಳನ್ನು ಅಗೆದಿದ್ದಾರೆ. ಅಲ್ಲಲ್ಲಿ ಹಲವು ಬಗೆಯ ಪೂಜೆ ಉಪಕರಣಗಳು ಕಾಣಸಿಗುತ್ತವೆ. ಬಹುಶಃ ನಿಧಿಯ ಆಸೆಗಾಗಿ ವಾಮಚಾರ ಮಾಡಿದಂತೆ ಕಾಣುತ್ತದೆ. ಈ ಪ್ರದೇಶದಲ್ಲಿ ಯಾರಾದರೂ ತಿರುಗಾಡಿದರೆ, ನಿಧಿ ಸಲುವಾಗಿ ಬಂದಿದ್ದಾರೆ ಎಂದೂ ಇಲ್ಲಿನ ದನ ಕುರಿ ಕಾಯುವವರು, ಕಲ್ಲು ಹೊಡೆಯುವವರು ಮಾತನಾಡಿಕೊಳ್ಳುತ್ತಾರೆ.

ಆದಿ ಇತಿಹಾಸ ಕಾಲ

ಪ್ರಾಗಿತಿಹಾಸ ಕಾಲದಿಂದ ಮಾನವ ಸಂಸ್ಕೃತಿಯ ವಿಕಾಸನದ ಹಂತಗಳು ಕಾಲದಿಂದ ಕಾಲಕ್ಕೆ ಪ್ರಕೃತಿಯ ವೈರುಧ್ಯಮಾನಗಳಿಗೆ ಅನುಗುಣವಾಗಿ ಬೆಳೆದು ಬಂದವು. ಅದರ ಫಲವಾಗಿ ಬೇಟೆ ಸಂಸ್ಕೃತಿಯ ಹಂತದಿಂದ ಗ್ರಾಮ ಸಂಸ್ಕೃತಿಯ ಹಂತ, ಇಲ್ಲಿಂದ ನಗರ ಸಂಸ್ಕೃತಿಯ ಹಂತಗಳು ಕಾಣಿಸತೊಡಗಿದವು. ಅಂದರೆಕಾಲ ಉರುಳಿದಂತೆ ಆತ ವಲಸೆ ಜೀವನವನ್ನು ತ್ಯಜಿಸಿ ಒಂದೆಡೆ ನೆಲೆನಿಲ್ಲಲು ಪ್ರಯತ್ನಿಸಿದ. ಆ ಪ್ರಯತ್ನದ ಫಲವೇ ಆದಿ ಇತಿಹಾಸ ಕಾಲ ಸಂಸ್ಕೃತಿ. ಇದನ್ನು ಗ್ರಾಮ ಸಂಸ್ಕೃತಿಯ ಆರಂಭದ ಕಾಲಘಟ್ಟ ಎಂತಲೂ ಕರೆಯಬಹುದು.

ಸಾಲಗುಂದ ಪರಿಸರ ಆದಿ ಇತಿಹಾಸ ಕಾಲಘಟ್ಟದ ನೆಲೆಗಳನ್ನು ಒಳಗೊಂಡಿದೆ.ಅವು ಗೊಬ್ಬರಕಲ್, ಉಪ್ಪಳ, ದಢೇಸೂಗೂರು, ಮುಕ್ಕುಂದ, ರವುಡಕುಂದ, ಸಾಲಗುಂದ ಹಾಗೂ ಸೋಮಲಾಪುರ. ಈ ಪ್ರತಿಯೊಂದು ಗ್ರಾಮಗಳಲ್ಲಿ ಹಾಳೂರು ಇದ್ದು ಅಲ್ಲಿ ಕೈಯಿಂದ ತಯಾರಿಸಿದ ಕಪ್ಪು ಬಣ್ಣದ ದಪ್ಪವಾದ ಮಡಕೆಚೂರುಗಳು, ಕಪ್ಪು, ಕೆಂಪು ಮಿಶ್ರಿತ ಮಡಿಕೆ ಚೂರುಗಳುಪ್ರಸ್ತುತ ಅಧ್ಯಯನದ ಕ್ಷೇತ್ರಕಾರ್ಯದಲ್ಲಿ ಕಂಡುಬಂದಿವೆ.

ಇತಿಹಾಸ ಕಾಲ

ಬರವಣಿಗೆವಿದ್ದು, ಓದಲು ಸಾಧ್ಯವಾಗಿ ಅದನ್ನು ಅಧ್ಯಯನದಲ್ಲಿ ಬಳಸಿಕೊಂಡಿರುವ ಕಾಲಘಟ್ಟವನ್ನುಇತಿಹಾಸ ಕಾಲ ಎಂದೂ ಕರೆಯಲಾಗುತ್ತದೆ. ಬರವಣಿಗೆಯ ಕಾಲಘಟ್ಟ ಸಿಂಧೂ ನಾಗರಿಕತೆಯಿಂದ ಆರಂಭವಾಗುತ್ತದೆ. ಆದರೆ ಇಲ್ಲಿಯವರೆಗೆ ಸಿಂಧೂ ನಾಗರಿಕತೆಯ ಬರವಣಿಗೆಯನ್ನು ಓದಲು ಸಾಧ್ಯವಾಗಿಲ್ಲ. ಆದ್ದರಿಂದ ಈ ಅವಧಿಯನ್ನು ಕತ್ತಲೆಯುಗ; ಅಥವಾ ಇತಿಹಾಸ ಪೂರ್ವಯುಗ ಎಂದೂ ಕರೆದರೆ, ಅದರ ನಂತರದ ಕಾಲಘಟ್ಟವನ್ನು ಇತಿಹಾಸ ಕಾಲ ಎಂದೂ ಕರೆಯಲಾಗುತ್ತದೆ. ಸಾಲಗುಂದ ಪರಿಸರವು ಪ್ರಾಗಿತಿಹಾಸ ಮತ್ತು ಇತಿಹಾಸ ಕಾಲಕ್ಕೆ

ಒಳಪಟ್ಟಿದ್ದು ತನ್ನದೆ ಆದ ಸಾಂಸ್ಕೃತಿಕ ಪರಂಪರೆಯನ್ನು ಹೊಂದಿದೆ. ಪ್ರಾಗಿತಿಹಾಸ ಕಾಲದ ನಂತರ ಈ ಪರಿಸರ ಇತಿಹಾಸ ಕಾಲದ ವಿವಿಧ ರಾಜಮನೆತನಗಳ ಆಳ್ವಿಕೆಗೆ ಒಳಪಟ್ಟಿತು.

ಮೌರ್ಯರು

ಪಾಟಲೀಪುತ್ರವನ್ನು ರಾಜಧಾನಿಯನ್ನಾಗಿಸಿಕೊಂಡು ಆಳಿದ ಮೌರ್ಯ ವಂಶದ ಅರಸರು ರಾಯಚೂರು ಭಾಗವನ್ನು ಸುಮಾರು ಕ್ರಿ.ಪೂ. ೩೦೦ರಲ್ಲಿ ಆಳುತ್ತಿದ್ದ ಉಲ್ಲೇಖ ಮಸ್ಕಿಯಲ್ಲಿ ದೊರೆತಿರುವ ಅಶೋಕನ ಶಾಸನದಿಂದ ತಿಳಿದು ಬಂದಿದೆ. ಅಶೋಕ ಚಕ್ರವರ್ತಿ ಪ್ರಭಾವಿ, ಪ್ರಬಲವಾಗಿದ್ದರಿಂದ ಮಸ್ಕಿಯಿಂದ ಸುಮಾರು ೪೫ ಕಿ.ಮೀ ದೂರದಲ್ಲಿರುವ ಸಾಲಗುಂದ ಪರಿಸರ ಈತನ ಆಡಳಿತಕ್ಕೆ ಒಳಪಟ್ಟಿರಬಹುದು. ಮುಂದೆ ಸಾಮಾನ್ಯವಾಗಿ ಅಶೋಕನ ನಂತರ ಮೌರ್ಯರ ಯಾವ ಶಾಸನಗಳು ರಾಯಚೂರು ಜಿಲ್ಲೆಯಲ್ಲಿ ದೊರೆಯುವುದಿಲ್ಲ. ಕ್ರಿ.ಶ. ೯೧೧ ರವರೆಗೆ ಯಾವ ರಾಜವಂಶದ ಶಾಸನಗಳು ಈ ಜಿಲ್ಲೆಯಲ್ಲಿ; ಈ ಪರಿಸರದಲ್ಲಿ ಇಲ್ಲಿಯವರೆಗೆ ದೊರೆತಿಲ್ಲ.[೧೨]

ಶಾತವಾಹನರು

ಈ ಪರಿಸರದಲ್ಲಿ ಶಾತವಾಹನರ ಆಳ್ವಿಕೆ ಕಂಡು ಬಂದಂತೆ ತೋರುತ್ತದೆ. ಮಸ್ಕಿ ಮತ್ತು ಪಿಕ್ಲಿಹಾಳಗಳಲ್ಲಿ ಕ್ರಿ.ಪೂ. ೨೦೦ ರಿಂದ ಕ್ರಿ.ಶ. ೫೦ರ ಕಾಲಘಟ್ಟದ ವಿಶಿಷ್ಟವಾದ ಬಣ್ಣಬಳೆದ ಪಾತ್ರೆಗಳು, ಮೈ ಉಜ್ಜಿಕೊಳ್ಳುವ ಇಟ್ಟಿಗೆಯ ಕಲ್ಲುಗಳು, ಶಂಖದ ಬಳೆಗಳು, ಕಪ್ಪೆ ಆಕಾರದ ಮಣಿಗಳು ದೊರೆತಿವೆ. ಜೊತೆಗೆ ಕ್ರಿ.ಶ. ೨ನೆ ಶತಮಾದಂದೂ ಗುರುತಿಸಲಾಗುವ 'ಸಮಹರಠಿಪುತಸ' ಎಂಬ ಅಕ್ಷರವುಳ್ಳ ಮುದ್ರೆ ಮತ್ತು ಮನುಷ್ಯನು ಆನೆಯನ್ನು ಸಾಗಿಸಿಕೊಂಡು ಹೋಗುವ ದೃಶ್ಯವುಳ್ಳ ಮುದ್ರೆ ದೊರೆತಿವೆ.[೧೩] ಶಾತವಾಹನರ ನಂತರ ಕರ್ನಾಟಕವನ್ನಾಳಿದ ರಾಜಮನೆತನಗಳಾದ ಪಲ್ಲವರು ಮತ್ತು ಬಾದಾಮಿ ಚಾಲುಕ್ಯರ ಆಡಳಿತಕ್ಕೆ ಈ ಪ್ರದೇಶ ಸೇರಿತ್ತಾದರೂ ಅವರ ಆಳ್ವಿಕೆಯ ಕಾಲದ ಶಾಸನಗಳು ದೊರೆತಿಲ್ಲ. ಈ ರಾಜವಂಶಗಳ ಕೊಡುಗೆ ಈ ಜಿಲ್ಲೆಗೆ ಏನು ಎಂಬುದು ಸ್ಪಷ್ಟವಾಗಿ ತಿಳಿಯುವುದಿಲ್ಲ.

ರಾಷ್ಟ್ರಕೂಟರು

ಇಂದಿನ ಕಲ್ಬುರ್ಗಿ ಜಿಲ್ಲೆಯ ಮಳಖೇಡವನ್ನು ರಾಜಧಾನಿಯನ್ನಾಗಿಸಿಕೊಂಡು ಆಳಿದ ರಾಷ್ಟ್ರಕೂಟ ವಂಶ, ಬಾದಾಮಿ ಚಾಲುಕ್ಯ ವಿನಯಾದಿತ್ಯನನ್ನು ಮೂಲೆಗೆ ತಳ್ಳಿ, ಮಾನ್ಯಖೇಟವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ರಾಜ್ಯ ಸ್ಥಾಪನೆ ಮಾಡಿದರು. ಕ್ರಿ.ಶ. ೯ ಮತ್ತು ೧೦ನೆಯ ಶತಮಾನದ ಶಾಸನಗಳು ಈ ಜಿಲ್ಲೆಯಲ್ಲಿ ದೊರೆಯುವುದರ ಮೂಲಕ, ಆಳುತ್ತಿದ್ದ ರಾಷ್ಟ್ರಕೂಟ ಅರಸರ ಆಳ್ವಿಕೆಯ ಉಲ್ಲೇಖ ಆರಂಭವಾಗುತ್ತದೆ. ಇಮ್ಮಡಿ ಕೃಷ್ಣನ (೮೭೮–೯೧೮) ಆಳ್ವಿಕೆಯಲ್ಲಿ ಅವನ

ಮಗನಾದ ಜಗತುಂಗನು ಎಡದೊರೆ-೨೦೦೦ ವನ್ನು ಆಳುತ್ತಿದ್ದ.[೧೪] ಆ ಸಂದರ್ಭದಲ್ಲಿ ಸಾಲಗುಂದ ಎಡದೊರೆ-೨೦೦೦ ನಾಡಿನ ಭಾಗವಾಗಿತ್ತು ಎಂದೂ ಸ್ಮರಿಸುವುದರ ಮೂಲಕ ಈ ಪರಿಸರ ರಾಷ್ಟ್ರಕೂಟರ ಆಳ್ವಿಕೆಗೆ ಒಳಪಟ್ಟಿತ್ತು.

ಕಲ್ಯಾಣ ಚಾಲುಕ್ಯರು

ರಾಯಚೂರು ಜಿಲ್ಲೆಯಲ್ಲಿ ದೊರೆತಿರುವ ಬಹಳಷ್ಟು ಪ್ರಾಚೀನ ಶಾಸನಗಳಲ್ಲಿ ಕಲ್ಯಾಣದ ಚಾಲುಕ್ಯರ ಶಾಸನಗಳದ್ದೇ ಸಿಂಹಪಾಲು. ಸುಮಾರು ಕ್ರಿ.ಶ. ೯೮೪ರ ಶಾಸನವೊಂದರಲ್ಲಿ ಇರಿವ ಬೆಡಂಗ ಸತ್ಯಾಶ್ರಯನ ಉಲ್ಲೇಖವಿದೆ. ಕ್ರಿ.ಶ. ೯೯೨ರ ಶಾಸನದಲ್ಲಿ ಆಳಿ(ರಿ) ಕೇಸರಿ ಕೇತವಿಕಲ್ಲು ನೆಲೆವೀಡಿನಲ್ಲಿದ್ದಂತೆಯೂ ಅವನ ಕೈಕೆಳಗೆ ಅಜವರ್ಮ ಎಂಬುವವನು ಕೆಳವಾಡಿ-೩೦೦ರ ಬಾಡವನ್ನು ಆಳುತ್ತಿದ್ದಂತೆ ಹೇಳಿದೆ.[೧೫]

ಈ ಕೆಳವಾಡಿಯಲ್ಲಿ ಸಾಲಗುಂದ ಪರಿಸರವು ಒಳಗೊಂಡಿತ್ತು. ಕ್ರಿ.ಶ. ಸುಮಾರು ೯೮೪ ರಿಂದ ಕ್ರಿ.ಶ. ೧೧೭೧ ರವರೆಗೆ ಇವರ ಶಾಸನಗಳು ರಾಯಚೂರು ಜಿಲ್ಲೆಯಲ್ಲಿ ಕಂಡು ಬರುತ್ತವೆ.ಸಾಲಗುಂದ ಮತ್ತು ಈ ಪರಿಸರದ ಗ್ರಾಮಗಳಲ್ಲಿ ಕಲ್ಯಾಣ ಚಾಲುಕ್ಯರ ಕಾಲದ ದೇವಾಲಯಗಳು, ಸ್ಮಾರಕಶಿಲ್ಪಗಳು, ಮತ್ತಿತ್ತರ ಅವಶೇಷಗಳು ಕಂಡುಬಂದಿವೆ. ಇವರ ಸಾಮಂತರಾಗಿ ಸಾಲಗುಂದೆ ಸಿಂಧರು ಈ ಭಾಗದಲ್ಲಿ ಆಳ್ವಿಕೆ ನಡೆಸುತ್ತಿದ್ದ ಉಲ್ಲೇಖಗಳು ಜಾಲಿಹಾಳು, ದೇವರಗುಡಿ, ಮುಕ್ಕುಂದ, ರವುಡಕುಂದ ಮತ್ತು ಸಾಲಗುಂದ ಗ್ರಾಮಗಳಲ್ಲಿನ ಶಾಸನಗಳಲ್ಲಿ ಉಲ್ಲೇಖವಿದೆ.

ದೇವಗಿರಿ ಸೇವುಣರು

ಕ್ರಿ.ಶ. ೧೧೯೧ರ ಯಾದವ ಭಿಲ್ಲಮನ ಶಾಸನ ರಾಯಚೂರು ಜಿಲ್ಲೆಯ ಲಿಂಗಸೂಗೂರಿನ ಕರಡಿಕಲ್ಲಿನಲ್ಲಿ ದೊರೆಯುವುದರೊಂದಿಗೆ ಸೇವುಣರ ರಾಜ್ಯಭಾರದ ಉಲ್ಲೇಖಗಳು ರಾಯಚೂರು ಜಿಲ್ಲೆಯಲ್ಲಿ ದೊರೆಯುತ್ತವೆ. ಈ ಹಿಂದೆ ಕಲ್ಯಾಣ ಚಾಲುಕ್ಯರ ಶಾಸನಗಳೂ ಈ ಜಿಲ್ಲೆಯಲ್ಲಿ ದೊರೆತಿರುವುದನ್ನು ಗಮನಿಸಲಾಗಿದೆ. ಇದು ಮೂಲರಾಜರು ಶಕ್ತಹೀನರಾಗಿದ್ದನ್ನು ತೋರಿಸುತ್ತದೆ. ಯಾದವ ಭಿಲ್ಲಮನ ಸಾಮಂತನಾದ ಕರಡಿಕಲ್ಲಿನ ಕದಂಬ ಅರಸ ಬಿಜ್ಜರಸನು ಮುದಗಲ್ಲನ್ನು ರಾಜಧಾನಿಯನ್ನಾಗಿಸಿಕೊಂಡು ಆಳುತ್ತಿದ್ದ. ಕ್ರಿ.ಶ. ೧೧೭೬ರ ಶಾಸನದಲ್ಲಿ ಸಿಂಘಣದೇವನು ಉಲ್ಲೇಖಿತನಾಗಿದ್ದಾನೆ. ಕ್ರಿ.ಶ. ೧೨೦೨ರ ದೇವರಗುಡಿ ಶಾಸನದಲ್ಲಿ ಕೆಳವಾಡಿ ರಾಜಧಾನಿ ಕಲುಕೆರೆಯಿಂದ ಇವನ ಮಾಂಡಳಿಕ ಕಣ್ಣರಸನು ಆಳುತ್ತಿದ್ದಂತೆ ಹೇಳಿದೆ.[೧೬] ಅಂದರೆ ಈ ಮೊದಲು

ಕೆಳವಾಡಿ-೩೭೦ರ ಬಾಡದಲ್ಲಿ ಬರುವ ಸಾಲಗುಂದ ಪರಿಸರವು ದೇವಗಿರಿಯ ಸೇವುಣರ ಆಳ್ವಿಕೆಗೆ ಒಳಪಟ್ಟಿತ್ತು ಎಂದೂ ಹೇಳಲಾಗುತ್ತದೆ.

ಕಾಕತೀಯರು

ರಾಯಚೂರು ಪ್ರದೇಶವು ಕೆಲವು ಕಾಲ ಕಾಕತೀಯರಿಗೆ ಸೇರಿತ್ತೆಂಬ ಅಂಶವನ್ನು ತಿಳಿಸುವ ಏಕೈಕ ಶಾಸನವೊಂದು ರಾಯಚೂರಿನಲ್ಲಿ ದೊರೆತಿದೆ. ಕ್ರಿ.ಶ. ೧೨೯೪ರ ರಾಯಚೂರು ಕೋಟೆಯಲ್ಲಿನಶಾಸನದಲ್ಲಿ ಕಾಕತೀಯ ರುದ್ರದೇವ ಆಳುತ್ತಿದಾಗ ಅವನ ಮಾಂಡಲಿಕ ಗೋನ ಗನ್ನಯರೆಡ್ಡಿಯೆಂಬುವವನು ವರ್ಧಮಾನಪುರದಿಂದ ಆಳುತ್ತಿದ್ದಂತೆಯೂ, ಅವನ ರಾಜ್ಯದ ರಕ್ಷಾಮಣಿಯಾಗಿದ್ದ ವಿಶಾಲನಾಥ ಭೂಪಾಲನು ರಾಚೂರಿ ಪಟ್ಟಣದಿಂದ ರಾಜ್ಯಭಾರ ಮಾಡುತ್ತಾ ಸರ್ವ ರಾಷ್ಟ್ರ ಪ್ರಜಾರಕ್ಷಣಾರ್ಥವಾಗಿ ರಾಯಚೂರು ಕೋಟೆಯನ್ನು ಕಟ್ಟಿಸಿದಂತೆಯೂ ಹೇಳಿದೆ. ಈ ಶಾಸನವೊಂದೆ ಈ ಪ್ರದೇಶದಲ್ಲಿ ದೊರೆತಿರುವ ಕಾಕತೀಯರ ಏಕೈಕ ಶಾಸನ ಬಹುಶಃ ದೇವಗಿರಿ ಸೇವುಣರಿಂದ ಈ ಪ್ರದೇಶವನ್ನೂ ಇವರು ಗೆದ್ದುಕೊಂಡಿರಬೇಕು.[೧೭]ಈ ಕಾಲಘಟ್ಟದಲ್ಲಿ ಸಾಲಗುಂದ ಪರಿಸರ ಈ ಮನೆತನದ ಆಡಳಿತಕ್ಕೆ ಒಳಪಟ್ಟಿರಬಹುದು.

ವಿಜಯನಗರದ ಅರಸರು

ಕ್ರಿ.ಶ. ಸುಮಾರು ೧೩೩೬ರಲ್ಲಿ ವಿಜಯನಗರ ಮನೆತನ ಸ್ಥಾಪಿತವಾದರೂ, ರಾಯಚೂರ ಜಿಲ್ಲೆಯಲ್ಲಿ ಇವರ ಶಾಸನಗಳು ಕ್ರಿ.ಶ. ೧೪೩೬ರ ನಂತರವೇ ದೊರೆಯುವುದು.[೧೮] ಸಾಲಗುಂದ ಗ್ರಾಮದಲ್ಲಿ ವಿಜಯನಗರ ಅರಸು ಮನೆತನದ ಶಾಸನವೊಂದು ದೊರೆತಿದೆ. ಕ್ರಿ.ಶ. ೧೫೨೮ರ ಸಾಲಗುಂದ ಶಾಸನದಲ್ಲಿ ಶ್ರೀಕೃಷ್ಣದೇವರಾಯನ ಆಳ್ವಿಕೆಯ ಉಲ್ಲೇಖವಿದ್ದು, ರವುಡಕುಂದ ಸೀಮೆಯ ಸಾಲಗುಂದ ಗ್ರಾಮವನ್ನು ಅಬ್ಬರಾವು ಅಯ್ಯನ ಕುದುರೆಯ ನಾಯಕತನಕ್ಕೆ ಉಂಬಳಿ ನೀಡಿದಂತೆ ತಿಳಿಸುತ್ತದೆ.[೧೯] ಹಾಗೆಯೇ ಕ್ರಿ.ಶ. ೧೫೫೬ರ ಮುಕ್ಕುಂದ ಶಾಸನದ ಪ್ರಕಾರ ಇದು ಕೆಳವಾಡಿನಾಡಿನ ಭಾಗವಾಗಿತ್ತು. ಈ ಶಾಸನ ಮುಕ್ಕುಂದವನ್ನು ವರದರಾಜಮ್ಮನಪುರ ಎಂದೂ ಕರೆದಿದೆ. ಸಾಲಗುಂದ ಪ್ರದೇಶ ಕ್ರಿ.ಶ. ೧೫೬೫ರ ಯುದ್ಧದವರೆಗೆ ವಿಜಯನಗರದ ಅರಸರ ಆಳ್ವಿಕೆಯಲ್ಲಿತ್ತು.

ಬಹುಮನಿ ಸುಲ್ತಾನರು

ಕ್ರಿ.ಶ. ೧೩೪೭ರಲ್ಲಿ ಹಸನ್‌ಗಂಗು ಎಂಬುವವನು ದೆಹಲಿ ಸೈನ್ಯವನ್ನು ಪರಾಭವಗೊಳಿಸಿ ಅಲ್ಲಾ ಉದ್ದೀನ್ ಬಹ್ಮನ್ ಷಹ ಎಂಬ ಬಿರುದಿನೊಂದಿಗೆ ಸಿಂಹಾಸನವೇರಿದನು. ಇವನ ಕಾಲದಲ್ಲಿ ರಾಜ್ಯವನ್ನು ಕಲ್ಬುರ್ಗಿ, ಬೀದರ, ದೌಲತಾಬಾದ್ ಮತ್ತು ಬಿರಾರ್ ಎಂಬ ನಾಲ್ಕು ತರಫ್‌ಗಳಾಗಿ

ವಿಂಗಡಿಸಲಾಯಿತು. ತರಫ್ ಎಂದರೆ ಪ್ರಾಂತ್ಯ ಎಂದರ್ಥ.[೨೦] ಸಾಲಗುಂದ ಪರಿಸರದಲ್ಲಿ ಇವರ ಆಡಳಿತದ ಉಲ್ಲೇಖಗಳನ್ನು ತಿಳಿಸುವ ಶಾಸನಗಳು ದೊರೆಯದಿದ್ದರೂ, ಈ ಹಿಂದೆ ಅಸ್ತಿತ್ವ ಪಡೆದುಕೊಂಡಿದ್ದ ರಾಯಚೂರು, ಮಾನ್ವಿ, ಮುದುಗಲ್ಲು ಇತ್ಯಾದಿ ಪ್ರದೇಶಗಳಿಂದ ಈ ಭಾಗದಲ್ಲಿ ಆಳ್ವಿಕೆ ಮಾಡಿದಂತೆ ತೋರುತ್ತದೆ.

ಕರಡಿಕಲ್ಲು ಕದಂಬರು

ಲಿಂಗಸೂಗೂರಿನ ಪಶ್ಚಿಮ ದಿಕ್ಕಿನಲ್ಲಿ ಕಂಡುಬರುವ ಕರಡಿಕಲ್ಲನ್ನು ಕೇಂದ್ರವನ್ನಾಗಿ ಮಾಡಿಕೊಂಡು ಆಳ್ವಿಕೆ ನಡೆಸಿದ ಮನೆತನವನ್ನು ಕರಡಿಕಲ್ಲಿನ ಕದಂಬರು ಎಂದೂ ಕರೆಯಲಾಗಿದೆ. ಕ್ರಿ.ಶ ೧೧೦೦ರ ಹಿರೇಬೇರಿಗೆ ಶಾಸನದಲ್ಲಿ ಕದಂಬ ವಂಶದ ಬಾಚರಸನು ವಿಕ್ರಮಾದಿತ್ಯನ ಸಾಮಂತನಾಗಿ ಆಳುತ್ತಿದ್ದಂತೆ, ಈ ಕಾಲಕ್ಕೆ ಕೆಳವಾಡಿ ೩೦೦ ಇವನಿಗೆ ಸೇರಿದ್ದಂತೆ ತಿಳಿಯುತ್ತದೆ. ಈ ಕಾಲಘಟ್ಟದ ಸಂದರ್ಭದಲ್ಲಿ ಸಾಲಗುಂದೆಯಲ್ಲಿ ಸಿಂಧರು ಆಳ್ವಿಕೆ ನಡೆಸುತ್ತಿದ್ದರು. ಕೆಳವಾಡಿ ೩೦೦ರ ಆಡಳಿತದಲ್ಲಿ ಸಾಗುಂದ ಪರಿಸರವೂ ಸಹಃ ಒಳಗೊಂಡಿತ್ತು.[೨೧]

ಐಹೇಯರು

ಕದಂಬರ ತರುವಾಯ ಆಳ್ವಿಕೆ ನಡೆಸಿದ ಮತ್ತೊಂದು ಮನೆತನ ಎಂದರೆ, ಐಹೇಯರು. ಕಲ್ಯಾಣ ಚಾಲುಕ್ಯರ ಅರಸ ತ್ರೈಲೋಕ್ಯನ ಕಾಲಘಟ್ಟದಲ್ಲಿ ನಂಗ್ಯಪರಸ, ಲೋಕರಸ ನಂತರ ದೇವರಸರು ಎಡದೊರೆ ೨೦೦೦ವನ್ನು ಆಳಿದರು. ಕ್ರಿ.ಶ. ಸುಮಾರು ೧೦೪೦ ರಿಂದ ೧೧೯೧ರ ಕೆಲವು ವರ್ಷಗಳವರೆಗೂ ಇವರ ಆಡಳಿತ ಕಂಡುಬರುತ್ತದೆ.[೨೨] ಪ್ರಸ್ತುತ ಈ ಅಧ್ಯಯನದ ವ್ಯಾಪ್ತಿಯಲ್ಲಿ ಐಹೇಯರ ಶಾಸನಗಳ ಉಲ್ಲೇಖಗಳು ಬರುವುದಿಲ್ಲವಾದರೂ ಈ ಪ್ರದೇಶದಿಂದ ಸುಮಾರು ೬೩ ಕಿ.ಮೀ ದೂರದಲ್ಲಿರುವ ಮಾನ್ವಿ ತಾಲೂಕು ಶಾಸನಗಳಲ್ಲಿ ಈ ಮನೆತನದವರ ಉಲ್ಲೇಖಗಳಿವೆ. ಇವರ ಸಮಕಾಲೀನರಾಗಿ ಸಾಲಗುಂದೆ ಪರಿಸರವನ್ನು ಸಾಲಗುಂದೆಯ ಸಿಂಧರು ಆಳ್ವಿಕೆ ನಡೆಸುತ್ತಿದ್ದರು.

ಸಾಲಗುಂದೆಯ ಸಿಂಧರು

ಕ್ರಿ.ಶ. ೧೦೨೧ ರಿಂದ ೧೧೩೪ರವರೆಗೂ ಇವರ ಆಳ್ವಿಕೆಯ ಅವಧಿಯಾಗಿದ್ದರೂ ಕ್ರಿ.ಶ ೧೧೩೪ರ ನಂತರದ ಕೆಲವು ವರ್ಷಗಳವರೆಗೆ ಇವರ ಅಸ್ತಿತ್ವ ಮುಂದುವರೆದಂತೆ ಕಾಣುತ್ತದೆ. ಸಾಲಗುಂದ ಇವರ ಆಳ್ವಿಕೆಯಲ್ಲಿ ಮೊದಲು ಎಡೆದೊರೆ ೨೦೦೦ ನಾಡಿನ ಉಪವಿಭಾಗವಾದ ನಿಟ್ಟರವೆ ೭೦ರ ಅಗ್ರಹಾರವಾಗಿತ್ತು. ತದನಂತರ ಸ್ವತಂತ್ರ ಆಡಳಿತ ಘಟಕವಾಗಿ ಸಾಲಗುಂದೆ ೭೦ ಎಂದೂ ಕರೆಯಿಸಿಕೊಂಡಿತು.

ಇದಕ್ಕೆ ಶಾಸನಾಧಾರಗಳು ಸ್ಪಷ್ಟವಿರುವುದನ್ನು ಕಾಣುತ್ತೇವೆ. ಅಂದರೆ ಸಾಲಗುಂದ ಮತ್ತು ಅದರ ಸುತ್ತಮುತ್ತಲಿನ ಕೆಲವು ಗ್ರಾಮಗಳನ್ನು ಸಿಂಧರು ಆಳುತ್ತಿದ್ದರು ಎನ್ನುವ ಉಲ್ಲೇಖವನ್ನು ಈ ಪರಿಸರದ ಶಾಸನಗಳು ತಿಳಿಸಿಕೊಡುತ್ತವೆ.ಇವರು ಹೆಚ್ಚಾಗಿ ಸಾಲಗುಂದೆಯನ್ನು ಕೇಂದ್ರಸ್ಥಾನವನ್ನಾಗಿ ಮಾಡಿಕೊಂಡು ಆಳ್ವಿಕೆ ನಡೆಸಿದಂತೆ ಕಾಣುತ್ತದೆ. ಆದ್ದರಿಂದ ಇವರನ್ನು ಸಾಲಗುಂದೆಯ ಸಿಂಧರು ಎಂದೂ ಕರೆಯಬಹುದು. ಕ್ರಿ.ಶ. ೧೦೨೧ರ ಮುಕ್ಕುಂದ ಶಾಸನದಲ್ಲಿ ಸಿಂಧ ವಂಶದ ಕಣ್ಣರಸನ ಮೊದಲ ಉಲ್ಲೇಖ ಬರುತ್ತದೆ.[೨೩]

ಈ ಪರಿಸರದಲ್ಲಿ ದೊರೆತಿರುವ ಕ್ರಿ.ಶ. ೧೦೨೧ ರಿಂದ ೧೧೫೩ ರವರೆಗಿನ ಶಾಸನಗಳ ಆಧಾರದ ಮೇಲೆ ಸಿಂಧ ಮನೆತನದ ಆಡಳಿತದಲ್ಲಿ ಬರುವ ಅರಸರು, ಪ್ರಧಾನರು, ಪೆರ್ಗಡೆ, ಮಹಾಜನರು, ಸ್ಥಳೀಯ ಪ್ರಭುಗಳು ಮತ್ತಿತರ ಪ್ರಮುಖರು, ಸಿಂಧರ ಬಿರುದುಗಳು, ಶಾಸನಕಾಲ ಮತ್ತು ಶಾಸನ ದೊರೆತ ಗ್ರಾಮಗಳನ್ನು ಉಲ್ಲೇಖಿಸುವ ಶಾಸನಗಳನ್ನು ಈ ಕೆಳಗಿನಂತೆ ವಿವರಿಸಬಹುದು.

ಕ್ರ.ಸ	ಸಿಂಧ ಅರಸರು ಮತ್ತು ಇತರರು	ಬಿರುದುಗಳು	ಶಾಸನ ಕಾಲ	ಗ್ರಾಮ
೧	ಕಣ್ಣರಸ	ಮಹಾಸಾಮಂತ,ಭೋಗಾವತಿಪುರವರೇಶ್ವರ, ಶೌರ್ಯ ಮಹೇಶ್ವರ, ಸಿಂಧ ಶಿಖಾಮಣಿ ಇತ್ಯಾದಿ	ಕ್ರಿ.ಶ. ೧೦೨೧	ಮುಕ್ಕುಂದ
೨	ಗೋನರಸ		ಕ್ರಿ.ಶ. ೧೦೪೯	ಮುಕ್ಕುಂದ
೩	ನೆಲಗುತ್ತಿಗೆ ಕಣ್ಣರಸ		ಕ್ರಿ.ಶ.೧೦೫೩	ರವುಡಕುಂದ
೪	ಬಾಚಿಗಭೂಪ		ಕ್ರಿ.ಶ. ೧೦೬೩	ಸಾಲಗುಂದ
೫	ಬಾಚರಸ		ಕ್ರಿ.ಶ. ೧೦೮೮	ಮುಕ್ಕುಂದ
೬	ಬಾಚರಸ		ಕ್ರಿ.ಶ. ೧೦೯೭	ಮುಕ್ಕುಂದ
೭	ಬಾಚರಸ		ಕ್ರಿ.ಶ. ೧೧೦೫	ಜಾಲಿಹಾಳು
೮	ರಾಚಮಲ್ಲ, ಸಿಂಧರ ಚಾಣಕ್ಯ ಹರಿಹರ ದೇವರಸ, ಸಾಲ್ಗುಂದೆಯ ಪ್ರಭು ಮಧುವರಸ ಮತ್ತು ಮಾಳವರಸ.	ಮಹಾಮಂಡಳೇಶ್ವರ	ಕ್ರಿ.ಶ. ೧೧೦೮	ದೇವರಗುಡಿ
೯	ಬಾಚಿರಾಜ ಮತ್ತು ಆತನ ಪ್ರಧಾನಿ ಬೆನಚಿಮಯ್ಯ	ಸಿಂಧ ಭೂಪ, ಭೋಗಾವತಿ ಪುರಾವರೇಶ್ವರ	ಕ್ರಿ.ಶ. ೧೧೩೪	ಮುಕ್ಕುಂದ

೧೦	ಬಾಚರಸ ಮತ್ತು ಇವನ ಪೆರ್ಗಡೆ ಜೆನಿವಣ	ಮಹಾಮಂಡಳೇಶ್ವರ	ಕ್ರಿ.ಶ. ೧೧೩೪	ಮುಕ್ಕುಂದ
೧೧	ಬಾಚಿದೇವ. ಮಹಾಜನರಲ್ಲಿ ನಾಕಿಮಯ್ಯನ ಮಗ ಕಾಳಿದಾಸ ಚಮೂಪ ಇರುತ್ತಾನೆ ಇವನ ಪತ್ನಿ ಕರ್ಣಾಂಬೆ. ಇವರಿಬ್ಬರ ಮಗ ನಾಚದಂಡಾಧಿಪ. ಇತ ತನ್ನ ತಂದೆ ಹೆಸರಲ್ಲಿ ಕಾಳೇಶ್ವರ ದೇವಾಲಯ ನಿರ್ಮಿಸುತ್ತಾನೆ.		ಕ್ರಿ.ಶ. ೧೧೫೩	ಸಾಲಗುಂದ

ಮೂಲ ಪುರುಷ

ಸಾಲಗುಂದೆ ಸಿಂಧರು ತಮ್ಮವಂಶದ ಮೂಲ ಪುರುಷ ನಾಗೇಂದ್ರ ಮತ್ತು ನಾಗಿಣಿಯರೆಂದು ಕ್ರಿಶ ೧೦೮೮ರ ಮುಕ್ಕುಂದ ಶಾಸನದಲ್ಲಿ ಹೇಳಿಕೊಂಡಿದ್ದಾರೆ. ಈ ಒಂದು ಕಾರಣಕ್ಕೆ ಏನೂ ಈ ಪರಿಸರದಲ್ಲಿ ಅತಿ ಹೆಚ್ಚಾಗಿ ನಾಗರಾಧನೆ ಪ್ರಚಲಿತದಲ್ಲಿದೆ. ಸಾಲಗುಂದದಲ್ಲಿ ಜಕ್ಕಮ್ಮ ಬಾವಿ ದಡದ ಮೇಲೆ ಹಾಗೂ ಇನ್ನಿತರ ಸ್ಥಳಗಳಲ್ಲಿ ನಾಗಶಿಲ್ಪಗಳು ಹೆಚ್ಚಿನ ಪ್ರಮಾಣದಲ್ಲಿ ಕಾಣಸಿಗುತ್ತವೆ. ಈ ನಾಗೇಂದ್ರ ಮತ್ತು ನಾಗಿಣಿಯರಿಂದ ಎಡೆವರಿದು ಬಂದ ಇವರ ವಂಶಸ್ಥರಾದ ಕಣ್ಣರಸ, ಗೋನರಸ, ನೆಲಗುತ್ತಿಗೆ ಕಣ್ಣರಸ, ಭಾಚಿಗಭೂಪ ಮತ್ತು ಬಾಚರಸ ಪ್ರಮುಖ ಅರಸರು. ಇವರ ವಂಶಾವಳಿ ಹೀಗಿದೆ.[೨೪]

೧ನೆ ಕಣ್ಣರಸ

↓

೧ನೆ ಗೋನರಸ ಕ್ರಿ.ಶ.ಸು ೧೦೪೩-೧೦೫೨

↓

೨ನೆ ಕಣ್ಣರಸ ಕ್ರಿ.ಶ. ೧೦೪೫-೧೦೫೨

(ಪತ್ನಿ ಕಾವಬ್ಬರಸಿ)

↓

೨ನೆ ಗೋನರಸ | ಬಾಚಿಭೂಪ ಕ್ರಿ.ಶ. ೧೦೮೯-೧೧೧೦

↓ (ಬಾಚಿಭೂಪ)

೩ನೆ ಕಣ್ಣರಸ ಕ್ರಿ.ಶ.ಸು ೧೧೧೦-೧೧೩೦

(ಪತ್ನಿ ಯಗಲದೇವಿ)

↓

ಬಾಚಿದೇವ ಕ್ರಿ.ಶ.ಸು ೧೧೩೦-೧೧೫೪

೧ನೆ ಕಣ್ಣರಸ

ಕ್ರಿ.ಶ. ೧೦೨೧ರ ಮುಕ್ಕುಂದ ಶಾಸನ ಒಂದನೆ ಕಣ್ಣರಸನನ್ನು ಮಹಾಸಾಮಂತ, ಭೋಗಾವತಿ ಪುರವರೇಶ್ವರ, ಶೌರ್ಯ ಮಹೇಶ್ವರ, ಸಿಂಧ ಶಿಖಾಮಣಿ ಇತ್ಯಾದಿ ಗುಣ ವಿಶೇಷಣಗಳೊಂದಿಗೆ ಉಲ್ಲೇಖಿಸುತ್ತದೆ. ಇತನ ಉಲ್ಲೇಖವಿರುವ ಶಾಸನದ ಆಧಾರದ ಮೇಲೆ ಇತನ ಆಳ್ವಿಕೆ ಕಾಲ ಕ್ರಿ.ಶ. ೧೦೨೧ರ ಅಸುಪಾಸಿನಲ್ಲಿ ಇದ್ದಿರಬಹುದು.[೨೫]

ಗೋನರಸ

ಕ್ರಿ.ಶ. ೧೦೪೯ರ ಮುಕ್ಕುಂದ ಶಾಸನದಲ್ಲಿ ಗೋನರಸನ ಪ್ರಥಮ ಉಲ್ಲೇಖವನ್ನು ಕಾಣಲಾಗುತ್ತದೆ. ಕ್ರಿ.ಶ.ಸು. ೧೦೪೫ ರಿಂದ ೧೦೫೨ರ ವರೆಗೆ ಈತನ ಆಳ್ವಿಕೆಯ ಅವಧಿಯಾಗಿತ್ತು.

೨ನೆ ಕಣ್ಣರಸ

ಕ್ರಿ.ಶ. ೧೦೫೩ರ ರವುಡಕುಂದ ಶಾಸನದಲ್ಲಿ ತ್ರೈಲೋಕ್ಯಮಲ್ಲನ ಮಂಡಳೇಶ್ವರನಾದ ಅಮ್ಮಣದೇವನು ಸಿಟ್ಟರವೆಯಲ್ಲಿ ಆಳ್ವಿಕೆ ಮಾಡುತ್ತಿರುವಾಗ ಅವನ ಸಾಮಂತನಾಗಿ ಸಿಂಧವಂಶದ ನೆಲಗುತ್ತಿಗೆ ಕಣ್ಣರಸ ಎಂಬುವವನಿದ್ದ ಎನ್ನುವ ವಿಷಯವನ್ನು ತಿಳಿಸುತ್ತದೆ. ಈ ಹಿಂದೆ ಕ್ರಿ.ಶ. ೧೦೨೧ರ ಮುಕ್ಕುಂದ ಶಾಸನದಲ್ಲಿ ಉಲ್ಲೇಖಗೊಂಡ ಕಣ್ಣರಸನಿಗಿಂತ ಇವನು ಭಿನ್ನನಾಗಿದ್ದು ಸಿಂಧ ವಂಶದ ೨ನೆ ಕಣ್ಣರಸನಾಗಿರುವನು. ಇವನು ಬಹುಶಃ ಗೋನರಸನ ಮಗನಿರಬಹುದು. ಕಣ್ಣರಸನ ಹಲವು ಗುಣ ವಿಶೇಷಣಗಳನ್ನು ಈ ಶಾಸನ ಉಲ್ಲೇಖಿಸುತ್ತದೆ. ಕ್ರಿ.ಶ.ಸು ೧೦೫೨ ರಿಂದ ೧೦೮೮ರ ವರೆಗೆ ೨ನೆ ಕಣ್ಣರಸನ ಆಡಳಿತದ ಅವಧಿಯಾಗಿತ್ತು.[೨೬]

ಬಾಚಿಗಭೂಪ

ಕ್ರಿ.ಶ.ಸು ೧೦೮೯ ರಿಂದ ೧೧೧೦ರ ವರೆಗೆ ಬಾಚಿಭೂಪನ ಆಡಳಿತ ಕಂಡುಬದಂತೆ ತೋರುತ್ತದೆ. ಕ್ರಿ.ಶ. ೧೦೬೩ರ ಸಾಲಗುಂದ ಶಾಸನದಲ್ಲಿ ಬಾಚಿಗಭೂಪನ ಉಲ್ಲೇಖವಿದೆ. ಇವನು ೨ನೆ ಕಣ್ಣರಸ ಮತ್ತು ಕಾವಬ್ಬರಸಿಯ ಮಗ ಎನ್ನುವ ವಿಷಯ ಶಾಸನಗಳಿಂದ ತಿಳಿಯಬಹುದು. ಇವನ ನಂತರದಲ್ಲಿ ೨ನೆ ಬಾಚಿಭೂಪ ಕಂಡುಬರುತ್ತಾನೆ ಈತನು ಯಗಲದೇವಿಯ ಮಗ, ಆದ್ದರಿಂದ ಇಬ್ಬರಲ್ಲಿಯೂ ಸಹಃ ಬೇಧವಿರುವುದನ್ನೂ ಗುರುತಿಸಬಹುದು.[೨೭] ಕ್ರಿ.ಶ.ಸು ೧೧೧೦ ರಿಂದ ೧೧೩೦ರ ವರೆಗೆ ಈತನ ಆಳ್ವಿಕೆಯ ಅವಧಿಯಾಗಿತ್ತು.

೩ನೆ ಕಣ್ಣರಸ

ಕ್ರಿ.ಶ. ಸುಮಾರು ೧೧೧೦ ರಿಂದ ೧೧೩೦ರ ವರೆಗೆ ೩ನೆ ಕಣ್ಣರಸನ ಆಡಳಿತ ಕಾಲದ ಅವಧಿಯಾಗಿದ್ದಿರಬಹುದು. ೨ನೆ ಬಾಚಿದೇವನ ತಂದೆ ೩ನೆ ಕಣ್ಣರಸ, ಈತನ ಪತ್ನಿ ಯಗಲದೇವಿ. ಈ ಪೂರ್ವದಲ್ಲಿ ಕಂಡುಬಂದ ೨ನೆ ಕಣ್ಣರಸನಿಗಿಂತ ಭಿನ್ನವಿದ್ದ ಕಾರಣಕ್ಕಾಗಿ ಈತನನ್ನು ೩ನೆ ಕಣ್ಣರಸ ಎಂದೂ ಗುರುತಿಸಬಹುದು.

ಬಾಚರಸ

ಕ್ರಿ.ಶ. ೧೧೦೫ರ ಜಾಲಿಹಾಳು ಶಾಸನದಲ್ಲಿ ಬಾಚರಸನ ಉಲ್ಲೇಖವಿದ್ದು, ಕಲ್ಯಾಣ ಚಾಲುಕ್ಯರ ಅರಸ ಭೂಲೋಕಮಲ್ಲನ ಸಾಮಂತನಾಗಿದ್ದಂತೆ ಹೇಳುತ್ತದೆ.ಜೊತೆಗೆ ಈ ಶಾಸನದಲ್ಲಿ ಸಿಂಧರ ವಂಶಾವಳಿ ಕಂಡುಬಂದಿದ್ದು, ಕಣ್ಣರಸ ಮತ್ತು ಯಗಲದೇವಿಯರ ಮಗ ಬಾಚಿಭೂಪ ಎಂದಿದೆ.[೨೮] ಹಾಗಾಗಿ ಈ ಹಿಂದೆ ಕಂಡುಬಂದ ಬಾಚಿದೇವನಗಿಂತ ಭಿನ್ನವನಾಗಿದ್ದು ಇತನನ್ನು ಇಮ್ಮಡಿ ಬಾಚಿದೇವನೆಂದೂ ಕರೆಯಬಹುದು. ಏಕೆಂದರೆ, ಹಿಂದೆ ಉಲ್ಲೇಖಗೊಂಡಿರುವ ಶಾಸನಗಳಲ್ಲಿ ಬಾಚಿಭೂಪನ ತಾಯಿ ಕಾವಬ್ಬರಸಿಯಾಗಿರುವಳು.

ಈ ಶಾಸನಗಳಲ್ಲಿ ಉಲ್ಲೇಖಗೊಂಡಿರುವ ಬಾಚಿರಾಜನು ಎರಡನೆಯವನಾಗಿರುತ್ತಾನೆ.ಕ್ರಿ.ಶ. ೧೧೫೩ರ ಸಾಲಗುಂದ ಶಾಸನ ಭೂಲೋಕಮಲ್ಲನ ಮಗನಾದ ಮಲ್ಲಿಕಾರ್ಜುನನು ಆಳುತ್ತಿದ್ದಾಗ ಸಾಲಗುಂದೆಯಲ್ಲಿ ಎರಡನೆ ಬಾಚಿರಾಜ ಸಾಲಗುಂದೆ ೭೦ನ್ನು ಆಳುತಿದ್ದನೆಂದೂ ಹೇಳಿದೆ. ಈತನ ಆಳ್ವಿಕೆಯ ಕಾಲ ಕ್ರಿ.ಶ. ಸುಮಾರು ೧೧೩೦ ರಿಂದ ೧೧೫೪ರವರೆಗೂ ಇದ್ದಿರಬಹುದು.

ಸಾಲಗುಂದೆಯ ಜಹಾಗೀರುದಾರರು

೧೭ನೆ ಶತಮಾನದಲ್ಲಿ ವಿಜಯಪುರ ಆದಿಲ್‌ಷಾಹಿ ಮನೆತನದಿಂದ ಸಾಲಗುಂದೆಯು ಜಹಗೀರದಾರರ ಆಳ್ವಿಕೆಗೆ ಒಳಪಟ್ಟಿತ್ತು. ಸೈಯದ್ ಕರಿಮುಲ್ಲಾ ಖಾದರಿ ಸಾಲಗುಂದೆ ಜಹಗೀರ್ ಮನೆತನದ ಮೂಲ ಪುರುಷ. ಕ್ರಿ.ಶ ೧೬೮೦ರಲ್ಲಿ ಛತ್ರಪತಿ ಶಿವಾಜಿಯು ವಿಜಯಪುರದಿಂದ ರಾಯಚೂರುಗೆ ಸಾಲಗುಂದೆ ಮಾರ್ಗವಾಗಿ ಹೋಗುತ್ತಿರುವಾಗ ಸಯ್ಯದ್ ಕರಿಮುಲ್ಲಾ ಖಾದರಿ ಛತ್ರಪತಿ ಶಿವಾಜಿಯನ್ನು ಆದರಿಸಿ ಸತ್ಕರಿಸಿದನು. ಇದರ ಪ್ರತೀಕವಾಗಿ ಶಿವಾಜಿ ೨೪ ಎಕರೆ ಭೂಮಿಯನ್ನು ನೀಡಿದನು. ಈ ಹಿಂದೆ ಎಷ್ಟು ಗ್ರಾಮಗಳು ಈ ಮನೆತನಕ್ಕೆ ಒಳಪಟ್ಟಿದ್ದವು ಎಂಬುದು ತಿಳಿದು ಬರುವುದಿಲ್ಲ. ನಂತರ ನಿಜಾಮರ ಕಾಲದಲ್ಲಿ ೧೭ ಗ್ರಾಮಗಳಿಗೆ ವಿಸ್ತಾರವಾಯಿತು ಎಂಬ ಮಾಹಿತಿ ದೊರೆಯುತ್ತದೆ.[೨೯]

ಇತರೆ ಸ್ಥಳೀಯ ಪಾಳೆಗಾರರು

ಹೀಗೆ ಸಾಲಗುಂದ ಪರಿಸರ ಇತರೆ ಸ್ಥಳೀಯ ಪಾಳೆಪಟ್ಟುಗಳ ಆಳ್ವಿಕೆಗೆ ಒಳಗಾಯಿತು. ಸಿಂಧನೂರು, ಲಿಂಗಸೂಗೂರಿನ ಗುಡಗಂಟಿ ಸಂಸ್ಥಾನ, ರಾಯಚೂರಿನ ಗುಂತಗೋಳ ಸಂಸ್ಥಾನ, ದೇವದುರ್ಗ ಸಂಸ್ಥಾನ, ಬ್ರಿಟಿಷರು ಮತ್ತು ಅವರ ಕಾಲವಧಿಯಲ್ಲಿ ಹೈದ್ರಾಬಾದ್ ನಿಜಾಮ, ಸಿಂಧನೂರಿನ ನಾಡಗೌಡ ಮನೆತನ, ಸಾಲಗುಂದೆಯ ಜಹಾಗೀರುದಾರರು ಇಲ್ಲಿ ಆಳ್ವಿಕೆ ನಡೆಸಿದರು.[೬೦]

ಬ್ರಿಟಿಷರು ಮತ್ತು ಹೈದ್ರಾಬಾದ್ ನಿಜಾಮ ಸಂಸ್ಥಾನ

ಕ್ರಿ.ಶ. ೧೭೨೪ರಲ್ಲಿ ಅಸಫ್ ಜಾ ಮನೆತನದ ಮೀರ ಖಮರುದ್ದೀನ್ ನಿಂದ ಹೈದ್ರಾಬಾದ್ ನಿಜಾಮ ಪ್ರಾಂತ್ಯ ಸ್ಥಾಪನೆಯಾಯಿತು. ಈ ಪೂರ್ವದಲ್ಲಿ ಭಾರತವನ್ನು ಪ್ರವೇಶಿಸಿದ್ದ ಬ್ರಿಟಿಷರು ನಿಜಾಮರೊಂದಿಗೆ ಉತ್ತಮ ಸಂಬಂಧವನ್ನು ಹೊಂದಿದ್ದರು. ಮೈಸೂರು ಯುದ್ಧದಲ್ಲಿ ಟಿಪ್ಪು ಸುಲ್ತಾನನ ಸೋಲಿನ ನಂತರ ಕ್ರಿ.ಶ. ೧೭೯೮ರಲ್ಲಿ ಬ್ರಿಟಿಷರು ಮತ್ತು ನಿಜಾಮನ ನಡುವೆ ಉಂಟಾದ ಒಪ್ಪಂದದ ಪ್ರಕಾರ, ಬ್ರಿಟಿಷರು ಪ್ರಸ್ತುತ ಹೈದ್ರಾಬಾದ್ ಕರ್ನಾಟಕ ಎಂದೂ ಕರೆಯುವ ಬೀದರ್, ಕಲ್ಬುರ್ಗಿ, ಕೊಪ್ಪಳ ಹಾಗೂ ರಾಯಚೂರು ಜಿಲ್ಲೆಗಳನ್ನು ನಿಜಾಮನಿಗೆ ಕಾಣಿಕೆಯಾಗಿ ನೀಡುವುದರ ಜೊತೆಗೆ ಆಂತರಿಕ ವ್ಯವಹಾರದಲ್ಲಿ ಸಂಪೂರ್ಣ ಅಧಿಕಾರವನ್ನು ಸಹಃ ನೀಡಿದರು.

೧೯೪೭, ಆಗಸ್ಟ್ ೧೫ ರಂದು ಭಾರತ ಬ್ರಿಟಿಷರಿಂದ ಸ್ವಾತಂತ್ರ್ಯ ಪಡೆದರೂ, ಹೈದ್ರಾಬಾದ್ ಕರ್ನಾಟಕ ಇನ್ನೂ ನಿಜಾಮನ ಹಿಡಿತದಲ್ಲಿತ್ತು. ಕ್ರಿ.ಶ. ೧೯೪೮ ಸೆಪ್ಟೆಂಬರ್ ೧೩ ರಿಂದ ಆಪರೇಷನ್‌ಪೋಲೋ ಸೈನಿಕ ಕಾರ್ಯಾಚರಣೆ ನಡೆದು, ಸೆಪ್ಟೆಂಬರ್ ೧೭ ರಂದು ಹೈದರಾಬಾದ್ ಕರ್ನಾಟಕ ಭಾಗವು ವಿಮೋಚನೆಗೊಂಡು ಅಖಂಡ ಭಾರತದೊಳಗೆ ಸೇರ್ಪಡೆಯಾಯಿತು.[೬೧]

೨.೪ ಆಡಳಿತ ಘಟಕವಾಗಿ ಸಾಲಗುಂದೆ ೭೦

ಸಾಲಗುಂದ ಈ ಪೂರ್ವದಲ್ಲಿ ಮೊದಲು ಎಡೆದೊರೆ ೨೦೦೦ ನಾಡಿನ ಉಪವಿಭಾಗವಾದ ನಿಟ್ಟರವೆ ೭೦ರ ಅಗ್ರಹಾರವಾಗಿತ್ತು. ತದನಂತರ ಸ್ವತಂತ್ರ ಆಡಳಿತ ಘಟಕವಾಗಿ ಸಾಲಿಗುಂದೆ ಎಪ್ಪತ್ತು ಎಂದೂ ಕರೆಯಿಸಿಕೊಂಡಿತು. ಇದಕ್ಕೆ ಶಾಸನಾಧಾರಗಳು ಸ್ಪಷ್ಟವಿರುವುದನ್ನು ಕಾಣುತ್ತೇವೆ. ಪೂರಕವೆಂಬಂತೆ ಕ್ರಿ.ಶ. ೧೧೫೩ರ ಸಾಲಗುಂದ ಶಾಸನದಲ್ಲಿ 'ಸಾಲಿಗುಂದೆಯಪ್ಪತ್ತರೊಳು' ಎಂಬ ಉಲ್ಲೇಖ ಕಾಣಸಿಗುತ್ತದೆ.[೬೨] ಶಾಸನಗಳಲ್ಲಿ ಸಾಲಗುಂದವನ್ನು ಸಾಲಿಗುಂದೆ ಎಂದೂ ಹೆಸರಿಸಲಾಗಿದೆ. ಕುಂತಳನಾಡು ೧ರಲ್ಲಿ ಎಡೆದೊರೆ ೨೦೦೦, ನಂತರ ಕೆಳವಾಡಿ ೩೦೦ರ ಒಂದು ಆಡಳಿತ ಘಟಕವಾಗಿ ಕಾಣಸಿಗುವುದೇ ಸಾಲಗುಂದೆ ೭೦.

ಸಾಲಗುಂದೆಯನ್ನು ಹೆಚ್ಚಾಗಿ ಕಲ್ಯಾಣ ಚಾಲುಕ್ಯರ ಸಾಮಂತರಾಗಿ ಸಿಂಧರು ಆಳ್ವಿಕೆ ನಡೆಸಿದರು. ನಾಡಿನಲ್ಲಿ ಇತರ ಸಿಂಧ ಮನೆತನಗಳಂತೆ ಸಾಲಗುಂದೆಯಲ್ಲಿಯೂ ಸಿಂಧ ಶಾಖೆ; ಮನೆತನ ಬೆಳೆಯಿತು. ಆದ್ದರಿಂದ ಈ ಮನೆತನವನ್ನು ಸಾಲಗುಂದೆಯ ಸಿಂಧರೆಂದೂ ಕರೆಯಲಾಗುತ್ತದೆ. ಈ ಆಡಳಿತ ಘಟಕದ ಭೌಗೋಳಿಕ ವ್ಯಾಪ್ತಿಸಾಲಗುಂದ ಕೇಂದ್ರಿತವಾಗಿ ಸುತ್ತಮುತ್ತಲಿನ ಎಪ್ಪತ್ತು ಗ್ರಾಮಗಳಿಗೆ ಸೀಮಿತವಾದರೂ ಎಡೆದೊರೆ ೨೦೦೦ರಲ್ಲಿ ತನ್ನದೇ ಆದ ವಿಶಿಷ್ಟತೆಯನ್ನು ಹೊಂದಿತ್ತು.

ಸಾಮಾನ್ಯವಾಗಿ ಒಂದು ಆಡಳಿತ ಘಟಕದ ಕೇಂದ್ರಿತವಾಗಿ ಅದರ ಸುತ್ತಮುತ್ತಲಿನ ಹಳ್ಳಿಗಳು ಅದರ ವ್ಯಾಪ್ತಿಯಲ್ಲಿ ಸೇರ್ಪಡೆಗೊಂಡಿರುತ್ತವೆ. ಸೋಮಲಾಪುರ, ರವುಡಕುಂದ, ಗೊಬ್ಬರಕಲ್, ಹುಡಾ, ಮುಕ್ಕುಂದ, ಸಿಂಗಾಪುರ, ಸಿದ್ಧರಾಂಪುರ, ಬೇವಿನಹಳ್ಳಿ, ಮಾವಿನಮಡಗು, ಚೆನ್ನಳ್ಳಿ, ಹಂಚಿನಾಳ, ಜಾಲಿಹಾಳು, ಬಸ್ಸಾಪುರ, ಗೋರೆಬಾಳ, ಸಿಂಧನೂರು, ಮಲ್ಕಾಪುರ, ಬೂದಿವಾಳ, ಕೆಂಗಲ್, ಬಸ್ಸಾಪೂರ ಡಿ, ದಢೇಸೂಗೂರು, ಉಪ್ಪಳ, ಆಲಬನೂರು, ಕನ್ನಾರಿ ಇತ್ಯಾದಿ ಗ್ರಾಮಗಳು ಸಾಲಗುಂದೆ ೭೦ರ ಆಡಳಿತದಲ್ಲಿ ಒಳಗೊಂಡಿರಬಹುದಾದ ಗ್ರಾಮಗಳು. ಈ ಆಡಳಿತ ಘಡಕದ ವ್ಯಾಪ್ತಿಯಲ್ಲಿ ಬರಬಹುದಾದ ಇನ್ನೂಳಿದ ಗ್ರಾಮಗಳನ್ನು ಕೆಲವು ಆಧಾರಗಳೊಂದಿಗೆ ಪ್ರಸ್ತುತದಲ್ಲಿ ಗುರುತಿಸುವ ಪ್ರಕ್ರಿಯೆಯಲ್ಲಿದ್ದು, ಪ್ರಯತ್ನಿಸಲಾಗುತ್ತಿದೆ.

ಕೊನೆ ಟಿಪ್ಪಣಿಗಳು

೧. ೨೦೧೧ರ ಜನಗಣತಿ ಪ್ರಕಾರ.

೨. ಬಸವಪ್ರಭು ಪಾಟೀಲ್ ಬೆಟ್ಟದೂರು (ಸಂ), ೨೦೧೬, ಎಡೆದೊರೆ ರಾಯಚೂರು ಜಿಲ್ಲಾ ದರ್ಶನ, ಪು.೨೧೪-೧೫.

೩. ಶ್ರೀನಿವಾಸ ಪಾಡಿಗಾರ, ೨೦೧೬, ಪುರಾತತ್ವಶಾಸ್ತ್ರ ಪರಿಚಯ, ಪು.೧.

೪. ಷೇಕ್‌ಅಲಿ ಬಿ (ಸಂ), ೨೦೧೮, ಕರ್ನಾಟಕ ಚರಿತ್ರೆ ಸಂ-೧, ಪು.೧೩೪.

೫. ಅದೇ, ಪು.೧೬೦.

೬. ಅದೇ, ಪು.೧೯೨.

೭. ಅದೇ, ಪು.೧೯೨.

೮. ಅದೇ, ಪು.೧೯೫.

೯. ಅದೇ, ಪು.೨೨೨.

೧೦. ಶಿವತಾರಕ್ ಕೆ.ಬಿ., ೨೦೧೧, ಕರ್ನಾಟಕದ ಪುರಾತತ್ವ ನೆಲೆಗಳು, ಪು.೬೦೧.

೧೧. ಅದೇ, ಪು.೬೦೨.

೧೨. ದೇವರಕೊಂಡರೆಡ್ಡಿ (ಸಂ), ೨೦೧೨, ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ:೭ ರಾಯಚೂರು ಜಿಲ್ಲೆ, ಪು.xxx.

೧೩. ನಾಗರಾಜ, ೨೦೧೮, ಮಸ್ಕಿ ಪರಿಸರದ ಇತಿಹಾಸ ಮತ್ತು ಪುರಾತತ್ವ ಅಧ್ಯಯನ, ಪು.೨೬.೨೭.

೧೪. ದೇವರಕೊಂಡರೆಡ್ಡಿ (ಸಂ), ಪೂರ್ವೋಕ್ತ, ಪು.xxx-xxxi.

೧೫. ಅದೇ, ಪು.xxxi.

೧೬. ಅದೇ, ಪು.xxxv.

೧೭. ಅದೇ, ಪು.xxxv.

೧೮. ಅದೇ, ಪು.xxxv.

೧೯. ಅದೇ, ಪು.೩೪೪.

೨೦. ಅದೇ, ಪು.xxxvi.

೨೧. ಅದೇ, ಪು.xxxviii.

೨೨. ಅದೇ, ಪು.xxxix.

೨೩. ಅದೇ, ಪು.೩೬೮.

೨೪. ಅದೇ, ಪು.xli.

೨೫. ಅದೇ, ಪು.೩೬೮.

೨೬. ಅದೇ, ಪು.೩೪೪.

೨೭. ಅದೇ, ಪು.೩೪೯.

೨೮. ಅದೇ, ಪು.೩೮೦.

೨೯. ಅಮರೇಶ ಯತಗಲ್ (ಸಂ), ೨೦೧೦, ದೋ-ಅಬ್ ರಾಯಚೂರು ಇತಿಹಾಸ, ಪು.೮೬-೮೮.

೩೦. ವಾಸುದೇವನ್ ಸಿ.ಎಸ್., ೨೦೧೨, ಕರ್ನಾಟಕ ದೇವಾಲಯ ಕೋಶ ರಾಯಚೂರು ಜಿಲ್ಲೆ, ಪು.೧೮.

೩೧. ಪ್ರಜಾವಾಣಿ ದಿನಪತ್ರಿಕೆ, ವಿಮೋಚನೆ ಹಾದಿಯ ಹಿನ್ನೋಟ, ೨೦೧೪, ೧೭ ಸೆಪ್ಟೆಂಬರ್.

೩೨. ಚನ್ನಬಸವಯ್ಯ ಹಿರೇಮಠ, ೨೦೧೪, ಪ್ರಾಚೀನ ಕರ್ನಾಟಕದ ರಾಜಕೀಯ ವಿಭಾಗಗಳು, ಪು.೬೦.

೩. ಶಾಸನಗಳು

೩.೧ ಪ್ರಕಟಿತ ಶಾಸನಗಳು

೩.೨ ಅಪ್ರಕಟಿತ ಶಾಸನಗಳು

೩.೩ ಶಾಸನ ಅಧ್ಯಯನ

೩. ಶಾಸನಗಳು

ಇತಿಹಾಸಕ್ಕೆ ಆಧಾರಗಳೇ ಜೀವಾಳ. ಆಧಾರಗಳಿಲ್ಲದೇ ಇತಿಹಾಸವನ್ನು ಪುನರ್ ರಚಿಸುವುದು ಊಹಿಸಲು ಅಸಾಧ್ಯ. ಭಾರತ ಇತಿಹಾಸ ರಚನೆಗೆ ಲಭ್ಯವಿರುವ ಮೂಲ ಆಧಾರಗಳು ವಿವಿಧ ಮೂಲದವುಗಳಾಗಿವೆ. ಅದರಲ್ಲಿ ಶಾಸನಗಳು ಪ್ರಮುಖವಾಗಿವೆ. ರಾಯಚೂರು ಜಿಲ್ಲೆಯ ಶಾಸನಗಳು ಕರ್ನಾಟಕದ ಇತಿಹಾಸಕ್ಕೆ ಬಹು ಮುಖ್ಯವಾದ ಆಕರಗಳನ್ನೊದಗಿಸಿ ಕೊಡುತ್ತವೆ. ಇಲ್ಲಿಯ ಶಾಸನಗಳನ್ನು ವಿಶ್ವವಿದ್ಯಾಲಯಗಳು, ಹಲವು ವ್ಯಕ್ತಿಗಳು ಮತ್ತು ವಿದ್ವಾಂಸರು ಸಂಗ್ರಹಿಸಿ ಪ್ರಕಟಿಸಿದ್ದಾರೆ. ಆದರೆ ಇನ್ನೂ ಅಪ್ರಕಟಿತವಾಗಿರುವ ಶಾಸನಗಳು ಕೆಲವು ಗ್ರಾಮಗಳಲ್ಲಿ ಕಂಡುಬರುತ್ತವೆ. ಇದಕ್ಕೆ ಪೂರಕವೆಂಬಂತೆ ಈ ಅಧ್ಯಯನದ ಕ್ಷೇತ್ರಕಾರ್ಯದಲ್ಲಿ ದೊರೆತ ಸೋಮಲಾಪುರ ಗ್ರಾಮದ ಹಾಳೂರುನಲ್ಲಿರುವ ಶಾಸನವು ಒಂದಾಗಿದೆ.

ಶಾಸನ ಎಂಬ ಪದವು ಸಂಸ್ಕೃತ ಭಾಷೆಯ ಶಾಸ್ ಎನ್ನುವ ಧಾತುವಿನಿಂದ ರೂಪುಗೊಂಡಿದೆ. ಇದರ ಅರ್ಥ ಆಜ್ಞಾಪಿಸು, ಶಿಕ್ಷಿಸು, ನಿಯಂತ್ರಿಸು ಎನ್ನುವ ಅರ್ಥಗಳನ್ನು ಒಳಗೊಂಡಿದೆ. ಶಾಸನಗಳು ಮೂಲತಃ ದಾನ ಸಂಬಂಧವಾದ ರಾಜರ ಆಜ್ಞೆಗಳಾಗಿದ್ದು, ಕಾಲಾನುಕ್ರಮದಲ್ಲಿ ವಿಶಾಲ ಅರ್ಥವನ್ನು ಪಡೆದುಕೊಂಡವು. ಸಾಮಾನ್ಯ ಅರ್ಥದಲ್ಲಿ ಹೇಳುವುದಾದರೆ ಗಟ್ಟಿಯಾದ ಪದಾರ್ಥದ ಮೇಲೆ ಬರವಣಿಗೆಯಾಗಿರುವುದಕ್ಕೆ ಶಾಸನವೆಂದೂ ಹೇಳಲಾಗುತ್ತದೆ. ಅಥವಾ ಶಾಶ್ವತವಾದ ಲೇಖನ ಸಾಮಗ್ರಿಗಳ ಮೇಲೆ ಬರೆಯಲಾದ ಬರವಣಿಗೆಗಳನ್ನು ಶಾಸನವೆಂದೂ ಹೇಳುತ್ತಾರೆ.[೧]

ಶಾಸನ ಎಂಬ ಪದವು ಆಂಗ್ಲ ಭಾಷೆಯ *Inscription* ಎಂಬ ಪದಕ್ಕೆ ಸಮಾನವಾಗಿದೆ. *Inscription* ಎಂಬ ಪದವು *Inscribe* ಎಂಬ ಲ್ಯಾಟಿನ್ ಭಾಷೆಯ ಪದದಿಂದ ಬಂದಿದ್ದು, ಮೇಲೆ ಬರೆ ಎಂಬ ಅರ್ಥವನ್ನು ಹೊಂದಿದೆ.[೨] ಅಂದರೆ, ಬಹುಕಾಲ ಉಳಿಯಬಲ್ಲ ವಸ್ತುವಿನ ಮೇಲೆ ಕೊರೆಯಲ್ಪಟ್ಟ ಬರಹ ಎಂದರ್ಥ. ಉದಾಹರಣೆಗೆ ಶಿಲೆ, ತಾಮ್ರ, ಕಬ್ಬಿಣ, ದಂತ ಮತ್ತು ಕಟ್ಟಿಗೆ ಶಾಸನ ಬರವಣಿಗೆಯ ಸಾಮಾಗ್ರಿಗಳಾಗಿವೆ.[೩] ಹಲವು ಪ್ರಕಾರಗಳಲ್ಲಿ ಶಾಸನಗಳನ್ನು ನಾವು ಕಾಣುತ್ತೇವೆ.

ಪ್ರಸ್ತುತ ಅಧ್ಯಯನದ ದೃಷ್ಟಿಯಿಂದ ಪ್ರಕಟಿತ ಶಾಸನಗಳು ಹಾಗೂ ಅಪ್ರಕಟಿತ ಶಾಸನಗಳೆಂದೂ ವಿಂಗಡಿಸಿಕೊಳ್ಳಲಾಗಿದೆ. ಅದರ ಜೊತೆಗೆ ಕೆಲವು ಶಾಸನೋಕ್ತ ವಿಷಯಗಳನ್ನು ಗುರುತಿಸಿ, ತೌಲನಿಕವಾಗಿ ವಿಶ್ಲೇಷಿಸುವ ಪ್ರಯತ್ನ ಮಾಡಲಾಗಿದೆ. ಅಗ್ರಹಾರಗಳು, ಅಳತೆ ಮಾಪನಗಳು, ವೃತ್ತಿ ಸೂಚಕನಾಮಗಳು ಇತ್ಯಾದಿ ವಿಷಯಗಳ ಬಗ್ಗೆ ಕೋಷ್ಟಕಗಳ ಮೂಲಕ ವಿವರಿಸಲಾಗಿದೆ.

೩.೧ ಪ್ರಕಟಿತ ಶಾಸನಗಳು

ಇಲ್ಲಿಯವರೆಗೆ ಪ್ರಕಟಿತವಾಗಿರುವ ಕೃತಿ, ಗೆಜೆಟಿಯರ್, ಶಾಸನ ಸಂಪುಟಗಳು, ಎಂ.ಫಿಲ್ ಹಾಗೂ ಪಿಎಚ್.ಡಿ ಮಹಾಪ್ರಬಂಧಗಳಲ್ಲಿ ಕಂಡುಬರುವ ಈ ಪರಿಸರದ ಶಾಸನಗಳನ್ನು ಇಲ್ಲಿ ಅಧ್ಯಯನಕ್ಕೆ ಒಳಪಡಿಸಲಾಗಿದೆ.

ಮುಕ್ಕುಂದ ಗ್ರಾಮದ ಕೋಟೆಯ ಹತ್ತಿರ ನಡುವೆ ಇರುವ ಗುಡ್ಡದಲ್ಲಿ ಪಾಳು ಬಿದ್ದಿರುವ ದೇವಾಲಯದ ಕಂಬದಲ್ಲಿನ ಶಾಸನ

ಸಂಖ್ಯೆ : ೦೧
ಊರು : ಮುಕ್ಕುಂದ
ಸ್ಥಳ : ಕೋಟೆಯ ಹತ್ತಿರ
ಕಾಲಮಾನ : ಕ್ರಿ.ಶ. ೧೦೨೧
ಪ್ರಕಟಣೆ : ಕ.ವಿ.ಶಾ.ಸಂ.ರಾ.
ರಾಜವಂಶ : ಸಿಂಧರು
ರಾಜ : ಕಣ್ಣರಸ
ಸಾಮಂತರು : ಉಲ್ಲೇಖವಿಲ್ಲ
ವಿಷಯ : ದೀಪದ ಕಂಬ ಮಾಡಿಸಿದಂತೆ

ಶಾಸನೋಕ್ತ ಕಾಲವು ಶಕ ೯೪೬, ದುರ್ಮತಿ, ಜೇಷ್ಠ ಸು. ೧೮ ಆದಿತ್ಯವಾರದ ಉಲ್ಲೇಖವಿದ್ದು, ಇದು ಕ್ರಿ.ಶ. ೧೫-೦೫-೧೦೨೧ರ ಸೋಮವಾರ (ಭಾನುವಾರ)ಕ್ಕೆ ಸರಿಹೊಂದುತ್ತದೆ. ಕಣ್ಣರಸ ಎಂಬುವವನು ದೀಪದ ಕಂಬವನ್ನು ಮಾಡಿಸಿದಂತೆಯೂ, ವಾಚಿಗತ್ಯ ಎಂಬುವವನು ಮಾಡಿದಂತೆಯೂ ಹೇಳಲಾಗಿದೆ.[೪]

ಮುಕ್ಕುಂದ ಗ್ರಾಮದ ಮಾದೇಗೌಡರ ಜಮೀನಿನಲ್ಲಿರುವ ಶಾಸನ (ಯುವಕ ಸಂಘದ ಹಿಂಭಾಗದಲ್ಲಿ)

ಸಂಖ್ಯೆ : ೦೨
ಊರು : ಮುಕ್ಕುಂದ
ಸ್ಥಳ : ಮುರಹರಿ ದೇವಾಲಯದ ಬಲಗಡೆ
ಕಾಲಮಾನ : ತೃಟಿತವಾಗಿದೆ
ಪ್ರಕಟಣೆ : ಕ.ವಿ.ಶಾ.ಸಂ.ರಾ.
ರಾಜವಂಶ : ಕಲ್ಯಾಣ ಚಾಲುಕ್ಯ
ರಾಜ : ತೃಟಿತವಾಗಿದೆ
ಸಾಮಂತರು : ಸಿಂಧರು
ವಿಷಯ : ಭೂ ದಾನ

ಶಾಸನದ ಮೇಲ್ಭಾಗ ಒಡೆದಿದ್ದು, ಕಾಲದ ಉಲ್ಲೇಖವಿದ್ದ ಭಾಗವು ಹಾಳಾಗಿದೆ. ಉತ್ತರಾಯಣ ಸಂಕ್ರಮಣದ ಉಲ್ಲೇಖ ಮಾತ್ರ ಇದೆ. ಪ್ರಚಂಡ ದಂಡನಾಯಕ ಮಾರ್ತಂಡಯ್ಯನ ಉಲ್ಲೇಖವಿದ್ದು, ಆತ ದಾನ ನೀಡಿರುವಂತೆ ಊಹಿಸಬಹುದಾಗಿದೆ. ಒಟ್ಟು ೬೫ ಮತ್ತರು ಭೂಮಿ ದಾನವಾಗಿ ನೀಡಿದಂತೆ ತಿಳಿಯುತ್ತದೆ. ಇದಲ್ಲದೆ ಬೆಳ್ಳಗೆ, ಮಾರಮಯ್ಯನ ಉಲ್ಲೇಖ ಬಂದಿದೆ. ಶಾಸನದ ನಂತರ

ಭಾಗದಲ್ಲಿ ಇನ್ನೊಂದು ಶಾಸನ ಪ್ರಾರಂಭವಾಗಿ ಅದರಲ್ಲಿ ಶಕವರ್ಷ ೯೭೦, ಸರ್ವಧಾರಿ, ಪುಷ್ಯ, ಅಮಾವಾಸ್ಯೆ, ಉತ್ತರಾಯಣ ಸಂಕ್ರಾಂತಿಯ ಉಲ್ಲೇಖ ಬಂದಿದೆ. ಇದು ಕ್ರಿ.ಶ. ೦೬-೦೧-೧೦೪೯ಕ್ಕೆ ಸರಿಹೊಂದುತ್ತದೆ. ಆದರೆ ಅಂದು ಉತ್ತರಾಯಣ ಸಂಕ್ರಾಂತಿ ಇರಲಿಲ್ಲ. ಸಿಂಧರ ವಂಶದ ಗೋನರಸನು ದಂಡನಾಯಕ ಮಾರ್ತಾಂಣ್ವಯನು ಮಾಡಿಸಿದ ಸತ್ರಕ್ಕೆ, ಮಣ್ಡಲಗಾವನ ನಾಲ್ವತ್ತು ಗೇಣ ಘಳಿಯಲ್ಲಿ ಐವತ್ತು ಮತ್ತರು ಭೂಮಿಯನ್ನು ದಾನವಾಗಿ ನೀಡುತ್ತಾನೆ. ಚತ್ರದ ವೃತ್ತಿಯನ್ನು ಚಂದ್ರಭಟ್ಟ ಎಂಬುವವನು ನೋಡಿಕೊಳ್ಳುತ್ತಿದ್ದು, ಶಾಸನದಲ್ಲಿ ಗೋನರಸನನ್ನು ಅತಿಶಯವಾಗಿ ಹೊಗಳಿದೆ.[೫]

ರವುಡಕುಂದ ಬಂಡೆರಂಗನಾಥಸ್ವಾಮಿ ದೇವಾಲಯದ ಬಳಿಯ ತೇರಿನ ಮಂಟಪಕ್ಕೆ ಒರಗಿಸಿರುವ ಶಾಸನ

ಸಂಖ್ಯೆ	: ೦೩	ರಾಜವಂಶ	: ಕಲ್ಯಾಣ ಚಾಲುಕ್ಯ
ಊರು	: ರವುಡಕುಂದ	ರಾಜ	: ತ್ರೈಲೋಕ್ಯಮಲ್ಲ
ಸ್ಥಳ	: ಬಂಡೆರಂಗನಾಥಸ್ವಾಮಿ ದೇವಾಲಯದ ಬಳಿ	ಸಾಮಂತರು	: ಸಿಂಧರು
ಕಾಲಮಾನ	: ಕ್ರಿಶ ೧೦೫೨	ವಿಷಯ	: ದಾನ ದತ್ತಿ

ಪ್ರಕಟಣೆ :*A.R. No. B 104 of 1985-86;* ಕು.ಸಿಂ.ನಂ ೨೩; *I.K.III.No.304;*ಕ.ವಿ.ಶಾ.ಸಂ.ರಾ.

ಶಾಸನದ ಕಾಲವು ಶಕವರ್ಷ ೯೭೫ ವಿಜಯ, ವೈಶಾಖ, ಶು.ಅಕ್ಷಯ ತದಿಗೆ ಮಂಗಳವಾರದ ಉಲ್ಲೇಖವಿದ್ದು, ಇದು ಕ್ರಿ.ಶ. ೨೪-೦೪-೧೦೫೨ರ ಮಂಗಳವಾರಕ್ಕೆ ಸರಿ ಹೊಂದುತ್ತದೆ. ಶಾಸನದಲ್ಲಿ ಚಾಳುಕ್ಯ ರಾಜ ತ್ರೈಳೋಕ್ಯಮಲ್ಲನ ಉಲ್ಲೇಖವಿದ್ದು, ಇವನ ಮಂಡಳೇಶ್ವರನಾದ ಅಮ್ಮಣದೇವನು ನಿಟ್ಟರವೆಯನ್ನು ಆಳುತ್ತಾ, ಕರಹಡದ ನೆಲೆವೀಡಿನಲ್ಲಿದ್ದಂತೆ ತಿಳಿಸುತ್ತದೆ. ಇವನ ಸಾಮಂತರಾಗಿ ಸಿಂಧವಂಶದ ನೆಲಗುತ್ತಿಗೆ ಕಣ್ಣರಸನೆಂಬುವವನಿದ್ದ.

ಮೇಲೆ ಸೂಚಿಸಿರುವ ಕಾಲದಂದು ರೇವಡಿಕುಂದೆಯ ದಿಗ್ಗಿಗೆರಿಯ ಕೆಳಗೆರ ಇರುವ ಕರ್ಣೇಶ್ವರ ದೇವರಿಗೆ ರೇವಡಿಕುಂದೆಯ ದಕ್ಷಿಣದ ಹಾಲಾರಿಹಳ್ಳದ ಉತ್ತರಕ್ಕೆ ೨೫ ಕರಿಯ ನೆಲವನ್ನು ಮಂಡಲಗಾವನ ಘಳೆಯಲ್ಲಿ ಅಳೆದು ನೀಡುತ್ತಾನೆ. ಇದರೊಂದಿಗೆ ದೇವಗಾಣ ೧ ಮತ್ತು ತೋಟವೊಂದನ್ನು ನೀಡುತ್ತಾನೆ. ಮಹಾವ್ರತಿ ದವನಸೋವಭಳಾರರಿಗೆ ಒಂದು ನಿವೇಶನವನ್ನು ನೀಡುತ್ತಾನೆ. ಕಣ್ಣರಸನ ಅನೇಕ ವಿಶೇಷಣಗಳನ್ನು ಈ ಶಾಸನದಲ್ಲಿ ಉಲ್ಲೇಖಿಸಿದೆ.[೬]

ಸಾಲಗುಂದೆ ಗ್ರಾಮದ ಜಕ್ಕಮ್ಮನ ಬಾವಿ ಸಮೀಪದ ನೀಲಕಂಠೇಶ್ವರ ದೇವಾಲಯದಲ್ಲಿನ ಶಾಸನ

ಸಂಖ್ಯೆ : ೦೪
ಊರು : ಸಾಲಗುಂದ
ಸ್ಥಳ : ನೀಲಕಂಠೇಶ್ವರ ದೇವಾಲಯದಲ್ಲಿ
ಕಾಲಮಾನ : ಕ್ರಿ.ಶ ೧೦೬೩

ರಾಜವಂಶ : ಕಲ್ಯಾಣ ಚಾಲುಕ್ಯ
ರಾಜ : ವಿಕ್ರಮಾದಿತ್ಯ
ಸಾಮಂತರು : ಸಿಂಧರು
ವಿಷಯ : ದಾನ ದತ್ತಿ

ಪ್ರಕಟಣೆ : *A.R.No.B 105 and 106 of 1985-86;* ಕು.ಸಿಂ.ನಂ.೨೪; *I.K.III.No.305 and 306;*ಕ.ವಿ.ಶಾ.ಸಂ.ರಾ.

ಶಾಸನದಲ್ಲಿ ಶಕವರ್ಷ ೯೮೫, ರಕ್ತಾಕ್ಷಿ, ಉತ್ತರಾಯಣ ಸಂಕ್ರಾಂತಿಯ ಉಲ್ಲೇಖವಿದ್ದು, ಇದು ಕ್ರಿ.ಶ. ೧೦೬೩ಕ್ಕೆ ಸರಿಹೊಂದುತ್ತದೆ. ಇನ್ನೊಂದೆಡೆ ಚಾಳುಕ್ಯ ವಿಕ್ರಮ ವರ್ಷ ೯, ರಕ್ತಾಕ್ಷಿ ಸಂವತ್ಸರ (ಕ್ರಿ.ಶ. ೧೦೮೫)ದ ಉಲ್ಲೇಖ ಬಂದಿದೆ. ಶಾಸನದ ಆರಂಭದಲ್ಲಿ ನೂರ್ಮಡಿ ತೈಲಪನಿಂದಾರಂಭಿಸಿ ವಿಕ್ರಮಾದಿತ್ಯನವರೆಗೆ ಚಾಳುಕ್ಯ ವಂಶಾವಳಿಯನ್ನು ನೀಡಲಾಗಿದೆ. ತ್ರಿಭುವನಮಲ್ಲ ವಿಕ್ರಮಾದಿತ್ಯನ ಮಾಂಡಳಿಕನಾಗಿ ನಾಗದೇವನೆಂಬುವನಿದ್ದ ಎಡದೊರೆ ನಾಡಿನಲ್ಲಿನ ನಿಟ್ಟರವೆ-೭೦ಕ್ಕೆ ಸೇರಿದ ಅಗ್ರಹಾರ ಸಾಲಗುಂದವಾಗಿತ್ತು.

ಆ ನಾಡನ್ನು ಆಳುತ್ತಿದ್ದವನು ನಾಗರಾಜ (ಸಿಂಧ) ವಂಶೋದ್ಭವನಾದ ಬಾಚಿಗಭೂಪ ಎಂಬುವವನು. ಇವನ ಕೈಕೆಳಗೆ ಕನ್ನಡ ಶಿಖಾಮಣಿ ಸೋಮನೆಂಬುವವನಿದ್ದ ಇವನ ಹೆಂಡತಿ ಜಕ್ಕಣಾಂಬೆ. ಇವನ ಮಗ ನಾಗದೇವ ದಂಡಾಧೀಶ. ಇವನನ್ನು ಗೌಡಪ್ರಭು ನಾಗದೇವನೆಂದೂ ಕರೆಯಲಾಗಿದೆ.ಈ ನಾಗದೇವ ಸಾಲಗುಂದದಲ್ಲಿ ಬಾವಿ, ಕೆರೆ, ಹೊಕ್ಕರಣೆ, ದೇವತಾ ಮಂದಿರಗಳನ್ನು ಕಟ್ಟಿಸುತ್ತಾನೆ. ಇವನು ಕಟ್ಟಿಸಿದ ನಾಗೇಶ್ವರ ದೇವಾಲಯ ಹಾಗೂ ಮತ್ತಿತ್ತರ ದೇವಾಲಯಗಳ ನಿರ್ವಹಣೆಗಾಗಿ ತುಂಗಭದ್ರಾ ತೀರದಲ್ಲಿ ೧೨ ಮತ್ತರು ಭೂಮಿ, ಒಂದು ಗಾಣವನ್ನು ನೀಡುತ್ತಾನೆ.

ಮಹಾಜನರು ಈ ಹನ್ನೇರಡು ಮತ್ತರನ್ನು ೩೨ ಗೇಣ ಗಳೆಯಲ್ಲಿ ಅಳೆದು ದಾನ ನೀಡುತ್ತಾರೆ. ಇದಲ್ಲದೆ ವಿಕ್ರಮಾದಿತ್ಯನು ಬಲ್ಲಕುಂದೆ-೩೦೦ರ, ತೆಕ್ಕೆಕಲ್ಲು-೧೨ಕ್ಕೆ ಸೇರಿದ ಸಿರಿಯೂರ ಬಳಿ ಗದ್ದೆ ನೀಡುತ್ತಾನೆ. ತೆಕ್ಕೆಕಲ್ಲು-೧೨ರ ಮನ್ನೆಯನಾದ ಚಾಕನು ಸಾಲಗುಂದದ ಪಶ್ಚಿಮಕ್ಕೆ ಎಡೆಯಪಳ್ಳಿಯಲ್ಲಿ ೪೫ ಮತ್ತರು ಮಾನ್ಯ ನೀಡುತ್ತಾರೆ. ಶಾಸನದಲ್ಲಿ ವಿಕ್ರಮಾದಿತ್ಯ ಸೋಮ ಮತ್ತು ನಾಗದೇವನನ್ನು ಬಹಳವಾಗಿ ವರ್ಣಿಸಿದೆ.[೭]

ಮುಕ್ಕುಂದ ಗ್ರಾಮದ ಪಾಪನಾತೇಶ್ವರ ದೇವಾಲಯದ ಮುಂಭಾಗದಲ್ಲಿ ನೆಟ್ಟಿರುವ ಶಾಸನ

ಸಂಖ್ಯೆ : ೦೫
ಊರು : ಮುಕ್ಕುಂದ
ಸ್ಥಳ : ಪಾಪನಾತೇಶ್ವರ ದೇವಾಲಯದ ಬಳಿ
ಕಾಲಮಾನ : ಕ್ರಿ.ಶ. ೧೦೬೬
ರಾಜವಂಶ : ಕಲ್ಯಾಣ ಚಾಲುಕ್ಯ
ರಾಜ : ತ್ರೈಲೋಕ್ಯಮಲ್ಲ
ಸಾಮಂತರು : ಉಲ್ಲೇಖವಿಲ್ಲ
ವಿಷಯ : ಭೂ ದಾನ

ಪ್ರಕಟಣೆ : *A.R.No.B 101 of 1985-86; I.K.III.No.302;*ಕ.ವಿ.ಶಾ.ಸಂ.ರಾ.

ಶಾಸನದಲ್ಲಿ ಕಾಲವು ಶಕವರುಷ ೯೮೮, ಪರಾಭವ ಸಂವತ್ಸರದ ಉತ್ತರಾಯಣ ಸಂಕ್ರಾಂತಿ ಎಂದಿದ್ದು, ಈ ಶಾಸನವು ಕ್ರಿ.ಶ. ೨೪-೧೨-೧೦೬೬ರ ಭಾನುವಾರಕ್ಕೆ ಸರಿಹೊಂದುತ್ತದೆ. ಕಲ್ಯಾಣದಲ್ಲಿ ತ್ರೈಲೋಕ್ಯಮಲ್ಲನು ರಾಜ್ಯಭಾರ ಮಾಡುತ್ತಿದ್ದಂತೆ ಹೇಳಿದೆ. ಇವನ ಪತ್ನಿ ತ್ರೈಲೋಕ್ಯಮಹಾದೇವಿ. ಇವಳನ್ನು ಶಾಸನವು ಭೋಗಭಾಮಿನಿ, ದ್ವಿತೀಯ ಲಕ್ಷ್ಮೀಸಮಾನ, ಪ್ರತ್ಯಕ್ಷ, ಪಾರ್ವತಿ ಹಾಗೂ ಅಗ್ರಮಹಿಷಿ ಎಂದು ಕರೆದಿದೆ. ಈಕೆ ಕಲ್ಯಾಣದಿಂದ ರಾಜ್ಯಭಾರ ಮಾಡುತ್ತಿದ್ದಂತೆ ಹೇಳಿದೆ. ನಿಟ್ಟರವೆ ಎಪ್ಪತ್ತರ ಬಳಿಯ ಅಗ್ರಹಾರ ಮುಕ್ಕುಂದೆಯನ್ನು ತ್ರಿಭೋಗ್ಯಭ್ಯಂತರವಾಗಿ ಈಕೆ ಆಳುತ್ತಿದ್ದು, ತುಂಗಾಭದ್ರ ನದಿಯ ತೀರದ ಕಪಾಳೇಶ್ವರ ದೇವರಿಗೆ ೧೨ ಮತ್ತರು ಕರಿಯ ಭೂಮಿಯನ್ನು ಸೆಟ್ಟಿಕಬ್ಬೆಯ ಗಡಿಂಬದ ಕೋಲಿನಿಂದ ಅಳೆದು ದಾನ ನೀಡುತ್ತಾಳೆ. ಇದರೊಂದಿಗೆ ಒಂದು ತೋಟ ಮತ್ತು ನಂದಾದೀಪಕ್ಕಾಗಿ ಒಂದು ಗಾಣವನ್ನು ದಾನ ಬಿಡುತ್ತಾಳೆ. ಬಹಳ ಸುಂದರವಾದ ಲಿಪಿಯಲ್ಲಿರುವ ಈ ಶಾಸನದ ಕೊನೆಯ ಭಾಗ ತ್ರುಟಿತವಾಗಿದೆ.[೮]

ಮುಕ್ಕುಂದ ಗ್ರಾಮದ ಮುರಹರಿ ದೇವಾಲಯದ ಬಲಗಡೆ ಇರುವ ಶಾಸನ

ಸಂಖ್ಯೆ : ೦೬
ಊರು : ಮುಕ್ಕುಂದ
ಸ್ಥಳ : ಮುರಹರಿ ದೇವಾಲಯದ ಬಲಗಡೆ
ಕಾಲಮಾನ : ಕ್ರಿ.ಶ. ೧೦೮೮
ರಾಜವಂಶ : ಕಲ್ಯಾಣ ಚಾಲುಕ್ಯ
ರಾಜ : ತ್ರಿಭುವನ ಮಲ್ಲ
ಸಾಮಂತರು : ಸಿಂಧರು
ವಿಷಯ : ದಾನ

ಪ್ರಕಟಣೆ : *A.R.No.B 169 of 1980-81; I.K.III.No.300,*ಕ.ವಿ.ಶಾ.ಸಂ.ರಾ.

ಶಾಸನದಲ್ಲಿ ಕಾಲವನ್ನು ಚಾಳುಕ್ಯ ವಿಕ್ರಮ ವರ್ಷ ೧೩, ವಿಭವ, ಪುಷ್ಯ ಸು.೧೦ ಸೋಮವಾರ, ಉತ್ತರಾಯಣ ಸಂಕ್ರಾಂತಿಯ ದಿನವೆಂದಿದ್ದು, ಇದು ಕ್ರಿ.ಶ. ೨೫-೧೨-೧೦೮೮ಕ್ಕೆ ಸರಿಹೊಂದುತ್ತದೆ. ಚಾಳುಕ್ಯ ತ್ರಿಭುವನ ಮಲ್ಲದೇವನು ಕಲ್ಯಾಣದಲ್ಲಿದ್ದಾಗ ಅವನ ಮಾಂಡಳಿಕನಾದ ಬಾಚರಸನು ಮುಕ್ಕುಂದೆಯನ್ನು ಆಳುತ್ತಿದ್ದನು. ಇವನ ವಂಶಾವಳಿಯನ್ನು ಹೀಗೆ ನೀಡಿದೆ. ನಾಗೇಂದ್ರ

ಮತ್ತು ನಾಗಿಣಿಯರಿಗೆ ಗೋನಭೂಪ ಜನಿಸಿದ. ಇವನ ಮಗ ಕಣ್ಣರಸ, ಇವನ ಪತ್ನಿ ಕಾವಬ್ಬರಸಿ. ಇವನ ಮಗ ಗೋನ. ಇವನ ತಮ್ಮ ಬಾಚಭೂಪ.

ಈ ಬಾಚಿಭೂಪನು ವಿಷ್ಣು ದೇವಾಲಯವನ್ನು ಮತ್ತು ಸಭಾವಾಸದೊಂದಿಗೆ ಬಾಚೇಶ್ವರ ದೇವಾಲಯವನ್ನು ಮಾಡಿಸಿದ. ಮೇಲೆ ತಿಳಿಸಿರುವ ಕಾಲದಂದು ತ್ರಿಭುವನಮಲ್ಲನು ಗಂಗೆ ಗೋದಾವರಿ ಪುರಣಿ ಸಂಗಮದ ಕಂಠೇಶ್ವರದ ತೀರ್ಥಸ್ನಾನದಲ್ಲಿ ದಾನಗಳನ್ನು ಮಾಡುವ ಸಂದರ್ಭದಲ್ಲಿ ಬಾಚರಸನು ಇದ್ದು, ಸರ್ವನಮಸ್ಯದ ಅಗ್ರಹಾರ ಮುಕುನ್ದೆಯ ಮುನ್ನೂರು ಮಹಾಜನರ ಕಾಲನ್ನು ತೊಳೆದು ಮನ್ನೆಯದ ತೇಜಸಾಮ್ಯದ ಆದಾಯ ೧೫೦ ಗದ್ಯಾಣವನ್ನು ದಾನ ಬಿಟ್ಟನು.[೬]

ಮುಕ್ಕುಂದ ಗ್ರಾಮದ ಸೋಮಲಿಂಗೇಶ್ವರ ದೇವಾಲಯದ ಎಡಭಾಗದಲ್ಲಿನ ಶಾಸನ

ಸಂಖ್ಯೆ	: ೦೭	ರಾಜವಂಶ	: ಕಲ್ಯಾಣ ಚಾಲುಕ್ಯ
ಊರು	: ಮುಕ್ಕುಂದ	ರಾಜ	: ೬ನೆ ವಿಕ್ರಮಾದಿತ್ಯ
ಸ್ಥಳ	: ಮುರಹರಿ ದೇವಾಲಯದ ಎಡಗಡೆ	ಸಾಮಂತರು	: ಸಿಂಧರು
ಕಾಲಮಾನ	: ಕ್ರಿ.ಶ. ೧೦೯೭	ವಿಷಯ	: ಭೂ ದಾನ

ಪ್ರಕಟಣೆ : *A.R.No.B 168 of 1980-81; I.K.III.No.299;* ಕ.ವಿ.ಶಾ.ಸಂ.ರಾ.

ಶಾಸನೋಕ್ತ ಕಾಲವು ಚಾಲುಕ್ಯ ವಿಕ್ರಮ ಶಕೆ. ೨೧, ಧಾತು, ಪುಷ್ಯ, ಬಹುಳ, ತದಿಗೆ, ಸೋಮವಾರ, ಉತ್ತರಾಯಣ ಸಂಕ್ರಾಂತಿ ಎಂದಿದ್ದು, ಇದು ಕ್ರಿ.ಶ. ೦೩-೦೧-೧೦೯೭ ರ ಶನಿವಾರಕ್ಕೆ ಸರಿಹೊಂದುತ್ತದೆ. ಚಾಲುಕ್ಯ ಆರನೆಯ ವಿಕ್ರಮಾದಿತ್ಯನ ಆಳ್ವಿಕೆಯಲ್ಲಿ ಅವನ ಮಾಂಡಳಿಕನಾದ ಮಹಾಮಂಡಳೇಶ್ವರ ಸಿಂಧಕುಲದ ಬಾಚರಸನು ಅಗ್ರಹಾರ ಮುಕ್ಕನ್ದಯೆಲ್ಲಿ ದೇವಾಲಯ (ಹೆಸರು ಹಾಳಾಗಿದೆ) ಮಾಡಿಸುತ್ತಾನೆ. ಹೀಗೆ ಕಟ್ಟಿಸಿದ ದೇವಾಲಯಕ್ಕೆ ಗೊಬ್ಬರಕಲ್ ಗ್ರಾಮದ ಉತ್ತರಕ್ಕೆ ಗಂಡಭೇರುಂಡನ ನಾಲ್ವತ್ತೆರೆಡು ಗೇಣ ಗಳೆಯಲ್ಲಿ ೬೩ ಮತ್ತರು ಬಿಡುತ್ತಾನೆ.

ಶಾಸನದಲ್ಲಿ ಈ ವಿವರಗಳಲ್ಲದೆ ಸಾಲಿಗುಂದೆಯ ಕಲಿಯಮಗೆರೆಯ ಕೋಲು, ಮಾಣಿಕೇಶ್ವರದ ೨೪ ಗೇಣ ಕೋಲು, ಮರಿಯಿಟ್ಟಿಗೆ, ಮೊರಟನಾಡು, ಕಾಸಿಗನೂರು ಗ್ರಾಮಗಳ ಉಲ್ಲೇಖವೂ ಇದೆ. ಈ ದೇವಾಲಯದ ಸ್ಥಾನಿಕನು ಪರ್ವತಾವಳಿಯ ನರೆಯಂಗಲ್ಲ ವಾದಿಕೋಲಾಹಳ ಪಂಡಿತದೇವ. ಇವನಿಗೆ ದೇವರ ಪೂಜಾ ವ್ಯವಸ್ಥೆಗಾಗಿ ೧೫ ನಿವೇಶನ, ಒಂದು ಮತ್ತರು ಹೂದೋಟ, ನಂದಾದೀವಿಗೆಗೆ ಗಾಣ ಒಂದನ್ನು ಬಿಡುತ್ತಾನೆ. ಶಾಸನಾಂತ್ಯದಲ್ಲಿ ಶಕೆ ೧೩೦೬, ರುದಿರೋದ್ಗಾರಿ, ಕಾರ್ತಿಕ, ಬ.೧, ಬುಧವಾರ

ಅಂದರೆ ಕ್ರಿ.ಶ. ೧೧-೧೧-೧೩೮೩ರ ಬುಧವಾರದಲ್ಲಿ ಹೊರಟನಾಡಿನ ಒಡೆಯನು ಬಾಚೇಶ್ವರದೇವರ ಪ್ರತಿಷ್ಠೆ ಮಾಡಿದಂತೆ ಹೇಳಿದೆ.[೧೦]

ಜಾಲಿಹಾಳು ಗ್ರಾಮದ ಈಶ್ವರದೇವರ ಗುಡಿಯ ನವರಂಗದ ಗೋಡೆಯಲ್ಲಿನ ಶಾಸನ

ಸಂಖ್ಯೆ :೦೮

ಊರು : ಜಾಲಿಹಾಳು

ಸ್ಥಳ : ಈಶ್ವರದೇವರ ಗುಡಿಯ ನವರಂಗ

ಕಾಲಮಾನ : ಕ್ರಿ.ಶ. ೧೧೦೬

ಪ್ರಕಟಣೆ : ಕ.ವಿ.ಶಾ.ಸಂ.ರಾ.

ರಾಜವಂಶ : ಕಲ್ಯಾಣ ಚಾಲುಕ್ಯ

ರಾಜ : ತ್ರಿಭುವನಮಲ್ಲ

ಸಾಮಂತರು : ಬಾಚರಸ

ವಿಷಯ : ದಾನ

ಶಾಸನದಲ್ಲಿ ಕಾಲವು ಚಾಳುಕ್ಯವಿಕ್ರಮ ವರ್ಷ ೩೦, ಪಾರ್ಥಿವ ಸಂವತ್ಸರ ಪುಷ್ಯ, ಸು.೧೦, ಸೋಮವಾರ, ಉತ್ತರಾಯಣ ಸಂಕ್ರಾಂತಿಯ ಉಲ್ಲೇಖವಿದ್ದು ಇದು ಕ್ರಿ.ಶ ೧-೧-೧೧೦೬ರ ಸೋಮವಾರಕ್ಕೆ ಸರಿ ಹೊಂದುತ್ತದೆ. ಆದರೆ ಕ್ರಿ.ಶ. ೨೫-೧೨-೧೧೦೫ರಲ್ಲಿ ಉತ್ತರಾಯಣ ಸಂಕ್ರಾಂತಿ ಬಂದಿತ್ತು.ತ್ರಿಭುವನಮಲ್ಲದೇವನು ಪೊನ್ನರಮಾಡದ ನೆಲೆವೀಡಿನಿಂದ ರಾಜ್ಯಭಾರ ಮಾಡುತ್ತಿದ್ದಾಗ ಅವನ ಮಹಾಮಂಡಳೇಶ್ವರನಾಗಿ ಹೆರ್ಮಾಡಿದೇವನಿದ್ದನು. ಇವನ ಕೈಕೆಳಗೆ ಬಾಚರಸನು ನಿಟ್ಟರವೆ-೭೦ನ್ನು ಆಳುತ್ತಿದ್ದನು.

ಈ ಪ್ರಾಂತ್ಯದ ಎಡೆಯಪಳ್ಳಿಯನ್ನು ರಾಜಿಮಯ್ಯ ಎಂಬುವವನು ಆಳುತ್ತಿದ್ದ. ಇವನ ಪತ್ನಿ ಜಕ್ಕಣಾಂಬೆ. ಇವರಿಗೆ ಪಿರಿಯ ನೇಮಣ, ಭೂಚಣ, ಕುಸುವಣ, ಮಹಾದೇವ ಬಿಚ್ಚಣ ಎಂಬ ಮಕ್ಕಳಾದರು. ಮುಂದೆ ಎಡೆಯಪಳ್ಳಿಯ ಗೌಡನಾಗಿ ಬೀಚಣ ಬರುತ್ತಾನೆ. ಇವನ ಪತ್ನಿ ಬಾಚಿಕಬ್ಬೆ. ಇವರಿಬ್ಬರಿಗೆ ಮಲ್ಲಿಗವುಂಡ, ರಾಜಯ್ಯ, ಬಾಚಿಯ ಎಂಬ ಮೂವರು ಮಕ್ಕಳಾದರು. ಬೀಚಣನು ತನ್ನ ಹೆಸರಿನಲ್ಲಿ ಬೀಚೇಶ್ವರ ದೇವಾಲಯ ಕಟ್ಟಿಸಿದ.[೧೧]

ಮುಕ್ಕುಂದ ಗ್ರಾಮದ ಮುರಹರಿ ದೇವಾಲಯದ ಬಲಗಡೆ ನಿಲ್ಲಿಸಿರುವ ಶಾಸನ

ಸಂಖ್ಯೆ : ೦೯

ಊರು : ಮುಕ್ಕುಂದ

ಸ್ಥಳ : ಮುರಹರಿ ದೇವಾಲಯದ ಬಲಗಡೆ

ಕಾಲಮಾನ : ಕ್ರಿ.ಶ. ೧೧೩೪

ಪ್ರಕಟಣೆ : *A.R.No.B 169 of 1980-81; I.K.III.No.300;* ಕ.ವಿ.ಶಾ.ಸಂ.ರಾ.

ರಾಜವಂಶ : ಕಲ್ಯಾಣ ಚಾಲುಕ್ಯ

ರಾಜ : ಭೂಲೋಕಮಲ್ಲ

ಸಾಮಂತರು : ಸಿಂಧರು

ವಿಷಯ : ಭೂ ದಾನ

ಶಾಸನದಲ್ಲಿ ಭೂಲೋಕಮಲ್ಲನ ೫, ಆನಂದ, ಶ್ರಾವಣ, ಅಮಾವಾಸ್ಯೆ, ಆದಿವಾರ, ಸೂರ್ಯಗ್ರಹಣದ ದಿನವೆಂದಿದ್ದು, ಇದು ಕ್ರಿ.ಶ. ೨೩-೦೭-೧೧೩೪ಕ್ಕೆ ಸರಿಹೊಂದುತ್ತದೆ. ಆದರೆ ಆ ದಿನ ಆದಿವಾರವಲ್ಲ, ಸೋಮವಾರವಾಗಿತ್ತು.

ಚಾಳುಕ್ಯ ಭೂಲೋಕಮಲ್ಲನು ರಾಜ್ಯಭಾರ ಮಾಡುತ್ತಿದ್ದಾಗ, ಅವನ ಸಾಮಂತ ಸಿಂಧವಂಶದ ಕಣ್ಣರಸನ ಮಗ ಬಾಚಿರಾಜ ಆಳುತ್ತಿದ್ದ. ಇವನ ಪ್ರಧಾನನಾಗಿ ಬೆನಚಿಮಯ್ಯ ಎಂಬ ಬ್ರಾಹ್ಮಣನಿದ್ದ ಮೇಲೆ ಉಲ್ಲೇಖಿಸಿರುವ ಕಾಲದಲ್ಲಿ ಕುರುವಡದ ರಾಯನಾದ ಬಾಚಿದೇವರಸನು ಬೆನಚಿಮಯ್ಯ ಮಾಡಿಸಿದ ಕೇಶವದೇವರ ದೇವಾಲಯದ ರಂಗಭೋಗ, ತೆರೆದ ದೇವರ ಮಂದಿರದ ಖಂಡಸ್ಫುಟಿತ ಜೀರ್ಣೋದ್ಧಾರ ಹಾಗೂ ಪೂಜಾರಿಗಳ ಜೀವಿತಕ್ಕೆಂದು ಭೂದಾನ ಮಾಡಿದ ಉಲ್ಲೇಖವಿದೆ. ಶಾಸನದಲ್ಲಿ ಬಾಚಿಭೂಪ, ಬೆನಚಿಮಯ್ಯನ ವಂಶದ ವರ್ಣನೆಯಿದೆ.[೧೨]

ಮುಕ್ಕುಂದ ಗ್ರಾಮದ ಮುರಹರಿ ದೇವಾಲಯದ ನವರಂಗದ ಗೋಡೆಗೆ ಹಾಕಿರುವ ಶಾಸನ

ಸಂಖ್ಯೆ	: ೧೦	ರಾಜವಂಶ	: ಕಲ್ಯಾಣ ಚಾಲುಕ್ಯ
ಊರು	: ಮುಕ್ಕುಂದ	ರಾಜ	: ಭೂಲೋಕಮಲ್ಲ
ಸ್ಥಳ	: ಮುರಹರಿ ದೇವಾಲಯದ ನವರಂಗ	ಸಾಮಂತರು	: ಸಿಂಧರು
ಕಾಲಮಾನ	: ಕ್ರಿ.ಶ. ೧೧೩೪	ವಿಷಯ	: ಭೂ ದಾನ
ಪ್ರಕಟಣೆ	: ಕ.ವಿ.ಶಾ.ಸಂ.ರಾ.		

ಭೂಲೋಕಮಲ್ಲನು ಕಲ್ಯಾಣಪುರದ ನೆಲೆವೀಡಿನಲ್ಲಿದ್ದಾಗ ಸಿಂಧಕುಲದ ಬಾಚರಸನು ಮಂಡಳೇಶ್ವರನಾಗಿದ್ದನು. ಇವನ ಪೆರ್ಗಡೆಯಾಗಿ ಬೆನಿವಣನೆಂಬುವನಿದ್ದ. ಇವನ ಪತ್ನಿ ಚೆನ್ನಿಯಕ್ಕ. ಇವನ ಮಗ ನಾಚಣ. ಬೆನಿಮಯನು ಕೇಶವದೇವರ ದೇವಾಲಯಕ್ಕೆ ಮಹಾಮಂಡಳೇಶ್ವರ ಕುರುವಡದ (ಈಗಿನ ಕುರುಗೋಡು) ಬಾಚರಸನು ದೇವಾಲಯದ ಅಂಗಭೋಗ ಮಂದಿರದ ಖಂಡಸ್ಫುಟಿತ ಜೀರ್ಣೋದ್ಧಾರಕ್ಕೆ ಪೂಜಾರಿಗಳ ಜೀವಿತಕ್ಕೆಂದು ಆರು ಮತ್ತರು ಭೂಮಿ ನೀಡಿದ್ದಾನೆ. ದೇವರ ನಂದಾದೀವಿಗೆಗಾಗಿ ಭೂಮಿಯನ್ನು ಬಿಟ್ಟಂತೆ ಹೇಳಿದೆ.[೧೩]

ಸಾಲಗುಂದೆ ಕಾಲಕಾಲೇಶ್ವರ ದೇವಾಲಯದ ನವರಂಗದಲ್ಲಿನ ಶಾಸನ

ಸಂಖ್ಯೆ	: ೧೧	ರಾಜವಂಶ	: ಕಲ್ಯಾಣ ಚಾಲುಕ್ಯ
ಊರು	: ಸಾಲಗುಂದ	ರಾಜ	: ಮಲ್ಲಿಕಾರ್ಜುನ
ಸ್ಥಳ	: ಕಾಲಕಾಲೇಶ್ವರ ದೇವಾಲಯದ ನವರಂಗದಲ್ಲಿ	ಸಾಮಂತರು	: ಸಿಂಧರು
ಕಾಲಮಾನ	: ಕ್ರಿ.ಶ ೧೧೫೩	ವಿಷಯ	: ಭೂ ದಾನ

ಪ್ರಕಟಣೆ : *A.R.No. B 107 of 1985-86; I.K.III.No.307;* ಕ.ವಿ.ಶಾ.ಸಂ.ರಾ.

ಶಾಸನದಲ್ಲಿ ಕಾಲವು ಶಕವರ್ಷ ೧೧೭೫ ಶ್ರೀಮುಖ ಸಂವತ್ಸರದ ಉಲ್ಲೇಖವಿದ್ದು, ಇದು ಕ್ರಿ.ಶ. ೧೧೫೩ಕ್ಕೆ ಸಮಾನಾಗುತ್ತದೆ. ಉಳಿದ ವಿವರಗಳಿಲ್ಲ. ಚಾಳುಕ್ಯರಾಜ ಭೋಲೋಕಮಲ್ಲಯನ ಮಗನಾದ ಮಲ್ಲಿಕಾರ್ಜುನನು ಆಳುತ್ತಿದ್ದಾಗ ಅವನ ದಂಡನಾಯಕ ನಾಚಣನಿರುತ್ತಾನೆ. ಇವನು ಎಡದೊರೆ-೨೦೦೦ ವನ್ನು ಆಳುತ್ತಿದ್ದಾಗ ಸಾಲಗುಂದೆ-೭೦ನ್ನು ಬಾಚಿದೇವ ಆಳುತ್ತಿದ್ದ. ಆಗ ಸಾಲಗುಂದೆಯಲ್ಲಿದ್ದ ಮಹಾಜನರಲ್ಲಿ ನಾಕಿಮಯ್ಯನ ಮಗ ಕಾಳಿದಾಸ ಚಮೂಪನಿರುತ್ತಾರೆ.

ಇವನ ಪತ್ನಿ ಕರ್ಣಾಂಬೆ. ಇವರಿಬ್ಬರ ಮಗ ನಾಚದಂಡಾಧಿಪ. ಇವನು ತನ್ನ ತಂದೆ ಹೆಸರಿನಲ್ಲಿ ಸಾಲಿಗುಂದೆಯಲ್ಲಿ ಕಾಳೇಶ್ವರ ದೇವಾಲಯವನ್ನು ಮಾಡಿಸುತ್ತಾನೆ. ಬಾಚಿಬೂಪ ಈ ದೇವಾಲಯಕ್ಕೆ ಎರಡು ಮತ್ತರು ಭೂಮಿಯನ್ನು ನೀಡುತ್ತಾನೆ. ಅಲ್ಲದೇ ಹಾವಸಗೆರೆಯ ಬಳಿ ಅರೆಮತ್ತರು ನೆಲವನ್ನು ಹೂದೋಟಕ್ಕಾಗಿ ನೀಡುತ್ತಾನೆ. ಮುಮ್ಮರಿದಂಡ, ಸೆಟ್ಟಿಗುತ್ತರು, ಗವರೆಗಳು ಮುಂತಾದವರು ಸುಂಕವನ್ನು ಬಿಡುತ್ತಾರೆ.[೧೪]

ಸಿದ್ಧರಾಂಪುರ ಗ್ರಾಮದ ಅಂದರಕಲ್ಲುಮಟ್ಟಿಯ ಮಂಟಪದ ಬಳಿ ಹುಟ್ಟು ಬಂಡೆಯಲ್ಲಿನ ಶಾಸನ

ಸಂಖ್ಯೆ : ೧೨
ಊರು : ಸಿದ್ಧರಾಂಪುರ
ಸ್ಥಳ : ಅಂದರಕಲ್ಲು ಮಂಟಪದ ಬಳಿ
ಕಾಲಮಾನ : ಕ್ರಿ.ಶ. ೧೫೨೬
ಪ್ರಕಟಣೆ : ಕ.ವಿ.ಶಾ.ಸಂ.ರಾ.

ರಾಜವಂಶ : ಉಲ್ಲೇಖವಿಲ್ಲ
ರಾಜ : ಉಲ್ಲೇಖವಿಲ್ಲ
ಸಾಮಂತರು : ಉಲ್ಲೇಖವಿಲ್ಲ
ವಿಷಯ : ಅರವಟ್ಟಿಗೆ ಮಂಟಪದ ಕುರಿತು.

ಶಾಸನೋಕ್ತ ಕಾಲವು ಶಾಲಿವಾಹನ ಶಕ ೧೪೪೫, ಸ್ವಭಾನು ಸಂವತ್ಸರ, ಚೈತ್ರ, ಶು.೫ ಎಂದಿದ್ದು, ಇದು ಸುಮಾರು ಕ್ರಿ.ಶ. ೨೨-೦೩-೧೫೨೯ರ ಭಾನುವಾರಕ್ಕೆ ಸರಿಹೊಂದುತ್ತದೆ. ರವುಡುಕುಂದಿಯ ಸೇನಬೋವ ಸೋಮರಸ ಮತ್ತು ಅವನ ಮಕ್ಕಳು ಸಿರುಗರಸ, ಸೋಮರಸ ಮತ್ತು ನಾಗರಸರು ತಮ್ಮ ತಂದೆ ಸೋಮರಸ ಮತ್ತು ತಾಯಿ ಕಾಮಂಮನಿಗೆ ಪುಣ್ಯವಾಗಬೇಕೆಂದು ಕೆರೆಯನ್ನು ಕಟ್ಟಿಸಲು ಶ್ರೀವಿರುಪಾಕ್ಷ ಮತ್ತು ಶ್ರೀವಿಠಲದೇವರ ಭಕ್ತನಾದ ನಾಗರಸನು ಅರವಟ್ಟಿಗೆ ಮಂಟಪವನ್ನು ಕಟ್ಟಿಸಿದಂತೆ ತಿಳಿಸುತ್ತದೆ.[೧೫]

ಸಾಲಗುಂದ ಗ್ರಾಮದ ಮಾಬಮ್ಮನ ಮನೆ ಸಮೀಪ ಚಿಕ್ಕಗುಡ್ಡದ ಬಂಡೆಯಲ್ಲಿನ ಶಾಸನ

ಸಂಖ್ಯೆ : ೧೩
ಊರು : ಸಾಲಗುಂದ

ರಾಜವಂಶ : ವಿಜಯನಗರ
ರಾಜ : ಶ್ರೀಕೃಷ್ಣದೇವರಾಯ

ಸ್ಥಳ : ಮಾಬಮ್ಮನ ಮನೆ ಸಮೀಪ

ಕಾಲಮಾನ : ಕ್ರಿಶ ೧೫೨೮

ಪ್ರಕಟಣೆ : *A.R.No.B 108 of 1985-86; I.K.III.No.308;*ಕ.ವಿ.ಶಾ.ಸಂ.ರಾ.

ಸಾಮಂತರು : ಅಬ್ಬರಾವುಅಯ್ಯ

ವಿಷಯ : ಭೂ ದಾನ

ಶಾಸನದ ಕಾಲವು ಶಾಲಿವಾಹನ ಶಕೆ ೧೪೫೦, ಸರ್ವಧಾರಿ, ವೈಶಾಖ, ಬ.೧೫, ಸೋಮವಾರದ ಉಲ್ಲೇಖವಿದ್ದು, ಇದು ಕ್ರಿ.ಶ. ೧೮-೦೫-೧೫೨೮ಕ್ಕೆ ಸಮವಾಗುತ್ತದೆ. ವಿಜಯನಗರದ ಅರಸ ವೀರ ಕೃಷ್ಣರಾಯನು ರಾಜ್ಯವಾಳುತ್ತಿದ್ದಾಗ ರವುಡುಕುಂದಿಯ ಸೀಮೆಯ ಸಾಲಿಗುಂದೆ ಗ್ರಾಮವು ಅಬ್ಬರಾವು ಅಯ್ಯನ ಕುದುರೆಯ ನಾಯಕತನಕ್ಕೆ ಸೇರಿತ್ತು. ಆ ಗ್ರಾಮದ ಪಶ್ಚಿಮಕ್ಕೆ ಕಟ್ಟಿರುವ ಕರಿಯ ಕೆರೆಯ ಕೆಳಗೆ ಎರಡು ಕುಳಗ ಭೂಮಿಯನ್ನು ಅಬ್ಬರಾವು ಅಯ್ಯನಿಗೆ ಪುಣ್ಯವಾಗಲಿಯೆಂದು ಅವನ ಅಳಿಯನು ರವುಡುಕುಂದಿಯಲ್ಲಿದ್ದ ತಿರುಮಲದೇವರಿಗೆ ದಾನವನ್ನು ನೀಡುತ್ತಾನೆ.[೧೬]

ಮುಕ್ಕುಂದ ಗ್ರಾಮದ ಕೋಟೆಯ ಕೆಳಭಾಗದಲ್ಲಿ ಇರುವ ಹುಟ್ಟುಗುಂಡಿನ ಮೇಲೆ ಇರುವ ಶಾಸನ

ಸಂಖ್ಯೆ : ೧೪

ಊರು : ಮುಕ್ಕುಂದ

ಸ್ಥಳ : ಕೋಟೆಯ ಕೆಳಭಾಗದಲ್ಲಿ

ಕಾಲಮಾನ : ಕ್ರಿ.ಶ. ೧೫೫೬

ಪ್ರಕಟಣೆ : ಕ.ವಿ.ಶಾ.ಸಂ.ರಾ.

ರಾಜವಂಶ : ವಿಜಯನಗರ

ರಾಜ : ಸದಾಶಿವದೇವ

ಸಾಮಂತರು : ಉಲ್ಲೇಖವಿಲ್ಲ

ವಿಷಯ : ಸ್ಪಷ್ಟವಿಲ್ಲ

ಶಾಸನದಲ್ಲಿ ಕಾಲವು ಶಾಲಿವಾಹನ ಶಕವರುಷ ೧೪೭೮, ನಳ ಸಂವತ್ಸರ, ಆಷಾಡ ಮಾಸದ ಬ. ೧೦ರ ಉಲ್ಲೇಖವಿದ್ದು, ಇದು ಕ್ರಿ.ಶ. ೦೨-೦೭-೧೫೫೬ಕ್ಕೆ ಸಮನಾಗುತ್ತದೆ. ಸದಾಶಿವದೇವನು ಆಳುತ್ತಿದ್ದಾಗ ಆನೆಯಗೊಂದಿಗೆ ಸಲ್ಲುವ ಕೆಳವಡಿನಾಡಿನ ರವುಡುಕುಂದೆಯ ಸೀಮೆಗೆ ಸೇರುವ ತುಂಗಭದ್ರಾ ತೀರದ ಮುಕ್ಕುಂದಕ್ಕೆ ವರದಾಜಂಮಪುರವೆಂಬ ಪ್ರತಿನಾಮವಿತ್ತೆಂದು ತಿಳಿಸುತ್ತದೆ. ಇದು ಅಚ್ಯುತ ದೇವರಾಯನ ರಾಣಿಯ ಹೆಸರಾಗಿದೆ. ಇದು ಆ ಕಾಲಕ್ಕೆ ಸರ್ವಮಾನ್ಯಯುಳ್ಳ ಅಗ್ರಹಾರವಾಗಿತ್ತು. ಶಾಸನ ಮುಂದುವರಿದು, ಈ ವರದಾಜಂಮಪುರ ಅಗ್ರಹಾರದ ಮಹಾಜನರು, ಗೌಡ, ಸೇನಬೋವ, ಗಣಾಚಾರಿ, ಸೆಟಿ, ಪಟ್ಟಣಸ್ವಾಮಿ ಮತ್ತು ಕೆಲವು ಬೋವುಗಳು (ಹೆಸರುಗಳಿವೆ) ಸೇರಿ ಶಾಸನ ಬರೆಸಿ ಕೊಟ್ಟಂತೆ ಹೇಳಿದೆ. ದಾನದ ವಿವರಗಳು ಸ್ಪಷ್ಟವಾಗಿಲ್ಲ.[೧೭]

ಮುಕ್ಕುಂದ ಗ್ರಾಮದ ನದಿ ತೀರದಲ್ಲಿರುವ ಸಂಜೀವರೆಡ್ಡಿಯವರ ತೋಟದ ಮಂಟಪದ ಕಂಬದಲ್ಲಿ ಶಾಸನ

ಸಂಖ್ಯೆ : ೧೫ | ರಾಜವಂಶ : ವಿಜಯನಗರ

ಊರು : ಮುಕ್ಕುಂದ | ರಾಜ : ಉಲ್ಲೇಖವಿಲ್ಲ

ಸ್ಥಳ : ಸಂಜೀವರೆಡ್ಡಿಯವರ ತೋಟದಲ್ಲಿ | ಸಾಮಂತರು : ಉಲ್ಲೇಖವಿಲ್ಲ

ಕಾಲಮಾನ : ಕ್ರಿ.ಶ. ೧೫೬೧ | ವಿಷಯ : ಭೂ ದಾನ

ಪ್ರಕಟಣೆ : ಕ.ವಿ.ಶಾ.ಸಂ.ರಾ.

ಶಾಸನದಲ್ಲಿ ಕಾಲವು ಶಾಲಿವಾಹನ ಶಕವರುಷ, ದುರ್ಮತಿ ಸಂವತ್ಸರ, ಚೈತ್ರ, ಶು.೩ರ ಉಲ್ಲೇಖವಿದ್ದು, ಕ್ರಿ.ಶ. ೧೯-೦೩-೧೫೬೧ಕ್ಕೆ ಸರಿಹೊಂದುತ್ತದೆ. ಮುಕ್ಕುಂದಿಗೆ ವರದರಾಜಂಪುರವೆಂಬ ಪ್ರತಿನಾಮವಿತ್ತು, ಇದು ಸರ್ವಮಾನ್ಯ ಅಗ್ರಹಾರವಾಗಿದ್ದು, ಇಲ್ಲಿದ್ದ ಅಶೇಷ ಮಹಾಜನಗಳು ಸವಈಗಳಿಗೆ (ಸಮಯಿಗಳಿಗೆ) ಸಾಗುವಳಿಗಾಗಿ ಭೂಮಿಯನ್ನು ವಾಮನಮುದ್ರೆ ಕಲ್ಲು ಹಾಕಿಸಿ ದಾನ ನೀಡಿದ ವಿವರವಿದೆ.[೧೮]

ಮುಕ್ಕುಂದ ಗ್ರಾಮದ ಪಕ್ಕದಲ್ಲಿರುವ ವೀರೇಶಪ್ಪನ ಹೊಲದ ಹಿತ್ತಲಲ್ಲಿನ ಬಂಡೆಯ ಮೇಲಿನ ಶಾಸನ

ಸಂಖ್ಯೆ : ೧೬ | ರಾಜವಂಶ : ಉಲ್ಲೇಖವಿಲ್ಲ

ಊರು : ಮುಕ್ಕುಂದ | ರಾಜ : ಉಲ್ಲೇಖವಿಲ್ಲ

ಸ್ಥಳ : ವೀರೇಶಪ್ಪನ ಹೊಲದ ಹಿತ್ತಲಲ್ಲಿನ | ಸಾಮಂತರು : ಉಲ್ಲೇಖವಿಲ್ಲ

ಕಾಲಮಾನ : ಕ್ರಿ.ಶ. ೧೫೮೫ | ವಿಷಯ : ಪೇಟೆ ನಿರ್ಮಾಣ

ಪ್ರಕಟಣೆ : ಕ.ವಿ.ಶಾ.ಸಂ.ರಾ.

ಶಾಸನದಲ್ಲಿ ಕಾಲವು ಶಾಲಿವಾಹನ ಶಕವರುಷ ೧೫೦೭, ಪಾರ್ಥಿವ, ಜೇಷ್ಠ ಶು.೨೧ರಲ್ಲಿ ಅಂದರೆ, ಕ್ರಿ.ಶ. ೨೧-೦೫-೧೫೮೫ಕ್ಕೆ ಸರಿಹೊಂದುತ್ತದೆ. ಭರಿಗೆ ಬೆಳಗಾವಿ ನಾಯಕನ ಮಗ ಪರುವಪ, ಹಟಗಾರಪನವರು, ವಿರುಪಣಗೌಡ, ಯಿಂದ್ರಯ, ನಿರುಗಪಗೌಡ ಮುಂತಾದ ಹಟಗಾರರಿಗೆ ರವುಡಕುಂದಿಯ ಸೀಮೆಗೆ ಸೇರಿದ ಮುಕ್ಕುಂದಿಯ ಸಂಥೆಯನ್ನು ಶಾಸನಕ್ರಮದಲ್ಲಿ ಬರಸಿಕೊಡುತ್ತಾರೆ. ರವುಡುಕುಂದಿಯ ಗೌಡ, ಸೇನಬೋವ ಮುಂತಾದವರ ಬಿನ್ನಹದ ಮೇರೆಗೆ ಮೇಲೆ ಹೆಸರಿಸಿದ ಹಟಗಾರರು ಮುಕ್ಕುಂದಿಯ ಪೇಟೆಯನ್ನು ಹೊಸದಾಗಿ ಮಾಡಿಸಿ ಮಳಿಗೆ ಮನೆಗಳನ್ನು ಕಟ್ಟಿಸುತ್ತಾರೆ. ಇದಕ್ಕೆ ಸೋಮಬೀದಿಯ ಮೆರವಣಿಗೆಯ ಹಕ್ಕನ್ನು ಅವರಿಗೆ ನೀಡುತ್ತಾರೆ. ಈ ಬೀದಿಯಲ್ಲಿ ಶುಭಕಾರ್ಯಗಳಲ್ಲಿ ಮದುವೆಯಲ್ಲಿ ಮಂಗಲ ಕಲಸ ಸಮೇತ ಮೆರವಣಿಗೆ ಬರಬಹುದಾಗಿತ್ತು ಎಂದು ಶಾಸನ ತಿಳಿಸುತ್ತದೆ.[೧೯]

ಮುಕ್ಕುಂದ ಗ್ರಾಮದ ಬೀರಲಿಂಗೇಶ್ವರ ದೇವಾಲಯದ ಬಲಗಡೆ ದೊಡ್ಡ ಗುಂಡಿನ ಮೇಲಿನ ಶಾಸನ

ಸಂಖ್ಯೆ : ೧೭
ಊರು : ಮುಕ್ಕುಂದ
ಸ್ಥಳ : ಬೀರಲಿಂಗೇಶ್ವರ ದೇವಾಲಯದ ಬಲಗಡೆ
ಕಾಲಮಾನ : ಕ್ರಿ.ಶ. ೧೫೫೪
ಪ್ರಕಟಣೆ : ಕ.ವಿ.ಶಾ.ಸಂ.ರಾ.
ರಾಜವಂಶ : ವಿಜಯನಗರೋತ್ತರ
ರಾಜ : ತೃಟಿತವಾಗಿದೆ.
ಸಾಮಂತರು : ಉಲ್ಲೇಖವಿಲ್ಲ
ವಿಷಯ : ತೃಟಿತವಾಗಿದೆ.

ಕಾಲದ ಉಲ್ಲೇಖವಿಲ್ಲದ ಈ ಶಾಸನದಲ್ಲಿ ಜನ, ಆಶ್ವೀಜ, ಶು. ೧೦ರ ಉಲ್ಲೇಖವಿದ್ದು, ಇದು ಕ್ರಿ.ಶ. ೧೪-೦೯-೧೫೫೪ರ ಶನಿವಾರಕ್ಕೆ ಸರಿಹೊಂದುತ್ತದೆ. ಮಹಾರಾಜ ಹಂಡೆ ಯಿಂಮಡಿ..... (ಹೆಸರು ಹಾಳಾಗಿದೆ) ರವುಡಕುಂದಿ ಸೀಮೆಯ ಮುಕ್ಕುಂದಿ ಗ್ರಾಮದ ಮುರಾರಿ ದೇವಾಲಯದ ಸಮೀಪದಲ್ಲಿ ಏನನ್ನೋ ಮಾಡಿಸಿದ ಉಲ್ಲೇಖವಿದೆ.[೨೦]

ಮುಕ್ಕುಂದ ಗ್ರಾಮದ ಸಮೀಪದಲ್ಲಿರುವ ಅರಳೀಹಳ್ಳಿಯೆಂಬ ಬೇಚಿರಾಕ್ ಗ್ರಾಮದಲ್ಲಿನ ಶಾಸನ

ಸಂಖ್ಯೆ : ೧೮
ಊರು : ಮುಕ್ಕುಂದ
ಸ್ಥಳ : ಅರಳೀಹಳ್ಳಿ
ಕಾಲಮಾನ : ಕ್ರಿ.ಶ. ೧೬೦೩
ಪ್ರಕಟಣೆ : ಕ.ವಿ.ಶಾ.ಸಂ.ರಾ.
ರಾಜವಂಶ : ---
ರಾಜ : ---
ಸಾಮಂತರು : ---
ವಿಷಯ : ದಾನ

ಶಾಸನದಲ್ಲಿ ಕಾಲವು ಶಾಲಿವಾಹನ ಶಕವರ್ಷ ೧೫೨೫, ಸೋಭಕೃತು, ಶ್ರಾವಣ, ಬ.೫ರಲ್ಲಿ ಅಂದರೆ, ಇದು ಕ್ರಿ.ಶ. ೧೬-೦೮-೧೬೦೩ರ ಮಂಗಳವಾರಕ್ಕೆ ಸರಿಹೊಂದುತ್ತದೆ. ಹಂಡೆ ಮಲುಕಪ್ಪನಾಯಕನು ಶಿವಾಚಾರ ಸಂಪನ್ನದಾರ ಬೆಂಡೆಗೆರೆಯ ಸಿದ್ಧವೀರಂಣದೇವನ ಶಿಷ್ಯನಾದ ಭಂಡಾರಿ ಸಿದ್ಧರಾಮ ದೇವನಿಗೆ ಅರೆಯಹಳ್ಳಿ ಗ್ರಾಮವನ್ನು ಪುರವರ್ಗವಾಗಿ ದಾನ ನೀಡುತ್ತಾನೆ. ತನ್ನ ತಂದೆ ತಾಯಿಗಳಿಗೆ ಪುಣ್ಯವಾಗಬೇಕೆಂದು ನೀಡಿದ ಈ ಗ್ರಾಮಕ್ಕೆ ಚತುಸ್ಸೀಮೆಗಳ ಮೇರೆಯನ್ನು ಹೇಳಿದೆ.[೨೧]

ಮುಕ್ಕುಂದ ಗ್ರಾಮದ ಪಶ್ಚಿಮಕ್ಕಿರುವ ಹೊಲದಲ್ಲಿನ ಬಂಡೆಯ ಮೇಲಿನ ಶಾಸನ

ಸಂಖ್ಯೆ : ೧೯
ಊರು : ಮುಕ್ಕುಂದ
ಸ್ಥಳ : ಹೊಲದ ಬಂಡೆಯ ಮೇಲೆ
ರಾಜವಂಶ : ---
ರಾಜ : ---
ಸಾಮಂತರು : ---

ಕಾಲಮಾನ : ಕ್ರಿಶ. ೧೬೮೬ ವಿಷಯ : ಕೆರೆ ಕಾಲುವೆ

ಪ್ರಕಟಣೆ : ಕ.ವಿ.ಶಾ.ಸಂ.ರಾ.

ಶಾಸನದಲ್ಲಿ ಕಾಲವು ವ್ಯಯ, ಶ್ರಾವಣ, ಬ.೧೧ ಎಂದಿದ್ದು, ಇದು ಕ್ರಿಶ. ೨೬-೦೮-೧೬೮೬ರ ಬುಧವಾರಕ್ಕೆ ಸರಿಹೊಂದುತ್ತದೆ. ಶಾಸನವು ಕೆರೆಯಿಂದ ಬರುವ ಆದಾಯದ ಕುರಿತಾಗಿದ್ದು, ಅಭೆಸಾಣೆ ಅಯ್ಯನ ಕಾರ್ಯಕರ್ತನಾದ ಜೊಂಮರಾಹತನೆಂಬುವವನು ಮುಕ್ಕುಂದಿಯ ಗವುಡ, ಸೇನಬೋವ ಮೊದಲಾದವರಿಗೆ ಕೆರೆಯನ್ನು ಕಟ್ಟಿಸಿದುದ್ದಕ್ಕೆ ದಸವಂದವಾಗಿ ಕಟುಮಾನ್ಯ ನೀಡುತ್ತಾನೆ. ಈ ಗೌಡ ಮತ್ತು ಸೇನಬೋವರು ಕಟ್ಟಿಸಿದ ಕೆರೆಗಳೆಂದರೆ, ಗೌಡ ಸೇನಬೋವರು ಕಟ್ಟಿಸಿದ ಕೆರೆ, ಆಯಿತಿರೆಡಿ ಕಟ್ಟಿಸಿದ ಕೆರೆ, ಸೂಗುರು ಸಾಗಪ್ಪನ ಕೆರೆ, ಅಟುಲಪರುವತನ ಕೆರೆ, ಕೊಟೆಗಾರ ತಿಪರಂಗ ಮುಕ್ಕುಂದ ಉಪಾರ ಯಿಸೋರಯ್ಯನ ಕಾಲುವೆ ೧, ಅಂತು ೪ ಕೆರೆ, ೨ ಕುಂಟೆ ಮತ್ತು ಒಂದು ಕಾಲುವೆಯನ್ನು ಮಾಡಿಸಿದ್ದು, ಇದರ ಕೆಳಗೆ ಬರುವ ಆದಾಯದಲ್ಲಿ ಕುಳಪಾಲು ಎರಡು ಮತ್ತು ರಾಜಪಾಲು ಒಂದರ ಲೆಕ್ಕದಲ್ಲಿ ಹಂಚಿಕೊಳ್ಳಬೇಕೆಂದು ಹೇಳಲಾಗಿದೆ. ಕೊನೆಗೆ ಈ ಶಾಸನವನ್ನು ಕೆತ್ತಿದವನು ವೀರೋಜನ ಮಗ ಬೈರೋಜ ಎಂದು ಉಲ್ಲೇಖಿಸಿದೆ.[೨೨]

ಮುಕ್ಕುಂದ ಗ್ರಾಮದ ರಾಮಲಿಂಗೇಶ್ವರ ದೇವಾಯದ ಬಳಿ ಬೇಲಿಯೊಳಗಿರುವ ತುಂಡು ಶಾಸನ

ಸಂಖ್ಯೆ : ೨೦ ರಾಜವಂಶ : ಉಲೇಖವಿಲ್ಲ

ಊರು : ಮುಕ್ಕುಂದ ರಾಜ : ಉಲ್ಲೇಖವಿಲ್ಲ

ಸ್ಥಳ : ರಾಮಲಿಂಗೇಶ್ವರ ದೇವಾಲಯದ ಬಳಿ ಸಾಮಂತರು : ಉಲ್ಲೇಖವಿಲ್ಲ

ಕಾಲಮಾನ : ಕ್ರಿಶ. ೧೨ನೆ ಶತಮಾನ ವಿಷಯ : ದಾನ

ಪ್ರಕಟಣೆ : ಕ.ವಿ.ಶಾ.ಸಂ.ರಾ.

ಶಕವರ್ಷವು ಹಾಳಾಗಿದ್ದು, ವಿಳಂಬಿ, ಮಾಘ, ಅಮಾವಾಸ್ಯೆ, ಸೋಮವಾರದ ಉಲ್ಲೇಖವಿದೆ. ಕ್ರಿಶ. ೧೨ನೆಯ ಶತಮಾನದ ಲಿಪಿಯಲ್ಲಿದೆ. ಬಾಳ್ಗುಳಿಯ ಕಲಿದೇವಸ್ವಾಮಿಯ ಸನ್ನಿಧಿಯಲ್ಲಿ ತುಳಾಪುರುಷ ದಾನವನ್ನು ಸಂಧಿವಿಗ್ರಹಿ ದಂಡನಾಯಕನೊಬ್ಬನು ದಾನ ಬಿಟ್ಟಂತೆ ಹೇಳಿದೆ. ನಿಟ್ಟರವೆಯ ಬಳಿಯ ಮುಕ್ಕಂದ ಅಗ್ರಹಾರದ ಬಳಿ ಹೊಳೆಯಲ್ಲಿ ಅಕ್ಷಯನಿಧಿ ಭಂಡಾರವನ್ನು ಸೇನಬೋವ ಛಾವಣ್ಣಯ್ಯ ದೇವಾಲಯದ ನೈವೇದ್ಯಕ್ಕೆ ಹೂಮಾಲೆಗೆ ನಂದಾದೀವಿಗೆಗೆ ನೀಡಿದಂತೆ ಹೇಳಿದೆ. ದೇವರಸತ್ರ, ಸೇನಕಬ್ಬೆಯ ಗಡಿಂಬದ ಕೋಲಿನ ಉಲ್ಲೇಖವಿದೆ.[೨೩]

ಮುಕ್ಕುಂದಗ್ರಾಮದ ಊರಿನ ಉತ್ತರಕ್ಕೆ ನದಿದಡದ ನೆಲಮಟ್ಟದಲ್ಲಿ ಇರುವ ಬಂಡೆಯ ಮೇಲಿನ ಶಾಸನ

ಸಂಖ್ಯೆ : ೨೧ ರಾಜವಂಶ : ---

ಊರು : ಮುಕ್ಕುಂದ
ಸ್ಥಳ : ನದಿ ದಡದ ನೆಲಮಟ್ಟದಲ್ಲಿ
ಕಾಲಮಾನ : ಕ್ರಿ.ಶ. ೧೮ನೆ ಶತಮಾನ
ಪ್ರಕಟಣೆ : ಕ.ವಿ.ಶಾ.ಸಂ.ರಾ.

ರಾಜ : ---
ಸಾಮಂತರು : ---
ವಿಷಯ : ಮಂಟಪ ಕಟ್ಟಿಸಿದ್ದು

ಗದುಗ ಪರಣೆಯ ರವುಡಕುಂದಿಯ ಸರದೇಶಾಯಿ ಅಂಣ್ಣಪ್ಪೆಯನು ದೇವರಿಗಾಗಿ ಮುಕ್ಕುಂದ ಗ್ರಾಮದ ನದಿತೀರದಲ್ಲಿ ಮಂಟಪವನ್ನು ಕಟ್ಟಿಸಿದ ಉಲ್ಲೇಖವಿದೆ. ಶಾಸನವು ೧೮ನೆ ಶತಮಾನದ ಲಿಪಿಯಲ್ಲಿದೆ.[೨೪]

ಮುಕ್ಕುಂದಗ್ರಾಮದ ಕೋಟೆಯ ಉತ್ತರಕ್ಕೆ ದೇವಾಲಯವೊಂದರ ನಿವೇಶನದಲ್ಲಿ ಪೊದೆಗಳಲ್ಲಿ ಬಿದ್ದಿರುವ ಕಲ್ಲಿನ ತುಂಡು ಶಾಸನ

ಸಂಖ್ಯೆ : ೨೨
ಊರು : ಮುಕ್ಕುಂದ
ಸ್ಥಳ : ಪೊದೆಗಳಲ್ಲಿ
ಕಾಲಮಾನ : ತೃಟಿತವಾಗಿದೆ
ಪ್ರಕಟಣೆ : ಕ.ವಿ.ಶಾ.ಸಂ.ರಾ.

ರಾಜವಂಶ : ತೃಟಿತವಾಗಿದೆ
ರಾಜ : ತೃಟಿತವಾಗಿದೆ
ಸಾಮಂತರು : ತೃಟಿತವಾಗಿದೆ
ವಿಷಯ : ಭೂ ದಾನ

ಬಹಳ ತ್ರುಟಿತವಾದ ಈ ಶಾಸನದಲ್ಲಿ ವಿವರಗಳು ಸ್ಪಷ್ಟವಿಲ್ಲ. ಭೂದಾನದ ಉಲ್ಲೇಖವಿದೆ.[೨೫]

ಸಿಂಗಾಪುರ ಗ್ರಾಮದ ಪ್ರವೇಶದಲ್ಲಿನ ಶಾಸನ

ಸಂಖ್ಯೆ : ೨೩
ಊರು : ಮುಕ್ಕುಂದ
ಸ್ಥಳ : ಗ್ರಾಮದ ಪ್ರವೇಶದಲ್ಲಿ
ಕಾಲಮಾನ : ತೃಟಿತವಾಗಿದೆ
ಪ್ರಕಟಣೆ : ಕ.ವಿ.ಶಾ.ಸಂ.ರಾ.

ರಾಜವಂಶ : ತೃಟಿತವಾಗಿದೆ
ರಾಜ : ತೃಟಿತವಾಗಿದೆ
ಸಾಮಂತರು : ತೃಟಿತವಾಗಿದೆ
ವಿಷಯ : ದಾನ

ತ್ರುಟಿತವಾದ ಶಾಸನ. ಶಾಸನದ ಅರ್ಥ ಅಸ್ಪಷ್ಟ, ಕೆರಿಬರ ಅದಿಗ ಪುಲಿಕಲು ಆಳುತ್ತಿದ್ದಾಗ ಮರಿಇಟ್ಟಿಗೆಯ ಭೋಶಾಸಿ ಎಂಬುವವನು ದಾನ ನೀಡಿದಂತೆ ಉಲ್ಲೇಖವಿದೆ.[೨೬]

೩.೨ ಅಪ್ರಕಟಿತ ಶಾಸನಗಳು

ಇಲ್ಲಿಯವರೆಗೆ ಈ ಪರಿಸರದಲ್ಲಿ ಪ್ರಕಟಿತಗೊಂಡ ಶಾಸನಗಳಷ್ಟೇ ಅಲ್ಲದೇ, ಕಾಲ ಗರ್ಭದಲ್ಲಿ ತಮ್ಮ ಇರುಪಿಕೆಯನ್ನು ಗುರುತಿಸಿಕೊಳ್ಳಲು, ಅನೇಕ ಪ್ರಾಚ್ಯಾವಶೇಷಗಳನ್ನು ತಮ್ಮ

ಮಡಿಲಿನಲ್ಲಿಟ್ಟುಕೊಂಡ ಈ ಪರಿಸರದ ಹಲವು ಗ್ರಾಮಗಳು ಇತಿಹಾಸ ಸಂಶೋಧಕರನ್ನು ಕೈಬೀಸಿ ಕರೆಯುತ್ತಿವೆ. ಪ್ರಸ್ತುತ ಅಧ್ಯಯನದ ಕ್ಷೇತ್ರಕಾರ್ಯದಲ್ಲಿ ಹಲವು ಪ್ರಾಚ್ಯಾವಶೇಷಗಳ ಲಕ್ಷಣಗಳು ಗೋಚರಿಸಿವೆ.

ಸೋಮಲಾಪುರ ಗ್ರಾಮದ ಹಾಳೂರಿನ ಭಟ್ಟರ ಹೊಲದಲ್ಲಿರುವ ಶಾಸನ

ಸಂಖ್ಯೆ	: ೨೩	ರಾಜವಂಶ	: ---
ಊರು	: ಸೋಮಲಾಪುರ	ರಾಜ	: ---
ಸ್ಥಳ	: ಹಾಳೂರು	ಸಾಮಂತರು	: ---
ಕಾಲಮಾನ	: ಕ್ರಿ.ಶ. ೧೫ನೆ ಶತಮಾನ	ವಿಷಯ	: ---
ಪ್ರಕಟಣೆ	: ಅಪ್ರಕಟಿತ		

ಪ್ರಸ್ತುತ ಅಧ್ಯಯನದ ಕ್ಷೇತ್ರಕಾರ್ಯದಲ್ಲಿ ಸೋಮಲಾಪುರ ಗ್ರಾಮದ ಹೊರವಲಯದ ಬೆಟ್ಟದ ಕೆಳಗಿರುವ ಗ್ರಾಮದ ಹಾಳೂರಿನಲ್ಲಿ ಶಾಸನವೊಂದು ದೊರೆತಿದೆ. ಇದರ ಕುರಿತು ಅಧ್ಯಯನ ಸಮೀಕ್ಷೆ ಕೈಗೊಂಡಾಗ ಇದು ಅಪ್ರಕಟಿತ ಶಾಸನ ಎಂದೂ ತಿಳಿದು ಬಂದಿದೆ. ಈ ಶಾಸನದ ಸುತ್ತಲಿನ ಕಲ್ಲುಬಂಡೆಗಳ ಮೇಲೆ ಕುದುರೆಗಳು, ಕುದುರೆ ಸವಾರರ ರೇಖಾ ಚಿತ್ರಗಳು ಹಾಗೂ ಲಿಂಗ ಮುದ್ರೆ ಕಲ್ಲುಗಳಿವೆ. ಬಹುಶಃ ಇದು ಕೃಷ್ಣದೇವರಾಯನ ಆಳ್ವಿಕೆ ಕಾಲದಲ್ಲಿನ ಶಾಸನವಾಗಿರಬಹುದು; ಅಥವಾ ೧೫೨೮ರ ಸಾಲಗುಂದ ಶಾಸನದಲ್ಲಿ ಉಲ್ಲೇಖವಾಗಿರುವ ರೀತಿಯಲ್ಲಿ ಶ್ರೀ ಕೃಷ್ಣದೇವರಾಯನು ಅಬ್ಬರಾವು ಅಯ್ಯನ ಕುದುರೆಯ ನಾಯಕತನಕ್ಕೆ ಈ ಗ್ರಾಮವನ್ನು ಉಂಬಳಿಯಾಗಿ ನೀಡಿರಬಹುದು; ಅಥವಾ ಆತನ ಆಡಳಿತದ ಗ್ರಾಮವಾಗಿದ್ದಿರಬಹುದೆಂದೂ ಇಲ್ಲಿನ ಕಲ್ಲು ಬಂಡೆಯ ಮೇಲಿರುವ ಕುದುರೆಗಳು ಮತ್ತು ಕುದುರೆಯ ರೇಖಾ ಚಿತ್ರಗಳ ಮೂಲಕ ಹೇಳಬಹುದು. ಇದರ ಕುರಿತು ಹೆಚ್ಚಿನ ಅಧ್ಯಯನ ನಡೆಸಲು ಪ್ರಯತ್ನಿಸಲಾಗುತ್ತಿದೆ.

೩.೩ ಶಾಸನಗಳ ಅಧ್ಯಯನ

ಕ್ರಿ.ಶ ೧೭೯೧ರಷ್ಟು ಹಿಂದೆಯೇ ಕನ್ನಡ ಶಾಸನಗಳ ಆಧ್ಯಯನ ಪ್ರಾಂಭವಾಯಿತು. ಏಷ್ಯಾಟಿಕ್ ರಿಸರ್ಚಸ್ ಪತ್ರಿಕೆಯಲ್ಲಿ *'A Royal Grant of Land in Karnataka'* ಎಂಬ ಲೇಖನ ಪ್ರಕಟವಾಯಿತು. ಸರ್ ವಿಲಿಯ್ಂ ಜೋನ್ಸ್‌ರು ಆಂಗ್ಲ ಭಾಷೆಗೆ ಅನುವಾದಿಸಿದ್ದರು. ಇದು ವಿಜಯನಗರದ ಅರಸರು ಕೊಟ್ಟ ದತ್ತಿಯೊಂದನ್ನು ಹೇಳುತ್ತದೆ. ಕ್ರಿ.ಶ. ೧೮೦೭ರಲ್ಲಿ ಮೇಕಂಜಿ ತಾನು ಸಂಗ್ರಹಿಸಿದ ಅನೇಕ ಶಾಸನಗಳನ್ನು ಏಷ್ಯಾಟಿಕ್ ಸೊಸೈಟಿಗೆ ಕಳುಹಿಸಿಕೊಟ್ಟನು. ಅದರಲ್ಲಿ ಎರಡು

ತಾಮ್ರಪಟ ಶಾಸನಗಳು ವಿಜಯನಗರ ಕಾಲದ ಕುರುಗೋಡಿಗೆ ಸಂಬಂಧಿಸಿದವು ಈ ಶಾಸನಗಳನ್ನು ಅದೇ ವರ್ಷ ಏಷ್ಯಾಟಿಕ್ ರಿಸರ್ಚ್ ಪತ್ರಿಕೆಯ ೯ನೆ ಸಂಪುಟದಲ್ಲಿ ಪ್ರಕಟವಾದವು.[೨೭]

ಅಲ್ಲಿಂದ ಈಚೆಗೆ ಕನ್ನಡ ಶಾಸನಗಳ ಒಂದು ಹಂತದ ಅಧ್ಯಯನ ಪ್ರಾರಂಭವಾಯಿತೆಂದೂ ಹೇಳಬಹುದು. ನಂತರದಲ್ಲಿ ಎಂ.ಚಿದಾನಂದಮೂರ್ತಿಯವರ ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ ಕನ್ನಡ ಶಾಸನ ಅಧ್ಯಯನಕಾರರಿಗೆ ಉತ್ತಮ ಮಾರ್ಗದರ್ಶಿ ಸಂಶೋಧನಾ ಗ್ರಂಥವಾಯಿತು. ಸಾಮಾನ್ಯವಾಗಿ ಶಾಸನಗಳಲ್ಲಿಮಂಗಳಕರವಾದ ಪದಗಳ ಉಪಯೋಗ, ಶ್ಲೋಕಗಳ ಬಳಕೆ, ಕಾಲ ನಿರ್ದೇಶನ, ರಾಜನು ಆಳುತಿದ್ದ ಪ್ರದೇಶದ ವರ್ಣನೆ, ರಾಜವಂಶದ ವರ್ಣನೆ, ಮಾಂಡಲಿಕ ಅಧಿಕಾರಿಯ ಹೆಸರು, ದಾನದತ್ತಿಯ ವಿಚಾರ, ಶಾಪಶಯರು, ಶಾಸನದ ಕವಿ ಕೊನೆಗೆ ರಾಜನ ಮುದ್ರೆಯನ್ನೊಳಗೊಂಡಂತೆ ಇತ್ಯಾದಿ ಅಂಶಗಳು ಕಂಡುಬರುತ್ತವೆ.

ಆದರೆ ಅವುಗಳನ್ನೇ ಆಧಾರವಾಗಿಟ್ಟುಕೊಂಡು ಅಧ್ಯಯನ ನಡೆಸುವುದು ಒಂದು ಬಗೆಯ ಸಾಹಸದ ಕೆಲಸವೇ ಸರಿ. ಸಾಲಗುಂದ ಪರಿಸರದಲ್ಲಿ ಕಂಡುಬರುವ ಈ ಮೇಲ್ಕಂಡ ಪ್ರಕಟಿತ, ಅಪ್ರಕಟಿತ ಶಾಸನಗಳಲ್ಲಿ ಉಲ್ಲೇಖವಾಗಿರುವ ವಿಷಯಗಳನ್ನು ಗಮನಿಸಿ ಈ ಪರಿಸರದ ಸಾಂಸ್ಕೃತಿಕ ಇತಿಹಾಸವನ್ನು ವಿವೇಚಿಸುವ ಪ್ರಯತ್ನ ಮಾಡಲಾಗಿದೆ.

ಪ್ರಾರ್ಥನಾ ಶ್ಲೋಕಗಳು

ಕ್ರಿ.ಶ. ೧೦೫೩ರ ರವುಡಕುಂದ ಶಾಸನದ ಆರಂಭದಲ್ಲಿ, 'ಸ್ವಸ್ತಿ ಶ್ರೀ ಜಯಶ್ಚಭ್ಯುದಯಶ್ಚ' ಎಂಬ ಪ್ರಾರ್ಥನಾ ಶ್ಲೋಕ ಉಲ್ಲೇಖವಾಗಿದೆ. ಕ್ರಿ.ಶ. ೧೯೭೭ರ ಮುಕ್ಕುಂದ ಶಾಸನದಲ್ಲಿ 'ಓಂ ಸ್ವಸ್ತಿ ನಮಸ್ತುಂಗ ಶಿರಶ್ಚುಂಬಿ ಚಂದ್ರ ಚಾಮರ ಚಾರವೇ ತ್ರೈಲೋಕ್ಯ ನಗರಾರಂಭ ಮೂಲ ಸ್ತಂಭಾಯ ಶಂಭವೇ' ಎಂದೂ ಉಲ್ಲೇಖಿಸಿದೆ. ಕ್ರಿ.ಶ. ೧೧೫೩ರ ಸಾಲಗುಂದೆ ಶಾಸನ ಪ್ರಾರಮಭದಲ್ಲಿ 'ನಮಸ್ತುಂಗ ಶಿರಶ್ಚುಂಬಿ ಚಂದ್ರ ಚಾಮರ ಚಾರವೇ ತ್ರೈಲೋಕ್ಯ ನಗರಾರಂಭ ಮೂಲ ಸ್ತಂಭಾಯ ಶಂಭವೇ' ಎಂದೂ ಉಲ್ಲೇಖವಾಗಿದೆ. ಕ್ರಿ.ಶ. ೧೫೨೮ರ ಸಾಲಗುಂದೆ ಶಾಸನದಲ್ಲಿ 'ಶುಭಮಸ್ತು ಸ್ವಸ್ತಿ ಶ್ರೀ ಜಯಾಭ್ಯುದಯ' ಎಂದೂ ಉಲ್ಲೇಖವಾಗಿದೆ.

ಕ್ರಿ.ಶ. ೧೫೮೫ರ ಮುಕ್ಕುಂದ ಶಾಸನ 'ನಮಸ್ತುಂಗ ಶಿರಶ್ಚುಂಬಿ ಚಂದ್ರ ಚಾಮರ ಚಾರವೇ ತ್ರೈಲೋಕ್ಯ ನಗರಾರಂಭ ಮೂಲ ಸ್ತಂಭಾಯ ಶಂಭವೇ' ಎಂದೂ ಪ್ರಾರ್ಥನ ಶ್ಲೋಕವನ್ನು ಉಲ್ಲೇಖಿಸುತ್ತದೆ. ಕ್ರಿ.ಶ. ೧೬೦೩ರ ಮುಕ್ಕುಂದ ಶಾಸನ 'ನಮಸ್ತುಂಗ ಶಿರಶ್ಚುಂಬಿ ಚಂದ್ರ ಚಾಮರ ಚಾರವೇ ತ್ರೈಲೋಕ್ಯ ನಗರಾರಂಭ ಮೂಲ ಸ್ತಂಭಾಯ ಶಂಭವೇ' ಎಂದೂ ಪ್ರಾರ್ಥನ ಶ್ಲೋಕವನ್ನು

ಉಲ್ಲೇಖಿಸಿದೆ.ಈ ಮೇಲ್ಕಂಡ ಶಾಸನೋಕ್ತ ಶ್ಲೋಕಗಳಿಂದ ಶಾಸನ ಹಾಕಿಸಿದವರ ಧರ್ಮ, ಪಂಥ, ಆರಾಧ್ಯ ದೈವ ಇತ್ಯಾದಿ ವಿಷಯಗಳನ್ನು ತಿಳಿಯಬಹುದು.

ಆಡಳಿತ ವಿಭಾಗಗಳು

ಆಡಳಿತದ ಅನುಕೂಲಕ್ಕಾಗಿ ರಾಜ್ಯವನ್ನು ಹಲವು ವಿಭಾಗಗಳಾಗಿ ವಿಂಗಡಿಸಿ ಆಡಳಿತ ನಡೆಸುತ್ತಿದ್ದರು. ಈ ವಿಭಾಗಗಳ ಆಡಳಿತ ನೋಡಿಕೊಳ್ಳಲು ಮೇಲ್ವಿಚಾರಕರಾಗಿ ಯುವರಾಜರು, ದಂಡನಾಯಕರು, ಸಾಮಂತರು ಹಾಗೂ ಕೆಲವೊಮ್ಮೆ ಚಿಕ್ಕ ಆಡಳಿತ ಘಟಕವಾಗಿದ್ದಲ್ಲಿ ರಾಣಿಯರನ್ನು ಸಹಃ ನೇಮಿಸುತ್ತಿದ್ದರು. ಈ ರೀತಿಯ ವ್ಯವಸ್ಥೆ ಹಾಗೂ ಆಡಳಿತ ವಿಭಾಗಗಳು ಸಾಲಗುಂದ ಪರಿಸರದ ಶಾಸನಗಳಲ್ಲಿ ಉಲ್ಲೇಖವಾಗಿವೆ.

ಎಡೆದೊರೆ ೨೦೦೦ ನಾಡಿನ ಉಲ್ಲೇಖವನ್ನು ಕ್ರಿ.ಶ. ೧೧೫೩ರ ಸಾಲಗುಂದ ಶಾಸನದಲ್ಲಿ ಕಾಣಬಹುದಾಗಿದ್ದು, ಎಡೆದೊರೆ ೨೦೦೦ವನ್ನು ನಾಚಣ ಎಂಬ ದಂಡನಾಯಕನು ಆಳುತ್ತಿದ್ದನು ಎಂದೂಹೇಳಿದೆ. ಕೆಳವಾಡಿ ೩೦೦ರ ಉಲ್ಲೇಖವನ್ನು ಕ್ರಿ.ಶ. ೧೫೫೬ರ ಮುಕ್ಕುಂದ ಶಾಸನದಲ್ಲಿ ಕಂಡುಬರುತ್ತದೆ. ನಿಟ್ಟರವೆ ೭೦ರ ಉಲ್ಲೇಖವನ್ನು ಕ್ರಿ.ಶ. ೧೦೬೩ರ ಸಾಲಗುಂದ ಶಾಸನ ಮತ್ತು ಕ್ರಿ.ಶ. ೧೦೬೬ ಮುಕ್ಕುಂದ ಶಾಸನಗಳಲ್ಲಿದೆ. ಸಾಲಗುಂದೆ ೭೦ರ ಉಲ್ಲೇಖ ಕ್ರಿ.ಶ. ೧೧೫೩ರ ಸಾಲಗುಂದ ಶಾಸನದಲ್ಲಿ ಕಾಣಸಿಗುತ್ತದೆ. ನಂತರ ರವುಡಕುಂದ ಸೀಮೆಯ ಉಲ್ಲೇಖ ಕ್ರಿ.ಶ. ೧೫೨೮ರ ಸಾಲಗುಂದ ಶಾಸನ, ಕ್ರಿ.ಶ ೧೫೫೬, ಕ್ರಿ.ಶ. ೧೫೮೫ ಮತ್ತು ಕ್ರಿ.ಶ. ೧೫೯೪ರ ಮುಕ್ಕುಂದ ಶಾಸನಗಳಲ್ಲಿ ಉಲ್ಲೇಖಗೊಂಡಿದೆ.

ರಾಜರು ಮತ್ತು ಅವರ ಬಿರುದುಗಳು

ಕಲ್ಯಾಣ ಚಾಲುಕ್ಯ ಮತ್ತು ವಿಜಯನಗರ ಕಾಲದ ಶಾಸನಗಳೇ ಹೆಚ್ಚಾಗಿ ಕಂಡುಬಂದಿರುವುದರಿಂದ ಈ ಎರಡು ಮನೆತನಗಳ ಕೆಲವು ಅರಸರ ಉಲ್ಲೇಖ ಮತ್ತು ಅವರ ಬಿರುದುಗಳ ಉಲ್ಲೇಖಗಳು ಈ ಪರಿಸರದ ಶಾಸನಗಳಲ್ಲಿ ಕಾಣಸಿಗುತ್ತವೆ. ಸಾಮಾನ್ಯವಾಗಿ ಕಲ್ಯಾಣ ಚಾಲುಕ್ಯರ ಕಾಲದ ಶಾಸನಗಳೇ ಹೆಚ್ಚಾಗಿ ಕಾಣಸಿಗುತ್ತವೆ. ಮಹಾರಾಜಾಧಿರಾಜ, ಮಹಾಮಾರ್ತಂಡ, ಇತ್ಯಾದಿ ಹಲವು ಗುಣ ವಿಶೇಷಣಗಳನ್ನು ಈ ಪರಿಸರದಲ್ಲಿರುವ ಸಾಲಗುಂದ, ಮುಕ್ಕುಂದ, ಜಾಲಿಹಾಳು ಇತ್ಯಾದಿ ಗ್ರಾಮಗಳ ಶಾಸನಗಳು ಬಣ್ಣಿಸುತ್ತವೆ.

ರಾಣಿಯರು

ಆಡಳಿತದಲ್ಲಿ ಸ್ತ್ರೀ ಸಹಭಾಗಿತ್ವ ಮೊದಲಿನಿಂದಲೂ ಕಂಡುಬಂದಂತೆ ತೋರಿದರು ಬೆಳಕಿಗೆ ತರುವ ಪ್ರಯತ್ನಗಳು ಇತ್ತೀಚೆಗೆಶಾಸನಗಳಲ್ಲಿ ಸ್ತ್ರೀ ಪ್ರತಿನಿಧಿಕರಣ ಎಂಬ ಶೀರ್ಷಿಕೆ ಅಡಿಯಲ್ಲಿ ಹಲವು ಅಧ್ಯಯನಗಳು ನಡೆಯುತ್ತಿರುವುದು ಪ್ರಶಂಸನೀಯ. ಸಾಲಗುಂದೆ ಪರಿಸರದಲ್ಲಿರುವ ಶಾಸನಗಳಲ್ಲಿ ಕಲ್ಯಾಣ ಚಾಲುಕ್ಯ ಮತ್ತು ಅವರಿಗೆ ಸಾಮಂತರಾಗಿದ್ದ ಸಾಲಗುಂದೆಯ ಸಿಂಧ ಮನೆತನದ ರಾಣಿಯರ ಉಲ್ಲೇಖಗಳಿವೆ.

ಅದರಂತೆ ವಿಜಯನಗರ ಸಾಮ್ರಾಜ್ಯದ ಅವಧಿಯಲ್ಲಿನ ಶಾಸನಗಳಲ್ಲಿಯೂ ಸಹಃ ಕೆಲವು ರಾಣಿಯರ ಉಲ್ಲೇಖಗಳಿರುವುದನ್ನು ಗಮನಿಸಬಹುದು. ತ್ರೈಳೋಕ್ಯಮಹಾದೇವಿ ಎಂಬ ಕಲ್ಯಾಣ ಚಾಲುಕ್ಯ ಮನೆತನದ ರಾಣಿಯ ಉಲ್ಲೇಖ ಕ್ರಿ.ಶ. ೧೦೬೬ರ ಮುಕ್ಕುಂದ ಶಾಸನದಲ್ಲಿ ಕಂಡುಬರುತ್ತದೆ. ಈಕೆ ತ್ರೈಳೋಕ್ಯಮಲ್ಲನ ಇನ್ನೊಬ್ಬ ಪತ್ನಿಯಾಗಿದ್ದು, ಮುಕ್ಕುಂದೆಯನ್ನು ತ್ರಿಭೋಗಾಭ್ಯಂತರದಿಂದ ಆಳುತಿದ್ದಳು. ಈ ಗ್ರಾಮದ ತುಂಗಭದ್ರಾ ನದಿ ತೀರದ ಕಪಾಳೇಶ್ವರ ದೇವರಿಗೆ ಭೂ ದಾನ ನೀಡಿದ್ದಾಳೆ. ಇವಳನ್ನು ಭೋಗಭಾಮಿನಿ, ದ್ವಿತೀಯ ಲಕ್ಷ್ಮೀಸಮಾನ, ಪ್ರತ್ಯಕ್ಷ, ಪಾರ್ವತಿ ಹಾಗೂ ಅಗ್ರಮಹಿಷಿ ಎಂದು ಈ ಶಾಸನ ಕರೆದಿದೆ.[೨೮]

ಸಾಲಗುಂದೆಯ ಸಿಂಧರ ರಾಣಿಯರಾದ, ಕಾವಬ್ಬರಸಿ, ಯಗಲದೇವಿ, ಮಹಾಜನರಾದ ಜಕ್ಕಣಾಂಬೆ ಮುಂತಾದವರ ಉಲ್ಲೇಖಗಳಿವೆ.

ಅಧಿಕಾರಿ ವರ್ಗ ಮತ್ತು ಸಾಮಂತರು

ಈ ಪರಿಸರದ ಶಾಸನಗಳಲ್ಲಿ ದಂಡನಾಯಕ, ಪ್ರಧಾನಮಂತ್ರಿ ಹಾಗೂ ಕೆಲವು ಸಾಮಂತ ಅಧಿಕಾರಿ ವರ್ಗದವರ ಉಲ್ಲೇಖಗಳಿವೆ. ಶಾಸನೋಕ್ತ ಅಧಿಕಾರಿ ವರ್ಗ ಮತ್ತು ಸಾಮಂತರನ್ನು ಈ ಕೆಳಗಿನಂತೆ ವಿವರಿಸಲಾಗಿದೆ.

ಕ್ರಸಂ.	ಅಧಿಕಾರಿ	ಹೆಸರು	ರಾಜ	ಮನೆತನ	ಉಲ್ಲೇಖ
೧	ದಂಡನಾಯಕ	ಮಾರ್ತಂಡಯ್ಯ	ಗೋನರಸ	ಸಿಂಧರು	ಕ್ರಿ.ಶ. ೧೦೪೯ರ ಮುಕ್ಕುಂದ ಶಾಸನ
೨	ಮಂಡಳೇಶ್ವರ	ಅಮ್ಮಣದೇವ	ತ್ರೈಳೋಕ್ಯಮಲ್ಲ	ಕಲ್ಯಾಣ ಚಾಲುಕ್ಯ	ಕ್ರಿ.ಶ. ೧೦೫೩ರ ರವುಡಕುಂದ ಶಾಸನ
೩ ೪	ಮಹಾಮಂಡಳೇಶ್ವರ ಸ್ಥಾನಿಕ	ಬಾಚರಸ ಪಂಡಿತದೇವ	ಆರನೆ ವಿಕ್ರಮಾದಿತ್ಯ	ಕಲ್ಯಾಣ ಚಾಲುಕ್ಯ	ಕ್ರಿ.ಶ ೧೦೯೭ರ ಮುಕ್ಕುಂದ ಶಾಸನ

೫	ಮಹಾಮಂಡಳೇಶ್ವರ	ಹೆರ್ಮಾಡಿದೇವ	ತ್ರಿಭುವನಮಲ್ಲ	ಕಲ್ಯಾಣ ಚಾಲುಕ್ಯ	ಕ್ರಿ.ಶ. ೧೧೦೬ರ ಜಾಲಿಹಾಳು ಶಾಸನ
೬ ೭	ಮಂಡಳೇಶ್ವರ ಪೆರ್ಗಡೆ	ಬಾಚರಸ ಬೆನಚಿಮಯ್ಯ	ಭೂಲೋಕಮಲ್ಲ	ಕಲ್ಯಾಣ ಚಾಲುಕ್ಯ	ಕ್ರಿ.ಶ. ೧೧೩೪ರ ಮುಕ್ಕುಂದ ಶಾಸನ
೮	ದಂಡನಾಯಕ	ನಾಚಣ	ಮಲ್ಲಿಕಾರ್ಜುನ	ಕಲ್ಯಾಣ ಚಾಲುಕ್ಯ	ಕ್ರಿ.ಶ. ೧೧೫೩ರ ಸಾಲಗುಂದ ಶಾಸನ
೯ ೧೦	ಸಂಧಿವಿಗ್ರಹಿ ದಂಡನಾಯಕ ಸೇನಭೋವ	ಉಲ್ಲೇಖವಿಲ್ಲ ಭಾವಣ್ಣಯ್ಯ	ಉಲ್ಲೇಖವಿಲ್ಲ	ಉಲ್ಲೇಖವಿಲ್ಲ	ಕ್ರಿ.ಶ. ೧೨ನೆ ಶತಮಾನದ ಲಿಪಿಯಲ್ಲಿರುವ ಮುಕ್ಕುಂದ ಶಾಸನ
೧೧	ಸೇನಭೋವ	ಸೋಮರಸ	ಉಲ್ಲೇಖವಿಲ್ಲ	ಉಲ್ಲೇಖವಿಲ್ಲ	ಕ್ರಿ.ಶ. ೧೫೨೩ರ ಸಿದ್ದಾಧಾಂಪುರ ಶಾಸನ
೧೨	ಸರದೇಶಾಯಿ	ಅಂಣ್ಣಪ್ಪೆಯ	ಉಲ್ಲೇಖವಿಲ್ಲ	ಉಲ್ಲೇಖವಿಲ್ಲ	ಕ್ರಿ.ಶ. ೧೮ನೆ ಶತಮಾನದ ಲಿಪಿಯಲ್ಲಿರುವ ಮುಕ್ಕುಂದ ಶಾಸನ

ಅಗ್ರಹಾರಗಳು

ಸಾಲಗುಂದ ಮತ್ತು ಮುಕ್ಕುಂದ ಈ ಪರಿಸರದಲ್ಲಿ ಕಂಡುಬರುವ ಎರಡು ಪ್ರಮುಖ ಶಾಸನೋಕ್ತ ಅಗ್ರಹಾರಗಳು. ಶಿಕ್ಷಣವು ಮಾನವನನ್ನು ಮಹಾಂತನನ್ನಾಗಿಸುತ್ತದೆ. ಶಿಕ್ಷಣ ಪಡೆಯದವನ ಬಾಳು ಹದ್ದಿಗಿಂತಲೂ ಕೀಳು ಎಂಬ ನಾಣ್ನುಡಿಯಿದೆ. ಭಾರತದಲ್ಲಿ ಪ್ರಾಚೀನ ಕಾಲದಿಂದಲೂ ಔಪಚಾರಿಕವಾಗಿ ಮತ್ತು ಅನೌಪಚಾರಿಕವಾಗಿ ಶಿಕ್ಷಣಕ್ಕೆ ಪ್ರಾಮುಖ್ಯತೆ ನೀಡಲಾಗುತ್ತದೆ. ಮಾನವನ ಸರ್ವಾಂಗೀಣ ಅಭಿವೃದ್ಧಿಗೆ ಶಿಕ್ಷಣವು ತಳಪಾಯವಾಗಿದೆ. ಪ್ರಾಚೀನ ಕಾಲದಲ್ಲಿ ದೇವಾಲಯಗಳು ಧಾರ್ಮಿಕ ಕೇಂದ್ರಗಳಷ್ಟೇ ಆಗಿರದೇ ಜ್ಞಾನವನ್ನು ಹರಡುವಂತಹ ಶೈಕ್ಷಣಿಕ ಕ್ಷೇತ್ರಗಳು ಆಗಿದ್ದವು. ಗುರುಕುಲಗಳು, ಘಟಿಕಸ್ಥಾನಗಳು ಸಹಃ ಶಿಕ್ಷಣ ಕೇಂದ್ರಗಳಾಗಿ ಕಾರ್ಯ ನಿರ್ವಹಿಸುತ್ತಿದ್ದನ್ನು ಕಾಣುಬಹುದಾಗಿದೆ.

ಇಂತಹ ಶಿಕ್ಷಣ ಕ್ಷೇತ್ರಗಳಿಗೆ, ರಾಜರು, ಜನ ಸಾಮಾನ್ಯರು, ಮಾಂಡಲಿಕರು ದಾನ ದತ್ತಿ ಬಿಡುವ ಪರಿಪಾಠವಿತ್ತು. ದತ್ತಿ ಬಿಡುವಾಗ ರಾಜರು ಕೆಲವೊಂದು ಊರುಗಳನ್ನು 'ಅಗ್ರಹಾರ' ಎಂದು ಪರಿವರ್ತಿಸಿ ಆ ಗ್ರಾಮದಿಂದ ಬಂದ ಆದಾಯವನ್ನೆಲ್ಲ ಧಾರ್ಮಿಕ ಮತ್ತು ಶೈಕ್ಷಣಿಕ ಚಟುವಟಿಕೆಗಳಿಗೆ ವಿನಿಯೋಗಿಸುವ ಪರಿಪಾಠವಿತ್ತು. ಸಾಮಾನ್ಯವಾಗಿ ಅಗ್ರಹಾರ ಎಂದರೆ, ಬ್ರಾಹ್ಮಣರಿಗೆ ದಾನವಾಗಿ

ನೀಡುತ್ತಿದ್ದ ಭೂಮಿ ಅಥವಾ ಹಳ್ಳಿಗಳನ್ನು ಅಗ್ರಹಾರವೆಂದು ಕರೆಯಲಾಗಿದೆ. ಅಗ್ರ ಎಂದರೆ ಶ್ರೇಷ್ಠ ಆಹಾರ ಎಂದರೆ ದೇಶ ಅಥವಾ ಸ್ಥಳ ಎಂದು ತಿಳಿಯಲಾಗಿದ್ದು, ಅಗ್ರಹಾರವೆಂದರೆ, ಶ್ರೇಷ್ಠರಿಗೆ ಕೊಟ್ಟಿರುವಂತಹ ಸ್ಥಳ ಅಥವಾ ಊರು ಎಂದರ್ಥ. ಬ್ರಾಹ್ಮಣರಿಗೆ ಊರುಗಳನ್ನು ದತ್ತಿ ಬಿಟ್ಟುಕೊಡುವ ಈ ಸಂಪ್ರದಾಯವು ಪ್ರಾಚೀನ ಕಾಲದಿಂದಲೂ ಬೆಳೆದುಕೊಂಡು ಬಂದ ಪದ್ಧತಿಯಾಗಿದೆ. ಅರಸರು, ಸಾಮಂತರು ಮತ್ತು ಮಹಾಮಂಡಳೇಶ್ವರರು. ಅಗ್ರಹಾರಗಳನ್ನು ನಿರ್ಮಿಸಿ ದಾನ ನೀಡುತ್ತಿದ್ದರು.ಒಂದು ಪ್ರದೇಶದ ಅಗ್ರಹಾರಗಳು ಆ ಪ್ರದೇಶದ ಸಂಪತ್ತನ್ನು ಹಾಗೂ ಅನುಕೂಲತೆಗಳನ್ನು ಸೂಚಿಸುತ್ತವೆ.[೨೯]

ಇದರ ಮೂಲ ಉದ್ದೇಶವೆಂದರೆ, ವಿದ್ಯೆ ಪ್ರಸಾರ; ಆಡಳಿತಕ್ಕೆ ಬೇಕಾಗುವ ಸೇವಕರು ಅಧಿಕಾರಿ ವರ್ಗದವರನ್ನು ಆಯ್ಕೆ ಮಾಡುವುದು; ಅವರಿಗೆ ಬೇಕಾದ ಆಡಳಿತ ಶಿಕ್ಷಣ ಕೊಡಿಸುವ ಸಲುವಾಗಿ ಹಾಗೂ ಬ್ರಾಹ್ಮಣರ ವಸತಿ ನೆಲೆಗೊಳಿಸುವುದಕ್ಕಾಗಿ ಅಗ್ರಹಾರಗಳನ್ನು ನಿರ್ಮಿಸಲಾಗುತ್ತಿತ್ತು. ಕೆಲವು ಸಂದರ್ಭಗಳಲ್ಲಿ ಮಂತ್ರಿಗಳು ಮತ್ತು ಪುರೋಹಿತರ ಕೋರಿಕೆಯ ಮೇರೆಗೆ ರಾಜರು ಅಗ್ರಹಾರಗಳನ್ನು ನಿರ್ಮಾಣ ಮಾಡುತ್ತಿದ್ದರು.[೩೦]

ಸಾಲಗುಂದ ಅಗ್ರಹಾರ

ಈ ಗ್ರಾಮದ ನೀಲಕಂಠೇಶ್ವರ ದೇವಾಲಯದಲ್ಲಿರುವ ಕ್ರಿ.ಶ. ೧೦೬೩ರ ಶಾಸನದಲ್ಲಿ ಇಡೀ ಭೂಮಂಡಲದಲ್ಲಿಯೇ ಎಡದೊರೆನಾಡು ಪ್ರಸಿದ್ಧಿಯಾಗಿದ್ದು, ಅದರಲ್ಲಿ ನಿಟ್ಟರವೆ ೭೦ರ ಅಗ್ರಹಾರವಾದ ಸಾಲಗುಂದೆಯು ಕೆರೆ, ಬಾವಿ, ತೋಟ, ಮೊದಲಾದವುಗಳಿಂದ ಶೋಭಿಸುವುದರೊಂದಿಗೆ, ಅಮರಾವತಿ ಪಟ್ಟಣಕ್ಕಿಂತಲೂ ಸುಂದರವಾಗಿತ್ತೆಂದು ಶಾಸನ ಬಣ್ಣಿಸುತ್ತದೆ. ಇಲ್ಲಿ ಉತ್ತಮರೆನಿಸಿದ ಮಹಾಜನರಿದ್ದು, ೩೨ ಗೇಣಗಳೆಯಿಂದ ೧೨ ಮತ್ತರು ನೆಲವನ್ನು ದತ್ತಿ ಪಡೆದವರಾಗಿದ್ದರು. ಇವರು ಧರ್ಮಪರರಾಗಿದ್ದರೆಂದು ತಿಳಿದುಬರುತ್ತದೆ.

ಕಾಲಕಾಲೇಶ್ವರ ದೇವಾಲಯದ ನವರಂಗದಲ್ಲಿರುವ ಕ್ರಿ.ಶ. ೧೧೫೩ ರ ಶಾಸನವು ಎಡದೊರೆಯಿಚ್ಛಾಸಿರ ನಾಡೊಳಗೆ ಸೋಭೆವತಿರ್ಪ ಭೂದೇವಕುಳೊತ್ತಮರಿಂದಂ ಕೇವಳವೆ ಸಾಲಗುಂದೆಯಪ್ಪತ್ತರೊಳು ಎಂದು ಹೇಳಿದೆ. ಅಂದರೆ ಆರಂಭದಲ್ಲಿ ನಿಟ್ಟರವೆ ನಾಡಿನ ಅಗ್ರಹಾರವಾಗಿದ್ದ ಸಾಲಗುಂದೆಯು ಕ್ರಿ.ಶ. ೧೧೫೩ರ ವೇಳೆಗೆ ಸ್ವತಂತ್ರ ವಿಭಾಗವಾಗಿ ರೂಪುಗೊಂಡಿತು.[೩೧]

ಮುಕ್ಕುಂದ ಅಗ್ರಹಾರ

ತುಂಗಭದ್ರಾ ನದಿ ತೀರದಲ್ಲಿರುವ ಈ ಗ್ರಾಮವನ್ನು ಕ್ರಿ.ಶ. ೧೫೫೬ರ ಕಾಲಮಾನದಲ್ಲಿ ವರದರಾಜಂಪುರವೆಂದು ಕರೆಯುತ್ತಿದ್ದರು. ಇದು ಹಿಂದೆ ನಿಟ್ಟರವೆ ೭೦ರ ಅಗ್ರಹಾರವಾಗಿದ್ದು, ಇದರ ಮಹಾಜನರ ಸಂಖ್ಯೆ ೩೦೦ ಆಗಿದೆ. ಯಾದಗಿರಿ ಜಿಲ್ಲೆ ಸುರಪುರ ತಾಲ್ಲೂಕು ಏವೂರು ಗ್ರಾಮದ ಕ್ರಿ.ಶ. ೧೧೭೭ರ ಶಾಸನವು ಹೀಗೆಂದಿದೆ.[೩೧]

ಕಂ॥ ಪೊಡವಿಗದೆ ತಾನೆಮುಖಮೆನಿ

ಪೆಡದೊರೆ ನಾಡಿಂಗೆ ತಿಳಕದನ್ದ ದಿನೊಪ್ಪಂ

ಬಡೆದಿರ್ಕ್ಕು ಮೆಸವ ಕಿರುದೊರೆದಡಿಯೊಳು

ಮುಕ್ಕುನ್ದೆಯೆಂಬ ವಿಪ್ರಗ್ರಾ ಮಂ

ಮುಕ್ಕುಂದ ಗ್ರಾಮವು ಪ್ರಸಿದ್ಧಿ ಪಡೆದಿತ್ತು. ಈ ಗ್ರಾಮದ ಸೋಮಲಿಂಗೇಶ್ವರ ದೇವಾಲಯದ ಕ್ರಿ.ಶ. ೧೦೮೮ರ ಶಾಸನವು ವೇದಾರ್ಥಶಾಸ್ತ್ರದಲ್ಲಿ ಪಂಡಿತರಾದ ಬ್ರಾಹ್ಮಣರ ಕುಶಲೋಪಚಾರಕ್ಕೆ ಭೂದಾನ ನೀಡಿದ ಉಲ್ಲೇಖವಿದೆ. ಇದೇ ದೇವಾಲಯದಲ್ಲಿ ಕ್ರಿ.ಶ. ೧೧೯೭ರ ಇನ್ನೊಂದು ಶಾಸನವು ಆರನೇ ವಿಕ್ರಮಾದಿತ್ಯನ ಮಹಾಮಂಡಳೇಶ್ವರ ಸಿಂಧಕುಲದ ಬಾಚರಸನು ಅಗ್ರಹಾರ ಮುಕ್ಕುಂದೆಯಲ್ಲಿ ಬಾಚೇಶ್ವರ ದೇವಾಲಯವನ್ನು ಕಟ್ಟಿಸಿ ಅದರ ರಂಗಭೋಗ ಜೀರ್ಣೋದ್ಧಾರ, ಮಠದ ತಪೋಧನರ ವಿದ್ಯಾಸತ್ರಕ್ಕೆ ಮಾಣಿಗಳಾಹಾರ, ಧಾನ್ಯಕ್ಕೆ, ವಸ್ತ್ರಕ್ಕೆ ಮರಯಿಟ್ಟಿಗೆಯಲು ತಮ್ಮ ಮನೆಯ ಸಾಮ್ಯದಲ್ಲಾದ ಸಿದ್ಧಯ ಅರವತ್ತೂರು ಮತ್ತರು ಭೂಮಿಯನ್ನು ದತ್ತಿಬಿಟ್ಟ ಪ್ರಸ್ತಾಪವಿದೆ.

ಕ್ರಿ.ಶ. ೧೦೬೬ರಲ್ಲಿ ಮುಕ್ಕುಂದ ಗ್ರಾಮವು ಸರ್ವನಮಸ್ಯದ ಅಗ್ರಹಾರವಾಗಿತ್ತು. ಈ ನಿಟ್ಟಿನಲ್ಲಿ ಈ ಊರಿನ ಪ್ರಮುಖ ಭಾಗಗಳಲ್ಲಿ ನಮಗೆ ಅನೇಕ ಶಾಸನಗಳು ಕಾಣಿಸಿಗುತ್ತವೆ. ಹಾಗೆಯೇ ಸಾಲಗುಂದ ಸಹಃ ಕ್ರಿ.ಶ. ೧೦೮೫ರಲ್ಲಿ ಸರ್ವನಮಸ್ಯದ ಅಗ್ರಹಾರವಾಗಿತ್ತು. ಸರ್ವನಮಸ್ಯದ ಅಗ್ರಹಾರವೆಂದರೆ, ಬ್ರಾಹ್ಮಣರು ರಾಜರಿಂದ ಅಗ್ರಹಾರಗಳನ್ನು ಪಡೆಯುತ್ತಿದ್ದರಷ್ಟೇ, ಅವರಿಗೆ ಎಲ್ಲಾ ರೀತಿಯ ತೆರಿಗೆ ಸುಂಕಗಳಿಂದ ಬಿಡುಗಡೆ ಸಿಕ್ಕುತ್ತಿತ್ತು. ಇತರರಿಗೆ ರಾಜರು ವಿಧಿಸುತ್ತಿದ್ದ ಕರಗಳನ್ನು ಅಗ್ರಹಾರದ ಬ್ರಾಹ್ಮಣರಿಗೆ ಹಾಕುತ್ತಿರಲಿಲ್ಲವೆನ್ನಬಹುದು. ಎಲ್ಲಾ ರೀತಿಯ ತೆರಿಗೆಗಳಿಂದ ಮುಕ್ತವಾದ ಅಗ್ರಹಾರಗಳನ್ನು ಸರ್ವನಮಸ್ಯದ ಅಥವಾ ಸರ್ವಮಾನ್ಯದ ಅಗ್ರಹಾರವೆಂದು ಕರೆಯುತ್ತಾರೆ.[೩೩]

ಸ್ಥಳನಾಮಗಳು

ಸಾಲಗುಂದೆ, ಮುಕ್ಕುಂದೆ, ರವುಡಕುಂದಿ, ಗೊಬ್ಬರಕಲ್ಲು ಇತ್ಯಾದಿ ಗ್ರಾಮನಾಮಗಳ ಉಲ್ಲೇಖಗಳುಕಾಣಸಿಗುತ್ತವೆ. ಈ ಗ್ರಾಮಗಳನ್ನು ಶಾಸನಗಳಲ್ಲಿ ಕ್ರಮವಾಗಿ ಸಾಲಿಗುಂದೆ, ಮುಕ್ಕುಂದಿ, ರವುಡುಕುಂದಿ, ಗೊಬ್ಬರಕಲ್ಲುಗಳು ಉಲ್ಲೇಖಗೊಂಡಿವೆ. ಹಾಗೂ ಕ್ರಿ.ಶ. ೧೦೬೩ರ ಸಾಲಗುಂದ ಶಾಸನದಲ್ಲಿ ಸಿಂಧನೂರಿನ ಉಲ್ಲೇಖ ಸಹಃ ಕಾಣಸಿಗುತ್ತದೆ.

ವೃತ್ತಿ ಸೂಚಕನಾಮಗಳು

ಕ್ರಿ.ಶ. ೧೫೫೬ರ ಮುಕ್ಕುಂದ ಶಾಸನದಲ್ಲಿ ಗೌಡ, ಸೇನುಬೋವ, ಗಣಚಾರಿ, ಶೆಟ್ಟಿ, ಪಟ್ಟಣಸ್ವಾಮಿ ಮತ್ತು ಬೋವುಗಳ ಉಲ್ಲೇಖಗಳಿವೆ. ಕ್ರಿ.ಶ. ೧೫೬೧ರ ಮುಕ್ಕುಂದ ಶಾಸನದಲ್ಲಿಮಹಾಜನಗಳು ಮತ್ತು ಸಮಯಿಗಳ ಉಲ್ಲೇಖವಿದ್ದು, ಇಲ್ಲಿರುವ ಆಶೇಷ ಮಹಾಜನಗಳು ಸಮಯಿಗಳಿಗೆ ಸಾಗುವಳಿಗಾಗಿ ವಾಮನಮುದ್ರೆ ಕಲ್ಲು ಹಾಕಿಸಿ ದಾನ ನೀಡಿದರು. ಮಹಾಜನರು, ಬ್ರಾಹ್ಮಣರ ಇತ್ಯಾದಿ, ವೃತ್ತಿ ಸೂಚಕನಾಮಗಳ ಉಲ್ಲೇಖಗಳಿವೆ.

ದಾನ ದತ್ತಿಯ ವಿಷಯ

ಶಾಸನಗಳನ್ನು ಹಾಕಿಸುತ್ತಿದ್ದರ ಮೂಲ ಉದ್ಧೇಶ ದಾನ ದತ್ತಿಯ ವಿಚಾರದ ಸಲುವಾಗಿಯೇ ಇರಬೇಕು. ಯಾಕೆಂದರೆ, ಈ ಪರಿಸರದಲ್ಲಿ ದೊರೆತ ಬಹುತೇಕ ಶಾಸನಗಳು ಈ ವಿಚಾರವನ್ನು ಪ್ರತಿಪಾದಿಸುತ್ತವೆ. ಅದರಲ್ಲೂ ಭೂ ದಾನದ ಉಲ್ಲೇಖಗಳು ಹೆಚ್ಚಾಗಿ ಕಾಣಸಿಗುತ್ತವೆ.

ಕೆರೆ ಕಾಲುವೆಗಳು

ಕ್ರಿ.ಶ. ೧೦೬೩ರ ಸಾಲಗುಂದ ಶಾಸನವು ನಾಗದೇವನೆಂಬ ಅಧಿಕಾರಿ ಸಾಲಗುಂದೆಯಲ್ಲಿ ಬಾವಿ, ಕೆರೆ, ಹೊಕ್ಕರಣಿಯನ್ನು ನಿರ್ಮಿಸಿದಂತೆ ತಿಳಿಸುತ್ತದೆ. ಜಕ್ಕಮ್ಮ ಗುಡಿಯ ಮುಂದೆ ಈಗಲೂ ಹೊಕ್ಕರಣಿಯನ್ನು ಕಾಣಬಹುದು. ಸ್ಥಳೀಯರು ಇದನ್ನು ಜಕ್ಕಮ್ಮ ಬಾವಿ ಎಂದೂ ಕರೆಯುತ್ತಾರೆ. ಕ್ರಿ.ಶ.೧೬೪೬ರ ಮುಕ್ಕುಂದ ಗ್ರಾಮದ ಶಾಸನ ಅಭೆಸಾಣೆ ಅಯ್ಯನ ಕಾರ್ಯಕರ್ತನಾದ ಜೊಂಮರಾಹತನೆಂಬುವವನು ಮುಕ್ಕುಂದಿಯ ಗವುಡ, ಸೇನಬೋವ ಮೊದಲಾದವರಿಗೆ ಕೆರೆಯನ್ನು ಕಟ್ಟಿಸಿದುದ್ದಕ್ಕೆ ದಸವಂದವಾಗಿ ಕಟುಮಾನ್ಯ ನೀಡುತ್ತಾನೆ ಎಂದೂ ಹೇಳಿದೆ. ಮುಂದುವರೆದು ಈ ಗೌಡ ಮತ್ತು ಸೇನಬೋವರು ಕಟ್ಟಿಸಿದ ಕೆರೆಗಳನ್ನು ತಿಳಿಸಿದ್ದು, ಈ ರೀತಿ ಹೆಸರಿಸಿದೆ,

ಗೌಡ ಸೇನಬೋವರು ಕಟ್ಟಿಸಿದ ಕೆರೆ, ಆಯಿತಿರೆಡಿ ಕಟ್ಟಿಸಿದ ಕೆರೆ, ಸೂಗುರು ಸಾಗಪ್ಪನ ಕೆರೆ, ಅಟುಲಪರುವತನ ಕೆರೆ, ಕೊಟೆಗಾರ ತಿಪರಂಗ ಮುಕ್ಕುಂದ ಉಪಾರ ಯಿಸೋರಯ್ಯನ ಕಾಲುವೆ ೧, ಅಂತು ೪ ಕೆರೆ, ೨ ಕುಂಟೆ ಮತ್ತು ಒಂದು ಕಾಲುವೆಯನ್ನು ಮಾಡಿಸಿದಂತೆ ತಿಳಿಸುತ್ತದೆ. ಜೊತೆಗೆ ಇದರಿಂದ ಬರುವ ಆದಾಯದಲ್ಲಿ ಕುಳಪಾಲು ಎರಡು ಮತ್ತು ರಾಜಪಾಲು ಒಂದರ ಲೆಕ್ಕದಲ್ಲಿ ಹಂಚಿಕೊಳ್ಳಬೇಕೆಂದು ಸಹಃ ತಿಳಿಸುತ್ತದೆ. ಕೆರೆ ಕಾಲುವೆಗಳನ್ನು ಕಟ್ಟಿಸಿ ಇವುಗಳನ್ನು ಉಪಯೋಗಿಸುವವರ ಮೇಲೆ ತೆರಿಗೆ ವಿಧಿಸಲಾಗುತಿತ್ತು ಎಂಬ ವಿಷಯ ಈ ಶಾಸನದಿಂದ ತಿಳಿದುಕೊಳ್ಳಬಹುದು.[೩೪]

ಅಳತೆ ಮಾಪನಗಳು

ಈ ಪರಿಸರದ ಶಾಸನಗಳಲ್ಲಿ ಭೂ ದಾನ ಕೊಟ್ಟ ಹಲವು ಉಲ್ಲೇಖಗಳಿವೆ. ದಾನ ಕೊಡಲು ನಿಗದಿಪಡಿಸಿದ ಸಾಧನದ ಮೂಲಕ ಭೂಮಿಯನ್ನು ಅಳೆದು ಕೊಡಲಾಗುತಿತ್ತು. ಅಳತೆ ಮಾಪನಗಳನ್ನು ಈ ಕೆಳಗಿನಂತೆ ಹೆಸರಿಸಬಹುದು.

ಕ್ರಸಂ.	ಅಳತೆ ಮಾಪನ	ಗ್ರಾಮ	ರಾಜ ಮನೆತನ	ಉಲ್ಲೇಖ
೧	ಮಂಡಲಗಾವನ ೪೦ ಗೇಣ ಗಳೆ	ಮುಕ್ಕುಂದ	ಉಲ್ಲೇಖವಿಲ್ಲ	ಕ್ರಿ.ಶ.೧೦೪೯ರ ಮುಕ್ಕುಂದ ಶಾಸನ
೨	ಮಂಡಲಗಾವನ ಗಳೆ	ರವುಡಕಂದ	ಕಲ್ಯಾಣ ಚಾಲುಕ್ಯ	ಕ್ರಿ.ಶ.೧೦೫೩ರ ರವುಡಕುಂದ ಶಾಸನ
೩	೩೨ ಗೇಣ ಗಳೆ	ಸಾಲಗುಂದ	ಕಲ್ಯಾಣ ಚಾಲುಕ್ಯ	ಕ್ರಿ.ಶ.೧೦೬೩ರ ಸಾಲಗುಂದ ಶಾಸನ
೪	ಸೆಟ್ಟಿಕಬ್ಬೆಯ ಗಡಿಂಬದ ಕೋಲು	ಮುಕ್ಕುಂದ	ಕಲ್ಯಾಣ ಚಾಲುಕ್ಯ	ಕ್ರಿ.ಶ.೧೦೬೬ರ ಮುಕ್ಕುಂದ ಶಾಸನ
೫ ೬	ಸಾಲಗುಂದೆಯ ಕರಿಯಮಗೆರಿಯ ಕೋಲು ಮಾಣಿಕೇಶ್ವರದ ೨೪ ಗೇಣ ಕೋಲು	ಸಾಲಗುಂದ	ಕಲ್ಯಾಣ ಚಾಲುಕ್ಯ	ಕ್ರಿ.ಶ.೧೦೯೭ರ ಮುಕ್ಕುಂದ ಶಾಸನ
೭	೩೬ ಗೇಣ ಗಳೆ	ಜಾಲಿಹಾಳು	ಕಲ್ಯಾಣ ಚಾಲುಕ್ಯ	ಕ್ರಿ.ಶ.೧೧೦೫ರ ಜಾಲಿಹಾಳು ಶಾಸನ
೮	ದೇವರ ಸತ್ರ, ಸೇನಕಬ್ಬೆಯ ಗಡಿಂಬದ ಕೋಲು	ಮುಕ್ಕುಂದ	ಉಲ್ಲೇಖವಿಲ್ಲ	ಕ್ರಿ.ಶ.೧೨ನೆ ಶತಮಾನದ ಲಿಪಿಯಲ್ಲಿರುವ ಮುಕ್ಕುಂದ ಶಾಸನ

ಶಾಸನ ಕವಿಗಳು

ಶಾಸನದ ಕೊನೆಯಲ್ಲಿ ಶಾಸನ ಕೆತ್ತಿದವರ ಹೆಸರು ಸಹಃ ಕೆಲವೊಂದು ಶಾಸನಗಳಲ್ಲಿದೆ. ಕ್ರಿ.ಶ. ೧೬೪೬ರ ಮುಕ್ಕುಂದ ಶಾಸನವು ಶಾಸನ ಕವಿಯನ್ನು ಹೆಸರಿಸಿದ್ದು, ಈ ಶಾಸನವನ್ನು ಕೆತ್ತಿದವನು ವೀರೋಜನ ಮಗ ಬೈರೋಜ ಎಂದು ಉಲ್ಲೇಖಿಸಿದೆ.[೩]

ಕೊನೆ ಟಿಪ್ಪಣಿಗಳು

೧. ಅಂಬಳಿಕೆ ಹಿರಿಯಣ್ಣ (ಸಂ), ೨೦೦೯, ಕನ್ನಡ ವಿಷಯ ವಿಶ್ವಕೋಶ ಇತಿಹಾಸ ಮತ್ತು ಪುರಾತತ್ವ, ಪು.೭೨೧.

೨. ಅದೇ, ಪು.೭೨೧.

೩. ಫ್ಲೀಟ್.ಜೆ.ಎಫ್ (ಮೂಲ), ಸಿ.ಪಿ.ಕೆ., (ಅನು), ೨೦೦೩, ಭಾರತೀಯ ಶಾಸನಶಾಸ್ತ್ರ ಪರಿಚಯ, ಪು.೩೯.

೪. ದೇವರಕೊಂಡರೆಡ್ಡಿ (ಸಂ), ೨೦೧೨, ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ: ೭ ರಾಯಚೂರು ಜಿಲ್ಲೆ, ಪು.೩೬೮.

೫. ಅದೇ, ಪು.೩೬೪-೬೫.

೬. ಅದೇ, ಪು.೩೪೪.

೭. ಅದೇ, ಪು.೩೪೯-೫೦.

೮. ಅದೇ, ಪು.೩೬೬.

೯. ಅದೇ, ಪು.೩೬೧-೬೨.

೧೦. ಅದೇ, ಪು.೩೫೮.

೧೧. ಅದೇ, ಪು.೩೮೦.

೧೨. ಅದೇ, ಪು.೩೫೩-೫೪.

೧೨. ಅದೇ, ಪು.೩೫೩-೫೪.

೧೩. ಅದೇ, ಪು.೩೫೬.

೧೪. ಅದೇ, ಪು.೩೪೬.

೧೫. ಅದೇ, ಪು.೩೭೮-೭೯.

೧೬. ಅದೇ, ಪು.೩೪೮.

೧೭. ಅದೇ, ಪು.೩೬೯-೭೦.

೧೮. ಅದೇ, ಪು.೩೭೧.

೧೯. ಅದೇ, ಪು.೩೬೬.

೨೦. ಅದೇ, ಪು.೩೬೭-೬೮.

೨೧. ಅದೇ, ಪು.೩೭೩-೭೪.

೨೨. ಅದೇ, ಪು.೩೭೫.

೨೩. ಅದೇ, ಪು.೩೭೨.

೨೪. ಅದೇ, ಪು.೩೭೩.

೨೫. ಅದೇ, ಪು.೩೬೯.

೨೬. ಅದೇ, ಪು.೩೭೮.

೨೭. ಸಿ.ಪಿ.ಕೆ., ೨೦೧೫, ಶಾಸನಶಾಸ್ತ್ರ ಪೀಠಿಕೆ, ಪು.೧೩.

೨೮. ದೇವರಕೊಂಡರೆಡ್ಡಿ (ಸಂ), ಪೂರ್ವೋಕ್ತ, ಪು.೩೭೬-೭೭.

೨೯. ಚನ್ನಬಸಪ್ಪ ಬಿ., ೨೦೧೦, ರಾಯಚೂರು ಜಿಲ್ಲೆಯ ಚರಿತ್ರೆ ಶಾಸನಗಳ ಹಿನ್ನೆಲೆಯಲ್ಲಿ, ಪು.೩೬೭.

೩೦. ಅದೇ, ಪು.೩೬೦.

೩೧. ಅದೇ, ಪು.೩೬೭.

೩೨. ಅದೇ, ಪು.೩೬೭-೬೮.

೩೩. ಅದೇ, ಪು.೩೬೮.

೩೪. ದೇವರಕೊಂಡರೆಡ್ಡಿ (ಸಂ), ಪೂರ್ವೋಕ್ತ, ಪು.೩೭೫.

೩೫. ಅದೇ, ಪು.೩೭೫.

೪. ವಾಸ್ತುಶಿಲ್ಪ ಮತ್ತು ಮೂರ್ತಿಶಿಲ್ಪ

೪. ವಾಸ್ತುಶಿಲ್ಪ ಮತ್ತು ಮೂರ್ತಿಶಿಲ್ಪ

ದೇವತಾ ಇಲ್ಲವೆ ಮಹಾತ್ಮರ ಸಂಕೇತ ಇಲ್ಲವೆ ಮೂರ್ತಿಗಳಿಗೋಸ್ಕರ ಮಾಡಿದ ಹಾಗೂ ಮನುಷ್ಯರು ವಾಸಿಸುವ ಸ್ಥಳ ಅಥವಾ ವಸತಿಯೇ ವಾಸ್ತು ಎನಿಸುತ್ತದೆ. ವಾಸ್ತು ಶಿಲ್ಪಕಲೆ ಅರವತ್ತನಾಲ್ಕು ಕಲೆಗಳಲ್ಲಿ ಒಂದು ಭಾಗವಾಗಿದೆ. ಮಾನವನ ಜೀವನಕ್ಕೆ ಅವಶ್ಯಕವಾದ ಮನೆ, ಕೆರೆ, ಸೇತುವೆ, ಕೋಟೆ, ದೇವಾಲಯ ಇತ್ಯಾದಿಗಳನ್ನು ವಾಸ್ತುಯೋಗ್ಯವಾದ ನಿವೇಶನದ ಮೇಲೆ ರಚಿಸಿದ ರಚನೆಗಳನ್ನು ವಾಸ್ತುರಚನೆ ಎಂದೂ ಕರೆಯಲಾಗುತ್ತದೆ.[೧] ವಾಸ್ತುಶಿಲ್ಪ ಮತ್ತು ಮೂರ್ತಿಶಿಲ್ಪ ಕಲೆಗಳು ಪ್ರಾಚೀನ ಕಾಲದಿಂದಲೂ ಕಲೆಯ ಅಭಿವ್ಯಕ್ತಿ ಸಾಧನಗಳಾಗಿವೆ.

೪.೧ ದೇವಾಲಯ

ಬೃಹತ್ ಶಿಲಾಯುಗ ಕಾಲದಲ್ಲಿ ಪೂರ್ವಜರನ್ನು ಗೌರವಿಸುವ ಉದ್ದೇಶದ ಸಲುವಾಗಿ ಬೃಹತ್ ಶಿಲಾ ಸಮಾಧಿಗಳನ್ನು ನಿರ್ಮಿಸಲಾಯಿತೆಂಬ ಪ್ರತೀತಿ. ಈ ಹಿನ್ನೆಲೆಯಲ್ಲಿ ಸಮಾಧಿ ಕಲ್ಪನೆ ಮುಂದೆ ದೇವಾಲಯ ನಿರ್ಮಾಣಕ್ಕೆ ಕಾರಣವಾಯಿತು ಎನ್ನುವ ಮಾತು ಒಂದಿದೆ. 'ದೇವಸ್ಯ ಆಲಯಂ ದೇವಾಲಯಂ' ದೇವಾಲಯವೆಂದರೆ ದೇವರ ವಾಸಸ್ಥಾನ ದೇವಾಲಯವನ್ನು 'ಆಯತನ' ವೆನ್ನುವುದೂಂಟು. ಆಯತನವೆಂದರೆ, ದೇವತಾ ಶಕ್ತಿಯು ಆಗಮಿಸುವ ಪವಿತ್ರ ಸ್ಥಳ. ಇದು ದೇವತೆಗಳಿಗೆ ವಿಶ್ರಾಂತಿ ಸ್ಥಳವೂ ಹೌದು. ದೇವಾಲಯವು ದೇವತೆಗಳಿಗೆ ವಾಸಸ್ಥಾನವಾದ್ದರಿಂದ ವಿಶೇಷವಾಗಿಯೂ ಹಾಗೂ ವೈಭವಯುತವಾಗಿರಬೇಕೆಂಬ ಕಾರಣದಿಂದ ಜನಸಾಮಾನ್ಯರ ವಸತಿಗಾಗಿ ನಿರ್ಮಾಣವಾಗುತ್ತಿದ್ದಂತಹ ಮನೆಗಳಿಗಿಂತ ವಿಭಿನ್ನವಾಗಿ ನಿರ್ಮಾಣವಾಗುತ್ತಿದ್ದವು.[೨]

ಗೃಹ್ಯಸೂತ್ರ, ಬೃಹತ್‌ಸಂಹಿತಾ, ಮತ್ಸ್ಯಪುರಾಣ ಮುಂತಾದ ಕೃತಿಗಳು ದೇವಾಲಯ ನಿರ್ಮಾಣದ ಬಗ್ಗೆ ಮಾರ್ಗದರ್ಶನ ಮಾಡುವ ಗ್ರಂಥಗಳು.[೩] ಪ್ರಾಚೀನ ಕಾಲದಿಂದಲೂ ಸಾಲಗುಂದೆ ಪರಿಸರವು ಒಂದು ಸಾಂಸ್ಕೃತಿಕ ನಾಡು ಮತ್ತು ಇತಿಹಾಸ ನೆಲೆಗಳ ಬೀಡು ಈ ಹಿನ್ನೆಲೆಯಲ್ಲಿ ಇಲ್ಲಿನ ಪರಿಸರ ಹಲವು ಸಮುದಾಯಗಳ ಒಂದು ಧಾರ್ಮಿಕ ಕೇಂದ್ರವಾಗಿತ್ತು.

ಇಲ್ಲಿ ಶೈವ, ವೈಷ್ಣವ ಹಾಗೂ ವೀರಶೈವ ಧರ್ಮಗಳು ನೆಲೆವೋರಿತ್ತೆಂಬುದಕ್ಕೆ ಇಲ್ಲಿರುವ ದೇವಾಲಯಗಳು ಮತ್ತು ಶಾಸನಗಳು ಸಾಕ್ಷಿಯಾಗಿವೆ. ಸಾಲಗುಂದ ಪರಿಸರದಲ್ಲಿ ಐತಿಹಾಸಿಕ ದೇವಾಲಯಗಳನ್ನು ಒಳಗೊಂಡಂತೆ ಇತ್ತೀಚಿನ ಆಧುನಿಕ ಶೈಲಿಯ ಹಲವು ದೇವಾಲಯಗಳನ್ನು ಕಾಣಬಹುದಾಗಿದೆ. ಪ್ರಸ್ತುತ ಅಧ್ಯಯನದ ದೃಷ್ಟಿಯಿಂದ ಶೈವ, ವೈಷ್ಣವ ಮತ್ತು ಇತರೆ ದೇವಾಲಯಗಳೆಂದೂ ಮೂರು ಪ್ರಕಾರಗಳಾಗಿ ವಿಂಗಡಿಸಿಕೊಳ್ಳಲಾಗಿದೆ.

ಶೈವ ದೇವಾಲಯಗಳು

ಹಿಂದೂ ಪುರಾಣ ಹಾಗೂ ಗ್ರಂಥಗಳ ಪ್ರಕಾರ ಶಿವನನ್ನು ಆರಾಧಿಸುವವರು ಶೈವರೆಂದೂ ಹಗೂ ಶಿವ ಮತ್ತು ಆತನ ಪರಿವಾರ ದೇವತೆಗಳು ಶೈವ ದೇವತೆಗಳೆನಿಸಿಕೊಳ್ಳುತ್ತವೆ. ದೇವಾಲಯಗಳ ಶೈಲಿಯನ್ನು ಗುರುತಿಸುವಂತೆ ಅದರ ಲಕ್ಷಣಗಳನ್ನು ಆಧಾರಿಸಿ ಯಾವ ಪಂಥಕ್ಕೆ ಸೇರಿದ್ದು ಎನ್ನುವುದನ್ನು ಸಹಃಗುರುತಿಸಲಾಗುತ್ತದೆ. ಉದಾಹರಣೆಗೆ ಶೈವ ದೇವಾಲಯವಾಗಿದ್ದರೆ, ಪ್ರವೇಶ ದ್ವಾರದಲ್ಲಿ ಶೈವ ದ್ವಾರಪಾಲಕರು ಕಂಡು ಬರುತ್ತಾರೆ, ಜೊತೆಗೆ ಲಲಾಟ ಬಿಂಬದಲ್ಲಿ ಗಣೇಶ, ನಂದಿ ಹಾಗೂ ಶಿವಲಿಂಗಕಂಡು ಬಂದರೆ, ಕೆಲವೊಂದು ಸಾರಿ ಗರ್ಭಗೃಹದಲ್ಲಿರುವ ಮೂರ್ತಿ ಲಲಾಟ ಬಿಂಬದಲ್ಲಿ ಕಂಡು ಬರುತ್ತದೆ.

ಆನೆ ಶಂಕರ ದೇವಾಲಯ

ಸಂಖ್ಯೆ	: ೦೧	ಶೈಲಿ	: ಕಲ್ಯಾಣ ಚಾಲುಕ್ಯ
ಸ್ಮಾರಕ	: ಆನೆ ಶಂಕರ ದೇವಾಲಯ	ಅಭಿಮುಖ	: ಉತ್ತರ
ಊರು	: ಸಾಲಗುಂದ	ಸ್ಥಿತಿ	: ಮಧ್ಯಮ
ಸ್ಥಳ	: ಊರ ಗುಡ್ಡದ ಮೇಲೆ	ಕಾಲ	: ಕ್ರಿ.ಶ. ೧೨-೧೩ನೆ ಶತಮಾನ
ಪ್ರಕಟಣೆ	: ಕ.ದೆ.ಕೋ.ರಾ.	ಸಂರಕ್ಷಣೆ	: ಆನೆಶಂಕರ ದೇವಸ್ಥಾನ ಟ್ರಸ್ಟ್(ರಿ)

ಗರ್ಭಗೃಹ, ತೆರೆದ ಅಂತರಾಳ ಮತ್ತು ತೆರೆದ ನವರಂಗಳು ಈ ದೇವಾಲಯಕ್ಕಿದೆ. ಗರ್ಭಗೃಹವು ಚೌಕಾಕಾರವಾಗಿದ್ದು, ಅದರಲ್ಲಿ ಲಿಂಗವಿದೆ. ಗರ್ಭಗೃಹದ ಬಾಗಿಲವಾಡವು ಗಿಡ್ಡವಾಗಿದ್ದು, ಸರಳವಾಗಿದೆ. ಅದರಲ್ಲಿ ಯಾವುದೇ ಅಲಂಕರಣೆಗಳಿಲ್ಲ. ಈ ದ್ವಾರದ ಶೈಲಿಯು ರಾಷ್ಟ್ರಕೂಟರ ಕಾಲದ ಬಾಗಿಲನ್ನು ಹೋಲುತ್ತದೆ. ತೆರೆದ ಅಂತರಾಳ ಭಾಗವು ನವರಂಗಕ್ಕೆ ತರೆದುಕೊಳ್ಳುತ್ತದೆ. ಗರ್ಭಗೃಹದ ಲಲಾಟದಲ್ಲಿ ಗಜಲಕ್ಷ್ಮೀಯ ಉಬ್ಬು ಶಿಲ್ಪವಿದೆ. ನವರಂಗದ ಮಧ್ಯದಲ್ಲಿ ನಾಲ್ಕು ಕಂಬಗಳಿದ್ದು, ಅವುಗಳ ಕೆಳಭಾಗದಲ್ಲಿ ವೇದಿಕೆಯಿದೆ.ದಕ್ಷಿಣ ಪ್ರವೇಶ ದ್ವಾರದ ಬಳಿ ಭಗ್ನ ನಂದಿಯನ್ನು ಇರಿಸಲಾಗಿದೆ. ನವರಂಗದ ಸುತ್ತ, ಒಳ ಪ್ರದಕ್ಷಿಣಾ ಪಥವಿರುವಂತೆ ತೋರುತ್ತದೆ.

ನವರಂಗದಲ್ಲಿ ಭುವನೇಶ್ವರಿಯಿದೆ. ಹಾಗೂ ಉತ್ತರ ಭಾಗದ ಭಿತ್ತಿಯಲ್ಲಿ ಕಕ್ಷಾಸನವನ್ನು ರಚಿಸಲಾಗಿದೆ. ನವರಂಗದ ದಕ್ಷಿಣ ಮತ್ತು ಪೂರ್ವ ಭಾಗಗಳಲ್ಲಿ ಪ್ರವೇಶ ದ್ವಾರಗಳನ್ನು ನಿರ್ಮಿಸಲಾಗಿದೆ. ನವರಂಗರದಲ್ಲಿ ಘನಾಕೃತಿಯ ಚೌಕಾಕಾರದ ಕಂಬಗಳಿವೆ. ಅವುಗಳಲ್ಲಿ ಯಾವುದೇ ಕೆತ್ತನೆಗಳಿಲ್ಲ. ದೇವಾಲಯಕ್ಕೆ ಅಧಿಷ್ಠಾನ ಮತ್ತು ಶಿಖರ ಭಾಗಗಳಿಲ್ಲ. ನವರಂಗದ ಪ್ರಸ್ತರ ಭಾಗದ ಮೇಲೆ ಗಾರೆಯಿಂದ ರಚಿಸಿದ ತೆನೆಗಳ ಅಲಂಕರಣೆಗಳಿವೆ. ಇದರಿಂದಾಗಿ ಸದರಿ ದೇವಾಲಯವು

ವಿಜಯನಗರ ಕಾಲಘಟ್ಟದ ನಿರ್ಮಿತಿಯೆಂದು ಊಹಿಸಬಹುದು.[೪] ಪ್ರಸ್ತುತ ಗರ್ಭಗೃಹದ ಉತ್ತರ ಭಾಗದ ಕಪೋತ ಹಾಗೂ ಭಿತ್ತಿಯು ನಾಶವಾಗಿದ್ದು ಕೆಳಗಡೆ ಬಿದ್ದಿದೆ. ದೇವಾಲಯಕ್ಕೆ ಸುಣ್ಣ ಬಳಿಯಲಾಗಿದೆ.

ಈಶ್ವರ ದೇವಾಲಯ

ಸಂಖ್ಯೆ	: ೦೨	ಶೈಲಿ	: ಕಲ್ಯಾಣ ಚಾಲುಕ್ಯ
ಸ್ಮಾರಕ	: ಈಶ್ವರ ದೇವಾಲಯ	ಅಭಿಮುಖ	: ಪೂರ್ವ
ಊರು	: ಉಪ್ಪಳ	ಸ್ಥಿತಿ	: ಕನಿಷ್ಠ
ಸ್ಥಳ	: ಹಾಳೂರಿನಲ್ಲಿ	ಕಾಲ	: ಕ್ರಿ.ಶ. ೧೨-೧೩ನೆ ಶತಮಾನ
ಪ್ರಕಟಣೆ	: ---	ಸಂರಕ್ಷಣೆ	:---

ಉಪ್ಪಳ ಗ್ರಾಮದ ಹಾಳೂರಿನಲ್ಲಿ ಪೂರ್ವಭಿಮುಖವಾಗಿ ಗರ್ಭಗೃಹದಲ್ಲಿ ಶಿವಲಿಂಗವಿರುವ ಕಲ್ಯಾಣ ಚಾಲುಕ್ಯ ಶೈಲಿಯ ಲಕ್ಷಣಗಳನ್ನು ಒಳಗೊಂಡ ರೀತಿಯಲ್ಲಿ ದೇವಾಲಯವೊಂದು ಕಾಣಸಿಗುತ್ತದೆ. ಪ್ರಸ್ತುತ ನೋಡಲು ಗರ್ಭಗೃಹವೊಂದು ಉಳಿದಿದ್ದು ಅದು ಬಿಳುವ ಸ್ಥಿತಿಯಲ್ಲಿದೆ. ಗರ್ಭಗೃಹದ ಷಟ್‌ಕೋನದಲ್ಲಿ ಅರಳಿದ ಕಮಲವಿದೆ. ಯಾವುದೇ ಶಿಖರ ಭಾಗ ಕಂಡುಬರುವುದಿಲ್ಲ. ಗರ್ಭಗೃಹ, ಅಂತರಾಳ ಮತ್ತು ನವರಂಗವನ್ನು ಒಳಗೊಂಡಂತೆ ಕಾಣುತ್ತದೆ. ಅಂತರಾಳಕ್ಕೆ ಹೊಂದಿಕೊಂಡಿರುವ ಹಾಗೇ ನವರಂಗದಲ್ಲಿ ವಿನಾಯಕನ ಎರಡು ಶಿಲ್ಪಗಳು ಕಾಣಸಿಗುತ್ತವೆ. ಒಂದು ದೃಷ್ಟಿ ಗಣಪತಿ ಮತ್ತೊಂದು ಪ್ರಮಾಣ ಬದ್ಧತೆಯಿಂದ ಕೆತ್ತಲಾಗಿರುವ ಶಿಲ್ಪ. ನವರಂಗದಲ್ಲಿ ಗರ್ಭಗೃಹಕ್ಕೆ ಎದುರಾಗಿ ನಂದಿ ವಿಗ್ರಹವಿದೆ. ಈ ದೇವಾಲಯದ ಸುತ್ತಲೂ ಶಿಥಿಲಾವ್ಯಸ್ಥೆಯಲ್ಲಿರುವ; ಈ ದೇವಾಲಯಕ್ಕೆ ಬಳಕೆಯಾಗಿರುವಂತೆ ಕಾಣುವ; ಹಲವು ಪ್ರಾಚೀನ ಅವಶೇಷಗಳು ಕಾಣಸಿಗುತ್ತವೆ.

ಈಶ್ವರ ದೇವಾಲಯ

ಸಂಖ್ಯೆ	: ೦೩	ಶೈಲಿ	: ಕಲ್ಯಾಣ ಚಾಲುಕ್ಯ
ಸ್ಮಾರಕ	: ಈಶ್ವರ ದೇವಾಲಯ	ಅಭಿಮುಖ	: ಪೂರ್ವ
ಊರು	: ದಢೇಸೂಗೂರು	ಸ್ಥಿತಿ	: ಹಾಳಾಗಿದೆ.
ಸ್ಥಳ	: ಹಾಳೂರಿನಲ್ಲಿ	ಕಾಲ	: ಕ್ರಿ.ಶ. ೧೨-೧೩ನೆ ಶತಮಾನ
ಪ್ರಕಟಣೆ	: ---	ಸಂರಕ್ಷಣೆ	: ---

ಸಾಲಗುಂದ ಗ್ರಾಮದ ಉತ್ತರಕ್ಕೆ ೮ ಕಿ.ಮೀ ದೂರದಲ್ಲಿ ತುಂಗಭದ್ರಾ ನದಿ ದಡದ ಮೇಲೆ ಸಿಗುವ ಊರು ದಢೇಸೂಗೂರು. ಈ ಗ್ರಾಮದ ಹಾಳೂರಿನಲ್ಲಿ ಹಲವು ಪ್ರಾಚ್ಯಾವಶೇಷಗಳು

ದೊರೆತಿವೆ. ಇಲ್ಲಿ ಕಲ್ಯಾಣ ಚಾಲುಕ್ಯ ಶೈಲಿಯ ಮೂರು ಶಿವಲಿಂಗಗಳು, ವಿನಾಯಕ, ಸುಬ್ರಹ್ಮಣ್ಯ, ನಂದಿ ಶಿಲ್ಪಗಳು, ದೇವಾಲಯಕ್ಕೆ ಬಳಸಿದಂತೆ ಕಾಣುವ ಕಲ್ಲಿನ ಕಂಬಗಳು ಹಾಗೂ ಭುವನೇಶ್ವರಿಯಲ್ಲಿ ಅಳವಡಿಸಿದಂತೆ ಕಾಣುವ ಬಂಡೆಯ ಮೇಲೆ ಅರಳಿದ ಕಮಲ ಕಂಡುಬಂದಿವೆ. ಪ್ರಸ್ತುತ ಇರುವ ಸ್ಥಿತಿಯನ್ನು ಗಮನಿಸಿದರೆ, ಗರ್ಭಗೃಹ, ಅಂತರಾಳ ಮತ್ತು ನವರಂಗವನ್ನು ಒಳಗೊಂಡಂತೆ ಈ ದೇವಾಲಯನ್ನು ನಿರ್ಮಿಸಲಾಗಿತ್ತೆಂದೂ ಹೇಳಬಹುದಾಗಿದೆ. ಕೆಲವು ಕಂಬಗಳಲ್ಲಿ ಕಕ್ಷಾಸನಗಳನ್ನು ಕೆತ್ತಲಾಗಿದೆ. ಕಂಬಗಳು ಚೌಕಕಾರವಾಗಿದ್ದು ಮಧ್ಯದಲ್ಲಿ ನೀಳವಾಗಿ ಮೂರು ಪಟ್ಟಿಕೆಗಳನ್ನು ಕೆತ್ತಲಾಗಿದೆ.

ಈಶ್ವರ (ಕಾಪಾಳೇಶ್ವರ) ದೇವಾಲಯ

ಸಂಖ್ಯೆ	: ೦೪	ಶೈಲಿ	: ವಿಜಯನಗರ
ಸ್ಮಾರಕ	: ಈಶ್ವರ ದೇವಾಲಯ	ಅಭಿಮುಖ	: ಪೂರ್ವ
ಊರು	: ಮುಕ್ಕುಂದ	ಸ್ಥಿತಿ	: ಕನಿಷ್ಠ.
ಸ್ಥಳ	: ಊರ ಹೊರಗೆ ಹಳ್ಳದ ಬಳಿ	ಕಾಲ	: ಕ್ರಿ.ಶ. ೧೪–೧೫ನೆ ಶತಮಾನ
ಪ್ರಕಟಣೆ	: ಕ.ದೇ.ಕೋ.ರಾ	ಸಂರಕ್ಷಣೆ	: ---

ಊರ ಹಳ್ಳದ ಬಳಿಗೆ ತೆರೆಳುವ ರಸ್ತೆಯಲ್ಲಿನ ಹೊಲದಲ್ಲಿ ಈಶ್ವರ (ಕಾಪಾಳೇಶ್ವರ) ದೇವಾಲಯವಿದೆ. ಇದರಲ್ಲಿ ಗರ್ಭಗೃಹ, ಅಂತರಾಳ ಮತ್ತು ತೆರೆದ ನವರಂಗ ಅಥವಾ ಸಭಾಮಂಟಪವಿದೆ. ಗರ್ಭಗೃಹವು ಚೌಕಾಕಾರವಾಗಿದೆ. ಅದರಲ್ಲಿ ಸರಳ ಬಾಗಿಲವಾಡವನ್ನು ಕಾಣಬಹುದು. ತೆರೆದ ಅಂತರಾಳದ ಮುಂಭಾಗದಲ್ಲಿ ತೆರೆದ ಸಭಾಮಂಟಪವಿದೆ. ಇದರಲ್ಲಿ ಹದಿನಾರು ಕಂಬಗಳಿದ್ದು, ಅವೆಲ್ಲವೂ ಘನಾಕೃತಿಯ ಚೌಕಾಕಾರ ರಚನೆಗಳಾಗಿವೆ. ಸಂಪೂರ್ಣ ದೇವಾಲಯವನ್ನು ಕಣಶಿಲೆಯಿಂದ ನಿರ್ಮಿಸಲಾಗಿದೆ. ದೇವಾಲಯಕ್ಕೆ ಅದಿಷ್ಠಾನವಿದೆ.

ಶಿಖರ ಭಾಗವು ಇಲ್ಲ. ದೇವಾಲಯದ ಅಧಿಷ್ಠಾನ, ಪ್ರಸ್ತರ, ಮುಂಚಾಚು ಮತ್ತು ಇತರ ವಾಸ್ತು ಭಾಗಗಳು ಸ್ಥಾನ ಪಲ್ಲಟಗೊಳ್ಳುತ್ತಿದ್ದು, ದೇವಾಲಯವು ಶಿಥಿಲದ ಅಂಚಿಗೆ ತಲುಪಿದೆ. ಗಿಡಗಂಟಿಗಳು ದೇವಾಲಯದ ಮೇಲ್ಭಾಗದಲ್ಲಿ ಬೆಳೆದಿವೆ. ಈ ದೇವಾಲಯವನ್ನು ಕಾಪಾಳೇಶ್ವರ ಗುಡಿ ಎಂದು ಸಹಃ ಕರೆಯಲಾಗುತ್ತದೆ.[೫]

ಕಾಲಕಾಲೇಶ್ವರ ದೇವಾಲಯ

ಸಂಖ್ಯೆ	: ೦೫	ಶೈಲಿ	: ಕಲ್ಯಾಣ ಚಾಲುಕ್ಯ
ಸ್ಮಾರಕ	: ಕಾಲಕಾಲೇಶ್ವರ ದೇವಾಲಯ	ಅಭಿಮುಖ	: ಉತ್ತರ
ಊರು	: ಸಾಲಗುಂದ	ಸ್ಥಿತಿ	: ಮಧ್ಯಮ

ಸ್ಥಳ : ಆಂಜನೇಯನ ಗುಡಿ ಹಿಂಭಾಗ ಕಾಲ : ಕ್ರಿ.ಶ. ೧೨–೧೩ನೆ ಶತಮಾನ

ಪ್ರಕಟಣೆ : ಕ.ದೇ.ಕೋ.ರಾ ಸಂರಕ್ಷಣೆ : ---

ಗರ್ಭಗೃಹ, ತೆರೆದ ಅಂತರಾಳ ಮತ್ತು ನವರಂಗಗಳು ಈ ದೇವಾಲಯದಲ್ಲಿವೆ. ಚೌಕಾಕಾರವಾಗಿರುವ ಗರ್ಭಗೃಹದಲ್ಲಿ ಲಿಂಗವಿದೆ. ಗರ್ಭಗೃಹದ ಬಾಗಿಲವಾಡದಲ್ಲಿ ಐದು ದ್ವಾರಶಾಖೆಗಳಿವೆ. ಶಾಖೆಯ ಕೆಳಭಾಗದಲ್ಲಿ ಶೈವ ದ್ವಾರಪಾಲಕರ ಉಬ್ಬುಶಿಲ್ಪಗಳಿವೆ. ಬಾಗಿಲವಾಡದ ಲಲಾಟದಲ್ಲಿ ಗಜಲಕ್ಷ್ಮಿಯ ಉಬ್ಬು ಶಿಲ್ಪವಿದೆ. ಗರ್ಭಗೃಹದ ಮುಂದಿರುವ ತೆರೆದ ಅರ್ಧಮಂಟಪವು ನವರಂಗಕ್ಕೆ ತೆರೆದುಕೊಳ್ಳುತ್ತದೆ. ಅಂತರಾಳದಲ್ಲಿ ನಂದಿಯ ಶಿಲ್ಪವಿದೆ. ನವರಂಗದ ಮಧ್ಯದಲ್ಲಿ ನಾಲ್ಕು ಕಂಬಗಳಿವೆ. ಅವುಗಳನ್ನು ವೇದಿಕೆಯ ಮೇಲೆ ನಿರ್ಮಿಸಲಾಗಿದೆ.

ಘನಾಕೃತಿಯ ಈ ಚೌಕಾಕಾರ ಕಂಬಗಳು ಕಲ್ಯಾಣ ಚಾಲುಕ್ಯ ಶೈಲಿಯಲ್ಲಿವೆ. ಕೆಲವೊಂದು ಕಂಬಗಳನ್ನು ಪೂರ್ಣವಾಗಿ ಕಂಡರಿಸಿಲ್ಲ. ಅಪೂರ್ಣವಾಗಿದ್ದಂತೆ ಕಾಣುತ್ತವೆ. ನವರಂಗದ ಉತ್ತರಾಭಿಮುಖ ಭಿತ್ತಿಯಲ್ಲಿ ಅಂತರಾಳ ಭಾಗದ ಇಕ್ಕೆಲಗಳಲ್ಲಿ ಎರಡು ದೇವಕೋಷ್ಠಗಳಿವೆ. ಅವುಗಳಲ್ಲಿ ಗಣಪತಿ ಮತ್ತು ವೀರಭದ್ರನ ಮೂರ್ತಿ ಶಿಲ್ಪಗಳನ್ನು ಇರಿಸಲಾಗಿದೆ. ಅಂತರಾಳದ ಮುಂಭಾಗದಲ್ಲಿ ಶಾಸನ ಶಿಲೆ ಇದೆ. ನವರಂಗದ ಪೂರ್ವ ಭಿತ್ತಿಯನ್ನು ನಿರ್ಮಿಸಿಲ್ಲ. ಇದು ತೆರೆದಿದೆ. ಇಲ್ಲಿ ಬಾಗಿಲನ್ನು ಅಳವಡಿಸಿಲ್ಲ. ನವರಂಗದ ಸೂರು ಸಮತಟ್ಟಾಗಿದೆ. ದೇವಾಲಯದಲ್ಲಿ ಪೂಜೆಗಳು ನಡೆಯುತ್ತಿವೆ. ದೇವಾಲಯದ ವಾಸ್ತು ಭಾಗಗಳಿಗೆ ಬಣ್ಣ ಹಚ್ಚಲಾಗಿದೆ.[೬]

ಜಕ್ಕಮ್ಮ ಗುಡಿ

ಸಂಖ್ಯೆ : ೦೬ ಶೈಲಿ : ಕಲ್ಯಾಣ ಚಾಲುಕ್ಯ

ಸ್ಮಾರಕ : ಜಕ್ಕಮ್ಮ ಗುಡಿ ಅಭಿಮುಖ : ಉತ್ತರ

ಊರು : ಸಾಲಗುಂದ ಸ್ಥಿತಿ : ಕನಿಷ್ಠ

ಸ್ಥಳ : ನೀಲಕಂಠಗುಡಿ ಪಕ್ಕದಲ್ಲಿ ಕಾಲ : ಕ್ರಿ.ಶ. ೧೦–೧೧ನೆ ಶತಮಾನ

ಪ್ರಕಟಣೆ : ಕ.ದೇ.ಕೋ.ರಾ ಸಂರಕ್ಷಣೆ : ---

ಅತ್ಯಂತ ಶಿಥಿಲಾವಸ್ಥೆಯಲ್ಲಿರುವ ಈ ದೇವಾಲಯದಲ್ಲಿ ಸಾಲಾಗಿ, ನಿಯಮಿತ ಅಂತರಗಳಲ್ಲಿ ಮೂರು ಗರ್ಭಗೃಹಗಳಿವೆ. ಒಂದು ಗರ್ಭಗೃಹಕ್ಕೆ ಅಂತರಾಳ ಭಾಗವಿದೆ. ಈ ಎಲ್ಲಾ ಗರ್ಭಗೃಹಗಳು ಚೌಕಾಕಾರ ರಚನೆಗಳಾಗಿವೆ. ಅಂತರಾಳ ಭಾಗವಿರುವ ಗರ್ಭಗೃಹದಲ್ಲಿ ಯಾವುದೇ ಮೂರ್ತಿ ಶಿಲ್ಪಗಳಿಲ್ಲ. ಮೂರು ಗರ್ಭಗೃಹಗಳ ರಚನೆಯ ಮುಂಭಾಗದಲ್ಲಿ ೧೨ ಕಂಬಗಳನ್ನು ಸಾಲಾಗಿ

ನಿಯಮಿತ ಅಂತರಗಳಲ್ಲಿ ನಿಲ್ಲಿಸಿ, ಆಯತಾಕಾರವಾಗಿರುವ ನೀಳ ಸಭಾಮಂಟಪವನ್ನು ನಿರ್ಮಿಸಲಾಗಿದೆ.

ಇಲ್ಲಿರುವ ಕಂಬಗಳು ಸರಳವಾಗಿದ್ದು, ಯಾವುದೇ ಅಲಂಕರಣೆಗಳನ್ನು ಹೊಂದಿಲ್ಲ. ಸಭಾಮಂಟಪದಲ್ಲಿ ಕ್ರಿ.ಶ. ೧೦೬೩ರ ಕಾಲದ ಉಲ್ಲೇಖವಿರುವ ಕಲ್ಯಾಣ ಚಾಲುಕ್ಯರ ಶಾಸನದ ಶಿಲೆ ಇದೆ. ದೇವಾಲಯದ ಗರ್ಭಗೃಹ ಮತ್ತು ಸಭಾಮಂಟಪದ ಕಲ್ಲುಗಳು ಸ್ಥಾನಪಲ್ಲಟವಾಗಿ ಶಿಥಿಲಾವಸ್ಥೆಯಲ್ಲಿವೆ.ಈಗುಡಿಯ ಮುಂದೆ ಬಾವಿ ಇದ್ದು ಅದನ್ನು ಸ್ಥಳೀಯರು ಜಕ್ಕಮ್ಮ ಬಾವಿ ಎಂದೂ ಕರೆಯುತ್ತಾರೆ.[೭]

ಜಕ್ಕಮ್ಮ ಬಾವಿ

ಸಂಖ್ಯೆ	: ೦೭	ಶೈಲಿ	: ಕಲ್ಯಾಣ ಚಾಲುಕ್ಯ
ಸ್ಮಾರಕ	: ಜಕ್ಕಮ್ಮ ಬಾವಿ	ಕಟ್ಟಿಸಿದವರು	: ನಾಗದೇವ
ಊರು	: ಸಾಲಗುಂದ	ಸ್ಥಿತಿ	: ಸಾಧಾರಣ
ಸ್ಥಳ	: ಜಕ್ಕಮ್ಮ ಗುಡಿಯ ಮುಂದೆ	ಕಾಲ	: ಕ್ರಿ.ಶ. ೧೦-೧೧ನೆ ಶತಮಾನ
ಪ್ರಕಟಣೆ	: ಕ.ದೇ.ಕೋ.ರಾ	ಸಂರಕ್ಷಣೆ	: ---

ಜಕ್ಕಮ್ಮ ಗುಡಿಯ ಮುಂಭಾಗ ವಿಶಾಲವಾದ ಆಯತಾಕಾರದ ಬಾವಿಯಿದೆ. ಈ ಬಾವಿಗೆ ಸ್ಥಳೀಯರು ಜಕ್ಕಮ್ಮ ಬಾವಿ ಎಂದು ಕರೆಯುತ್ತಾರೆ. ಸುಮಾರು ೭೦ ಅಡಿ ಉದ್ದ ೬೦ ಅಡಿ ಅಗಲವಿದ್ದು ಯಾವಗಲೂ ನೀರಿನಿಂದ ಆವೃತವಾಗಿರುತ್ತದೆ. ಪೂರ್ವ ಮತ್ತು ಪಶ್ಚಿಮಕ್ಕೆ ಇಳಿಯಲು ಮೆಟ್ಟಿಲುಗಳನ್ನು ನಿರ್ಮಿಸಲಾಗಿದೆ. ನೋಡಲು ಮೇಲೆ ಆಯತಾಕಾರವಾಗಿ ಕಂಡರೂ ಕೆಳಗಡೆ ಆಳಕ್ಕೆ ಹೋದಂತೆಲ್ಲಾ ಉದ್ದ ಮತ್ತು ಅಗಲಗಳಲ್ಲಿ ವ್ಯತ್ಯಾಸ ಕಂಡು ಬರುತ್ತದೆ.

ಈ ಬಾವಿಯು ಪಶ್ಚಿಮಕ್ಕೆ ಇದಕ್ಕೆ ಹೊಂದಿಕೊಂಡಂತೆ ಕಾಣುವ ಜಕ್ಕಮ್ಮನ ಗುಡಿಯ ಸಭಾಮಂಟಪದಲ್ಲಿ ಶಕವರ್ಷ ೯೮೫, ರಕ್ತಾಕ್ಷಿ ಉತ್ತರಾಯಣ ಸಂಕ್ರಾಂತಿಯ ಉಲ್ಲೇಖವಿದ್ದು ಕ್ರಿ.ಶ. ೧೦೬೩ಕ್ಕೆ ಸರಿಹೊಂದುವ ಶಾಸನವಿದೆ. ಅದರಲ್ಲಿ ನಾಗದೇವ ಸಾಲಗುಂದೆಯಲ್ಲಿ ಬಾವಿ, ಕೆರೆ, ಹೊಕ್ಕರಣಿ, ದೇವತಾ ಮಂದಿರಗಳನ್ನು ಕಟ್ಟಿಸುತ್ತಾನೆ ಎಂದೂ ಉಲ್ಲೇಖವಿದೆ.[೮] ಹಾಗಾಗಿ ಬಹುಶಃ ಇದನ್ನು ನಾಗದೇವ ತನ್ನ ತಾಯಿಯಾದ ಜಕ್ಕಣಾಂಬೆ ಹೆಸರಲ್ಲಿ ದೇವಾಲಯ ಮತ್ತು ಬಾವಿಯನ್ನು ಕಟ್ಟಿಸಿರಬಹುದೆಂದೂ ತೋರುತ್ತದೆ. ನಂತರ ಜನರ ಆಡುಮಾತಿನಲ್ಲಿ ಜಕ್ಕಣಾಂಬೆ ಜಕ್ಕಮ್ಮವಾಗಿದ್ದಿರಬಹುದು.

ಭೈರವ ದೇವಾಲಯ

ಸಂಖ್ಯೆ : ೦೮	ಶೈಲಿ : ಕಲ್ಯಾಣ ಚಾಲುಕ್ಯ
ಸ್ಮಾರಕ : ಭೈರವ ದೇವಾಲಯ	ಅಭಿಮುಖ : ದಕ್ಷಿಣ
ಊರು : ಉಪ್ಪಳ	ಸ್ಥಿತಿ : ಕನಿಷ್ಠ
ಸ್ಥಳ : ಹಾಳೂರಿನ ತುಂಗಭದ್ರಾ ನದಿದಡದಲ್ಲಿ	ಕಾಲ : ಕ್ರಿ.ಶ. ೧೨-೧೩ನೆ ಶತಮಾನ
ಪ್ರಕಟಣೆ : ---	ಸಂರಕ್ಷಣೆ : ---

ತುಂಗಭದ್ರಾ ನದಿ ದಂಡೆಯ ಮೇಲೆ ಕಾಣಸಿಗುವ ಗ್ರಾಮದ ಹಾಳೂರು ಮತ್ತು ಸ್ಮಶಾನದ ಮತ್ತೊಂದು ಭಾಗದಲ್ಲಿ ಭೈರವ ದೇವಾಲಯ ಕಂಡುಬರುತ್ತದೆ. ಪ್ರಸ್ತುತ ಇದು ನಶಿಸುವ ಸ್ಥಿತಿಯಲ್ಲಿದೆ. ಗರ್ಭಗೃಹ ಮತ್ತು ಅಂತರಾಳ ಭಾಗಗಳು ಮಾತ್ರ ಸ್ಪಷ್ಟವಾಗಿ ಕಂಡರು ಮೇಲೆ ಹಾಸಿದ ಬಂಡೆಗಳು ಕುಸಿಯುವ ಹಂತದಲ್ಲಿವೆ. ನವರಂಗ ಆಥವಾ ಸಭಾಮಂಟಪದ ರೀತಿಯಲ್ಲಿ ಅದರ ಮುಂದಿನ ಭಾಗ ಕಂಡುಬರುತ್ತದೆ. ಅಂತರಾಳ ಪ್ರವೇಶಿಸುವ ಮುನ್ನ ಜಯ ವಿಜಯರ ಮೂರ್ತಿಶಿಲ್ಪಗಳಿವೆ. ಸುತ್ತಲೂ ಈ ದೇವಾಲಯಕ್ಕೆ ಬಳಕೆಯಾಗಿರುವಂತೆ ಕಾಣುವ ಹಲವು ಪ್ರಾಚೀನ ಅವಶೇಷಗಳು ಕಾಣಸಿಗುತ್ತವೆ.

ವೃಶ್ಚಿಕ ಪೀಠದ ಮೇಲೆ ಎತ್ತರವಾದ ಪಾದುಕೆಗಳನ್ನು ಅಂದರೆ ಪಾದಜಾಲಕವನ್ನು ಧರಿಸಿ ಬೈರವ ನಿಂತಿದ್ದಾನೆ. ನಾಲ್ಕು ಕೈಗಳಿದ್ದು ಹಿಂದುಗಡೆಯ ಬಲಗೈಯಲ್ಲಿ ತ್ರಿಶೂಲ, ಎಡಗೈಯಲ್ಲಿ ಢಮರುಗ, ಮುಂಬದಿಯ ಬಲಗೈಯಲ್ಲಿ ಖಡ್ಗ, ಎಡಗೈಯನ್ನು ವರದಹಸ್ತದ ರೀತಿಯಲ್ಲಿ ಚಾಚಿದ್ದರು ಅದರಲ್ಲಿ ರುಂಡ ಹಿಡಿದುಕೊಂಡಂತೆ ಅದನ್ನು ನಾಯಿ ತನ್ನ ಬಾಯಿಯಲ್ಲಿ ಹಿಡಿದುಕೊಳ್ಳಲು ಪ್ರಯತ್ನಿಸುತ್ತಿರುವಂತೆ ಚಿತ್ರಿಸಲಾಗಿದೆ. ಶಿಲ್ಪದ ಹಿಂದುಗಡೆ ಪೂರ್ಣಕುಂಭದ ರೀತಿಯಲ್ಲಿ ಹೂವು ಬಳ್ಳಿಯನ್ನು ಕೆತ್ತಲಾಗಿದ್ದು, ಅದರ ಕೊನೆಗೆ ತಲೆಯ ಹಿಂದೆ ಕೀರ್ತಿಮುಖದ ರಚನೆ ಕಾಣಬರುತ್ತದೆ. ಕೇಶವನ್ನು ದಪ್ಪವಾಗಿ ಚಿತ್ರಿಸಲಾಗಿ ಹಿಂಬದಿಯಲ್ಲಿ ಬಿಟ್ಟಂತೆ ಅಂದರೆ ಜಟಾಭಾರವನ್ನು ಕಾಣಬಹುದು. ಕೈ ಮತ್ತು ಕಾಲುಗಳಲ್ಲಿ ಕಡಗವನ್ನು ಧರಿಸಲಾಗಿದೆ. ಈ ಮೂರ್ತಿಶಿಲ್ಪಕ್ಕೆ ಸ್ಥಳೀಯರು ಬೆತ್ತಲು ಬರಿಯಪ್ಪ ಎಂದೂ ಕರೆಯುತ್ತಾರೆ.

ನೀಲಕಂಠೇಶ್ವರ ದೇವಾಲಯ

ಸಂಖ್ಯೆ : ೦೯	ಶೈಲಿ : ಕಲ್ಯಾಣ ಚಾಲುಕ್ಯ
ಸ್ಮಾರಕ : ನೀಲಕಂಠೇಶ್ವರ ದೇವಾಲಯ	ಅಭಿಮುಖ : ಪೂರ್ವ
ಊರು : ಸಾಲಗುಂದ	ಸ್ಥಿತಿ : ಕನಿಷ್ಠ
ಸ್ಥಳ : ಊರ ಮಧ್ಯೆ	ಕಾಲ : ಕ್ರಿ.ಶ. ೧೧-೧೨ನೆ ಶತಮಾನ

ಪ್ರಕಟಣೆ : ಕ.ದೇ.ಕೋ.ರಾ   ಸಂರಕ್ಷಣೆ : ---

ಗರ್ಭಗೃಹ, ಅಂತರಾಳ ಮತ್ತು ತೆರೆದ ನವರಂಗ ಭಾಗಗಳನ್ನು ಈ ದೇವಾಲಯವು ಹೊಂದಿದೆ. ಚೌಕಾಕಾರದ ಗರ್ಭಗೃಹದಲ್ಲಿ ಲಿಂಗವಿದೆ. ಗರ್ಭಗೃಹದ ಬಾಗಿಲವಾಡವು ಸರಳವಾಗಿದ್ದು, ಯಾವುದೇ ಅಲಂಕರಣೆಗಳಿಲ್ಲ. ಗರ್ಭಗೃಹದ ಮುಂದೆ ತೆರೆದ ಅಂತರಾಳ ಕಂಡುಬರುತ್ತದೆ. ಅದರ ಮುಂಭಾಗದಲ್ಲಿ ನವರಂಗವಿದೆ. ಅಂತರಾಳದ ಮುಂದೆ ನವರಂಗ ಭಾಗದಲ್ಲಿ ನಂದಿಯ ಶಿಲ್ಪವನ್ನು ಇರಿಸಲಾಗಿದೆ. ನವರಂಗದ ಭಿತ್ತಿಯ ಭಾಗಗಳು ಉರುಟುಕಲ್ಲುಗಳಿಂದ ರಚನೆಯಿಂದಾಗಿದೆ.

ಇಲ್ಲಿ ಇದ್ದರಿಬಹುದಾದ ಉತ್ತರ ದಿಕ್ಕಿನ ನವರಂಗದ ಭಿತ್ತಿಯು ಬಿದ್ದು ನಾಶಗೊಂಡಾಗ ಆ ಸ್ಥಳದಲ್ಲಿ ಜನರು ಕಲ್ಲುಗಳನ್ನು ಸೇರಿಸುವ ಮೂಲಕ ಗೋಡೆಯನ್ನು ರಚಿಸಿರುವರು. ನವರಂಗದ ಮಧ್ಯದಲ್ಲಿ ವೇದಿಕೆಯ ಭಾಗ ಮತ್ತು ಅದರ ಸುತ್ತ ನಾಲ್ಕು ಕಂಬಗಳಿವೆ. ಈ ಕಂಬಗಳು ಸರಳವಾಗಿದ್ದು, ಯಾವುದೇ ಅಲಂಕರಣೆಗಳನ್ನು ಹೊಂದಿಲ್ಲ. ಈ ನಾಲ್ಕು ಕಂಬಗಳ ಮುಂಭಾಗದಲ್ಲಿ ಎರಡು ದುಂಡಿಗನ, ಸರಳ ಅಲಂಕರಣೆರಹಿತ ಕಂಬಗಳಿವೆ.

ನವರಂಗದ ಭಿತ್ತಿಗೆ ಆನಿಸಿದಂತೆ ನಾಗರಕಲ್ಲು ಇರಿಸಲಾಗಿದೆ. ಸ್ಥಳೀಯರು ಏಳುಹೆಡೆ ಸರ್ಪ ಇಲ್ಲಿ ಕಾವಲು ಇದೆ ಎಂದೂ ನಂಬಿದ್ದಾರೆ. ನೀಲಕಂಠೇಶ್ವರ ಗುಡಿಯ ಮುಂಭಾಗದಲ್ಲಿ ಜಕ್ಕಮ್ಮ ಬಾವಿ/ಪುಷ್ಕರಣಿ ಇದೆ. ದೇವಾಲಯದ ಶಿಖರ ಮತ್ತು ಅಧಿಷ್ಠಾನ ಭಾಗಗಳು ಈಗ ಕಂಡುಬರುವುದಿಲ್ಲ. ದೇವಾಲಯವು ಶಿಥಿಲಾವಸ್ಥೆಯಲ್ಲಿದ್ದು, ಊರ ಜನರು ಇದನ್ನು ತಮ್ಮ ಹುಲ್ಲುಬಣವೆ ಹಾಕಲು ಹಾಗೂ ಕುರುಳು ತಟ್ಟಲು ಬಳಸಿಕೊಳ್ಳುತ್ತಿದ್ದಾರೆ.

ಸೋಮಲಿಂಗೇಶ್ವರ ದೇವಾಲಯ

ಸಂಖ್ಯೆ	: ೧೦	ಶೈಲಿ	: ಕಲ್ಯಾಣ ಚಾಲುಕ್ಯ
ಸ್ಮಾರಕ	: ಸೋಮಲಿಂಗೇಶ್ವರ ದೇವಾಲಯ	ಅಭಿಮುಖ	: ಪೂರ್ವ
ಊರು	: ಮುಕ್ಕುಂದ	ಸ್ಥಿತಿ	: ಮಧ್ಯಮ
ಸ್ಥಳ	: ಊರ ಮಧ್ಯೆ	ಕಾಲ	: ಕ್ರಿ.ಶ. ೧೨–೧೩ನೆ ಶತಮಾನ
ಪ್ರಕಟಣೆ	: ಕ.ದೇ.ಕೋ.ರಾ	ಸಂರಕ್ಷಣೆ	: ---

ಎತ್ತರ ಹಾಗೂ ವಿಸ್ತಾರ ತಳವಿನ್ಯಾಸವನ್ನು ಒಳಗೊಂಡಿರುವ ಈ ದೇವಾಲಯವು ಗರ್ಭಗೃಹ, ಅಂತರಾಳ ಮತ್ತು ನವರಂಗಗಳನ್ನು ಹೊಂದಿದೆ. ಗುಡಿಯು ಎತ್ತರ ಮತ್ತು ವಿಸ್ತಾರ ಚೌಕಾಕಾರ ಗರ್ಭಗೃಹವನ್ನು ಹೊಂದಿದ್ದು, ಅದರಲ್ಲಿ ಲಿಂಗವಿದೆ. ಅದನ್ನು ಸೋಮಲಿಂಗೇಶ್ವರನೆಂದು

ಕರೆಯಲಾಗುತ್ತದೆ.[೯] ಗರ್ಭಗೃಹದ ಬಾಗಿಲವಾಡವು ಸರಳವಾಗಿದ್ದು, ಅದರಲ್ಲಿ ದ್ವಾರ ಶಾಖೆಗಳನ್ನು ಕಾಣಬಹುದು. ಲಲಾಟ ಭಾಗದಲ್ಲಿ ಗಜಲಕ್ಷ್ಮೀಯ ಉಬ್ಬು ಶಿಲ್ಪವಿದೆ.

ಗರ್ಭಗೃಹದ ಮುಂಭಾಗದಲ್ಲಿ ತೆರೆದ ಅರ್ಧಮಂಟಪವಿದೆ. ಅದರಲ್ಲಿ ನಂದಿಯ ಶಿಲ್ಪವನ್ನು ಇರಿಸಲಾಗಿದೆ. ಅರ್ಧಮಂಟಪದ ಪೂರ್ವ ಭಿತ್ತಿಯ ಭಾಗದಲ್ಲಿ ಎರಡು ಕಂಬಗಳಿವೆ. ಇದರ ಮುಂಭಾಗದಲ್ಲಿ ಆಯತಾಕಾರವಾಗಿರುವ ಸಭಾಮಂಟಪವಿದೆ. ಇದು ನವರಂಗ ಭಾಗವಾಗಿದ್ದು, ಅದರಲ್ಲಿ ಕೆಲವು ಕಂಬಗಳನ್ನು ಇರಿಸಿದ ಫಲವಾಗಿ ಆಯತಾಕಾರವಾಗಿ ಮಾರ್ಪಾಡಾಗಿದೆ. ಸಭಾಮಂಟಪದ ಮಧ್ಯೆ ಭಾಗದಲ್ಲಿ ವೇದಿಕೆಯಿದ್ದು, ಅದರ ಸುತ್ತ ನಾಲ್ಕು ಕಂಬಗಳಿವೆ. ನವರಂಗದ ಉತ್ತರ ಭಾಗದ ಭಿತ್ತಿಯಲ್ಲಿ ದೇವಕೋಷ್ಠವಿದೆ. ಅದರ ಪಕ್ಕದಲ್ಲಿ ಗಣಪತಿ ಶಿಲ್ಪವನ್ನು ಇಡಲಾಗಿದೆ. ಪೂರ್ವ ಭಿತ್ತಿಗೆ ಆನಿಸಿದಂತೆ ಶಾಸನದ ಶಿಲೆಯನ್ನು ಇಡಲಾಗಿದೆ.

ಈ ಸಭಾಮಂಟಪವು ಸಹ ತೆರೆದ ಮಂಟಪದ ರಚನೆಯಾಗಿದೆ. ನವರಂಗದಲ್ಲಿ ಘನಾಕಾರದ ಚೌಕಾಕಾರದ ೯ ಕಂಬಗಳ ಸೂರನ್ನು ಆಧರಿಸಿದೆ. ನವರಂಗ ಭಾಗದ ರಚನೆ ಮತ್ತು ಅದರ ವಾಸ್ತು ಶೈಲಿಯು, ನಂತರ ಕಾಲದ ನಿರ್ಮಿತಿಯೆಂದು ಸೂಚಿಸುತ್ತದೆ. ನವರಂಗದ ಪ್ರವೇಶದಲ್ಲಿ ಸೋಪಾನಗಳಿವೆ. ಇದರ ಇಕ್ಕೆಲಗಳಲ್ಲಿ ತಡೆಗೋಡೆಯಿದೆ. ಗರ್ಭಗೃಹದ ಹೊರಭಾಗದಲ್ಲಿ ಅಧಿಷ್ಠಾನ ಭಾಗಗಳನ್ನು ಕಾಣಬಹುದು ಗರ್ಭಗೃಹದ ಹೊರ ಭಿತ್ತಿಯನ್ನು ಅನೇಕ ಸಲೀಲಾಂತರಗಳಿಂದ ರೂಪಿಸಲಾಗಿದೆ. ಅದು ಸಪಾಟಗಿಲ್ಲ. ನವರಂಗ ಮತ್ತು ಗರ್ಭಗೃಹದ ಹೊರ ಭಿತ್ತಿಯಲ್ಲಿ ಸುಂದರಿಯರ ಅನೇಕ ಶಿಲ್ಪಗಳು ಮತ್ತು ದೇವತಾ ಮೂರ್ತಿಶಿಲ್ಪಗಳ ಕೆತ್ತನೆಗಳಿವೆ. ದೇವಾಲಯಕ್ಕೆ ಪ್ರಸ್ತುತ ಶಿಖರ ಭಾಗವಿಲ್ಲ.[೧೦]

ವೈಷ್ಣವ ದೇವಾಲಯಗಳು

ಸೃಷ್ಟಿಯ ರಕ್ಷಕನಾಗಿ ತನ್ನ ಜವಾಬ್ದಾರಿಯನ್ನು ಹೊತ್ತು ನಿಂತಿರುವ ವಿಷ್ಣುವಿನ ಆರಾಧಕರನ್ನು ವೈಷ್ಣವರೆಂದೂ ಕರೆಯಲಾಗುತ್ತದೆ. ವಿಷ್ಣು ಪುರಾಣ, ಗರುಡ ಪುರಾಣ, ಶ್ರೀ ವಿಷ್ಣು ದಶಾವತಾರ ಹಾಗೂ ಇನ್ನಿತರ ಗ್ರಂಥಗಳು ವಿಷ್ಣುವಿನ ಕುರಿತು ಮಾಹಿತಿಯನ್ನು ನೀಡುತ್ತವೆ. ವಿಷ್ಣು ಮತ್ತು ಆತನ ಪರಿವಾರ ದೇವತೆಗಳು ವೈಷ್ಣವ ದೇವತೆಗಳೆನಿಸಿಕೊಳ್ಳುತ್ತವೆ. ಶ್ರೀ ವಿಷ್ಣು ದಶಾವತಾರ ಸೃಷ್ಟಿಯ ಕುರಿತು ಮಾನವನ ವಿಕಾಸದ ಹಂತಗಳನ್ನು ತಿಳಿಸುತ್ತದೆ. ಸಾಲಗುಂದೆ ಪರಿಸರದಲ್ಲಿ ವಿಷ್ಣುವಿನ ಆರಾಧನೆ ಪ್ರಾಚೀನ ಕಾಲದಿಂದಲೂ ಇದ್ದಂತೆ ಕಾಣುತ್ತದೆ. ಇದಕ್ಕೆ ಪೂರಕವೆಂಬಂತೆ ಈ ಪರಿಸರದಲ್ಲಿ ನಿರ್ಮಾಣವಾಗಿರುವ ವೈಷ್ಣವ ದೇವಾಲಯಗಳೇ ಸಾಕ್ಷಿ.

ಆಂಜನೇಯ ದೇವಾಲಯ

ಸಂಖ್ಯೆ : ೦೧
ಸ್ಮಾರಕ : ಆಂಜನೇಯ ದೇವಾಲಯ
ಊರು : ಸೋಮಲಾಪುರ
ಸ್ಥಳ : ಹಾಳೂರು
ಪ್ರಕಟಣೆ : ---

ಶೈಲಿ : ವಿಜಯನಗರೋತ್ತರ
ಅಭಿಮುಖ : ದಕ್ಷಿಣ
ಸ್ಥಿತಿ : ಕನಿಷ್ಠ
ಕಾಲ : ಕ್ರಿ.ಶ. ೧೭-೧೮ನೆ ಶತಮಾನ
ಸಂರಕ್ಷಣೆ : ---

ವಿಜಯನಗರದ ಕಾಲದ ಶೈಲಿಯಲ್ಲಿರುವ ಈ ದೇವಾಲಯವು ಗರ್ಭಗೃಹ ಮತ್ತು ತೆರೆದ ಸಭಾಮಂಟಪವನ್ನು ಹೊಂದಿದೆ. ಗರ್ಭಗೃಹದಲ್ಲಿ ಹನುಮಂತನ ಮೂರ್ತಿ ಶಿಲ್ಪವಿದೆ. ಅಲಂಕರಣೆಗಳು ಇಲ್ಲ. ಆಯಾತಾಕಾರದ ಸಭಾಮಂಟಪದಲ್ಲಿ ಘನಾಕೃತಿಯ ಮಧ್ಯಮ ಗಾತ್ರ ಎತ್ತರದ ಕಂಬಗಳಿವೆ. ಇವುಗಳ ಶೈಲಿಯು ಪ್ರಾಚೀನದೆಂದು ತೋರುತ್ತದೆ. ದೇವಾಲಯದ ಮುಂಭಾಗದಲ್ಲಿ ಹಲವು ವಾಸ್ತು ಅವಶೇಷಗಳನ್ನು ಕಾಣಬಹುದು.

ಬಂಡೆರಂಗನಾಥ ದೇವಾಲಯ

ಸಂಖ್ಯೆ : ೦೨
ಸ್ಮಾರಕ : ಬಂಡೆರಂಗನಾಥ ದೇವಾಲಯ
ಊರು : ರವುಡಕುಂದ
ಸ್ಥಳ : ಊರ ಬೆಟ್ಟದ ಮೇಲೆ
ಪ್ರಕಟಣೆ : ---

ಶೈಲಿ : ವಿಜಯನಗರೋತ್ತರ
ಅಭಿಮುಖ : ಪೂರ್ವ
ಸ್ಥಿತಿ : ಉತ್ತಮ
ಕಾಲ : ಕ್ರಿ.ಶ. ೧೭-೧೮ನೆ ಶತಮಾನ
ಸಂರಕ್ಷಣೆ : ---

ರವುಡಕುಂದ ಗ್ರಾಮದ ಬೆಟ್ಟದ ಮೇಲೆ ಮತ್ತು ಕೆಳಗಡೆ ಬಂಡೆರಂಗನಾಥನ ರಥ ನಿಲ್ಲಿಸುವ ಜಾಗದಲ್ಲಿ ಗರ್ಭಗೃಹಗಳು ಮತ್ತು ಅದರಲ್ಲಿ ಬಂಡೆರಂಗನಾಥನ ಮೂರ್ತಿಶಿಲ್ಪಗಳು ಕಂಡು ಬಂದಿವೆ. ರಥ ನಿಲ್ಲಿಸುವ ಜಾಗದಲ್ಲಿರುವ ಗರ್ಭಗೃಹ ವಿಜಯನಗರ ಶೈಲಿಯಲ್ಲಿ ಕಂಡು ಬಂದರೂ ವಿಜಯನಗರೋತ್ತರ ಶೈಲಿಯ ಲಕ್ಷಣಗಳನ್ನೂ ಒಳಗೊಂಡಿದೆ. ಬೆಟ್ಟ ಏರಿ ಹೋಗಲು ಆಗದೆ ಇರುವವರು ಕೆಳಗಡೆ ದರ್ಶನ ಪಡೆದುಕೊಳ್ಳಲು ಈ ವ್ಯವಸ್ಥೆ ಮಾಡಿದಂತೆ ಕಾಣುತ್ತದೆ. ಇನ್ನೂ ಬೆಟ್ಟದ ಮೇಲೆ ಕಂಡು ಬರುವ ರಂಗನಾಥ ದೇವಾಲಯಕ್ಕೆ ಬೆಟ್ಟದ ಬಂಡೆಯ ಮೇಲೆ ಶಿಖರವನ್ನು ನಿರ್ಮಿಸಲಾಗಿದೆ. ದೇವಾಲಯಕ್ಕೆ ತಲುಪಲು ಕೆಳಗಡೆಯಿಂದ ಮೇಲಿನವರೆಗೆ ಮೆಟ್ಟಿಲುಗಳನ್ನು ನಿರ್ಮಿಸಲಾಗಿದೆ.

ಮುರಾರಿ (ಸೂರ್ಯ) ದೇವಾಲಯ

ಸಂಖ್ಯೆ : ೦೩		ಶೈಲಿ	: ಕಲ್ಯಾಣ ಚಾಲುಕ್ಯ
ಸ್ಮಾರಕ : ಮುರಾರಿ (ಸೂರ್ಯ)ದೇವಾಲಯ		ಅಭಿಮುಖ	: ಪೂರ್ವ
ಊರು : ಮುಕ್ಕುಂದ		ಸ್ಥಿತಿ	: ಮಧ್ಯಮ
ಸ್ಥಳ : ಸಂಗಮೇಶ್ವರ ದೇವಾಲಯದ ಪಕ್ಕ		ಕಾಲ	: ಕ್ರಿ.ಶ. ೧೨-೧೩ನೆ ಶತಮಾನ
ಪ್ರಕಟಣೆ : ಕ.ದೇ.ಕೋ.ರಾ		ಸಂರಕ್ಷಣೆ	: ---

ಈ ದೇವಾಲಯವನ್ನು ಮುರಾರಿರಂಗ ದೇವಾಲಯ ಎಂದು ಕರೆಯಲಾಗುತ್ತದೆ. ಗರ್ಭಗೃಹ, ತೆರೆದ ಅಂತರಾಳ ಮತ್ತು ಅದರ ಮುಂಭಾಗದಲ್ಲಿ ತೆರೆದ ನವರಂಗವಿದೆ. ಚೌಕಾಕಾರವಾಗಿರುವ ಗರ್ಭಗೃಹದಲ್ಲಿ ಸೂರ್ಯ ಮತ್ತು ಆತನ ಪತ್ನಿಯರ ಮೂರ್ತಿಶಿಲ್ಪಗಳನ್ನು ಇರಿಸಲಾಗಿದೆ. ಮೂರ್ತಿಶಿಲ್ಪಕ್ಕೆ ಮೀಸೆಯಿರುವುದು ಗಮನಾರ್ಹವಾಗಿದೆ. ಗರ್ಭಗೃಹದ ಬಾಗಿಲವಾಡವು ಸರಳವಾಗಿದ್ದು, ಯಾವುದೇ ಅಲಂಕರಣೆಗಳಿಲ್ಲ.

ಗರ್ಭಗೃಹದ ಮುಂದಿರುವ ತೆರೆದ ಅಂತರಾಳ ಅಥವಾ ಅರ್ಧಮಂಟಪದಲ್ಲಿ ಎರಡು ದುಂಡನೆಯ ಕಂಬಗಳಿವೆ. ಆ ಕಂಬಗಳ ಕೆಳಭಾಗದಲ್ಲಿ ಕೆಲವು ಉಬ್ಬು ಶಿಲ್ಪಗಳಿವೆ. ಅಂತರಾಳ ಭಾಗದ ಉತ್ತರ ಮತ್ತು ದಕ್ಷಿಣ ಭಾಗಗಳಲ್ಲಿ ಭಿತ್ತಿಗಳಿವೆ. ಇದು ತಾತ್ಕಾಲಿಕ ತಡೆಗೋಡೆಯಂತೆ ಕಾಣುತ್ತಿದೆ. ಉತ್ತರ ಭಾಗದಲ್ಲಿರುವ ಅಂಕಣದಲ್ಲಿ ಶಾಸನವಿದೆ. ಭಿತ್ತಿಯ ನವರಂಗದ ಮಧ್ಯದಲ್ಲಿರುವ ಎರಡು ಕಂಬಗಳವರೆಗೆ ವಿಸ್ತರಿಸಲಾಗಿದೆ. ನವರಂಗದ ದಕ್ಷಿಣ ಭಾಗದ ಮೂಲೆಯಲ್ಲಿ ಅಂತರಾಳ ಭಾಗದ ಭಿತ್ತಿಯನ್ನು ಸೇರಿಸಿದಂತೆ ಒಂದು ಕೋಣೆಯನ್ನು ರಚಿಸಿ ಪ್ರವೇಶ ದ್ವಾರವನ್ನು ಇರಿಸಲಾಗಿದೆ.

ನವರಂಗದಲ್ಲಿ ಘನಾಕೃತಿಯ ಚೌಕಾಕಾರದ ನಾಲ್ಕು ಕಂಬಗಳಿವೆ. ತೆರೆದ ನವರಂಗ ಭಾಗದ ಮಧ್ಯದ ನಾಲ್ಕು ಕಂಬಗಳಿಗೆ ಅನುಗುಣವಾಗಿ ಗೋಡೆಯಲ್ಲಿ ಕಂಬಗಳು ಇದ್ದು, ಅವು ಸೂರನ್ನು ಆಧರಿಸಿವೆ. ಎರಡು ಮೆಟ್ಟಿಲುಗಳ ಮೂಲಕ ನವರಂಗಕ್ಕೆ ಪ್ರವೇಶವನ್ನು ಪಡೆಯಬಹುದು. ಸೂರಿನ ಭಾಗವು ಸಮತಟ್ಟತೆಯಿಂದ ರಚನೆಯಾಗಿದೆ.[೧೧]

ಸೂರ್ಯ ದೇವಾಲಯ

ಸಂಖ್ಯೆ : ೦೪		ಶೈಲಿ	: ಕಲ್ಯಾಣ ಚಾಲುಕ್ಯ
ಸ್ಮಾರಕ : ಸೂರ್ಯ ದೇವಾಲಯ		ಅಭಿಮುಖ	: ಪೂರ್ವ
ಊರು : ಉಪ್ಪಳ		ಸ್ಥಿತಿ	: ಹಾಳಾಗಿದೆ.

ಸ್ಥಳ	: ಹಾಳೂರಿನಲ್ಲಿ	ಕಾಲ	: ಕ್ರಿ.ಶ. ೧೨–೧೩ನೆ ಶತಮಾನ
ಪ್ರಕಟಣೆ	: ---	ಸಂರಕ್ಷಣೆ	: ---

ಇಲ್ಲಿನ ಹಾಳೂರಿನಲ್ಲಿಪಾಳು ಬಿದ್ದಿರುವ ಗರ್ಭಗೃಹದಂತೆ ಲಕ್ಷಣಗಳು ಕಂಡುಬರುವ ಪ್ರಾಚೀನ ಕಟ್ಟಡವೊಂದರಲ್ಲಿ ಸೂರ್ಯಶಿಲ್ಪ ಸುಖಾಸನದ ರೀತಿಯಲ್ಲಿ ಕುಳಿತಿರುವಂತೆ ಕಂಡುಬರುತ್ತದೆ. ನಾಲ್ಕು ಕೈಗಳಿದ್ದು ಅಗ್ನಿ, ಗದೆ,ಹಿಡಿದಿರುವಂತೆ ಕೆತ್ತಲಾಗಿದೆ. ಜಟಾಮಕುಟವನ್ನು ಧರಿಸಲಾಗಿದೆ. ಶಿಲ್ಪಿಯು ಇದರ ಮುಖವನ್ನು ಸೌಮ್ಯ ಮತ್ತು ರೌದ್ರಕಾರವಾಗಿ ಎರಡು ರೀತಿಯಲ್ಲಿ ಕಾಣುವಂತೆ ಕೆತ್ತಿರುವನು. ಇನ್ನೂ ದೇವಾಲಯದ ಅವಶೇಷಗಳು ಶಿಥಿಲಾವ್ಯಸ್ಥೆಯಲ್ಲಿ ಬಿದ್ದಿದ್ದು, ಕೆಲವೊಂದುಇಲ್ಲಿನ ಹಾಳು ಮಣ್ಣಿನಲ್ಲಿ ಹುದುಗಿಹೋಗಿವೆ.

ಹನುಮಂತ ದೇವಾಲಯ

ಸಂಖ್ಯೆ	: ೦೫	ಶೈಲಿ	: ವಿಜಯನಗರೋತ್ತರ
ಸ್ಮಾರಕ	: ಹನುಮಂತ ದೇವಾಲಯ	ಅಭಿಮುಖ	: ಉತ್ತರ
ಊರು	: ಮುಕ್ಕುಂದ	ಸ್ಥಿತಿ	: ಕನಿಷ್ಠ
ಸ್ಥಳ	: ಸೋಮಲಿಂಗ ಗುಡಿಯ ಪಕ್ಕ	ಕಾಲ	: ಕ್ರಿ.ಶ. ೧೭–೧೮ನೆ ಶತಮಾನ
ಪ್ರಕಟಣೆ	: ಕ.ದೇ.ಕೋ.ರಾ	ಸಂರಕ್ಷಣೆ	: ---

ವಿಜಯನಗರೋತ್ತರ ಕಾಲದ ಶೈಲಿಯಲ್ಲಿರುವ ಈ ದೇವಾಲಯವು ಗರ್ಭಗೃಹ ಮತ್ತು ತೆರೆದ ಸಭಾಮಂಟಪವನ್ನು ಹೊಂದಿದೆ. ಗರ್ಭಗೃಹದಲ್ಲಿ ಹನುಮಂತನ ಮೂರ್ತಿ ಶಿಲ್ಪವಿದೆ. ಗರ್ಭಗೃಹದ ಬಾಗಿಲವಾಡವು ಸರಳವಾಗಿದ್ದು, ಅದರಲ್ಲಿ ಯಾವುದೇ ಅಲಂಕರಣೆಗಳಿಲ್ಲ. ಆಯಾತಾಕಾರದ ಸಭಾಮಂಟಪದಲ್ಲಿ ಘನಾಕೃತಿಯ ಎತ್ತರದ ಕಂಬಗಳಿವೆ. ಇವುಗಳ ಶೈಲಿಯು ಪ್ರಾಚೀನದ್ದೆಂದೂ ತೋರುತ್ತದೆ. ಸಭಾಮಂಟಪದ ಸೂರಿನ ಭಾಗಕ್ಕೆ ಬಿದಿರು ಮತ್ತು ಮಣ್ಣಿನ ಮಾಡನ್ನು ಹಾಕಲಾಗಿದೆ. ದೇವಾಲಯದ ಮುಂಭಾಗದಲ್ಲಿ ವಾಸ್ತು ಅವಶೇಷಗಳನ್ನು ಕಾಣಬಹುದು.[೧೨]

ಇತರೆ ದೇವಾಲಯಗಳು

ಇತರೆ ದೇವಾಲಯಗಳಲ್ಲಿ ಶಾಕ್ತ ದೇವಾಲಯ ಹಾಗೂ ಪುರಾಣ ಪ್ರಸಿದ್ಧ ಐತಿಹಾಸಿಕ ಪುರುಷರ ಸಲುವಾಗಿ ನಿರ್ಮಿಸಿದ ದೇವಾಲಯಗಳ ಕುರಿತು ವಿವರಿಸಲಾಗಿದೆ. ಸಾಲಗುಂದ ಪರಿಸರದಲ್ಲಿ ಶಾಕ್ತ ಪರಂಪರೆ ಅಸ್ತಿತ್ವದಲ್ಲಿದೆ. ಈ ಭಾಗದಲ್ಲಿ ಶಕ್ತಿ ದೇವತೆಗಳ ಆರಾಧನೆ ಪ್ರಮುಖವಾಗಿದೆ.

ಅಂಭಾದೇವಿ ದೇವಾಲಯ

ಸಂಖ್ಯೆ	: ೦೧	ಶೈಲಿ	: ಆಧುನಿಕ
ಸ್ಮಾರಕ	: ಅಂಭಾದೇವಿದೇವಾಲಯ	ಅಭಿಮುಖ	: ಪಶ್ಚಿಮ
ಊರು	: ಅಂಭಾಮಠ	ಸ್ಥಿತಿ	: ಉತ್ತಮ
ಸ್ಥಳ	: ಬೆಟ್ಟದ ಕೆಳಭಾಗದಲ್ಲಿ	ಕಾಲ	: ಕ್ರಿ.ಶ. ೧೬-೧೭ನೆ ಶತಮಾನ
ಪ್ರಕಟಣೆ	: ---	ಸಂರಕ್ಷಣೆ	: ಧಾರ್ಮಿಕ ದತ್ತಿ ಇಲಾಖೆ

ಈ ಪರಿಸರದ ಆರಾಧ್ಯ ದೈವ ಎಂದರೆ, ಶ್ರೀ ಅಂಭಾದೇವಿ. ಶ್ರೀಬಗಾಳಮುಖಿ, ಶ್ರೀದೇವಿ ಎಂಬಿತ್ಯಾದಿ ಹೆಸರುಗಳಿಂದ ಕರೆಯುವ ಅಂಭಾದೇವಿಯನ್ನು ಚಿದಾನಂದ ಅವಧೂತರು ತಪಸ್ಸು ಆಚರಿಸಿ, ದೇವಿಯನ್ನು ಒಲಿಸಿಕೊಂಡು ದೇವಿ ಮಹಾತ್ಮೆ ಎಂಬ ಪುರಾಣ ರಚಿಸಿದರು ಎಂಬ ಪ್ರತೀತಿ ಇದೆ. ಅಂಭಾಮಠದ ಬೆಟ್ಟದ ಕೆಳಭಾಗದಲ್ಲಿ ದೇವಾಲಯ ಕಂಡು ಬರುತ್ತದೆ. ಎತ್ತರವಾದ ತಳಪಾಯದ ಮೇಲೆ ಕಟ್ಟಲಾಗಿದ್ದು, ದೇವಾಲಯವನ್ನು ಪ್ರವೇಶಿಸಲು ಮೆಟ್ಟಿಲುಗಳನ್ನು ನಿರ್ಮಿಸಲಾಗಿದೆ.

ಗರ್ಭಗೃಹ, ಅಂತರಾಳ, ನವರಂಗಗಳನ್ನು ಒಳಗೊಂಡಿದ್ದು, ನಾಲ್ಕು ಕಾಲು ಮಡಚಿಕೊಂಡು ಮಲಗಿರುವ ಹುಲಿಯ ಮೂರ್ತಿಶಿಲ್ಪವನ್ನು ಗರ್ಭಗೃಹದ ಮೂರ್ತಿಶಿಲ್ಪದ ಎದುರಿಗೆ ಕಾಣುವಂತೆ ಇರಿಸಲಾಗಿದೆ. ಇದರ ಪಕ್ಕದಲ್ಲಿಯೇ ದ್ವೀಪಸ್ತಂಭವಿದೆ. ನವರಂಗದ ನಂತರ ವಿಶಾಲವಾದ ಸಭಾಮಂಟಪದ ರೀತಿಯಲ್ಲಿ ಒಳಗೆ ಪ್ರಾಂಗಣವಿದ್ದು, ಗರ್ಭಗೃಹವನ್ನು ಸುತ್ತು ಹಾಕಲು, ಉತ್ಸವ ಮೂರ್ತಿ ಪೂಜಿಸಲು, ಭಜನೆ ಇತ್ಯಾದಿ ಕಾರ್ಯಕ್ರಮಗಳಿಗಾಗಿ ಇದನ್ನು ಬಳಸಿಕೊಳ್ಳಲಾಗುತ್ತಿದೆ.

ಕಂಬಗಳು ಚಚ್ಚೌಕವಾಗಿವೆ. ಮೇಲೆ ಮೊಗಚಿದ ಪುಷ್ಪ ಬೋಧಿಗೆಗಳಿವೆ. ದೇವಾಲಯವನ್ನು ಪ್ರವೇಶಿಸಲು ಪಶ್ಚಿಮ, ಉತ್ತರ ಮತ್ತು ದಕ್ಷಿಣ ದಿಕ್ಕಿನಲ್ಲಿ ದ್ವಾರಗಳನ್ನು ನಿರ್ಮಿಸಲಾಗಿದೆ. ಗರ್ಭಗೃಹದ ಮೇಲೆ ಇತ್ತಿಚೇಗೆ ಆಧುನಿಕವಾಗಿ ದ್ರಾವಿಡ ಮಾದರಿಯಂತೆ ಶಿಖರವನ್ನು ನಿರ್ಮಿಸಲಾಗಿದೆ. ದೇವಾಲಯದ ಸುತ್ತಮುತ್ತಲಿನ ಜಾಗದಲ್ಲಿ ಹಲವು ಚಿಕ್ಕ ಚಿಕ್ಕ ಗರ್ಭಗೃಹಗಳು ಕಂಡುಬರುತ್ತವೆ. ಆದರೆ, ಅವುಗಳಲ್ಲಿ ಯಾವುದೇ ಮೂರ್ತಿಶಿಲ್ಪಗಳಿಲ್ಲ.

ಅಂಭಾದೇವಿಯ ಕುರಿತಾಗಿರುವ ಐತಿಹ್ಯ

ಅಂಭಾಮಠದಲ್ಲಿ ಪುರಾಣ ಪ್ರಸಿದ್ಧ ಅಂಭಾದೇವಿಗೆ ಸಂಬಂಧಿಸಿದಂತೆ ಐತಿಹ್ಯ ಈ ಭಾಗದ ಜನರಲ್ಲಿದೆ ಮೌಖಿಕ ಪರಂಪರೆಯಲ್ಲಿದೆ. ಮಗಳ ಮದುವೆ ಮಾಡಿದ ತಂದೆ, ಸ್ವಲ್ಪ ದಿನಗಳ ನಂತರ

ಗಂಡನ ಮನೆಗೆ ಕಳಿಸಿಕೊಡುವ ಸಂದರ್ಭದಲ್ಲಿ ತವರು ಮನೆಯನ್ನು ಬಿಟ್ಟುಹೋಗಲು ಮನಸ್ಸಾಗದ ಆ ಮಗಳು ರಾತ್ರಿಯೆಲ್ಲ ಕಣ್ಣಿರು ಸುರುಸಿದಳು. ಮರುದಿನ ತಂದೆ ತನ್ನ ಮಗಳನ್ನು ಎತ್ತು ಬಂಡಿಯಲ್ಲಿ ಕುಳ್ಳಿರಿಸಿಕೊಂಡು ಅಳಿಯನ ಊರುಕಡೆ ಹೋಗುತ್ತಿದ್ದನು.

ದಾರಿ ಮಧ್ಯದಲ್ಲಿ ತುಂಬಾ ದುಖಿಃತಳಾಗಿ ಇಲ್ಲಿಂದ ತಪ್ಪಿಸಿಕೊಂಡು ಹೋಗಬೇಕೆಂಬ ಉದ್ದೇಶದಿಂದ ಮನದಲ್ಲಿ ಯೋಚಿಸಿದ ಮಗಳು, ಮೂತ್ರ ಮಾಡುವೆನೆಂದೂ ತಂದೆಗೆ ಎತ್ತಿನ ಬಂಡಿ ನಿಲ್ಲಿಸಲು ಹೇಳಿ ಬೆಟ್ಟದ ಬಂಡೆಯ ಹಿಂದೆ ಹೋದಳಂತೆ, ಬಹು ಸಮಯಕಾಲ ಕಾದು ಎತ್ತಿನಬಂಡಿಯಲ್ಲಿ ಕುಳಿತಕೊಂಡಿದ್ದ ತಂದೆ ಮಗಳು ಬಾರದಿದ್ದನೂ ನೋಡಿ ತಾನೂ ಬಂಡಿ ಹಿಳಿದು ನೋಡಿದರೆ, ಆತನ ಮಗಳು ಅಲ್ಲಿ ಇರಲಿಲ್ಲವಂತೆ. ಮಗಳನ್ನು ಕೂಗಿ ಕೂಗಿ ಕರೆದು ಸುತ್ತಲೂ ನೋಡಿದಾಗ ಮಗಳು ಬರಬೇಡ ತಂದೆ ನನಗೆ ಈ ಸಂಸಾರ ಮದುವೆ ಬಂಧನಗಳು ಇಷ್ಟವಿಲ್ಲವೆಂದೂ ಅಲ್ಲೇ ಪಕ್ಕದಲ್ಲಿದ್ದ ಗುಹೆಯ ಒಳಗೆ ಹೋದಳಂತೆ.

ಆಳವಾಗಿದ್ದ ಗುಹೆಯಲ್ಲಿ ತಂದೆ ಹೋಗಲು ಆಗಲಿಲ್ಲವಂತೆ, ಹೀಗೆ ಗುಹೆ ಪ್ರವೇಶಿಸಿದ ಮಗಳು ಸಿದ್ಧಿ ಪಡೆದು ಈ ಭಾಗದ ದುಃಖ ದುಮ್ಮಾನಗಳನ್ನು ನಿವಾರಿಸುವ ಅಂಭಾದೇವಿ ಎಂಬ ಹೆಸರಿನ ದೇವಿಯಾಗಿ ನೆಲೆಯೂರಿದಳು ಎಂಬ ಪ್ರತೀತಿಯಿದೆ.[೧೩] ಸಿದ್ಧಿ ಪಡೆದ ಇಲ್ಲಿನ ಪ್ರದೇಶವನ್ನು ಸಿದ್ಧ ಪರ್ವತ ಎಂದೂ ಈಗಲೂ ಕರೆಯಲಾಗುತ್ತದೆ. ಈಗಲೂ ದೇವಾಲಯದಲ್ಲಿ ಗುಹೆವಿದೆ.

ಚಿದಾನಂದ ಅವಧೂತರ ಮಠ

ಸಂಖ್ಯೆ : ೦೨
ಸ್ಮಾರಕ : ಚಿದಾನಂದ ಅವಧೂತರ ಮಠ
ಊರು : ಅಂಭಾಮಠ
ಸ್ಥಳ : ಅಂಭಾದೇವಿ ದೇವಸ್ಥಾನದ ಹತ್ತಿರ
ಪ್ರಕಟಣೆ : ---
ಶೈಲಿ : ಆಧುನಿಕ
ಅಭಿಮುಖ : ಪೂರ್ವ
ಸ್ಥಿತಿ : ಮಧ್ಯಮ
ಕಾಲ : ಕ್ರಿ.ಶ. ೧೬–೧೭ನೆ ಶತಮಾನ
ಸಂರಕ್ಷಣೆ : ---

ಸಭಾಮಂಟಪಕ್ಕೆ ಹೊಂದಿಕೊಂಡಂತೆ ಮೂರು ಗರ್ಭಗೃಹಗಳಿದ್ದು, ಬಲಭಾಗದಲ್ಲಿನ ಗರ್ಭಗೃಹ ಮಧ್ಯದ ಗರ್ಭಗೃಹದಲ್ಲಿ ಚಿದಾನಂದ ಅವಧೂತರ ಮೂರ್ತಿಶಿಲ್ಪವಿದೆ. ಅದರ ಬಲಗಡೆ ಖಾಲಿ ಇದ್ದಂತೆ, ಬಲಗಡೆ ಅಂಕಲಿಮಠದ ನಿರುಪಾದೇಶ್ವರ ಸ್ವಾಮಿಗಳ ಮೂರ್ತಿಶಿಲ್ಪವಿದೆ. ಇದರ ಮುಂದೆ ಪ್ರಾಚೀನ ಕಾಲದೆಂದೂ ತೋರುವ ಕಟ್ಟಡ ಕಂಡುಬರುತ್ತದೆ. ಅದನ್ನು ಯೋಗ ಮಂಟಪ ಎಂದೂ ಗುರುತಿಸುವ ಬರವಣಿಗೆಗಳು ಕಂಡುಬರುತ್ತವೆ. ಕಂಬಗಳು ಚಚ್ಚೌಕವಾಗಿದ್ದು ಭೋದಿಗೆಗಳನ್ನು

ಒಳಗೊಂಡಿವೆ. ಮಠದ ಮೇಲೆ ಸುತ್ತಲೂ ಆಧುನಿಕ ಶೈಲಿಯಲ್ಲಿ ಕೈಪಿಡಿ ಗೋಡೆಯನ್ನು ನಿರ್ಮಿಸಲಾಗಿದೆ.

ಚಿದಾನಂದ ಅವಧೂತರು

ಕ್ರಿ.ಶ. ಸುಮಾರು ೧೭ನೆ ಶತಮಾನದಲ್ಲಿ ಚಿದಾನಂದ ಅವಧೂತರು ಈ ಪರಿಸರದಲ್ಲಿ ಬರುವ ಅಂಭಾಮಠದಲ್ಲಿ ನೆಲೆಸಿದ್ದರು. ೧೮೭೬ರಲ್ಲಿ ಆದೋನಿ ಜಿಲ್ಲೆಯ ಹಿರೇಹರಿವಾಣದಲ್ಲಿ ಜನಿಸಿದ ಚಿದಾನಂದ ಅವಧೂತರು ಬಾಲ್ಯದಲ್ಲಿ ದೇವಿಯ ದರ್ಶನ ಪಡೆದರಂತೆ. ಸಾಮಾನ್ಯ ಪಂಚಾಂಗ ಹೇಳುವ ಕುಟುಂಬದಲ್ಲಿ ಜನಿಸಿದ್ದ ಅವಧೂತರಿಗೆ ಬಡತನ ಕಾಡುತ್ತದೆ. ಹಿರೇಹರಿವಾಣದ ಊರಿನ ಗೌಡ ತಾನು ಕಟ್ಟಿಸಿದ ಮನೆಯಲ್ಲಿ ಪಿಶಾಚಿ ಇದೆ ಎಂದು ಮನೆ ತ್ಯಜಿಸಿರುತ್ತಾನೆ. ಅವಧೂತರು ಆ ಮನೆಯಲ್ಲಿಯೇ ತಂದೆ-ತಾಯಿಯೊಂದಿಗೆ ವಾಸ ಮಾಡುತ್ತಾರೆ. ಒಂದು ದಿನ ಮನೆಯ ಇಷ್ಟ ದೈವ ವೀರನಾರಾಯಣನಿಗೆ ಪೂಜೆ ಸಲ್ಲಿಸಲು ತಂದೆ ಹೋಗುವಾಗ ಕರಿಗೆಡಬು, ತುಪ್ಪ ಹಾಗೂ ಇತರ ನೈವೇದ್ಯದ ಅಡುಗೆ ಮುಟ್ಟಬಾರದು ಎಂದು ಚಿದಾನಂದ ಅವಧೂತರನ್ನು ಕಂಬಕ್ಕೆ ಕಟ್ಟಿ ಹಾಕಿ ಹೋಗಿರುತ್ತಾರೆ.[೧೪]

ಈ ವೇಳೆ ತಾಯಿಯ ರೂಪದಲ್ಲಿ ಪ್ರತ್ಯಕ್ಷಳಾದ ಅಂಭಾದೇವಿ ಅವಧೂತರನ್ನು ಬಂಧನದಿಂದ ಬಿಚ್ಚಿ ಊಟ ಬಡಿಸಿ, ನೀರು ತರುವೆ ಎಂದು ಮನೆಯಿಂದ ಹೋರ ಬಂದು ಮಾಯವಾಗುತ್ತಾಳೆ. ಮನೆಯವರು ಬಂದು ಚಿದಾನಂದ ಅವಧೂತರು ಊಟ ಮಾಡುವದನ್ನು ಕಂಡು ಗಾಬರಿಯಾಗಿ, ದೇವರಿಗೆ ಎಡೆ ಮಾಡುವ ಮುನ್ನ ಊಟ ಮಾಡಿದ್ದಕ್ಕೆ ಬೈಯುತ್ತಾರೆ. ಆದರೆ ಅವಧೂತರು ಅವರ ತಾಯಿಗೆ ನೀನೆ ನನಗೆ ಊಟ ನೀಡಿದ್ದು, ಬೇಕಿದ್ದರೆ ತುಪ್ಪದಲ್ಲಿ ನಿನ್ನ ಬೆರಳು ಮೂಡಿದ್ದನ್ನು ನೋಡ ಎಂದು ಅಳುತ್ತಾನೆ. ಮುಂದೆ ನಮ್ಮ ಮಗನಿಗೆ ದೇವಿಯ ಮಹಿಮೆ ಇದೆ ಎಂದೂ ಅರಿತ ಅವಧೂತರ ತಂದೆ ತಾಯಿಯವರು ಅವರನ್ನು ಹೊಡೆಯುದನ್ನು ಬಿಡುತ್ತಾರೆ.[೧೫]

ಅಲ್ಲಿಂದ ಗಂಗಾವತಿ ತಾಲೂಕಿನ ಹೆಬ್ಬಾಳಕ್ಕೆ ಕೂಲಿ ಮಾಡಲು ಕುಟುಂಬ ಸಮೇತ ಬರುತ್ತಾರೆ. ಆಗ ತುಂಗಭದ್ರಾ ನದಿ ದಂಡೆಯಲ್ಲಿನ ಹೊನ್ನಪ್ಪ ಎನ್ನುವ ವಿದ್ವಾಂಸರ ಬಳಿ ಈತನಿಗೆ ವಿದ್ಯೆ ಕಲಿಕೆಗೆ ಬಿಡುತ್ತಾರೆ. ವಿದ್ಯೆ ಕಲಿತ ಬಳಿಕ ಸಿಂಧನೂರು ತಾಲೂಕಿನ ರವುಡಕುಂದ ಬಳಿಯ ರಂಗನಾಥ ದೇವಾಸ್ಥಾನಕ್ಕೆ ಬಂದು ಗವಿಯೊಳಗೆ ಒಂಭತ್ತು ದಿನಗಳ ಕಾಲ ದ್ಯಾನ ಮಾಡುತ್ತಾರೆ. ಆದರೆ ಇಲ್ಲೂ ಮನಸ್ಸು ಪ್ರಶಾಂತವಾಗದ ಕಾರಣ ಕಾಡು ಅರಣ್ಯವಾಗಿದ್ದ ಸೋಮಲಾಪುರ ಗುಡ್ಡಕ್ಕೆ ಬಂದು ಗವಿಯೊಳಗೆ ತಪಸ್ಸು ಮಾಡುತ್ತಾರೆ.[೧೬]

ದೇವಿಯ ಆರಾಧನೆ ಮಾಡುತ್ತ ಬಹುದಿನ ಕಾಲ ಕಳೆದಾಗ ದೇವಿ ಪ್ರತ್ಯಕ್ಷಳಾಗಿ ಬೇಡಿಕೆ ಆಲಿಸುತ್ತಾಳೆ. ಈ ಭಾಗದಲ್ಲಿ ಆರಾಧ್ಯ ದೈವವಾಗಿ ಬೇಡಿದವರಿಗೆ ವರವ ನೀಡುವ ಮಹಿಮಾ ಪುರುಷಳಾಗಬೇಕು ಎಂದು ಅವಧೂತರು ಕೋರಿಕೊಳ್ಳುತ್ತಾರೆ. ಆದರೆ ತನಗೇನೂ ಬೇಡದ ಚಿದಾನಂದ ಅವಧೂತರ ಬೇಡಿಕೆ ಮೇರೆಗೆ ಅಂಭಾದೇವಿಯ ಮೂರ್ತಿ ಉದ್ಭವವಾಗುತ್ತದೆ. ಕ್ರಮೇಣವಾಗಿ ಅರಣ್ಯ ಪ್ರದೇಶದಲ್ಲಿದ್ದ ದೇವಸ್ಥಾನ ದೊಡ್ಡದಾಗಿ ಅಂಭಾದೇವಿ ನೆಲೆಸಿದ ಈ ಪ್ರದೇಶ ಅಂಭಾಮಠವಾಗಿ ಬೆಳೆಯುತ್ತದೆ. ಇಂತಹ ಮಠ ಈಗ ಲಕ್ಷಾಂತರ ಭಕ್ತರ ತಾಣವಾಗಿದೆ.

ಚಿದಾನಂದ ಅವಧೂತರು ಈ ಕ್ಷೇತ್ರದಲ್ಲಿ ನೆಲೆಸಿರುವ ಶ್ರೀ ಬಗಳಾಮುಖಿ (ಅಂಭಾದೇವಿ) ಯನ್ನು ಒಲಿಸಿಕೊಂಡು 'ದೇವಿ ಮಹಾತ್ಮೆ' ಎಂಬ ಗ್ರಂಥವನ್ನು ರಚಿಸಿದರು.[೧೭] ಇದು ಶ್ರೀ ಚಿದಾನಂದ ಅವಧೂತರು ತಪಸ್ಸಿನ ಸಿದ್ಧಿಯ ಸ್ಥಳವಾಗಿದೆ. ಅವಧೂತರ ಮಠದ ಸುತ್ತಮುತ್ತಲೂ ಹಲವು ಪ್ರಾಚೀನ ಅವಶೇಷಗಳನ್ನು ಕಾಣಬಹುದಾಗಿದೆ. ಮಠದ ಮುಂದುಗಡೆ ಯೋಗ ಮಂಟಪವಿದ್ದು, ಅನೇಕ ಸಾಧು ಸಂತರು, ಇಲ್ಲಿ ತಪಸ್ಸು ಮಾಡುತ್ತಿದ್ದರು ಎಂದು ತಿಳಿದು ಬಂದಿದೆ. ಈಗಲೂ ಇಲ್ಲಿ ಸಾಧು ಸಂತರು ವಾಸವಾಗಿದ್ದಾರೆ. ಇಲ್ಲಿ ಚಿದಾನಂದ ಅವಧೂತರ ಗದ್ದುಗೆ ಇದೆ.

೪.೨ ಮೂರ್ತಿಶಿಲ್ಪ

ಚಿತ್ರಕಲೆಯಷ್ಟೇ ಪ್ರಾಚೀನವಾದ ಮತ್ತು ವೈವಿಧ್ಯಮಯವಾದ ಕಲೆ ಎಂದರೆ, ಅದು ಶಿಲ್ಪಕಲೆ. ಇತಿಹಾಸದುದ್ದಕ್ಕೂ ಮೂರ್ತಿಶಿಲ್ಪಕ್ಕೂ ಮತ್ತು ವಾಸ್ತುಶಿಲ್ಪಕ್ಕೂ ನಿಕಟ ಬೆಸುಗೆ ಇರುವುದನ್ನು ಕಾಣುತ್ತೇವೆ. ಪ್ರಾಯಶಃ ಇವೆರೆಡೂ ಕ್ಷೇತ್ರಕ್ಕೆ ಒಂದೇ ಬಗೆಯ ಸಾಮಾಗ್ರಿಯನ್ನು ಬಳಸಿರುವುದು ಇದಕ್ಕೆ ಕಾರಣವಿರಬಹುದು. ಶಿಲ್ಪಿಯ ಕಲಾತ್ಮಕ ಅಭಿವ್ಯಕ್ತಿ ಮತ್ತು ಅವನ ಉದ್ದೇಶ ಶಿಲ್ಪದಲ್ಲಿ ವ್ಯಕ್ತವಾಗುತ್ತದೆ. ಅನೇಕ ಶಿಲ್ಪಿಗಳು ತಮ್ಮಲ್ಲಿ ಹುದುಗಿರುವ ಸೃಜನಶೀಲ ಪ್ರತಿಭೆಯ ಅಭಿವ್ಯಕ್ತಿ ಸಲುವಾಗಿ ಶಿಲ್ಪರಚನೆಯಲ್ಲಿ ತಮ್ಮನ್ನು ತಾವು ತೊಡಗಿಸಿಕೊಳ್ಳುತ್ತಾರೆ. ಭಾವನೆಗಳ ಅಭಿವ್ಯಕ್ತಿ ಶಿಲ್ಪಿಯ ಸಂವಹನಕ್ಕೆ ಸಂಬಂಧಿಸಿದ ಪ್ರಮುಖ ಅಂಶವಾಗಿರುತ್ತದೆ.

ಪ್ರಾಗಿತಿಹಾಸ ಕಾಲದ ಮಾನವ ತಾನೂ ಬಳಸುತ್ತಿದ್ದ ದಂತ, ಶಿಲೆ, ಮಣಿಗಳಲ್ಲಿ ಹಾಗೂ ಗುಹೆಗಳಲ್ಲಿ ಕುಟ್ಟಿ ಮೂಡಿಸಿದ ಚಿತ್ರ, ಗಿರುಚಿತ್ರ, ವರ್ಣಚಿತ್ರ ಇತ್ಯಾದಿಗಳನ್ನೂ ಬಿಡಿಸುತ್ತಿದ್ದ ಅದರ ಮುಂದುವರೆದ ಫಲಶೃತಿಯೇ ಈ ಶಿಲ್ಪಕಲೆ ಎಂದೂ ಹೇಳಬಹುದು. ಪ್ರಾಚೀನ ಕಾಲದಿಂದಲೂ ಮಾನವನ ಒಂದು ಮನರಂಜನೆಯ ಭಾಗವಾಗಿ ಬೆಳೆದು ಬಂದು ಕಾಲ ಕ್ರಮೇಣ ಇದರಲ್ಲಿ ಶಾಸ್ತ್ರಗಳು ಬೆಳೆದು ನಿಂತವು. ಅವುಗಳನ್ನು ಮಾನಸಾರ, ಮಯಮತ, ಅಪರಾಜಿತಪೃಚ್ಛ, ಸಮರಾಂಗಣ

ಸೂತ್ರಧಾರ, ಶ್ರೀ ಕಾಶ್ಯಪ ಶಿಲ್ಪಶಾಸ್ತ್ರಂ, ೨೭ ಶೈವ, ವೈಖಾನಸ, ವೈಷ್ಣವ, ಶಾಕ್ತ, ಜೈನ, ಬೌದ್ಧ ಆಗಮಗಳು, ಪುರಾಣಗಳು ಮೊದಲಾದವು ಪ್ರಮುಖವಾಗಿವೆ. ಶಿಲ್ಪಶಾಸ್ತ್ರ ಮೂರ್ತಿಗಳ ರಚನೆಯ ಲಕ್ಷಣಗಳನ್ನು ನಿರ್ದಿಷ್ಟವಾಗಿ ತಿಳಿಸುತ್ತದೆ.[೧೮]

ಶಿಲ್ಪಶಾಸ್ತ್ರದಲ್ಲಿ ಮೂರ್ತಿಗಳನ್ನು ರಚಿಸುವ ಮೊದಲು, ಶಿಲ್ಪಿಯು ಆ ದೇವರ ರೂಪವನ್ನು ಮನನ ಮಾಡಿಕೊಳ್ಳಲು ಆ ದೇವರ ಧ್ಯಾನಶ್ಲೋಕವನ್ನು ಜಪಿಸುತ್ತಾನೆ. ಧ್ಯಾನದ ಮೂಲಕ ಮೂಡಿದ ಶಿಲ್ಪವನ್ನು ಭಾವಶಿಲ್ಪ ಎಂದೂ ಕರೆಯಲಾಗುತ್ತದೆ. ಶಿಲ್ಪಿಯೂ ತಾನೂ ಕಂಡ ರೂಪವನ್ನು ಮರ, ಕಲ್ಲು ಅಥವಾ ಮೇಣದಲ್ಲಿ ರೂಪಿಸುತ್ತಾನೆ. ನಿರ್ಮಿಸಿದ ಮೂರ್ತಿಯನ್ನು ಸುಮೂಹರ್ತದಲ್ಲಿ ನಿರ್ದಿಷ್ಟ ಸ್ಥಳದಲ್ಲಿ ಪ್ರತಿಷ್ಠಾಪನೆ ಮಾಡಲಾಗುವುದು. ಶಿಲೆಯ ಆಯ್ಕೆಯಿಂದ ಹಿಡಿದು ಮೂರ್ತಿ ಪ್ರತಿಷ್ಠಾಪನೆಯವರೆಗೂ ವಿಧಿ ವಿಧಾನಗಳನ್ನು ಈ ಮೇಲ್ಕಂಡ ಶಾಸ್ತ್ರ ಗ್ರಂಥಗಳಲ್ಲಿ ಕಾಣಬಹುದು.[೧೯]

ಇನ್ನೂ ಶಿಲ್ಪಗಳ ಮಹತ್ವಕ್ಕೆ ಬರುವುದಾದರೆ, ಸಮಾಜದ ಸಮಕಾಲೀನ ಭಾವನೆ ಮತ್ತು ಮೌಲ್ಯಾದರ್ಶಗಳನ್ನು ವಿಶ್ಲೇಷಿಸಿ ವ್ಯಾಖ್ಯಾನಿಸುವ ಕೆಲಸವನ್ನು ಈ ಶಿಲ್ಪಗಳು ಮಾಡುತ್ತ ಬಂದಿವೆ. ಒಂದು ಕಾಲದ ಜನಜೀವನದರೀತಿ ನೀತಿಗಳನ್ನೂ ಭೌತಿಕವಾಗಿ ಪ್ರತಿನಿಧಿಸುವದರ ಮೂಲಕ ಮೂರ್ತಿಶಿಲ್ಪ ಸಶಕ್ತವಾಗಿ ಆಯಾ ಕಾಲಘಟ್ಟದ ಸಂಸ್ಕೃತಿಯನ್ನು ತಿಳಿಸುತ್ತದೆ. ಇದಕ್ಕೆ ಸಾಲಗುಂದ ಪರಿಸರದಲ್ಲಿ ಕಂಡು ಬರುವ ಮೂರ್ತಿಶಿಲ್ಪಗಳು ಸಹಃ ಹೊರತಾಗಿಲ್ಲ ಎಂದೂ ಹೇಳಬಹುದು. ಇಲ್ಲಿನ ಮೂರ್ತಿಶಿಲ್ಪಗಳು ಸಹಃ ಈ ಪರಿಸರದ ಇತಿಹಾಸ ತಿಳಿಸಿಕೊಡುವಲ್ಲಿ ಸಹಾಯಕವಾಗಿವೆ. ಅಧ್ಯಯನದ ಅನುಕೂಲಕ್ಕಾಗಿ ಶೈವ, ವೈಷ್ಣವ ಹಾಗೂ ಇತರೆ ಮೂರ್ತಿಶಿಲ್ಪಗಳೆಂದೂ ವಿಂಗಡಿಸಿಕೊಳ್ಳಲಾಗಿದೆ.

ಶೈವ ಮೂರ್ತಿಶಿಲ್ಪಗಳು

ನಂದಿ ಶಿಲ್ಪಗಳು

ಸಂಖ್ಯೆ	: ೦೧	ಶೈಲಿ	: ಕಲ್ಯಾಣ ಚಾಲುಕ್ಯ
ಊರು	: ಕೆಂಗಲ್	ಅಭಿಮುಖ	: ಪೂರ್ವ
ಸ್ಥಳ	: ತುಂಗಭದ್ರಾ ನದಿ ದಡದ ಪಕ್ಕದಲ್ಲಿ	ಸ್ಥಿತಿ	: ಮಧ್ಯಮ
ಕಾಲ	: ಕ್ರಿ.ಶ. ೧೨–೧೩ನೆ ಶತಮಾನ	ಸಂರಕ್ಷಣೆ	:

ಕಲ್ಯಾಣ ಚಾಲುಕ್ಯ ಶೈಲಿಯಲ್ಲಿ ಕಂಡು ಬರುವ ನಂದಿ ಶಿಲ್ಪವೂ ಕೆಂಗಲ್ ಗ್ರಾಮದ ಹೊರವಲಯದಲ್ಲಿ ಹಾದು ಹೋಗಿರುವ ತುಂಗಭದ್ರಾ ನದಿ ದಂಡೆಯ ಪಕ್ಕದಲ್ಲಿ ಕಂಡುಬರುತ್ತದೆ. ಬಹುಶಃ ದೇವಾಲಯಕ್ಕೆ ಬಳಕೆಯಾಗಿರುವಂತೆ ಗೋಚರಿಸುತ್ತದೆ. ಈ ಸ್ಥಳದಲ್ಲಿ ಎರಡು ನಂದಿ ಶಿಲ್ಪ,

ಒಂದು ಶಿವಲಿಂಗ ದೊರೆತಿದ್ದು ಇವು ಕಲ್ಯಾಣ ಚಾಲುಕ್ಯ ಶೈಲಿಯನ್ನು ಹೋಲುತ್ತವೆ. ಇದರ ಸುತ್ತಮುತ್ತ ದೇವಾಲಯಕ್ಕೆ ಬಳಕೆಯಾಗಿರುವ ಅವಶೇಷಗಳು ಕಾಣಸಿಗುತ್ತವೆ.

ಕಪ್ಪು ಶಿಲೆಯಲ್ಲಿ ಕೆತ್ತನೆ ಮಾಡಿದ್ದು, ಇದರಲ್ಲಿ ಒಂದು ಶಿಲ್ಪ ನಯವಾಗಿ, ಇನ್ನೊಂದು ಒರಟಾಗಿ ಕೆತ್ತನೆಯಾಗಿದೆ. ನಾಲ್ಕು ಕಾಲು ಮಡಚಿಕೊಂಡು ಕುಳಿತುಕೊಂಡಿವೆ. ಹಣೆಗೆ ಗೆಜ್ಜೆ, ಕುತ್ತಿಗೆ ಕೆಳಭಾಗದಲ್ಲಿ ನಾಲ್ಕು ಪಟ್ಟಿಕೆಯ ರೀತಿಯಲ್ಲಿರುವ ಆಭರಣದಲ್ಲಿ ಮುಂದೆ ಚಿಕ್ಕ ಗಂಟೆಯನ್ನು ಚಿತ್ರಿಸಲಾಗಿದೆ. ಅದರ ಕೆಳಗೆ ಡೂಬ್ಬ ಮತ್ತು ಕತ್ತು ಭಾಗವನ್ನು ಒಳಗೊಂಡಂತೆ ಗಂಟೆಗಳಿಂದ ಕೂಡಿದ ಸರವನ್ನು ಹಾಕಲಾಗಿದೆ. ಕಾಲಿಗೆ ಬಳೆ ಮತ್ತು ಕಡಗವನ್ನು ತೊಡಿಸಲಾಗಿದೆ.

ಭೈರವ

ಸಂಖ್ಯೆ : ೦೨ ಶೈಲಿ : ಕಲ್ಯಾಣ ಚಾಲುಕ್ಯ

ಊರು : ಉಪ್ಪಳ ಅಭಿಮುಖ : ದಕ್ಷಿಣ

ಸ್ಥಳ : ಹಾಳೂರು ಸ್ಥಿತಿ : ಮಧ್ಯಮ

ಕಾಲ : ಕ್ರಿ.ಶ. ೧೨-೧೩ನೆ ಶತಮಾನ ಸಂರಕ್ಷಣೆ :

ತುಂಗಭದ್ರಾ ನದಿ ದಂಡೆಯ ಮೇಲೆ ಕಾಣಸಿಗುವ ಉಪ್ಪಳ ಗ್ರಾಮದ ಹಾಳೂರು (ಪ್ರಸ್ತುತ ಸುಡಗಾಡು) ನಲ್ಲಿ ದಕ್ಷಿಣಭಿಮುಖವಾಗಿ ನಗ್ನ ಭೈರವನ ಶಿಲ್ಪ ಕಂಡುಬರುತ್ತದೆ. ವೃಶ್ಚಿಕ ಪೀಠದ ಮೇಲೆ ಎತ್ತರವಾದ ಪಾದುಕೆಗಳನ್ನು ಅಂದರೆ ಪಾದಜಾಲಕವನ್ನು ಧರಿಸಿ ನಿಂತಿದ್ದಾನೆ. ನಾಲ್ಕು ಕೈಗಳಿದ್ದು ಹಿಂದುಗಡೆಯ ಬಲಗೈಯಲ್ಲಿ ತ್ರಿಶೂಲ, ಎಡಗೈಯಲ್ಲಿ ಢಮರುಗ, ಮುಂಬದಿಯ ಬಲಗೈಯಲ್ಲಿ ಖಡ್ಗ, ಎಡಗೈಯನ್ನು ವರದಹಸ್ತದ ರೀತಿಯಲ್ಲಿ ಚಾಚಿದ್ದರು ಅದರಲ್ಲಿ ರುಂಡ ಹಿಡಿದುಕೊಂಡಂತೆ ಅದನ್ನು ನಾಯಿ ತನ್ನ ಬಾಯಿಯಲ್ಲಿ ಹಿಡಿದುಕೊಳ್ಳುಲು ಪ್ರಯತ್ನಿಸುತ್ತಿರುವಂತೆ ಕೆತ್ತಲಾಗಿದೆ.

ಶಿಲ್ಪದ ಹಿಂದುಗಡೆ ಪೂರ್ಣಕುಂಭದ ರೀತಿಯಲ್ಲಿ ಹೂವು ಬಳ್ಳಿಯನ್ನು ಕೆತ್ತಲಾಗಿದ್ದು, ಅದನ್ನು ಕೊನೆಗೆ ತಲೆಯ ಹಿಂದೆ ಕೀರ್ತಿಮುಖದ ರಚನೆ ಕಾಣಬರುತ್ತದೆ. ಕೇಶವನ್ನು ದಪ್ಪವಾಗಿ ಚಿತ್ರಿಸಲಾಗಿ ಹಿಂಬದಿಯಲ್ಲಿ ಬಿಟ್ಟಂತೆ ಇರುವ ಜಟಾಭಾರವನ್ನು ಕಾಣಬಹುದು. ಕೈ ಮತ್ತು ಕಾಲುಗಳಲ್ಲಿ ಕಡಗವನ್ನು ಧರಿಸಲಾಗಿದೆ. ಈ ಮೂರ್ತಿಶಿಲ್ಪಕ್ಕೆ ಸ್ಥಳೀಯರು ಬೆತ್ತಲು ಬರಿಯಪ್ಪ ಎಂದೂ ಕರೆಯುತ್ತಾರೆ. ಸಾಲಗುಂದ ಪರಿಸರದಲ್ಲಿ ಕೆಲವು ಗ್ರಾಮಗಳು ತುಂಗಭದ್ರಾ ನದಿ ದಡದಲ್ಲಿ ಕಾಣಸಿಗುತ್ತವೆ. ಅಂತಹುದೇ ಒಂದು ಗ್ರಾಮ ಉಪ್ಪಳ. ಪ್ರಸ್ತುತ ಅಧ್ಯಯನದ ಕ್ಷೇತ್ರಕಾರ್ಯ ಸಂದರ್ಭದಲ್ಲಿ ಹಲವು ಸಂಸ್ಕೃತಿಯ ಲಕ್ಷಣಗಳು ಈ ಗ್ರಾಮದ ಹಾಳೂರಿನಲ್ಲಿ ಕಂಡುಬಂದಿವೆ.

ವಿನಾಯಕ

ಸಂಖ್ಯೆ : ೦೩
ಊರು : ಸಾಲಗುಂದ
ಸ್ಥಳ : ಕಾಲಕಾಲೇಶ್ವರ ದೇವಾಲಯದ ನವರಂಗದಲ್ಲಿ
ಕಾಲ : ಕ್ರಿ.ಶ. ೧೨-೧೩ನೆ ಶತಮಾನ
ಶೈಲಿ : ಕಲ್ಯಾಣ ಚಾಲುಕ್ಯ
ಅಭಿಮುಖ : ಪೂರ್ವ
ಸ್ಥಿತಿ : ಕನಿಷ್ಠ
ಸಂರಕ್ಷಣೆ :

ಸಾಲಗುಂದ ಗ್ರಾಮದಲ್ಲಿ ಕಂಡು ಬರುವ ಕಾಲಕಾಲೇಶ್ವರ ದೇವಾಲಯದ ನವರಂಗದಲ್ಲಿ ಪೂರ್ವಭಿಮುಖವಾಗಿ ಬಲಗಡೆ ಭಾಗದಲ್ಲಿ ಗಣೇಶನ ಶಿಲ್ಪ ಕಂಡುಬರುತ್ತದೆ. ಇದು ಉಬ್ಬುಶಿಲ್ಪವಾಗಿದ್ದು, ಸುಖಾಸನದ ಮಾದರಿಯಲ್ಲಿ ಕುಳಿತಂತೆ, ಶಿಲ್ಪದ ಹಿಂದೆ ಕೀರ್ತಿಮುಖದ ರಚನೆ ಕಂಡು ಬರುತ್ತದೆ. ಮಾವಿನ ಎಲೆಯ ರೀತಿಯಲ್ಲಿ ಕಿವಿಗಳಿವೆ. ತಲೆ ಭಾಗ ಸಣ್ಣದಾಗಿದ್ದು, ಹೊಟ್ಟೆ ದಪ್ಪವಾಗಿ ಒಕ್ಕಳು ಭಾಗ ಕಾಣುವಂತೆ ಕೆತ್ತಲಾಗಿದೆ. ಸೊಂಡಿಲು ತುಂಡಾಗಿದೆ. ಪೀಠದ ಕೆಳಗಡೆ ಮೂಷಿಕನನ್ನು ಕೆತ್ತಲಾಗಿದೆ. ಜನಿವಾರ ಧರಿಸಿದಂತೆ ಕಾಣುತ್ತದೆ. ಬಲಗಣ್ಣು ಸ್ಪಷ್ಟವಾಗಿದ್ದು, ಎಡಗಣ್ಣು ಮತ್ತು ಕೈಗಳು ತೃಟಿತವಾಗಿವೆ. ಕಲ್ಯಾಣ ಚಾಲುಕ್ಯ ಶೈಲಿಯ ದೇವಾಲಯವಾಗಿರುವುದರಿಂದ ಈ ಮೂರ್ತಿಶಿಲ್ಪವೂ ಸಹಃ ಅದೇ ಕಾಲಘಟ್ಟದ್ದು ಎಂದೂ ಗುರುತಿಸಬಹುದಾಗಿದೆ. ಸ್ಥಳೀಯರು ವಿನಾಯಕ, ಗಣೇಶ ಎನ್ನುವುದರ ಬದಲಾಗಿ ಹೆಚ್ಚಾಗಿ ಗಣಪ ಎಂದೂ ಕರೆಯುತ್ತಾರೆ.

ವಿನಾಯಕ

ಸಂಖ್ಯೆ : ೦೪
ಊರು : ದಢೇಸೂಗೂರು
ಸ್ಥಳ : ಹಾಳೂರು
ಕಾಲ : ಕ್ರಿ.ಶ. ೧೨-೧೩ನೆ ಶತಮಾನ
ಶೈಲಿ : ಕಲ್ಯಾಣ ಚಾಲುಕ್ಯ
ಅಭಿಮುಖ : ದಕ್ಷಿಣ
ಸ್ಥಿತಿ : ಕನಿಷ್ಠ
ಸಂರಕ್ಷಣೆ :

ದಢೇಸೂಗೂರು ಗ್ರಾಮದ ಹಾಳೂರಿನಲ್ಲಿ ನಾಶವಾಗಿರುವ ಮೂರು ಶಿವಲಿಂಗಳಿರುವ ದೇವಾಲಯದ ಅವಶೇಷಗಳಲ್ಲಿ ವಿನಾಯಕ ಶಿಲ್ಪ ಕಾಣಸಿಗುತ್ತದೆ. ಇದು ಉಬ್ಬುಶಿಲ್ಪವಾಗಿದ್ದು, ಇದನ್ನು ಕೆತ್ತಲು ನೀಲಿ ಮಿಶ್ರಿತ ಕಪ್ಪುಶಿಲೆಯನ್ನು ಬಳಸಿಕೊಳ್ಳಲಾಗಿದೆ. ದಂತ, ಸೊಂಡಿಲು, ಕಿವಿ ಸ್ಪಷ್ಟವಾಗಿದ್ದು, ಉಳಿದ ಭಾಗಗಳು ತೃಟಿತವಾಗಿವೆ. ನೋಡಲು ಸುಖಾಸನದಲ್ಲಿ ಕುಳಿತಂತೆ ಕಾಣುತ್ತದೆ.

ವಿನಾಯಕ

ಸಂಖ್ಯೆ : ೦೫
ಊರು : ಉಪ್ಪಳ
ಶೈಲಿ : ಕಲ್ಯಾಣ ಚಾಲುಕ್ಯ
ಅಭಿಮುಖ : ಪೂರ್ವ

ಸ್ಥಳ : ಹಾಳೂರು ಸ್ಥಿತಿ : ಮಧ್ಯಮ

ಕಾಲ : ಕ್ರಿ.ಶ. ೧೨-೧೩ನೆ ಶತಮಾನ ಸಂರಕ್ಷಣೆ :

ಗ್ರಾಮದ ಹಾಳೂರಿನಲ್ಲಿ ಪೂರ್ವಭಿಮುಖವಾಗಿ ಈಶ್ವರ ದೇವಾಲಯ ಕಾಣಬರುತ್ತದೆ. ಅದರಲ್ಲಿ ಅಂತರಾಳಕ್ಕೆ ಹೊಂದಿಕೊಂಡಂತೆ ಎರಡು ದೇವ ಕೋಷ್ಠಕಗಳಿದ್ದು, ಅದರಲ್ಲಿ ಎರಡು ಬಗೆಯ ವಿನಾಯಕನ ಶಿಲ್ಪ ಕಂಡುಬರುತ್ತವೆ. ಒಂದು ಶಿಲ್ಪ ತನ್ನ ಪ್ರಮಾಣ ಬದ್ಧತೆಯನ್ನು ಕಳೆದುಕೊಂಡಿದೆ. ದಪ್ಪವಾದ ಕಣ್ಣು ಗುಡ್ಡೆಗಳು ಕಂಡುಬರುವುದರಿಂದ ದೃಷ್ಠಿ ಗಣಪತಿ ಎಂದೂ ಕರೆದರೆ ತಪ್ಪಾಗಲಾರದು. ಮತ್ತೊಂದು ಶಿಲ್ಪ ನೋಡಲು ಸುಂದರವಾಗಿ ಪ್ರಮಾಣಬದ್ಧತೆಯಿಂದ ಕೂಡಿದೆ. ನಾಲ್ಕು ಕೈಗಳಿದ್ದೂ ಢಮರುಗ, ಶಂಖ, ದಂಡವನ್ನು ಹಿಡಿದಿರುವಂತೆ, ಒಂದು ಕೈಯನ್ನು ಅಭಯ ಹಸ್ತದ ರೀತಿಯಲ್ಲಿ ಕೆತ್ತಲಾಗಿದೆ. ಜಟಾಮಕುಟವನ್ನು ಧರಿಸಿದಂತೆ ಕಾಣುತ್ತದೆ. ಈ ಶಿಲ್ಪದ ಹೊಟ್ಟೆಯಿಂದ ಕೆಳಭಾಗ ದೇವಾಲಯದ ಅವಶೇಷಗಳಲ್ಲಿ ಹುದುಗಿ ಹೋಗಿದೆ.

ವಿನಾಯಕ

ಸಂಖ್ಯೆ : ೦೬ ಶೈಲಿ : ವಿಜಯನಗರ

ಊರು : ರವುಡಕುಂದ ಅಭಿಮುಖ : ಪೂರ್ವ

ಸ್ಥಳ : ರಂಗನಾಥ ದೇವಸ್ಥಾನದ ರಥದ ಕಲ್ಲಿನ ಬಳಿ ಸ್ಥಿತಿ : ಮಧ್ಯಮ

ಕಾಲ : ಕ್ರಿ.ಶ. ೧೪-೧೫ನೆ ಶತಮಾನ ಸಂರಕ್ಷಣೆ :

ರವುಡಕುಂದ ಗ್ರಾಮದ ಬಂಡೆರಂಗನಾಥ ದೇವಾಲಯದ ರಥದ ಕಟ್ಟೆಗೆ ಒರಗಿಸಿರುವ ಕಲ್ಲಿನ ಕಂಬದ ಪಕ್ಕದಲ್ಲಿ ವಿನಾಯಕನ ಶಿಲ್ಪ ಕಾಣಸಿಗುತ್ತದೆ. ಸುಖಾಸನದಲ್ಲಿ ಕುಳಿತಿರುವಂತೆ, ನಾಲ್ಕು ಕೈಗಳಿದ್ದು, ಅವುಗಳಲ್ಲಿ ಶಂಖ, ಮತ್ತು ಆನೆಯ ದಂತ ಹಿಡಿದುಕೊಂಡಿದ್ದಾನೆ. ಮುಂದಿನ ಎರಡು ಕೈಗಳಲ್ಲಿ ಎಡಗೈ ವರದ ಹಸ್ತದ ರೀತಿಯಲ್ಲಿದ್ದರೆ, ಬಲಗೈ ತೃಟಿತವಾಗಿದೆ. ಹಿಂದುಗಡೆ ಕೀರ್ತಿಮುಖದ ರಚನೆ ಕಂಡುಬರುತ್ತದೆ. ಮಾವಿನ ಎಲೆಯ ರೀತಿಯಲ್ಲಿ ಕಿವಿಗಳಿವೆ.

ಸುಬ್ರಹ್ಮಣ್ಯ

ಸಂಖ್ಯೆ : ೦೭ ಶೈಲಿ : ಕಲ್ಯಾಣ ಚಾಲುಕ್ಯ

ಊರು : ದಢೇಸೂಗೂರು ಅಭಿಮುಖ : ದಕ್ಷಿಣ

ಸ್ಥಳ : ಹಾಳೂರು ಸ್ಥಿತಿ : ಕನಿಷ್ಠ

ಕಾಲ : ಕ್ರಿ.ಶ. ೧೨-೧೩ನೆ ಶತಮಾನ ಸಂರಕ್ಷಣೆ :

ದಥೇಸೂಗೂರು ಗ್ರಾಮದ ಹಾಳೂರಿನಲ್ಲಿ ನಾಶವಾಗಿರುವ ಮೂರು ಶಿವಲಿಂಗಳಿರುವ ದೇವಾಲಯದ ಅವಶೇಷಗಳಲ್ಲಿ ಸುಬ್ರಹ್ಮಣ್ಯ ಶಿಲ್ಪ ಕಾಣಸಿಗುತ್ತದೆ. ಇದು ಉಬ್ಬುಶಿಲ್ಪವಾಗಿದ್ದು, ಇದನ್ನು ಕೆತ್ತಲು ನೀಲಿ ಮಿಶ್ರಿತ ಕಪ್ಪುಶಿಲೆಯನ್ನು ಬಳಸಿಕೊಳ್ಳಲಾಗಿದೆ. ಸಮಭಂಗಿಯಲ್ಲಿ ನಿಂತಿರುವಂತೆ, ಸರ್ವಾಭರಣಭೂಷಿತನಂತೆ ಕಾಣುತ್ತದೆ. ನಾಲ್ಕು ಕೈಗಳಿದ್ದು ಶಂಖ, ಚಕ್ರ, ಕಮಲದ ಮೊಗ್ಗನ್ನು ಹಿಡಿದು ನಿಂತಿರುವಂತೆ ಕೆತ್ತಲಾಗಿದೆ.

ಸುಬ್ರಹ್ಮಣ್ಯ

ಸಂಖ್ಯೆ : ೦೮	ಶೈಲಿ : ಕಲ್ಯಾಣ ಚಾಲುಕ್ಯ
ಊರು : ಸಾಲಗುಂದ	ಅಭಿಮುಖ : ಪೂರ್ವ
ಸ್ಥಳ : ಕಾಲಕಾಲೇಶ್ವರ ದೇವಾಲಯದ ನವರಂಗದಲ್ಲಿ	ಸ್ಥಿತಿ : ಕನಿಷ್ಠ
ಕಾಲ : ಕ್ರಿ.ಶ. ೧೨-೧೩ನೆ ಶತಮಾನ	ಸಂರಕ್ಷಣೆ :

ಸಾಲಗುಂದ ಗ್ರಾಮದಲ್ಲಿ ಕಂಡು ಬರುವ ಕಾಲಕಾಲೇಶ್ವರ ದೇವಾಲಯದ ನವರಂಗದಲ್ಲಿ ಪೂರ್ವಭಿಮುಖವಾಗಿ ಎಡಗಡೆ ಭಾಗದಲ್ಲಿ ಸುಬ್ರಹ್ಮಣ್ಯನ ಶಿಲ್ಪ ಕಂಡುಬರುತ್ತದೆ. ದೇವ ಕೋಷ್ಠಕ ನಿರ್ಮಿಸಿ ಅದರ ಒಳಗೆ ಪ್ರತಿಷ್ಠಾಪಿಸಲಾಗಿದೆ. ಮೂರ್ತಿಶಿಲ್ಪದ ಹಿಂದೆ ಕೀರ್ತಿಮುಖದ ರಚನೆ ಕಂಡು ಬರುತ್ತದೆ. ಸುಖಾಸನದ ಮಾದರಿಯಲ್ಲಿ ಕುಳಿತಿರುವಂತೆ ಕೆತ್ತಲಾಗಿದೆ.

ವೈಷ್ಣವ ಮೂರ್ತಿಶಿಲ್ಪಗಳು

ಆಂಜನೇಯ

ಸಂಖ್ಯೆ : ೦೧	ಶೈಲಿ : ವಿಜಯನಗರೋತ್ತರ
ಊರು : ಕೆಂಗಲ್	ಅಭಿಮುಖ : ಪೂರ್ವ
ಸ್ಥಳ : ತುಂಗಭದ್ರಾ ನದಿ ದಡದ ಪಕ್ಕದಲ್ಲಿ	ಸ್ಥಿತಿ : ಮಧ್ಯಮ
ಕಾಲ : ಕ್ರಿ.ಶ. ೧೭-೧೮ನೆ ಶತಮಾನ	ಸಂರಕ್ಷಣೆ :

ಕೆಂಗಲ್ ಗ್ರಾಮದ ತುಂಗಭದ್ರಾ ನದಿ ದಡದ ಪಕ್ಕದಲ್ಲಿ ಕಂಡುಬರುವ ಆಂಜನೇಯ ಉಬ್ಬುಶಿಲ್ಪವೂ ಪೂರ್ವಭಿಮುಖವಾಗಿ ಕಂಡುಬರುತ್ತದೆ. ಇದನ್ನು ಕಣಶಿಲೆಯಲ್ಲಿ ಕೆತ್ತಲಾಗಿದೆ. ಬಾಲವನ್ನು ತಲೆಯ ಮೇಲೆ ಎತ್ತಿಕೊಂಡು ಎಡಗಡೆ ಮುಖ ಮಾಡಿರುವಂತೆ, ಅಭಯ ಹಸ್ತವನ್ನಿಡಿದು ದ್ವಿಭಂಗಿಯಲ್ಲಿ ನಿಂತಿದ್ದಾನೆ. ಸಾಲಗುಂದ ಪರಿಸರದಲ್ಲಿ ಪ್ರತಿಯೊಂದು ಗ್ರಾಮದಲ್ಲಿ ಅಥವಾ ಆಯಾ ಗ್ರಾಮದ ಹಾಳೂರಿನಲ್ಲಿ ಆಂಜನೇಯ ಸ್ವಾಮಿ ದೇವಾಲಯಗಳು ಕಂಡುಬರುವುದು ಸಾಮಾನ್ಯವಾಗಿದೆ.

ಆಂಜನೇಯ

ಸಂಖ್ಯೆ : ೦೨ ಶೈಲಿ : ವಿಜಯನಗರೋತ್ತರ

ಊರು : ಬಸ್ಸಾಪೂರ ಡಿ ಅಭಿಮುಖ : ದಕ್ಷಿಣ

ಸ್ಥಳ : ಊರ ಮಧ್ಯದಲ್ಲಿ ಸ್ಥಿತಿ : ಮಧ್ಯಮ

ಕಾಲ : ಕ್ರಿ.ಶ. ೧೭-೧೮ನೆ ಶತಮಾನ ಸಂರಕ್ಷಣೆ :

ಸಾಲಗುಂದ ಗ್ರಾಮದಿಂದ ಉತ್ತರಕ್ಕೆ ೪ ಕಿ.ಮೀ ದೂರಲ್ಲಿ ತುಂಗಭದ್ರಾ ನದಿ ದಡದ ಪಕ್ಕದಲ್ಲಿ ಕಂಡುಬರುವ ಮತ್ತೊಂದು ಗ್ರಾಮವೇ ಬಸ್ಸಾಪೂರ ಡಿ. ಈ ಗ್ರಾಮದಲ್ಲಿ ದಕ್ಷಿಣಭಿಮುಖವಾಗಿ ಆಂಜನೇಯ ದೇವಾಲಯವಿದ್ದು ಗರ್ಭಗೃಹದಲ್ಲಿ ಆಂಜನೇಯನ ಉಬ್ಬುಶಿಲ್ಪವಿದೆ. ಇದನ್ನು ಕಣಶಿಲೆಯಲ್ಲಿ ಕೆತ್ತಲಾಗಿದೆ. ಬಾಲವನ್ನು ತಲೆಯ ಮೇಲೆ ಎತ್ತಿಕೊಂಡು ಎಡಗಡೆ ಮುಖಮಾಡಿರುವಂತೆ, ಅಭಯ ಹಸ್ತವನ್ನಿಡಿದು ದ್ವಿಭಂಗಿಯಲ್ಲಿ ನಿಂತಿದ್ದಾನೆ.

ಆಂಜನೇಯ

ಸಂಖ್ಯೆ : ೦೩ ಶೈಲಿ : ವಿಜಯನಗರೋತ್ತರ

ಊರು : ಸೋಮಲಾಪುರ ಅಭಿಮುಖ : ದಕ್ಷಿಣ

ಸ್ಥಳ : ಹಾಳೂರು ಸ್ಥಿತಿ : ಮಧ್ಯಮ

ಕಾಲ : ಕ್ರಿ.ಶ. ೧೭-೧೮ನೆ ಶತಮಾನ ಸಂರಕ್ಷಣೆ :

ಸೋಮಲಾಪುರ ಗ್ರಾಮದಹಾಳೂರಿನಲ್ಲಿ ಕಂಡುಬರುವ ಆಂಜನೇಯ ದೇವಾಲಯದಲ್ಲಿ ದಕ್ಷಿಣಭಿಮುಖವಾಗಿ ಆಂಜನೇಯನ ಉಬ್ಬುಶಿಲ್ಪ ಕಂಡುಬರುತ್ತದೆ. ಇದನ್ನು ಕಣಶಿಲೆಯಲ್ಲಿ ಕೆತ್ತಲಾಗಿದೆ. ಬಾಲವನ್ನು ತಲೆಯ ಮೇಲೆ ಎತ್ತಿಕೊಂಡು ಪೂರ್ವಕ್ಕೆ ಮುಖಮಾಡಿರುವಂತೆ, ಅಭಯ ಹಸ್ತವನ್ನಿಡಿದು ದ್ವಿಭಂಗಿಯಲ್ಲಿ ನಿಂತಿದ್ದಾನೆ.

ಆಂಜನೇಯ

ಸಂಖ್ಯೆ : ೦೪ ಶೈಲಿ : ವಿಜಯನಗರೋತ್ತರ

ಊರು : ದಢೇಸೂಗೂರು ಅಭಿಮುಖ : ದಕ್ಷಿಣ

ಸ್ಥಳ : ಹಾಳೂರು ಸ್ಥಿತಿ : ಮಧ್ಯಮ

ಕಾಲ : ಕ್ರಿ.ಶ. ೧೭-೧೮ನೆ ಶತಮಾನ ಸಂರಕ್ಷಣೆ :

ದಢೇಸೂಗೂರು ಗ್ರಾಮದ ತುಂಗಭದ್ರಾ ನದಿ ದಡದ ಪಕ್ಕದಲ್ಲಿ ಕಂಡುಬರುವ ಆಂಜನೇಯ ಉಬ್ಬುಶಿಲ್ಪವೂ ಪೂರ್ವಭಿಮುಖವಾಗಿ ಕಂಡುಬರುತ್ತದೆ. ಇದನ್ನು ಕಣಶಿಲೆಯಲ್ಲಿ ಕೆತ್ತಲಾಗಿದೆ.

ಬಾಲವನ್ನು ತಲೆಯ ಮೇಲೆ ಎತ್ತಿಕೊಂಡು ಎಡಗಡೆ ಮುಖಮಾಡಿರುವಂತೆ, ಅಭಯ ಹಸ್ತವನ್ನಿಡಿದು ದ್ವಿಭಂಗಿಯಲ್ಲಿ ನಿಂತಿದ್ದಾನೆ. ಇತ್ತೀಚೆಗೆ ಇದಕ್ಕೆ ಸುತ್ತಲೂ ನಾಲ್ಕು ಗೋಡೆಗಳನ್ನು ಕಟ್ಟಿಸಿ ಮೇಲುಗಡೆ ಛತ್ತನ್ನು ನಿರ್ಮಿಸಿ ಅದರಲ್ಲಿ ಆಂಜನೇಯನಿಟ್ಟು ಪೂಜಿಸಲಾಗುತ್ತಿದೆ.

ಬಂಡೆ ರಂಗನಾಥ

ಸಂಖ್ಯೆ : ೦೫	ಶೈಲಿ : ವಿಜಯನಗರೋತ್ತರ
ಊರು : ರವುಡಕುಂದ	ಅಭಿಮುಖ : ಪೂರ್ವ
ಸ್ಥಳ : ಬಂಡೆ ರಂಗನಾಥ ದೇವಸ್ಥಾನ	ಸ್ಥಿತಿ : ಉತ್ತಮ
ಕಾಲ : ಕ್ರಿ.ಶ. ೧೮–೧೯ನೆ ಶತಮಾನ	ಸಂರಕ್ಷಣೆ :

ಸಾಲಗುಂದದಿಂದ ಪಶ್ಚಿಮಕ್ಕೆ ೬ ಕಿ.ಮೀ ದೂರದಲ್ಲಿ ಕಂಡುಬರುವ ಗ್ರಾಮವೇ ರವುಡಕುಂದ. ಇಲ್ಲಿ ಬೆಟ್ಟದ ಕೆಳಗಡೆ ಮತ್ತು ಬೆಟ್ಟದ ಮೇಲೆ ಬಂಡೆ ರಂಗನಾಥನ ದೇವಾಲಯಗಳಿವೆ. ಎರಡರಲ್ಲೂ ಮೂರ್ತಿಶಿಲ್ಪಗಳನ್ನು ಇರಿಸಲಾಗಿದೆ. ನಾಲ್ಕು ಕೈಗಳಿದ್ದು ಸುದರ್ಶನ ಚಕ್ರ, ಶಂಖ ಹಾಗೂ ವರದಹಸ್ತವನ್ನಿಡಿದು ನಿಂತಿರುವಂತೆ, ಮೂರ್ತಿಶಿಲ್ಪದ ಹಿಂದುಗಡೆ ಕೀರ್ತಿಮುಖದ ರಚನೆ ಕಂಡುಬರುತ್ತದೆ. ಇದು ಸರ್ವಾಭರಣಭೂಷಿತ ಹಾಗೂ ಕಟ್ಯವಲಂಬಿತ ಮಾದರಿಯಲ್ಲಿ ಮೂರ್ತಿಶಿಲ್ಪವನ್ನು ಕೆತ್ತಲಾಗಿದೆ.

ಇತರೆ ಮೂರ್ತಿಶಿಲ್ಪಗಳು

ಜಯ ವಿಜಯ

ಸಂಖ್ಯೆ : ೦೧	ಶೈಲಿ : ಕಲ್ಯಾಣ ಚಾಲುಕ್ಯ
ಊರು : ಸಾಲಗುಂದ	ಅಭಿಮುಖ : ಪೂರ್ವ
ಸ್ಥಳ : ಕಾಲಕಾಲೇಶ್ವರ ದೇವಾಲಯದ ನವರಂಗದಲ್ಲಿ	ಸ್ಥಿತಿ : ಕನಿಷ್ಠ
ಕಾಲ : ಕ್ರಿ.ಶ. ೧೨–೧೩ನೆ ಶತಮಾನ	ಸಂರಕ್ಷಣೆ :

ಇಲ್ಲಿನ ಕಾಲಕಾಲೇಶ್ವರ ದೇವಾಲಯದ ಅಂತರಾಳ ಪ್ರವೇಶಿಸುವ ಮುನ್ನ ಅದಕ್ಕೆ ಹೊಂದಿಕೊಂಡಂತೆ ಜಯ ವಿಜಯರ ಉಬ್ಬು ಶಿಲ್ಪಗಳು ಕಂಡುಬರುತ್ತವೆ. ಜಯ ಎಡಕ್ಕೆ ವಾಲಿದಂತೆ, ವಿಜಯ ಬಲಕ್ಕೆ ವಾಲಿದಂತೆ ಕಾಣುವುದರ ಜೊತೆಗೆ ಹಿಂದುಗಡೆ ಕೀರ್ತಿಮುಖದ ರಚನೆ ಕಂಡುಬರುತ್ತದೆ. ಇಬ್ಬರಿಗೂ ತಲಾ ನಾಲ್ಕು ಕೈಗಳಿದ್ದು, ಢಮರುಗ, ಶಂಖ, ಗದೆ ಹಿಡಿದುಕೊಂಡಿದ್ದಾರೆ. ಇಬ್ಬರೂ ಕರಂಡಮಕುಟವನ್ನು ಧರಿಸಿದ್ದು, ತ್ರಿಭಂಗಿಯಲ್ಲಿ ನಿಂತಿರುವರು.

ತೃಟಿತ ಶಿಲ್ಪಗಳು

ಸಂಖ್ಯೆ	: ೦೨	ಶೈಲಿ	: ಕಲ್ಯಾಣ ಚಾಲುಕ್ಯ
ಊರು	: ಸಾಲಗುಂದ	ಅಭಿಮುಖ	: ಪಶ್ಚಿಮ
ಸ್ಥಳ	: ಜಕ್ಕಮ್ಮ ಭಾವಿ ದಡದಲ್ಲಿ	ಸ್ಥಿತಿ	: ಕನಿಷ್ಠ
ಕಾಲ	: ಕ್ರಿ.ಶ. ೧೨–೧೩ನೆ ಶತಮಾನ	ಸಂರಕ್ಷಣೆ	:

ಕಲ್ಯಾಣ ಚಾಲುಕ್ಯ ಶೈಲಿಯಲ್ಲಿ ಕೆತ್ತಲಾಗಿರುವ ಹಲವು ತೃಟಿತ ಮೂರ್ತಿಶಿಲ್ಪಗಳು ಗ್ರಾಮದ ನೀಲಕಂಠ ದೇವಾಲಯದ ಸಮೀಪದಲ್ಲಿರುವ ಜಕ್ಕಮ್ಮ ಭಾವಿ ದಡದಲ್ಲಿ ಕಾಣಸಿಗುತ್ತವೆ. ಇದೇ ಸ್ಥಳದಲ್ಲಿ ಎರಡು ಮೂರ್ತಿಶಿಲ್ಪಗಳು ಕಂಡು ಬಂದಿದ್ದು, ನೋಡಲು ಸುಂದರವಾಗಿದ್ದರೂ ಸಹಃ ಅವುಗಳ ಅಂಗಾಂಗಗಳು ತೃಟಿತವಾಗಿರುವುದರಿಂದ ನಿರ್ದಿಷ್ಟವಾಗಿ ಅವುಗಳ ಹೆಸರನ್ನು ಗುರುತಿಸುವುದು ಕಷ್ಟಸಾಧ್ಯ. ಚಿಕ್ಕ ಚಿಕ್ಕ ಬೆಣಚು ಕಲ್ಲಿನ ಮೇಲೆ ಹಾವುಗಳ ರೇಖಾಚಿತ್ರಗಳು ಕೆತ್ತಿ ಗುಂಪು ಗುಂಪಾಗಿ ಜಕ್ಕಮ್ಮ ಭಾವಿಯ ದಡದ ಮೇಲೆ ಇಡಲಾಗಿದೆ. ಹಲವು ಪ್ರಾಚೀನ ಅವಶೇಷಗಳನ್ನು ಜಕ್ಕಮ್ಮ ಭಾವಿ ದಡದಲ್ಲಿ ಕಾಣಬಹುದು.

ನಾಗಶಿಲ್ಪ

ಸಂಖ್ಯೆ	: ೦೩	ಶೈಲಿ	: ಕಲ್ಯಾಣ ಚಾಲುಕ್ಯ
ಊರು	: ಸಾಲಗುಂದ	ಅಭಿಮುಖ	: ಉತ್ತರ
ಸ್ಥಳ	: ನೀಲಕಂಠೇಶ್ವರ ದೇವಾಲಯದ ನವರಂಗದಲ್ಲಿ	ಸ್ಥಿತಿ	: ಮಧ್ಯಮ
ಕಾಲ	: ಕ್ರಿ.ಶ. ೧೨–೧೩ನೆ ಶತಮಾನ	ಸಂರಕ್ಷಣೆ	:

ಸಾಲಗುಂದ ಗ್ರಾಮದ ಜಕ್ಕಮ್ಮ ಭಾವಿ ಸಮೀಪದಲ್ಲಿರುವ ನೀಲಕಂಠೇಶ್ವರ ದೇವಾಲಯದ ನವರಂಗದಲ್ಲಿ ನಾಗ ಅಥವಾ ಸರ್ಪದ ಉಬ್ಬುಶಿಲ್ಪ ಮತ್ತು ಅದರ ಪಕ್ಕದಲ್ಲಿ ತಳುಕು ಹಾಕಿಕೊಂಡಿರುವಂತೆ ಜೋಡಿ ನಾಗರಹಾವುಗಳ ಉಬ್ಬುಶಿಲ್ಪವಿದೆ. ನಾಗ ಶಿಲ್ಪದಲ್ಲಿ ಮುಖ, ತಲೆ, ಕಿವಿಗಳು, ಕಣ್ಣುಗಳು, ಮತ್ತು ಕುತ್ತಿಗೆಯಿಂದ ಸೊಂಟದ ಭಾಗದವರೆಗೆ ಮನುಷ್ಯನಂತೆ ಶರೀರವಿದ್ದು ಸೊಂಟದ ಕೆಳಭಾಗದಲ್ಲಿ ತೊಡೆ ಕಾಲುಗಳ ಬದಲಿಗೆ ಸರ್ಪದ ಬಾಲದ ತುದಿಯನ್ನು ಕೆತ್ತಲಾಗಿದೆ. ಎರಡು ಕೈಗಳಿದ್ದು ಬಲಗೈಯಲ್ಲಿ ಖಡ್ಗ ಎಡಗೈಯಲ್ಲಿ ಗುರಾಣಿ ಹಿಡಿದುಕೊಂಡಿದ್ದಾನೆ. ತಲೆಯ ಮೇಲೆ ಏಳು ಹೆಡೆ ಸರ್ಪ ಕಾಣುವ ರೀತಿಯಲ್ಲಿ ಚಿತ್ರಿಸಲಾಗಿದೆ. ಕುತ್ತಿಗೆ ಭಾಗದಲ್ಲಿ ಆಭರಣಗಳು ಹಾಕಿಕೊಂಡಂತೆ ಕಾಣಿಸುತ್ತದೆ ಆದರೆ ತೃಟಿತವಾಗಿವೆ. ಸ್ಥಳಿಯರು ಏಳುಹೆಡೆ ಸರ್ಪ ಎಂದೂ ಕರೆದು ಪೂಜಿಸುತ್ತಿದ್ದಾರೆ.

ಮದನಿಕೆ

ಸಂಖ್ಯೆ : ೦೪

ಊರು : ಸಾಲಗುಂದ

ಸ್ಥಳ : ಜಕ್ಕಮ್ಮ ಭಾವಿ ದಡದಲ್ಲಿ

ಕಾಲ : ಕ್ರಿ.ಶ. ೧೨-೧೩ನೆ ಶತಮಾನ

ಶೈಲಿ : ಕಲ್ಯಾಣ ಚಾಲುಕ್ಯ

ಅಭಿಮುಖ : ಪಶ್ಚಿಮ

ಸ್ಥಿತಿ : ಕನಿಷ್ಠ

ಸಂರಕ್ಷಣೆ :

ಸುಂದರ ಕೆತ್ತನೆಯುಳ್ಳ ಕಾಲು ಕುತ್ತಿಗೆಯಿಲ್ಲದಿರುವ ಒಂದು ಸ್ತ್ರೀ ಶಿಲ್ಪ ದೊರೆತಿದ್ದು ಇದನ್ನು ಪ್ರಮಾಣ ಬದ್ಧತೆಯಿಂದ ಕೆತ್ತಲಾಗಿದೆ. ಕುತ್ತಿಗೆಗೆ ಐದು ಬಗೆಯಲ್ಲಿ ಆಭರಣಗಳನ್ನು ಹಾಕಲಾಗಿದೆ. ಶರೀರದ ಮಧ್ಯದಲ್ಲಿ ಸಿಂಗರಿಸಿದ ಆಭರಣವೊಂದು ಅಡ್ಡ ಪಟ್ಟಿಯ ರೀತಿಯಲ್ಲಿ ಕಂಡುಬರುತ್ತದೆ ಇದು ಕುಸುರಿ ಕೆತ್ತನೆಗಳನ್ನು ಒಳಗೊಂಡಿದೆ. ಸೊಂಟದ ಕೆಳಭಾಗದಲ್ಲಿ ಕಂಡುಬರುವ ಆಭರಣಗಳು ಸಹಃ ಕಲಾತ್ಮಕವಾಗಿದ್ದು ಅದನ್ನು ಕಟಿಸೂತ್ರ ಎಂದೂ ಗುರುತಿಸಬಹುದು. ನೀಲಿ ಮಿಶ್ರಿತ ಕಪ್ಪು ಶಿಲೆಯನ್ನು ಶಿಲ್ಪಿ ಬಳಸಿಕೊಂಡಿದ್ದಾನೆ. ಮುಖ ಮತ್ತು ಕಾಲುಗಳಿದ್ದರೆ ಅದರ ಸ್ವರೂಪವನ್ನು ಸಂಪೂರ್ಣವಾಗಿ ನೋಡಬಹುದಾಗಿತ್ತು. ಬಹುಶಃ ಇದು ಮದನಿಕೆಯ ಶಿಲ್ಪವಾಗಿರಬಹುದಾಗಿದೆ.

೪.೪ ಸ್ಮಾರಕಶಿಲ್ಪ

ಒಂದು ನೆಲೆಯ ಪ್ರಾಚೀನ ಅವಶೇಷಗಳು ಅಥವಾ ಸ್ಮಾರಕಗಳು ಅದರ ಐತಿಹಾಸಿಕ ಹಿನ್ನೆಲೆ, ವೈಶಿಷ್ಟ್ಯ ತಿಳಿಸಿಕೊಡುವಲ್ಲಿ ಸಹಾಯಕವಾಗುತ್ತವೆ. ಸ್ಮರಣಾರ್ಥವಾಗಿ, ನೆನಪಿಗಾಗಿ ಅಥವಾ ಇತರೆ ಉದ್ದೇಶಗಳಿಗಾಗಿ ಸ್ಮಾರಕಗಳನ್ನು ಅಥವಾ ಸ್ಮಾರಕಶಿಲ್ಪಗಳನ್ನು ನಿರ್ಮಿಸುವ ಪರಿಪಾಠ ಮೊದಲಿನಿಂದಲೂ ಬೆಳೆದು ಬಂದಿದೆ. ಬಹಿರಂಗವಾಗಿ ಒಬ್ಬ ವ್ಯಕ್ತಿಯನ್ನು ಪ್ರಶಂಸಿಸಲು ಅಥವಾ ಮುಖ್ಯವಾದ ಘಟನೆಯನ್ನು ನೆನೆಪಿಸಿಕೊಳ್ಳಲು ಅಥವಾ ಒಂದು ಸಾಮಾಜಿಕ ಸಮೂಹದ ಹಿಂದಿನ ಘಟನೆಗಳ ನೆನಪಿನ ಸಂದರ್ಭದಲ್ಲಿ ಆ ಗುಂಪಿಗೆ ಪ್ರಮುಖವಾಗಿದ್ದ ಘಟನೆಯನ್ನು ಪ್ರಖ್ಯಾತಗೊಳಿಸಲು ನಿರ್ಮಿಸಿರುವ ಒಂದು ಬಗೆಯ ರಚನಾ ವಿನ್ಯಾಸವನ್ನು ಸ್ಮಾರಕಶಿಲ್ಪಎಂದೂ ಕರೆಯಬಹುದಾಗಿದೆ.

ಕಾಲ, ಗಾತ್ರ, ಆಕಾರ ಅಥವಾ ಐತಿಹಾಸಿಕ ಮಹತ್ವಗಳನ್ನು ಗಮನಿಸಿ ನಿರ್ಮಿಸುವಂತಹ ಪ್ರಾಯೋಗಿಕ ರಚನಾ ವಿನ್ಯಾಸಗಳೂ ಕೂಡ ಕಾಲನಂತರದಲ್ಲಿ ಸ್ಮಾರಕಗಳು ಅಥವಾ ಸ್ಮಾರಕಶಿಲ್ಪಗಳೆಂದು ಕರೆಯಲ್ಪಡುತ್ತವೆ. ಇತ್ತೀಚೆಗೆ ಇವುಗಳನ್ನು ನಗರಗಳ ಅಥವಾ ಸ್ಥಳಗಳ ಸೊಬಗು ಹೆಚ್ಚಿಸಲು ಬಳಸಲಾಗುತ್ತಿದೆ. ಅದರಂತಯೇ ಸಾಲಗುಂದ ಪರಿಸರದಲ್ಲಿ ಹಲವು ಸ್ಮಾರಕಶಿಲ್ಪಗಳು ಅಥವಾ ಸ್ಮಾರಕಗಳು ದೊರೆತಿದ್ದು, ಇವು ಈ ಪ್ರದೇಶದ ಪ್ರಾಚೀನ ಕುರುಹುಗಳಾಗಿವೆ. ಅವುಗಳನ್ನು ಲೌಕಿಕ ಸ್ಮಾರಕಗಳು ಮತ್ತು ಅಲೌಕಿಕ ಸ್ಮಾರಕಗಳೆಂದು ಗುರುತಿಸಿ ಅಧ್ಯಯನದಲ್ಲಿ ಬಳಸಿಕೊಳ್ಳಲಾಗಿದೆ.

ಮಾನವ ತನ್ನ ಅವಶ್ಯಕತೆಗಳಿಗೆ ಅನುಗುಣವಾಗಿ ತನ್ನ ಉಪಯೋಗಕ್ಕೆ ಬಳಸಿಕೊಂಡ ಸ್ಮಾರಕಗಳನ್ನು ಲೌಕಿಕ ಸ್ಮಾರಕಗಳೆಂದು ಕರೆಯಬಹುದು. ಉದಾಹರಣೆ ಕೋಟೆ–ಕೊತ್ತಲು, ಹುಡೇವು–ಬುರ್ಜು, ಮನೆ–ಅರಮನೆ, ಕೆರೆ–ಬಾವಿ, ಹೊಕ್ಕರಣಿಗಳು, ರಸ್ತೆಗಳು ಇತ್ಯಾದಿ ಸ್ಮಾರಕಗಳು ಲೌಕಿಕ ಸ್ಮಾರಕಗಳೆಂದೂ ಕರೆಯಿಸಿಕೊಳ್ಳುತ್ತವೆ.

ಧಾರ್ಮಿಕ ಹಿನ್ನೆಲೆಯುಳ್ಳ ಅಥವಾ ದೇವತಾ ಕಾರ್ಯಗಳಿಗೆ ಸಂಬಂಧಿಸಿದಸ್ಮಾರಕಗಳನ್ನು ಅಲೌಕಿಕ ಸ್ಮಾರಕಗಳೆಂದೂ ಕರೆಯಲಾಗುತ್ತದೆ. ವಾಸ್ತುಶಿಲ್ಪ ಮತ್ತು ಮೂರ್ತಿಶಿಲ್ಪದ ಕುರಿತಾಗಿ ಹೇಳುವ ಸಂದರ್ಭದಲ್ಲಿ ಈ ಪರಿಸರದ ದೇವಾಲಯಗಳು ಮತ್ತು ಮೂರ್ತಿಶಿಲ್ಪಗಳನ್ನು ವಿವರಿಸಲಾಗಿದೆ. ಇಲ್ಲಿ ಸ್ಮಾರಕಶಿಲ್ಪಗಳನ್ನು ಅಂದರೆ, ವೀರಗಲ್ಲು ಹಾಗೂ ಮಾಸ್ತಿಗಲ್ಲುಗಳನ್ನು ವಿವೇಚಿಸುವ ಪ್ರಯತ್ನ ಮಾಡಲಾಗಿದೆ.

ವೀರಗಲ್ಲು

ಹೋರಾಟದಲ್ಲಿ ಮಡಿದ ವೀರನ ನೆನಪಿಗಾಗಿ ಅಥವಾ ಸ್ಮರಣಾರ್ಥಕವಾಗಿ ಸ್ಮಾರಕವಾಗಿ ನೆಟ್ಟ ಶಿಲೆಗಳೇ ವೀರಗಲ್ಲುಗಳು. ಕೆಲವು ಕಡೆ ವೀರಗಲ್ಲಿನಲ್ಲಿ ಬರಹಗಳನ್ನು ಕಾಣಬಹುದಾಗಿದೆ. ವೀರಗಲ್ಲುಗಳು ಒಂದು ಪಟ್ಟಿಕೆ, ಎರಡು ಪಟ್ಟಿಕೆ, ಹಾಗೂ ಅದಕ್ಕಿಂತ ಹೆಚ್ಚಿನ ಪಟ್ಟಿಕೆಗಳನ್ನು ಒಳಗೊಂಡಿರುತ್ತವೆ. ವೀರಗಲ್ಲುಗಳಲ್ಲಿ ವೀರನು ಹೋರಾಡುತ್ತಿರುವ ದೃಶ್ಯ, ವೀರನನ್ನು ಅಪ್ಸರೆಯರು ದೇವಲೋಕಕ್ಕೆ ಕರೆಯದೊಯ್ಯುವ ದೃಶ್ಯ ಮತ್ತು ವೀರನು ಸ್ವರ್ಗದಲ್ಲಿರುವ ಚಿತ್ರಗಳನ್ನು ಸಾಮಾನ್ಯವಾಗಿ ಕಾಣಬಹುದಾಗಿದೆ.

ವಿವಿಧ ಪ್ರಕಾರದ ವೀರಗಲ್ಲುಗಳನ್ನು ಕಾಣಬಹುದಾಗಿದ್ದು, ಯುದ್ಧದಲ್ಲಿ ಮಡಿದ ವೀರಗಲ್ಲುಗಳು. ಗೋಗ್ರಾಹಣದಲ್ಲಿ ಮಡಿದ ವೀರರ ವೀರಗಲ್ಲುಗಳು ಹಾಗೂ ಹೆಂಗಸರ ಮಾನಭಂಗ ಪ್ರಸಂಗಗಳಲ್ಲಿ ಹೋರಾಡಿ ಮಡಿದ ವೀರರ ವೀರಗಲ್ಲುಗಳು, ವೀರಮಹಾಸತಿಗಲ್ಲುಗಳು ಎಂದೂ ವಿಂಗಡಿಸಲಾಗುತ್ತದೆ. ಕರ್ನಾಟಕದ ವೀರಗಲ್ಲುಗಳನ್ನು ಎರಡು ರೀತಿಯಲ್ಲಿ ವಿಂಗಡಿಸಲಾಗುತ್ತದೆ.

ಹೋರಾಟದಲ್ಲಿ ಅರಸನ ಪರವಾಗಿಯೋ, ಊರಿನ ಹಿತರಕ್ಷಣೆಗಾಗಿಯೋ ಶತ್ರುವಿನಿಂದ ಮಡಿದ ವೀರರ ಸ್ಮಾರಕ ಶಿಲೆಗಳು. ಅರಸನ ಪರವಾಗಿಯೋ, ಊರಿನ ಹಿತದೃಷ್ಟಿಯಿಂದಲೋ, ವೈಯಕ್ತಿಕ ಮೋಕ್ಷಾಪೇಕ್ಷೆಯ ದೃಷ್ಟಿಯಿಂದಲೋ ಹಿಂಸಾತ್ಮಕವಾದ ರೀತಿಯಲ್ಲಿ ಆತ್ಮಬಲಿಯನ್ನು ಮಾಡಿಕೊಂಡು ಮಡಿದ ವೀರರ ಸ್ಮಾರಕಗಳು.[೨೦]

ಒಟ್ಟಾರೆಯಾಗಿ ಸ್ಮಾರಕವಾಗಿ ನಿಲ್ಲಿಸಿದ ಶಿಲೆಯೇ ವೀರಶಾಸನ ಅಥವಾ ವೀರಗಲ್ಲು. ಯಾವುದೋ ಕಾಲದಲ್ಲಿ ಯಾರೋ ನಿಲ್ಲಿಸಿದ ವೀರಗಲ್ಲುಗಳು ಇಂದಿಗೂ ಈ ಪರಿಸರದ ಜನರು ಪೂಜಿಸುತ್ತಿರುವುದು ಗಮನಾರ್ಹವಾಗಿದೆ.

ಉಪ್ಪಳ ಗ್ರಾಮದ ಹಾಳೂರಿನಲ್ಲಿ ಪಾಳು ಬಿದ್ದಿರುವ ಈಶ್ವರ ದೇವಾಲಯದ ಸಮೀಪದಲ್ಲಿ ಕಂಡುಬರುವ ಬಿಲ್ಲು ಬಾಣ ಹಿಡಿದು ನಿಂತಿರುವ ವೀರಗಲ್ಲು

ಸಂಖ್ಯೆ : ೦೧ — ಕಾಲ : ಕ್ರಿ.ಶ. ೧೧-೧೨ನೆ ಶತಮಾನ

ಶಿಲ್ಪ : ವೀರಗಲ್ಲು — ರಾಜವಂಶ : ಕಲ್ಯಾಣ ಚಾಲುಕ್ಯ

ಊರು : ಉಪ್ಪಳ — ಸ್ಥಿತಿ : ಮಧ್ಯಮ

ಸ್ಥಳ : ಈಶ್ವರ ದೇವಾಲಯದ ಸಮೀಪ — ಅಳತೆ : ೩x೨ ಅಡಿ ಎತ್ತರ, ಅಗಲ.

ನೀಲಿ ಮಿಶ್ರಿತ ಕಪ್ಪುಶಿಲೆಯಲ್ಲಿ ಕೆತ್ತಲಾಗಿದ್ದು, ಮೂರು ಸುರುಳಿಯಲ್ಲಿ ಕೇಶವನ್ನು ಸುತ್ತಿ ವೀರಮುಡಿ ಕಟ್ಟಿದಂತೆ ಕಾಣಲಾಗುತ್ತದೆ. ಮೇಲೆ ಸೂರ್ಯ ಚಂದ್ರರ ಚಿಹ್ನೆಗಳಿವೆ. ಕಿವಿಯಲ್ಲಿ ಓಲೆ ಕೊರಳಲ್ಲಿ ಹಾರ ಮತ್ತು ಜನಿವಾರ ಧರಿಸಿರುವನು. ಎಡಗೈಯಲ್ಲಿ ಬಿಲ್ಲು ಬಲಗೈಯಲ್ಲಿ ಬಾಣ ಹಿಡಿದು ಗುರಿಯ ಕಡೆಗೆ ದೃಷ್ಟಿ ಹಾಯಿಸಿ ನಿಂತಿರುವನು. ಸ್ಥಳೀಯರು ಇದನ್ನು ಮಳೆರಾಯಪ್ಪ ಎಂದೂ ಕರೆಯುತ್ತಾರೆ. ಊರಿಗೆ ಬರಗಾಲ ಬಂದಾಗ ಈ ಶಿಲ್ಪವನ್ನು ಪೂಜಿಸುತ್ತಾರೆ.

ಉಪ್ಪಳ ಗ್ರಾಮದ ಹಾಳೂರಿನಲ್ಲಿ ಪಾಳು ಬಿದ್ದಿರುವ ಬೈರವ ದೇವಾಲಯದ ಸಮೀಪದಲ್ಲಿ ಕಂಡುಬರುವ ಬಿಲ್ಲು ಬಾಣ ಹಿಡಿದು ನಿಂತಿರುವ ವೀರಗಲ್ಲು

ಸಂಖ್ಯೆ : ೦೨ — ಕಾಲ : ಕ್ರಿ.ಶ. ೧೧-೧೨ನೆ ಶತಮಾನ

ಶಿಲ್ಪ : ವೀರಗಲ್ಲು — ರಾಜವಂಶ: ಕಲ್ಯಾಣ ಚಾಲುಕ್ಯ

ಊರು : ಉಪ್ಪಳ — ಸ್ಥಿತಿ : ಮಧ್ಯಮ

ಸ್ಥಳ : ಭೈರವ ದೇವಾಲಯದ ಸಮೀಪ — ಅಳತೆ : ೩x೨ ಅಡಿ ಎತ್ತರ, ಅಗಲ.

ಹೆಚ್ಚು ಅಲಂಕರಣೆಗಳಿಂದ ಕೂಡಿದ್ದು, ನೀಲಿ ಮಿಶ್ರಿತ ಕಪ್ಪು ಶಿಲಿಯಲ್ಲಿ ಕೆತ್ತಲಾಗಿದೆ. ಇದರಲ್ಲಿರುವ ಉಡುಪು ಮತ್ತು ಆಭರಣಗಳನ್ನು ನೋಡಿದರೆ ಬಹುಶಃ ಇದು ಅಧಿಕಾರಿವರ್ಗ ಅಥವಾ ರಾಜಮನೆತನದವರಿಗೆ ಸಂಬಂಧಿಸಿದ ವೀರಗಲ್ಲು ಎಂದೂ ಕರೆದರೆ ತಪ್ಪಗಲಾರದು. ಅಥವಾ ನೈಪುಣ್ಯತೆಯುಳ್ಳ ಶಿಲ್ಪಿಯೂ ಕೆತ್ತನೆ ಮಾಡಿರಬಹುದು. ಎಡಗಡೆ ವೀರಮುಡಿಯನ್ನು ಕಟ್ಟಿದ್ದು ಹಣೆಯಲ್ಲಿ ತಿಲಕ, ಕಿವಿಯಲ್ಲಿ ಓಲೆ, ಕೊರಳಲ್ಲಿ ಎರಡು ಪಟ್ಟಿಕೆಯುಳ್ಳ ಹಾರ ಧರಿಸಿರುವನು. ತೋಳಬಂದಿ, ಕೈ ಮತ್ತು ಕಾಲುಗಳಲ್ಲಿ ಕಡಗ, ಸೊಂಟದಲ್ಲಿ ಕಟಿಸೂತ್ರವನ್ನು ಕಾಣಬಹುದು.

ಎಡಗೈಯಲ್ಲಿ ಬಿಲ್ಲನ್ನು ಹಿಡಿದು ಬೆನ್ನು ಹಿಂದಿರುವ ಬತ್ತಳಿಕೆಯಲ್ಲಿ ಬಿಲ್ಲನ್ನು ತೆಗೆದುಕೊಳ್ಳುವ ರೀತಿಯಲ್ಲಿ ಬಲಗೈಯನ್ನು ಚಿತ್ರಿಸಲಾಗಿದೆ.

ರವುಡಕುಂದದ ಬಂಡೆರಂಗನಾಥ ದೇವಾಲಯದ ಬೆಟ್ಟದ ಕೆಳಗೆ ಇರುವ ಕೊಳದ ದಂಡೆಯ ಮೇಲೆ ಕಂಡುಬರುವ ಬೇವಿನ ಮರಕ್ಕೆ ಒರಗಿಸಿರುವ ತೃಟಿತ ವೀರಗಲ್ಲು

ಸಂಖ್ಯೆ : ೦೩	ಕಾಲ : ಕ್ರಿ.ಶ. ೧೦-೧೨ನೆ ಶತಮಾನ
ಶಿಲ್ಪ : ವೀರಗಲ್ಲು	ರಾಜವಂಶ : ಕಲ್ಯಾಣ ಚಾಲುಕ್ಯ
ಊರು : ರವುಡಕುಂದ	ಸ್ಥಿತಿ : ಮಧ್ಯಮ
ಸ್ಥಳ : ಬೆಟ್ಟದ ಕೆಳಭಾಗದಲ್ಲಿರುವ ಕೊಳ	ಅಳತೆ : ೩x೨ ಅಡಿ ಎತ್ತರ, ಅಗಲ.

ನೀಲಿ ಮಿಶ್ರಿತ ಕಪ್ಪು ಶಿಲೆಯಲ್ಲಿ ತುಂಡಾಗಿರುವ ವೀರಗಲ್ಲು ಇದಾಗಿದ್ದು. ಪ್ರಸ್ತುತದಲ್ಲಿ ಎದೆ, ಮುಖ, ಬಲಗೈ ಮತ್ತು ತಲೆಯ ಭಾಗ ಮಾತ್ರ ಕಾಣುತ್ತವೆ. ವೀರಮುಡಿ ಕಟ್ಟಿದ್ದು, ಎಡಗೈಯಲ್ಲಿ ಗುರಾಣಿ ಹಿಡಿದುಕೊಂಡಿದ್ದಾನೆ. ಜನಿವಾರ ಧರಿಸಿದಂತೆ ಕಾಣುತ್ತದೆ. ಕಿವಿಯಲ್ಲಿ ಓಲೆ ಕಂಡುಬರುತ್ತದೆ. ಇದರ ಪಕ್ಕದಲ್ಲಿಯೇ ತೃಟಿತ ಮೂರ್ತಿಶಿಲ್ಪವಿದೆ.

ಮುಕ್ಕುಂದ ಗ್ರಾಮದ ಪಾಪನಾಥೇಶ್ವರ ದೇವಾಲಯದ ಪ್ರಾಕಾರದಲ್ಲಿರುವ ವೀರಗಲ್ಲು

ಸಂಖ್ಯೆ : ೦೪	ಕಾಲ : ಕ್ರಿ.ಶ. ೧೪-೧೫ನೆ ಶತಮಾನ
ಶಿಲ್ಪ : ವೀರಗಲ್ಲು	ರಾಜವಂಶ : ವಿಜಯನಗರ
ಊರು : ಮುಕ್ಕುಂದ	ಸ್ಥಿತಿ : ಮಧ್ಯಮ
ಸ್ಥಳ : ಪಾಪನಥೇಶ್ವರ ದೇವಾಲಯದಲ್ಲಿ	ಅಳತೆ : ೪x೩ ಅಡಿ ಎತ್ತರ, ಅಗಲ.

ಮೂರು ಪಟ್ಟಿಕೆಗಳಿದ್ದು, ಕೆಳಭಾಗದ ಪಟ್ಟಿಕೆಯಲ್ಲಿ ವೀರರಿಬ್ಬರ ಚಿತ್ರಣವಿದೆ. ಕೈಯಲ್ಲಿ ಬಿಲ್ಲು ಹಿಡಿದುಕೊಂಡು ಹೋರಾಡುವ ದೃಶ್ಯವಿದೆ ವೀರರು ಕಾಲಲ್ಲಿ ಕಾಲ್ಗಡಗವನ್ನು ಧರಿಸಿದ್ದಾರೆ. ಹಿಂದುಗಡೆ ಸೈನ್ಯವಿರುವ ಚಿತ್ರಣವಿದೆ ಆದರೆ ಸಷ್ಟವಿಲ್ಲ. ಎರಡನೆಯ ಹಂತದಲ್ಲಿ ಸೈನಿಕರಿಬ್ಬರು ಅಪ್ಸರೆ ಸ್ತ್ರೀಯರ ಜೊತೆ ಸ್ವರ್ಗಕ್ಕೆ ಹೋಗುತ್ತಿರುವಂತೆ ತೋರಿಸಲಾಗಿದೆ. ಮೇಲ್ಭಾಗದ ಪಟ್ಟಿಕೆಯಲ್ಲಿ ವೀರನು ಶಿವಲಿಂಗದ ಬಲಭಾಗದಲ್ಲಿ ಕೈ ಮುಗಿದು ಕುಳಿತ್ತಿದ್ದಾನೆ.[೨೧]

ಸೋಮಲಾಪುರದ ಹಾಳೂರಿನಲ್ಲಿ ಭೀರಮಲ್ಲಪ್ಪ ಮಠದ ಮುಂದೆ ಕಂಡು ಬರುವ ವೀರಗಲ್ಲು

ಸಂಖ್ಯೆ : ೦೫	ಕಾಲ : ಕ್ರಿ.ಶ. ೧೫-೧೬ನೆ ಶತಮಾನ
ಶಿಲ್ಪ : ವೀರಗಲ್ಲು	ರಾಜವಂಶ : ವಿಜಯನಗರೋತ್ತರ
ಊರು : ಸೋಮಲಾಪುರ	ಸ್ಥಿತಿ : ಮಧ್ಯಮ

ಸ್ಥಳ : ಹಾಳೂರು ಅಳತೆ : ೩x೨ ಅಡಿ ಎತ್ತರ, ಅಗಲ.

ಸಾಲಗುಂದ ಪರಿಸರದಲ್ಲಿ ಕಂಡು ಬರುವ ಸೋಮಲಾಪುರ ಗ್ರಾಮದ ಹಾಳೂರಿನ ಪಾಳು ಬಿದ್ದಿರುವ ಭೀರಮಲ್ಲಪ್ಪನ ಮಠದ ಮುಂದೆ ಕಂಡು ಬರುವ ಈ ವೀರಗಲ್ಲಿನಲ್ಲಿ ಒಬ್ಬ ವೀರನ ಚಿತ್ರಣವಿದೆ. ಆ ವೀರನು ಒಂದು ಕೈಯಲ್ಲಿ ಖಡ್ಗ, ಇನ್ನೊಂದು ಕೈಯಲ್ಲಿ ಗುರಾಣಿ ಹಿಡಿದಿರುವುದು ಕಂಡು ಬರುತ್ತದೆ. ಕೊರಳಲ್ಲಿ ಒಂದು ದಾರವಿದ್ದು, ತಲೆಯ ಕೂದಲನ್ನು ಕಟ್ಟಲಾಗಿದೆ. ಇದರ ಮೇಲುಗಡೆ ಸೂರ್ಯ ಚಂದ್ರರ ಚಿಹ್ನೆಗಳಿವೆ. ಕಣ ಶಿಲೆಯ ಹುಟ್ಟು ಬಂಡೆಯ ಮೇಲೆ ಕೆತ್ತಲಾಗಿದೆ.

ಕೆಂಗಲ್ ಹಳೆ ಊರ ಮಧ್ಯದಲ್ಲಿ ಕಂಡುಬರುವ ಬಂದೂಕು ವೀರಗಲ್ಲು

ಸಂಖ್ಯೆ : ೦೬ ಕಾಲ : ಕ್ರಿ.ಶ. ೧೫-೧೬ನೆ ಶತಮಾನ

ಶಿಲ್ಪ : ಬಂದೂಕು ವೀರಗಲ್ಲು ರಾಜವಂಶ : ವಿಜಯನಗರೋತ್ತರ

ಊರು : ಕೆಂಗಲ್ ಸ್ಥಿತಿ : ಮಧ್ಯಮ

ಸ್ಥಳ : ಊರ ಮಧ್ಯದಲ್ಲಿ ಅಳತೆ : ೪x೩ ಅಡಿ ಎತ್ತರ, ಅಗಲ.

ಕೆಂಗಲ್ ಗ್ರಾಮದ ಊರ ಮಧ್ಯದಲ್ಲಿ ಬೇವಿನ ಮರದ ಬಳಿ ಬಂದೂಕು ವೀರಗಲ್ಲು ದೊರೆತಿದ್ದು, ಇದಕ್ಕೆ ಸ್ಥಳೀಯರು ಲೋಹದಿಂದ ತಯಾರಿಸಿದ ಕಣ್ಣುಗಳ ಅಚ್ಚನ್ನು ವೀರ ಕಣ್ಣಿನ ಭಾಗಕ್ಕೆ ಅಂಟಿಸಿ, ಬೇವಿನ ಮರದ ಸುತ್ತಲೂ ಕಟ್ಟೆವೊಂದನ್ನು ನಿರ್ಮಿಸಿ ಅದಕ್ಕೆ ಈರಣ್ಣ ಕಟ್ಟೆ ಎಂದೂ ಹೆಸರಿಟ್ಟು ವೀರಗಲ್ಲನ್ನು ಈರಣ್ಣ ದೇವರೆಂದೂ ಪೂಜಿಸುತ್ತಿದ್ದಾರೆ. ಕಣಶಿಲೆಯಲ್ಲಿ ವೀರನ ಉಬ್ಬುಶಿಲ್ಪವನ್ನು ಕೆತ್ತಲಾಗಿದ್ದು, ಬಲಗೈಯಲ್ಲಿ ಖಡ್ಗ ಎಡಗೈಯಲ್ಲಿ ಬಂದೂಕು ಹಿಡಿದು ನಿಂತಿದ್ದಾನೆ. ಕೈ ಮತ್ತು ಕಾಲುಗಳಲ್ಲಿ ಕಡಗ ಧರಿಸಿದಂತೆ ಕಾಣುತ್ತಿದೆ. ಕೊರಳಲ್ಲಿ ಕಂಠಹಾರ ಮತ್ತು ನಡುವಿನಲ್ಲಿ ಕಟಿಸೂತ್ರವನ್ನು ಧರಿಸಿದಂತೆ ಕಾಣುತ್ತಿದೆ.

ಬಸ್ಸಾಪೂರ ಡಿ ಆಂಜನೇಯ ಸ್ವಾಮಿ ದೇವಾಲಯದ ಮುಂದೆ ಕಂಡುಬರುವ ವೀರಗಲ್ಲು

ಸಂಖ್ಯೆ : ೦೭ ಕಾಲ : ಕ್ರಿ.ಶ. ೧೬-೧೭ನೆ ಶತಮಾನ

ಶಿಲ್ಪ : ವೀರಗಲ್ಲು ರಾಜವಂಶ : ವಿಜಯನಗರೋತ್ತರ

ಊರು : ಬಸ್ಸಾಪೂರ ಡಿ ಸ್ಥಿತಿ : ಮಧ್ಯಮ

ಸ್ಥಳ : ಆಂಜನೇಯ ದೇವಾಲಯದ ಮುಂದೆ ಅಳತೆ : ೫x೪ ಅಡಿ ಎತ್ತರ, ಅಗಲ.

ಕಣಶಿಲೆಯಲ್ಲಿನಿರ್ಮಿಸಲಾಗಿದೆ. ಎಡಗೈ ಅಭಯ ಹಸ್ತದ ರೀತಿಯಲ್ಲಿದ್ದು, ಬಲಗೈಯಲ್ಲಿ ಖಡ್ಗವನ್ನು ಭೂಮಿಗೆ ಅಭಿಮುಖವಾಗಿ ಹಿಡಿದು ನಿಂತಿದ್ದಾನೆ. ಕೈ ಮತ್ತು ಕಾಲುಗಳಲ್ಲಿ ಕಡಗ, ಕಿವಿಯಲ್ಲಿ ಓಲೆ ಧರಿಸಿದಂತೆ ಕಂಡುಬರುತ್ತದೆ. ಉಬ್ಬಶಿಲ್ಪವನ್ನು ಹೊರತುಪಡಿಸಿ ಉಳಿದ ಕಣಶಿಲೆಗೆ

ಸ್ಥಳೀಯರು ಬಣ್ಣ ಹಚ್ಚಿದ್ದಾರೆ. ಮೇಲೆ ಸೂರ್ಯ ಚಂದ್ರರ ಚಿಹ್ನೆಗಳಿವೆ. ಇದನ್ನು ಈ ಊರಿನ ಜನರು ಸಹಃ ಈರಣ್ಣ ದೇವರೆಂದೂ ಪೂಜಿಸುತ್ತಿದ್ದಾರೆ.

ಮುಕ್ಕುಂದ ವೀರಭದ್ರೇಶ್ವರ ದೇವಾಲಯದಲ್ಲಿರುವ ಬಂದೂಕು ವೀರಗಲ್ಲು

ಸಂಖ್ಯೆ	: ೦೮	ಕಾಲ	: ಕ್ರಿ.ಶ. ೧೬-೧೭ನೆ ಶತಮಾನ
ಶಿಲ್ಪ	: ಬಂದೂಕು ವೀರಗಲ್ಲು	ರಾಜವಂಶ	: ವಿಜಯನಗರೋತ್ತರ
ಊರು	: ಮುಕ್ಕುಂದ	ಸ್ಥಿತಿ	: ಮಧ್ಯಮ
ಸ್ಥಳ	: ವೀರಭದ್ರ ದೇವಾಲಯದಲ್ಲಿ	ಅಳತೆ	: ೪x೩ ಅಡಿ ಎತ್ತರ, ಅಗಲ.

ಬಲಗೈಯಿಂದ ಎಡಗೈಗೆ ಅಡ್ಡಲಾಗಿ ಬಂದೂಕು ಹಿಡಿದುಕೊಂಡು ನಿಂತಿದ್ದಾನೆ. ಬಲಗೈಯಲ್ಲಿ ಟ್ರಿಗರ್ ಎಡಗೈಯಲ್ಲಿ ಬಂದೂಕಿನ ಮುಂಭಾಗವಿದೆ. ಸೋಂಟದಲ್ಲಿ ವಸ್ತ್ರ ಕಟ್ಟಿಕೊಂಡಂತೆವಿದೆ. ಅರ್ಧ ತೋಳಿನ ಅಂಗಿ, ಕೆಳಗಡೆ ದೋತಿಯನ್ನು ಸುತ್ತಿಕೊಂಡಂತೆ ಎರಡು ಕಾಲುಗಳ ಪಾದಗಳವರೆಗೆ ಅದರ ನೇರಿಗೆ ಮೂಡಿ ಬಂದಿದೆ. ದಪ್ಪ ಮೀಸೆಯನ್ನು ಬಿಟ್ಟಿದ್ದು ತಲೆಯ ಮೇಲೆ ಪೇಟ ಅಥವಾ ಟೋಪಿ ಹಾಕಿಕೊಂಡಂತೆ ಕಾಣುತ್ತದೆ.[೨೨]

ಮಾಸ್ತಿಗಲ್ಲು

ಮಾಸ್ತಿ ಎಂಬುದು ಸಂಸ್ಕೃತ ಭಾಷೆಯ ಮಹಾಸತಿ ಎಂಬ ಪದದ ಸಂಕ್ಷಿಪ್ತರೂಪ. ಗಂಡ ಅಥವಾ ವೀರನು ಮಡಿದ ಮೇಲೆ ಆ ವೀರನ ಜೊತೆಯಲ್ಲಿಯೇ ಪ್ರಾಣತ್ಯಾಗ ಮಾಡುವ ಸ್ತ್ರಿಯನ್ನು ಮಹಾಸತಿ ಅಥವಾ ಮಾಸ್ತಿ ಎಂದೂ ಕರೆಯಲಾಗುತ್ತದೆ. ಇದರಲ್ಲಿ ಸಹಗಮನ ಮತ್ತು ಅನುಗಮನ ಎಂಬ ಎರಡು ಪ್ರಕಾರದ ಮಾಸ್ತಿಗಲ್ಲುಗಳನ್ನು ಕಾಣಲಾಗುತ್ತದೆ. ಪತಿಯ ಶವದೊಂದಿಗೆ ಚಿತೆಗೆ ಹೋಗುವುದು ಸಹಗಮನ. ಒಂದು ವೇಳೆ ವೀರ ಬೇರೆ ಸ್ಥಳದಲ್ಲಿ ಮಡಿದಲ್ಲಿ ಅವನ ಪ್ರಿಯವಸ್ತುವನ್ನು ಹಿಡಿದು ಚಿತೆಗೆ ಹೋಗುವುದು ಅನುಗಮನ ಎಂದೂ ಕರೆಯಲಾಗುತ್ತದೆ. ವೀರನಾದ ಗಂಡ ಯಾವುದೇ ಸ್ಥಳದಲ್ಲಿ ಹೋರಾಡಿ ಮಡಿದಿರಲಿ ಹೆಂಡತಿ ಚಿತೆಗೆ ಹೋಗಬೇಕು ಎಂಬುದು ಇದರ ಉದ್ದೇಶವಾಗಿರುತ್ತದೆ.[೨೩]

ಪ್ರಸ್ತುತ ಅಧ್ಯಯನದ ಕ್ಷೇತ್ರಕಾರ್ಯದಲ್ಲಿ ಸಾಲಗುಂದ ಪರಿಸರದಲ್ಲಿ ಬರುವ ಉಪ್ಪಳ ಮತ್ತು ಸೋಮಲಾಪುರ ಗ್ರಾಮಗಳಲ್ಲಿ ಮಾಸ್ತಿಗಲ್ಲುಗಳು ದೊರೆತಿವೆ.

ಉಪ್ಪಳ ಗ್ರಾಮದ ಹಾಳೂರಿನಲ್ಲಿ ತುಂಗಭದ್ರಾ ನದಿ ದಂಡೆಯ ಸಮೀಪದಲ್ಲಿ ಕಂಡುಬರುವ ಮಹಾಸತಿಗಲ್ಲು

ಸಂಖ್ಯೆ	: ೦೧	ಕಾಲ	: ಕ್ರಿ.ಶ. ೧೪-೧೫ನೆ ಶತಮಾನ

ಶಿಲ್ಪ : ಮಹಾಸತಿಗಲ್ಲು | ರಾಜವಂಶ : ವಿಜಯನಗರ

ಊರು : ಉಪ್ಪಳ | ಸ್ಥಿತಿ : ಮಧ್ಯಮ

ಸ್ಥಳ : ಹಾಳೂರು | ಅಳತೆ : ೮x೬ ಅಡಿ ಎತ್ತರ, ಅಗಲ.

ಕಣಶಿಲೆಯನ್ನು ಬಳಸಿಕೊಳ್ಳಲಾಗಿದೆ. ಕುದುರೆಯ ಮೇಲೆ ಕುಳಿತ ವೀರನಿಗೆ ಹಿಂದೆ ಮುಂದೆ ಚಾಮರದವರು ಇರುವರು. ಕುದುರೆಯ ಹಿಂದುಗಡೆ ಇರುವ ಚಾಮರದವನ ಹಿಂದೆ ಮಹಾಸತಿ ಎಡಗೈಯಲ್ಲಿ ಖಡ್ಗ, ಬಲಗೈಯಲ್ಲಿ ಬಾಲಕನ ಕೈ ಹಿಡಿದುಕೊಂಡು ಕುದುರೆಯ ಹಿಂದೆ ಹೋಗುತ್ತಿರುವಂತೆ ಕೆತ್ತಲಾಗಿದೆ. ಕುದುರೆಯ ಮೇಲೆ ಕುಳಿತ ವೀರನ ಉಬ್ಬುಶಿಲ್ಪ ಹೆಚ್ಚು ಅಲಂಕರಣೆಯಿಂದ ಕೂಡಿದೆ.

ಬಹುಶಃ ಅಧಿಕಾರಿ ವರ್ಗ ಅಥವಾ ರಾಜ ಪರಿವಾರದವರಿಗೆ ಸಂಬಂಧಿಸಿದ ಸ್ಮಾರಕಶಿಲ್ಪವಾಗಿದ್ದಿರಬಹುದು. ಮಹಾಸತಿಯು ಧರಿಸಿದ ಸೀರೆ ನೇರಿಗೆ ತುಂಬಾ ಕಲಾತ್ಮಕವಾಗಿ ಮೂಡಿಬಂದಿದೆ. ಸೂರ್ಯ ಚಂದ್ರರ ಚಿಹ್ನೆಗಳು ಇರಬಹುದಾದ ಮೇಲ್ಭಾಗ ತುಂಡಾಗಿ ಹೋಗಿದೆ.

ಸೋಮಲಾಪುರದ ರಡ್ಡೆಪ್ಪ ತಾತನ ಕಟ್ಟೆಯ ಆವರಣದಲ್ಲಿ ಕಂಡುಬರುವ ವೀರಸತಿಗಲ್ಲು

ಸಂಖ್ಯೆ : ೦೨ | ಕಾಲ : ಕ್ರಿ.ಶ. ೧೪-೧೫ನೆ ಶತಮಾನ

ಶಿಲ್ಪ : ವೀರಸತಿಗಲ್ಲು | ರಾಜವಂಶ : ವಿಜಯನಗರ

ಊರು : ಸೋಮಲಾಪುರ | ಸ್ಥಿತಿ : ಮಧ್ಯಮ

ಸ್ಥಳ : ರಡ್ಡೆಪ್ಪ ತಾತನ ಕಟ್ಟೆಯ ಆವರಣ | ಅಳತೆ : ೪x೩ ಅಡಿ ಎತ್ತರ, ಅಗಲ.

ಸೋಮಲಾಪುರ ಗ್ರಾಮದ ರಡ್ಡೆಪ್ಪ ತಾತನ ಕಟ್ಟೆಯ ಆವರಣದಲ್ಲಿ ಸತಿಶಿಲ್ಪವಿದೆ. ಮೇಲ್ಭಾಗದಲ್ಲಿ ಸೂರ್ಯ ಚಂದ್ರರ ಚಿತ್ರಣವಿದೆ. ಮಹಿಳೆಯು ವರ್ತುಲಾಕಾರದ ಓಲೆ ಧರಿಸಿ ಮುಡಿ ಕಟ್ಟಿದ್ದಾಳೆ. ಕಾಲಲ್ಲಿ ಕಡಗ ಧರಿಸಿ, ಬಲಗೈಯಿಂದ ಅಡ್ಡಲಾಗಿ ಖಡ್ಗವಿಡಿದು ಎಡಗೈಯಲ್ಲಿ ಖಡ್ಗದ ತುದಿಯನ್ನು ಹಿಡಿದಿದ್ದಾಳೆ. ಸೀರೆ ನೇರಿಗೆಯನ್ನು ಧರಿಸಿದ ರೀತಿ ತುಂಬಾ ಕಲಾತ್ಮಕವಾಗಿದೆ.

೪.೪ ರಕ್ಷಣಾ ವಾಸ್ತುಶಿಲ್ಪ

ರಕ್ಷಣಾ ವಾಸ್ತುಶಿಲ್ಪ ಎಂಬುದು ಸಾಮಾನ್ಯವಾಗಿ ಕೋಟೆಗಳ ಅಧ್ಯಯನಕ್ಕೆ ಬಳಸಿಕೊಳ್ಳುವ ಒಂದು ಬಗೆಯ ವಾಸ್ತುಶೈಲಿ ಎಂದೂ ಕರೆಯಬಹುದು. ಕೋಟೆ ಎಂದರೆ ಗಟ್ಟಿಯಾದಂತಹ ಸ್ಥಳ. ಇದು ಕೋಟೆಯಲ್ಲಿರುವಂತಹ ಎಲ್ಲಾ ಜನರಿಗೆ ಹಾಗೂ ಆಶ್ರಿತರಿಗೆ ಭದ್ರತೆಯನ್ನು ಮತ್ತು ರಕ್ಷಣೆಯನ್ನು ಕೊಡುವಂತಹದ್ದು ಅಲ್ಲದೇ ಸೈನಿಕರಿಂದ ಆವರಿಸಲ್ಪಟ್ಟ ರಕ್ಷಿತವಾದ ದೊಡ್ಡ ಸ್ಥಳ. ಪ್ರಮುಖ ರಾಜಧಾನಿ ಪಟ್ಟಣಗಳಲ್ಲಿ ರಾಜರು, ರಾಜ್ಯ ಸಂಪತ್ತನ್ನು ಕಾಪಾಡಿಕೊಳ್ಳುವ ದೃಷ್ಟಿಯಿಂದ ಕೋಟೆ ಕೊತ್ತಲುಗಳನ್ನು

ನಿರ್ಮಿಸಿಕೊಳ್ಳುತ್ತಿದ್ದರು. ಇದು ಮುಂದುವರೆದು ಸಾಮಂತ, ಮಾಂಡಲಿಕ ಪ್ರದೇಶ, ಆಡಳಿತ ಘಟಕ ಇತ್ಯಾದಿ ತಮಗೆ ಬೇಕಾದ ಆಯಕಟ್ಟಿನ ಸ್ಥಳಗಳಲ್ಲಿ ಕೋಟೆ, ಕಾವಲುಗೋಪುರ, ಬುರ್ಜು ಇತ್ಯಾದಿಗಳನ್ನು ಸಾಮಂತರು ಸಹಃ ನಿರ್ಮಿಸಿಕೊಳ್ಳುವ ಸಂಪ್ರದಾಯ ಬೆಳೆದು ಬಂದಂತೆ ತೋರುತ್ತದೆ.

ಪ್ರಾಚೀನ ಗ್ರಂಥಗಳಾದ ಕೌಟಿಲ್ಯನ ಅರ್ಥಶಾಸ್ತ್ರ, ಮನುಸ್ಮೃತಿ, ಶುಕ್ರನ ನೀತಿಸಾರ, ಮಾನಸಾರ, ದುರ್ಗಸಿಂಹನ ಪಂಚತಂತ್ರ, ಸೋಮೆಶ್ವರನ ಮಾನಸೋಲ್ಲಾಸ ಮುಂತಾದ ಗ್ರಂಥಗಳಲ್ಲಿ ಕೋಟೆಯ ವಿಧಗಳು, ಕೋಟೆ ಕಟ್ಟುವ ಸ್ಥಳ, ಉಪಯೋಗಿಸುವ ಸಾಮಾಗ್ರಿ, ಸಂರಕ್ಷಣಾ ವಿಧಾನ ಇತ್ಯಾದಿ ಅಂಶಗಳನ್ನು ಉಲ್ಲೇಖಿಸುತ್ತವೆ.[೨೪]

ಇತ್ತೀಚೆಗೆ ದೇವಾಲಯ ವಾಸ್ತುಶೈಲಿ, ಮೂರ್ತಿಶಿಲ್ಪ, ಸ್ಮಾರಕ ಶಿಲ್ಪಗಳನ್ನು ಅಧ್ಯಯನ ಮಾಡಿದಂತೆ ಕೋಟೆ ಕೊತ್ತಲುಗಳ ವ್ಯವಸ್ಥಿತ ಅಧ್ಯಯನ ಮಾಡಲು ಇತಿಹಾಸಕಾರನು ರಕ್ಷಣಾವಾಸ್ತು ಎಂಬ ಶೈಲಿಯನ್ನು ಹುಟ್ಟು ಹಾಕಿ ವ್ಯವಸ್ಥಿತವಾಗಿ ಅಧ್ಯಯನ ಮಾಡುತ್ತಿರುವುದು ಸ್ವಾಗತಾರ್ಹವಾದದ್ದು. ಸಾಲಗುಂದ ಪರಿಸರದ ವ್ಯಾಪ್ತಿಯಲ್ಲಿ ಮುಕ್ಕುಂದದಲ್ಲಿ ಕೋಟೆ, ರವುಡಕುಂದದಲ್ಲಿ ಕಾವಲುಗೋಪುರ ಮತ್ತು ಸಾಲಗುಂದದಲ್ಲಿ ಏಳು ಬುರ್ಜುಗಳನ್ನು ಒಳಗೊಂಡ ಕೋಟೆಯ ಅವಶೇಷಗಳು ಕಾಣಸಿಗುತ್ತವೆ. ಕ್ರಮವಾಗಿ ಮೊದಲ ಎರಡು ಕೋಟೆಗಳು ಈ ಪೂರ್ವದ ಅಧ್ಯಯನಗಳಲ್ಲಿ ಉಲ್ಲೇಖಗೊಂಡಿವೆ.

ಮುಕ್ಕುಂದ ಕೋಟೆ

ಸಂಖ್ಯೆ	: ೧	ರಾಜವಂಶ	: ---
ಊರು	: ಮುಕ್ಕುಂದ	ಕಟ್ಟಿಸಿದವರು	: ---
ಸ್ಥಳ	: ಊರ ಗುಡ್ಡದ ಮೇಲೆ	ಸ್ಥಿತಿ	: ಕನಿಷ್ಠ
ಕಾಲ	: ಕ್ರಿ.ಶ.ಸು. ೧೩-೧೪ನೆ ಶತಮಾನ	ಸಂರಕ್ಷಣೆ	: ---

ಈ ಪರಿಸರದಲ್ಲಿ ಕಂಡುಬರುವ ಸಾಲಗುಂದೆ ೭೦ರ ಆಡಳಿತಕ್ಕೆ ಒಳಪಟ್ಟ ಮತ್ತೊಂದು ಗ್ರಾಮ ಮುಕ್ಕುಂದ. ಈ ಊರಿನಲ್ಲಿ ಮೂರು ಗುಡ್ಡಗಳ ಹಿನ್ನೆಲೆಯಲ್ಲಿ ಮತ್ತು ಮುರಾರಿ ದೇವಸ್ಥಾನದ ಹಿನ್ನೆಲೆಯಲ್ಲಿ ಮುಕ್ಕುಂದ ಎಂಬ ಸ್ಥಳನಾಮ ಬಂದಿರಬಹುದಾಗಿದ್ದು, ಊರ ಗುಡ್ಡದ ಮೇಲೆ ಕೋಟೆಯನ್ನು ನಿರ್ಮಿಸಲಾಗಿದೆ. ಬಹುಶಃ ಇದು ವಿಜಯನಗರ ಕಾಲದಲ್ಲಿ ಸಾಲಗುಂದೆಯ ಸಿಂಧರು ನಿರ್ಮಿಸಿರಬಹುದು. ವಿಶಾಲವಾದ ಬಂಡೆಗಳ ಮೇಲೆ ಶಿಥಿಲಾವಸ್ಥೆಯಲ್ಲಿರುವ ಗೋಡೆಗಳನ್ನು

ಕಾಣಬಹುದಾಗಿದೆ. ಸಂರಕ್ಷಣೆಯ ದೃಷ್ಟಿಯಿಂದ ಕನಿಷ್ಠ ಸ್ಥಿತಿಯಲ್ಲಿದ್ದು, ಕೋಟೆಯ ಗೋಡೆಗಳು ಬಿದ್ದುಹೋಗಿವೆ.

ರವುಡಕುಂದ ಕೋಟೆ

ಸಂಖ್ಯೆ : ೨	ರಾಜವಂಶ : ---
ಊರು : ರವುಡಕುಂದ	ಕಟ್ಟಿಸಿದವರು : ---
ಸ್ಥಳ : ಊರ ಗುಡ್ಡದ ಮೇಲೆ	ಸ್ಥಿತಿ : ಕನಿಷ್ಠ
ಕಾಲ : ಕ್ರಿ.ಶ.ಸು. ೧೩-೧೪ನೆ ಶತಮಾನ	ಸಂರಕ್ಷಣೆ : ---

ಇಲ್ಲಿನ ಊರ ಗುಡ್ಡಗಳ ಮೇಲೆ ಬುರುಜು ಮತ್ತು ಅದರ ಸುತ್ತಮುತ್ತಲೂ ಸ್ವಲ್ಪ ಜಾಗದಲ್ಲಿ ಕೋಟೆಯ ರೀತಿಯಲ್ಲಿ ರಕ್ಷಣಾ ಗೋಡೆ ಕಂಡುಬರುತ್ತದೆ. ಬಹುಶಃ ನಿರ್ಮಾಣವಾಗಿರುವ ಬುರುಜುಗೆ ರಕ್ಷಣಾ ಗೋಡೆಯಾಗಿದ್ದಿರಬಹುದು. ಸುಮಾರು ೫೦ ರಿಂದ ೬೦ ಅಡಿ ಎತ್ತರವಿದೆ.

ಸಾಲಗುಂದ ಕೋಟೆ

ಸಂಖ್ಯೆ : ೩	ರಾಜವಂಶ : ---
ಊರು : ಸಾಲಗುಂದ	ಕಟ್ಟಿಸಿದವರು : ---
ಸ್ಥಳ : ಊರ ಗುಡ್ಡಗಳಲ್ಲಿ	ಸ್ಥಿತಿ : ಕನಿಷ್ಠ
ಕಾಲ : ಕ್ರಿ.ಶ.ಸು. ೧೦-೧೧ನೆ ಶತಮಾನ	ಸಂರಕ್ಷಣೆ : ---

ಸಾಲಗುಂದ ಅಗ್ರಹಾರವಾಗಿ, ಆಡಳಿತ ಘಟಕವಾಗಿ ಆಡಳಿತಕ್ಕೆ ಒಳಪಟ್ಟ ಪರಿಸರವಾಗಿದೆ. ಕಲ್ಯಾಣ ಚಾಲುಕ್ಯ ಮನೆತನದ ದಂಡನಾಯಕರಿಂದ ನೇಮಕಗೊಂಡು ಈ ಪರಿಸರವನ್ನು ಆಳಿದ ಸಿಂಧರು ಇದನ್ನು ಒಂದು ಸುಂದರ ನಾಡಾಗಿ ಪರಿವರ್ತಿಸಿದರು. ಇಲ್ಲಿ ಹಲವು ದೇವತಾ ಮಂದಿರಗಳು, ಬಾವಿ, ಹೊಕ್ಕರಣಿಗಳು ಹಾಗೂ ಕೋಟೆ ಬುರುಜುಗಳು ಕಾಣಸಿಗುತ್ತವೆ. ಈ ಮೊದಲು ಸ್ಥಳನಾಮದಲ್ಲಿ ಹೇಳಿದಂತೆ ಸಾಲಗುಂದ ಸಾಲಾಗಿ ಹಲವು ಬೆಟ್ಟಗುಡ್ಡಗಳಿಂದ ಕೂಡಿರುವುದರಿಂದ ಅದರ ಮೇಲೆ ಬುರುಜು ಮತ್ತು ಕೋಟೆ ನಿರ್ಮಾವಾಗಿರುವುದನ್ನು ಕಾಣಬಹುದು. ಏಳು ಬುರುಜುಗಳು, ಸೈನಿಕ ಚಟುವಟಿಕೆಗಳಿಗೆ ಬಳಸಿಕೊಂಡಂತೆ ಕಾಣುವ ಕಟ್ಟಡವೊಂದು ಕಂಡುಬರುತ್ತದೆ. ಇಲ್ಲಿರುವ ಏಳು ಬುರ್ಜುಗಳ ಹಿನ್ನೆಲೆಯಲ್ಲಿ ಏಳು ಊರು ಸೇರಿ ಸಾಲಗುಂದವಾಗಿದೆ ಎಂದೂ ಸ್ಥಳೀಯರು ಹೇಳುತ್ತಿರಬಹುದು.

ಕೊನೆ ಟಿಪ್ಪಣಿಗಳು

೧. ಅಂಬಳಿಕೆ ಹಿರಿಯಣ್ಣ (ಸಂ), ೨೦೦೯, ಕನ್ನಡ ವಿಷಯ ವಿಶ್ವಕೋಶ ಇತಿಹಾಸ ಮತ್ತು ಪುರಾತತ್ವ, ಪು.೯೪೧.

೨. ಮನೋಜ್ ಜಿ., ೨೦೧೫, ದೇವಾಲಯ ವಾಸ್ತು ವಿಜ್ಞಾನ ಶಾಸ್ತ್ರಗಳ ಹಿನ್ನೆಲೆಯಲ್ಲಿ, ಪು.೧೦.

೩. ಅಂಬಳಿಕೆ ಹಿರಿಯಣ್ಣ, ಪೂರ್ವೋಕ್ತ, ಪು.೯೪೧.

೪. ವಾಸುದೇವನ್ ಸಿ.ಎಸ್.,೨೦೧೨, ಕರ್ನಾಟಕ ದೇವಾಲಯ ಕೋಶ ರಾಯಚೂರು ಜಿಲ್ಲೆ, ಪು.೧೬೦-೬೧.

೫. ಅದೇ, ಪು.೧೫೫.

೬. ಅದೇ, ಪು.೧೬೧-೬೨.

೭. ಅದೇ, ಪು.೧೬೨-೬೩.

೮. ದೇವರಕೊಂಡರೆಡ್ಡಿ (ಸಂ), ೨೦೧೨, ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ:೭ ರಾಯಚೂರು ಜಿಲ್ಲೆ, ಪು.೩೪೯-೫೦.

೯. ವಾಸುದೇವನ್ ಸಿ.ಎಸ್., ಪೂರ್ವೋಕ್ತ, ಪು.೧೫೯.

೧೦. ಅದೇ, ಪು.೧೫೪.

೧೧. ಅದೇ, ಪು.೧೫೧-೫೨.

೧೨. ಅದೇ, ಪು.೧೫೮-೫೯.

೧೩. ಮೌಖಿಕ ಸಂದರ್ಶನ, ಪಂಪಾಪತಿ, ವೃತ್ತಿ ಶಿಕ್ಷಕ, ವಯಸ್ಸು ೪೮, ಸೋಮಲಾಪುರ.

೧೪. ವಿಜಯ ಕರ್ನಾಟಕ ದಿನಪತ್ರಿಕೆ, ೨೦೧೫, ಅಕ್ಟೋಬರ್ ೨೦.

೧೫. ಅದೇ.

೧೬. ಅಮರೇಶ ಯತಗಲ್, (ಸಂ), ೨೦೧೦, ರಾಯಚೂರು ದೋ-ಅಬ್ ಇತಿಹಾಸ, ಪು.೨೪೮.

೧೭. ವಿಜಯ ಕರ್ನಾಟಕ ದಿನಪತ್ರಿಕೆ, ಪೂರ್ವೋಕ್ತ.

೧೮. ಅಂಬಳಿಕೆ ಹಿರಿಯಣ್ಣ (ಸಂ), ಪೂರ್ವೋಕ್ತ, ಪು.೮೦೧.

೧೯. ಅದೇ, ಪು.೮೦೧.

೨೦. ಶೇಷ ಶಾಸ್ತ್ರಿ ಆರ್, ೨೦೧೭, ಕರ್ನಾಟಕದ ವೀರಗಲ್ಲುಗಳು, ಪು.೮೮೧.

೨೧. ತಿರುಪತಿ ಜಿ, ೨೦೦೭, ಮುಕ್ಕುಂದಿ ಇತಿಹಾಸ ದೇವಾಲಯ ಮತ್ತು ಶಾಸನಗಳ ಹಿನ್ನೆಲೆಯಲ್ಲಿ, ಪು.೩೯.

೨೨. ಅದೇ, ಪು.೪೦.

೨೩. ಕಲಬುರ್ಗಿ ಎಂ.ಎಂ., ೧೯೮೦, ಸಮಾಧಿ-ಬಲಿದಾನ-ವೀರಮರಣ ಸ್ಮಾರಕಗಳು, ಪು.೨೮.

೨೪. ಅಂಬಳಿಕೆ ಹಿರಿಯಣ್ಣ (ಸಂ), ಪೂರ್ವೋಕ್ತ, ಪು.೨೮೧.

೫. ನಂಬಿಕೆ ಮತ್ತು ಆಚರಣೆ

೫. ನಂಬಿಕೆ ಮತ್ತು ಆಚರಣೆ

ಮೌಖಿಕ ಪರಂಪರೆಯ ಭಾಗವಾಗಿ ಕಂಡುಬರುವ ನಂಬಿಕೆಗಳು ಸಾಂಸ್ಕೃತಿಕ ಅಧ್ಯಯನಕ್ಕೆ ವಿಷಯ ಒದಗಿಸುವ ಪ್ರಮುಖ ಆಚರಣೆಗಳಾಗಿವೆ. ಆಚರಣೆಗಳು ಒಂದು ಸಮಾಜದ ಶ್ರೇಷ್ಠ ದ್ಯೋತ್ಯಕಗಳಾಗಿರಬಹುದು ಅಥವಾ ದೋಷಗಳಾಗಿರಬಹುದು. ಆದರೂ ಅವು ಸಮೂಹ, ಸಮಾಜ, ಗ್ರಾಮ ಹಾಗೂ ಪರಿಸರದ ಆಚಾರ ವಿಚಾರ ಸಂಸ್ಕೃತಿಗಳನ್ನು ಪ್ರತಿನಿಧಿಸುತ್ತವೆ. ಪ್ರಾಚೀನ ಕಾಲದಿಂದಲೂ ನಂಬಿಕೆ ಆಚರಣೆಗಳು ಸಾಮಾಜಿಕ ವ್ಯವಸ್ಥೆಯ ಮೇಲೆ ಹತೋಟಿ ಸಾಧಿಸುತ್ತಾ ಸಂಪ್ರದಾಯ, ಮೌಢ್ಯತೆ ಹಾಗೂ ಕಟ್ಟಳೆಗಳಿಗೆ ಸೀಮಿತವಾದರೂ ಸಂಸ್ಕೃತಿಯ ಭಾಗಗಳಾಗಿವೆ. ಯಾವುದೋ ಕಾಲಘಟ್ಟದಲ್ಲಿ ಯಾರೋ ಆಚರಿಸಿದ ಆಚರಣೆಗಳ ಮೇಲೆ ಜನರು ಇಂದಿಗೂ ನಂಬಿಕೆ ಇಟ್ಟುಕೊಂಡಿರುವುದು, ಅವರ ಪೂರ್ವಜರ ಮೇಲೆ ಇದ್ದಿರುವ ಗೌರವ, ಪೂಜ್ಯ ಭಾವನೆಗಳನ್ನು ತಿಳಿಸಿಕೊಡುತ್ತವೆ. ಅಂತೆಯೇ ಸಾಲಗುಂದ ಪರಿಸರದಲ್ಲಿ ಇಂತಹ ಹಲವು ಐತಿಹ್ಯ, ನಂಬಿಕೆ ಆಚರಣೆಗಳು ಹಾಗೂ ಜಾತ್ರೆ ಉತ್ಸವಗಳು ಕಂಡು ಬಂದರೂ ಕೆಲವು ಮಹತ್ವವೆನಿಸುವ ಐತಿಹಾಸಿಕ ವಿಷಯಗಳನ್ನು ತಿಳಿಸಿಕೊಡುತ್ತವೆ.

೫.೧ ಐತಿಹ್ಯ

ಐತಿಹ್ಯ ಸ್ಥಳ ಪುರಾಣಗಳು ಪ್ರಾಗಿತಿಹಾಸ ಅಥವಾ ಇತಿಹಾಸ ಕಾಲದ ಕುರುಹುಗಳನ್ನು ತಿಳಿಸಿಕೊಡುತ್ತವೆ. ಸಾಮಾನ್ಯವಾಗಿ ಊರಿನ ಹಿರಿಯರು ಐತಿಹ್ಯಗಳನ್ನು ಹೇಳುತ್ತಾರೆ. ಹಿರಿಯರು ಹೇಳುವ ಯಾವುದೋ ಒಂದು ಘಟನೆ, ಐತಿಹ್ಯ, ಸ್ಥಳ ಪುರಾಣ ಅಥವಾ ಕಥೆಗಳು ಕೆಲವು ಸಾರಿ ಎಷ್ಟೋ ಐತಿಹಾಸಿಕ ವಿಷಯಗಳಿಗೆ ಸಂಬಂಧಿಸಿರುತ್ತವೆ. ಪ್ರಸ್ತುತದಲ್ಲಿ ಇದು ಮೌಖಿಕ ಪರಂಪರೆ ಎಂಬ ನಾಮಧೇಯವನ್ನು ಪಡೆದುಕೊಂಡಿದೆ.

ಒಂದು ಕಾಲಘಟ್ಟದಲ್ಲಿ ನಿರ್ಲಕ್ಷಿತವಾದ ವಿಷಯ ವಸ್ತು, ಮತ್ತೊಂದು ಕಾಲಘಟ್ಟದಲ್ಲಿ ತನ್ನದೇ ಆದ ಮಹತ್ವವನ್ನು ಪಡೆದುಕೊಳ್ಳುತ್ತದೆ. ಇಂತಹ ಹಲವು ವಿಷಯಗಳನ್ನು ಉದಾಹರಣೆಯಾಗಿ ನೋಡುವುದಾದರೆ, ಒಂದನೊಂದು ಕಾಲದಲ್ಲಿ ರಾಜಕೇಂದ್ರಿತವಾಗಿ ನಡೆಯುತ್ತಿದ್ದ ಅಧ್ಯಯನಗಳು ಪ್ರಸ್ತುತದಲ್ಲಿ ಜನಕೇಂದ್ರಿತವಾಗಿ ಪ್ರಾಶಸ್ತ್ಯ ಪಡೆದುಕೊಳ್ಳುತ್ತಿವೆ. ಅದರಂತೆ ನಿರ್ಲಕ್ಷಕ್ಕೆ ಒಳಗಾಗಿದ್ದ ಮೌಖಿಕ ಪರಂಪರೆ ಪ್ರಸ್ತುತದಲ್ಲಿ ಮನ್ನಣೆ ಪಡೆದುಕೊಳ್ಳುತ್ತಿರುವುದು ಇತಿಹಾಸಕ್ಕೆ ಸಂಬಂಧಿಸಿದ ವಿಷಯಗಳನ್ನು ತಿಳಿಸುವ ಈ ಐತಿಹ್ಯ, ಸ್ಥಳ ಪುರಾಣ, ದಂತಕತೆಗಳಿಗೆ ಸಲ್ಲಬೇಕು. ಇಂತಹ ಹಲವು ಐತಿಹಾಸಿಕ

ವಿಷಯಗಳನ್ನು ತಿಳಿಸುವ ಐತಿಹ್ಯ ನಂಬಿಕೆ ಆಚರಣೆಗಳು ಸಾಲಗುಂದ ಪರಿಸರದ ಮೌಖಿಕ ಪರಂಪರಯಲ್ಲಿ ಅಡಗಿವೆ.

ಏಳು ಊರು ಸೇರಿ ಸಾಲಗುಂದ ನಿರ್ಮಾಣವಾಗಿದೆ.

ಗ್ರಾಮದ ಕ್ಷೇತ್ರ ಕಾರ್ಯ ಕೈಗೊಂಡ ಸಂದರ್ಭದಲ್ಲಿ ಇಲ್ಲಿನ ಜನರು ಸಾಮಾನ್ಯವಾಗಿ ಸಾಲಗುಂದ ಏಳು ಊರು ಸೇರಿ ನಿರ್ಮಾಣವಾಗಿದೆ ಎಂಬ ಐತಿಹ್ಯವನ್ನು ಹೇಳಿದರು. ಇದರ ಅರ್ಥ ತಿಳಿಯಲು ಪ್ರಯತ್ನಿಸುತ್ತಿರಲು, ಗ್ರಾಮದ ಊರ ಗುಡ್ಡದ ಮೇಲಿರುವ ಆನೆ ಶಂಕರ ದೇವಾಲಯದ ಹಿಂದೆ ಕಾಣಸಿಗುವ ಮಂಟಪಲ್ಲಿ ಕುಳಿತಿರುವಾಗ ಸಾಲಗುಂದ ಸುತ್ತಲಿನ ಬೆಟ್ಟಗಳಲ್ಲಿ ಏಳು ಕಾವಲುಗೋಪುರಗಳು ಕಂಡುಬಂದವು ಈ ಕಾವಲು ಗೋಪುರಗಳ ಹಿನ್ನೆಲೆಯಲ್ಲಿ ಈ ಐತಿಹ್ಯ ಬಂದಿದೆ ಎಂದೂ ಕಾಣುತ್ತದೆ. ಇದನ್ನು ಇನ್ನೊಂದು ರೀತಿಯಲ್ಲಿ ವಿಶ್ಲೇಷಿಸುವದಾದರೆ, ಸಾಲಗುಂದೆ ೭೦ರ ಹಿನ್ನೆಲೆಯಲ್ಲಿ ಈ ಐತಿಹ್ಯ ಹುಟ್ಟಿಕೊಂಡಿರಬಹುದೆಂದೂ ಹೇಳಬಹುದು.

೫.೨ ನಂಬಿಕೆ ಮತ್ತು ಆಚರಣೆ

ಈ ಪರಿಸರದಲ್ಲಿ ಕೆಲವು ವಿಶಿಷ್ಟ ನಂಬಿಕೆ ಆಚರಣೆಗಳಿವೆ. ಹೆರಿಗೆ ಸಂದರ್ಭದಲ್ಲಿ, ಬರಗಾಲ ಕಾಣಿಸಿಕೊಂಡ ಸಂದರ್ಭದಲ್ಲಿ ಈ ಭಾಗದ ಜನರು ತಮ್ಮದೇ ಆದ ನಂಬಿಕೆ ಆಚರಣೆಗಳನ್ನು ಅಳವಡಿಸಿಕೊಂಡಿದ್ದಾರೆ.

ಗಜಲಕ್ಷ್ಮೀ ಪೂಜೆ

ಹೆರಿಗೆ ಸಂದರ್ಭದಲ್ಲಿ ಬಾಣಂತಿಯು ಹೆಚ್ಚಿನ ನೋವು ಅನುಭವಿಸುತ್ತಿದ್ದು, ಅದರಿಂದ ಹೆರಿಗೆ ವಿಳಂಬವಾಗುತ್ತಿದ್ದರೆ, ಬಾಣಂತಿಯ ಸಂಬಂಧಿಕರು ಗಜಲಕ್ಷೀ ಶಿಲ್ಪಕ್ಕೆ ಪೂಜೆ ಸಲ್ಲಿಸಿ, ನಂತರ ಆ ಶಿಲ್ಪವನ್ನು ಉಲ್ಟಾ ಕೆಡವಿದರೆ, ಹೆರಿಗೆ ಸುಲಭವಾಗಿ ಆಗುತ್ತದೆ ಎಂಬ ನಂಬಿಕೆ ಆಚರಣೆ ಈ ಪರಿಸರದಲ್ಲಿ ಪ್ರಾಶಸ್ತ್ಯ ಪಡೆದಿದೆ. ಹೆರಿಗೆಯಾಗಿ ಮೂರು ದಿನಗಳ ನಂತರ ಪೂಜೆ ಸಲ್ಲಿಸಿ ಗಜಲಕ್ಷ್ಮೀ ಶಿಲ್ಪವನ್ನು ಮೊದಲಿನಂತೆ ಸರಿಯಾಗಿ ನಿಲ್ಲಿಸುತ್ತಾರೆ. ಈ ಆಚರಣೆ ಕೆಂಗಲ್, ಬೂದಿವಾಳ ಹಾಗೂ ಮತ್ತಿತ್ತರ ಗ್ರಾಮಗಳಲ್ಲಿದೆ.[೧]

ದುರುಗಮ್ಮನ ಪರ್ವ

ಸರಿಯಾಗಿ ಮಳೆ ಬೆಳೆಯಾಗದೆ, ಗ್ರಾಮ ಬರಗಾಲಕ್ಕೆ ಸಿಲುಕಿದಂತಹ ಪಕ್ಷದಲ್ಲಿ ಊರಿನ ಸಮಸ್ತ ಜನರೆಲ್ಲ ಸೇರಿ ಹುಗ್ಗಿ (ಗೋಧಿ ಮತ್ತು ಬೆಲ್ಲದಿಂದ ತಯಾರಿಸಿದ ಸಿಹಿ ಪದಾರ್ಥ), ಅನ್ನ

ಸಾರು ತಯಾರಿಸಿಕೊಂಡು ಊರ ಹೋರಗಡೆ ಇರುವ ದುರುಗಮ್ಮ, ಮಾರೆಮ್ಮ ಇತ್ಯಾದಿ ದೇವರುಗಳ ದೇವಸ್ಥಾನಕ್ಕೆ ಡೊಳ್ಳು, ಹಲಗೆ ವಾದ್ಯಗಳೊಂದಿಗೆ ಇಡೀ ಊರಿನ ಜನರೆಲ್ಲರೂ ಹೋಗಿ ಪೂಜೆ ಸಲ್ಲಿಸಿ ಅಲ್ಲಿರುವ ಕಲ್ಲು ಬಂಡೆಗಳ ಮೇಲೆ ಊಟ ಬಡಿಸಿಕೊಂಡು ಗುಂಪು ಗುಂಪಾಗಿ ಸಾಮೂಹಿಕವಾಗಿ ಕುಳಿತು ಊಟ ಮಾಡುವ ಸಂಪ್ರದಾಯ ಈ ಪರಿಸರದ ಮತ್ತೊಂದು ನಂಬಿಕೆ ಆಚರಣೆಯಾಗಿದೆ. ಹೀಗೆ ಮಾಡಿದರೆ, ಬರಗಾಲ ಕಳೆದು ಮಳೆಗಾಲಪ್ರಾರಂಭವಾಗುತ್ತದೆ. ಎಂಬ ನಂಬಿಕೆ ಈ ಪರಿಸರದ ಜನರ ಮನದಲ್ಲಿದೆ.[೨]

೫.೩ ಜಾತ್ರೆ ಮತ್ತು ಉತ್ಸವಗಳು

ಜಾತ್ರೆ, ಹಬ್ಬ ಮತ್ತು ಉತ್ಸವಗಳು ಪುರಾತನ ಕಾಲದಿಂದಲೂ ನಡೆದುಕೊಂಡು ಬಂದತಹ ಪ್ರಮುಖ ಆಚರಣೆಗಳು. ಇವು ಭಾರತೀಯ ಸಂಸ್ಕೃತಿಯ ಪ್ರಮುಖ ಭಾಗವಾಗಿವೆ. ಉತ್ಸವಗಳು ಹಲವಾರು ವರ್ಷಗಳಿಂದ ಪೀಳಿಗೆಯಿಂದ ಪೀಳಿಗೆಗೆ ಬಂದಿರುವಂತಹುಗಳು ಕೆಲವು ಜಾತ್ರೆಗಳು ಧರ್ಮ ಮತ್ತು ಅದರ ಸಂಪ್ರದಾಯಗಳ ಕೆಲವು ವಿಶಿಷ್ಟ ಅಂಶಗಳನ್ನು ಕೇಂದ್ರವಾಗಿಟ್ಟುಕೊಂಡು ಆಚರಣೆಗೆ ಒಳಪಡುತ್ತವೆ. ಅಲ್ಲದೇ ಕಾಲೋಚಿತ ಬದಲಾವಣೆಗಾಗಿಯೂ ಉತ್ಸವ ಮತ್ತು ಹಬ್ಬಗಳನ್ನು ಆಚರಿಸುತ್ತಾರೆ, ಉದಾಹರಣೆಯಾಗಿ ಸುಗ್ಗಿ ಹಬ್ಬ. ಇಂತಹ ಹಬ್ಬ ಆಚರಣೆಗಳು ಎಲ್ಲರನ್ನೂ ಒಟ್ಟುಗೂಡಿಸಿ ಹಿರಿಯರ ಅನುಭವಗಳನ್ನು ಹಂಚಿಕೊಳ್ಳುವಂತಹ ಕುಟುಂಬಗಳ ನಡುವೆ ಒಗ್ಗಟ್ಟನ್ನು ಮೂಡಿಸುವಂತ ಕಾರ್ಯ ಮಾಡುತ್ತವೆ. ಸಾಲಗುಂದ ಪರಿಸರದಲ್ಲಿಯೂ ಸಹಃ ಇಂತಹ ಜಾತ್ರೆ ಉತ್ಸವಗಳನ್ನು ಕಾಣಬಹುದಾಗಿದೆ. ಇಲ್ಲಿನ ಜನರು ತಮಗೆ ಸಂಬಂಧಿಸಿದ ಹಬ್ಬ, ಜಾತ್ರೆ ಮತ್ತು ಉತ್ಸವಗಳನ್ನು ಸಡಗರ ಸಂಭ್ರಮದಿಂದ ಆಚರಿಸುತ್ತಾರೆ.

ಅಂಭಾದೇವಿ ಜಾತ್ರೆ

ಈ ಪರಿಸರದ ಪ್ರಮುಖ ಧಾರ್ಮಿಕ ತಾಣವೆಂದರೆ ಸಿದ್ಧಪರ್ವತ. ಇಲ್ಲಿ ಬನದ ಹುಣ್ಣಿಮೆ ದಿನದಂದು ಶ್ರೀ ಅಂಭಾದೇವಿಯ ರಥೋತ್ಸವ ಜರುಗುತ್ತದೆ. ಈ ಭಾಗದ ಬಹುದೊಡ್ಡ ಜಾತ್ರೆ ಇದಾಗಿದ್ದು, ರಾಜ್ಯದ ಭಕ್ತರಷ್ಟೇ ಅಲ್ಲದೇ ಆಂಧ್ರ, ಮಹಾರಾಷ್ಟ್ರಗಳಿಂದಲೂ ಸಾವಿರಾರು ಭಕ್ತರು ಆಗಮಿಸುತ್ತಾರೆ.[೩] ರಥೋತ್ಸವದ ಮೂರು ದಿನಗಳ ನಂತರ ಕುಂಭ ಮೆರವಣಿಗೆ ನಡೆಯುತ್ತದೆ. ಈ ಜಾತ್ರೆಯಲ್ಲಿ ಸೋಮಲಾಪುರದ ಜನತೆ ದೇವಿಯ ರಥವನ್ನು ಸಿಂಗರಿಸುತ್ತಾರೆ ಈ ವಾಡಿಕೆ ಮೊದಲಿನಿಂದಲೂ ನಡೆದುಕೊಂಡು ಬಂದಿದೆ.

ದಸರಾ ಹಬ್ಬ

ಎಲ್ಲೆಡೆಯಂತೆ ಇಲ್ಲಿಯೂ ಸಹಃ ಪಾಂಡವರು ಕೌರವರನ್ನು ಸೋಲಿಸಿ ವಿರಾಟರಾಯನ ಸೇರೆಯಲ್ಲಿದ್ದ ಗೋವುಗಳನ್ನು ಬಿಡಿಸಿದ ಮತ್ತು ಅದರ ವಿಜಯೋತ್ಸವ ನೆನಪಿಗಾಗಿ ವಿಜಯದಶಮಿ ಅಥವಾ ದಸರಾವನ್ನು ಆಚರಿಸುತ್ತಾರೆ. ಸೋಮಲಾಪುರದ ಅಂಭಾಮಠದಲ್ಲಿ ನವರಾತ್ರಿ ಹಬ್ಬದ ನಿಮಿತ್ಯವಾಗಿ ದೇವಿ ಪುರಾಣವನ್ನು ಹೇಳಲಾಗುತ್ತದೆ. ಸ್ತ್ರೀಯರು ನವರಾತ್ರಿಯಂದು ಬನ್ನಿಮರಕ್ಕೆ ಸೂರ್ಯೋದಯದ ಮುಂಚೆಯೇ ಪೂಜೆ ಸಲ್ಲಿಸುತ್ತಾರೆ. ಕೊನೆಯ ದಿನ ದೇವಿಗೆ ಬನ್ನಿ ಮುಡಿಯುವುದರ ಮೂಲಕ ನವರಾತ್ರಿ ಹಬ್ಬವನ್ನು ಸಡಗರ, ಸಂಭ್ರಮದಿಂದ ಆಚರಿಸುತ್ತಾರೆ.

ಮೊಹರಂ ಹಬ್ಬ

ಇರಾಕ್‌ನ ಕರ್ಬಲಾ ಯುದ್ಧ ಭೂಮಿಯಲ್ಲಿ ಅಧರ್ಮದ ವಿರುದ್ಧ ಹೋರಾಡಿ ಮಡಿದ ಪ್ರವಾದಿ ಮೊಹಮ್ಮದ್ ಅವರ ಮೊಮ್ಮಕ್ಕಳು ಬಲಿದಾನ ನೀಡಿ ಪೈಗಂಬರ ಶರಿಯತ ಧರ್ಮವನ್ನು ಕಾಪಾಡಿದರು. ಈ ರೀತಿಯಾಗಿ ಇಸ್ಲಾಂ ಧರ್ಮಕ್ಕಾಗಿ ಪ್ರಾಣ ನೀಡಿದವರ ಸ್ಮರಣೆಗಾಗಿ ಈ ಹಬ್ಬವನ್ನು ಆಚರಿಸಲಾಗುತ್ತದೆ. ಈ ಹಬ್ಬದಂದು ಮುಸ್ಲಿಂರು ಮಸೀದಿಗಳಲ್ಲಿ ಪ್ರಾರ್ಥನೆ ಸಲ್ಲಿಸುತ್ತಾರೆ. ಊರಿನ ಪ್ರಮುಖ ಬೀದಿಗಳಲ್ಲಿ ಅಲಾಯಿ ದೇವರನ್ನು ಮೆರವಣಿಗೆ ನಡೆಸುತ್ತಾರೆ. ಹಿಂದೂ ಮುಸ್ಲಿಂರು ಸಾಮರಸ್ಯತೆಯಿಂದ ಈ ಹಬ್ಬದಲ್ಲಿ ಭಾಗವಹಿಸುತ್ತಾರೆ.

ಹಬ್ಬದ ಪ್ರಯುಕ್ತವಾಗಿ ಜನರು ವೇಷಧಾರಿಗಳಾಗಿ ಬಣ್ಣ ಬಳಿದುಕೊಂಡು ಹರಕೆ ತೀರಿಸುತ್ತಾರೆ. ಅಲ್ಲದೇ ಮಸೀದಿಯ ಮುಂದೆ ಗುಂಡಿ ತೆಗೆದು ಕಟ್ಟಿಗೆಗಳನ್ನು ತುಂಬಿ ಅಗ್ನಿ ಸ್ಪರ್ಶಿಸುತ್ತಾರೆ. ಈ ಅಗ್ನಿಗೆ ಹರಕೆ ತೀರಿಸಲು ಉಪ್ಪನ್ನು ಸುರಿಯುವ ವಾಡಿಕೆ ಇದೆ. ಕೆಲವರು ತಮ್ಮ ಮನೆಯಿಂದ ಮಸೀದಿವರೆಗೂ ದೀರ್ಘದಂಡ ನಮಸ್ಕಾರವನ್ನು ಹಾಕುವುದರ ಮೂಲಕ ಹರಕೆ ತೀರಿಸುತ್ತಾರೆ. ಈ ಹಬ್ಬದಲ್ಲಿ ನೃತ್ಯ, ಹಲಗೆ ಬಾರಿಸುವುದು ಇತ್ಯಾದಿ ಜನಪದ ಪರಂಪರೆಯ ವಿವಿಧ ಕಲೆಗಳ ಪ್ರದರ್ಶನ ಇಲ್ಲಿ ಕಂಡು ಬರುತ್ತದೆ.

ಉರುಸು

ಈ ಪರಿಸರದ ದಢೇಸೂಗೂರು ಮತ್ತು ಮುಕ್ಕುಂದ ಗ್ರಾಮಗಳಲ್ಲಿ ಉರುಸು ಆಚರಣೆ ನಡೆಯುತ್ತದೆ. ಹಿಂದು ಮತ್ತು ಮುಸ್ಲಿಂರೂ ಎಲ್ಲರೂ ಸೇರಿ ಉರುಸು ಆಚರಣೆ ಮಾಡುವರು. ಇಲ್ಲಿ ಕವಾಲಿ ಹಾಡಲು ಬೇರೆ ಬೇರೆ ರಾಜ್ಯಗಳಿಂದ ಮುಸ್ಲಿಂ ಕಲಾವಿದರು ಆಗಮಿಸುತ್ತಾರೆ.[೪]

ಇತರೆ ಹಬ್ಬಗಳು

ನಾಗರ ಪಂಚಮಿ, ಎಳ್ಳು ಅಮವಾಸ್ಯೆ, ಕಾರ ಹುಣ್ಣಿಮೆ, ಗಣೇಶ ಉತ್ಸವ, ದೀಪಾವಳಿ ಇತ್ಯಾದಿ ಹಬ್ಬಗಳನ್ನು ಸಡಗರ ಸಂಭ್ರಮದಿಂದ ಆಚರಿಸುತ್ತಾರೆ. ಸೋಮಲಾಪುರ ಗ್ರಾಮದಲ್ಲಿ ನಡೆಯುವ ಶೇಖರಯ್ಯ ತಾತನ ಜಾತ್ರೆಯ ತೇರನ್ನು ತಳ ಸಮುದಾಯದವರಾದ ಮಾದಿಗ ಮತ್ತು ಚಲುವಾದಿ ಜನರು ಅಲಂಕಾರ ಮಾಡುತ್ತಾರೆ. ಇದೊಂದು ಈ ಊರಿನ ವಿಶಿಷ್ಟತೆ ಎಂದೇ ಹೇಳಬಹುದು.ಈ ಪರಿಸರದ ಜನರು ಧಾರ್ಮಿಕ ಸಾಮರಸ್ಯತೆಯಿಂದ ಜೀವನ ನಡೆಸುತ್ತಿರುವರು.

ಕೊನೆ ಟಿಪ್ಪಣಿಗಳು

೧. ಮೌಖಿಕ ಸಂದರ್ಶನ, ಸತ್ಯನಾರಾಯಣ ರೆಡ್ಡಿ, ವೃತ್ತಿ ಕೃಷಿ, ವಯಸ್ಸು ೪೮, ಕೆಂಗಲ್.

೨. ಮೌಖಿಕ ಸಂದರ್ಶನ, ಹುಸೇನಪ್ಪ, ವೃತ್ತಿ ಕೃಷಿ, ವಯಸ್ಸು ೪೮, ಸೋಮಲಾಪುರ.

೩. ಬಸವಪ್ರಭು ಪಾಟೀಲ್ ಬೆಟ್ಟದೂರು (ಸಂ), ೨೦೧೬, ಎಡೆದೊರೆ ರಾಯಚೂರು ಜಿಲ್ಲಾ ದರ್ಶನ, ಪು.೧೮೪.

೪. ಅಮರೇಶ ಯತಗಲ್ (ಸಂ), ೨೦೧೦, ರಾಯಚೂರು ದೋ-ಅಬ್ ಇತಿಹಾಸ, ಪು.೨೫೧.

೬. ಸಮಾರೋಪ

೬. ಸಮಾರೋಪ

ದೇಶದ ಸಂಸ್ಕೃತಿಗೆ ನಾಡಿನ ಕೊಡುಗೆ ಅಪಾರವಾದದ್ದು. ನೂಲಿನಂತೆ ದಾರ ತಾಯಿಯಂತೆ ಮಗಳು ಎನ್ನುವಂತೆ ಭಾರತಾಂಬೆಯ ಮಗಳು ಕನ್ನಡಾಂಬೆ. ಭಾರತವು ವಿವಿಧ ವೈವಿಧ್ಯ ಸಂಸ್ಕೃತಿಗಳನ್ನು ಒಳಗೊಂಡಂತೆ ಕರ್ನಾಟಕ ರಾಜ್ಯ ಸಹಃ ಅಂತಹ ಹಲವು ವೈವಿಧ್ಯತೆಯ ಸಂಸ್ಕೃತಿಗಳನ್ನು ಒಳಗೊಂಡಿದೆ. ಅದರಂತೆ ನಾಡಿನ ಪ್ರತಿಯೊಂದು ಗ್ರಾಮಗಳು ಸಹಃ ತಮ್ಮದೆ ಆದಂತಹ ಸಂಸ್ಕೃತಿಗಳನ್ನು ಬಿಂಬಿಸುತ್ತಿವೆ. ಈ ನಿಟ್ಟಿನಲ್ಲಿ ಇಂದಿನ ನಗರ ಸಂಸ್ಕೃತಿಯ ಪ್ರಭಾವದಿಂದಾಗಿ ಗ್ರಾಮ ಸಂಸ್ಕೃತಿ ನಶಿಸುವ ಮುಂಚೆ ಪ್ರತಿಯೊಂದು ಗ್ರಾಮದಲ್ಲಿ ಅಧ್ಯಯನಗಳು ನಡೆಯಬೇಕಾಗಿವೆ. ಗ್ರಾಮಗಳಲ್ಲಿ ಇಂದು ಮರೆಯಾಗುತ್ತಿರುವ ಸಾಂಸ್ಕೃತಿಕ ಇತಿಹಾಸವನ್ನು ಮರುಜೋಡಣೆ ಮಾಡುವ ಕಾರ್ಯ ಸ್ಥಳೀಯ ಇತಿಹಾಸದಿಂದಲೇ ಆಗಬೇಕಾಗಿದೆ. ಇತಿಹಾಸವು ಪ್ರದೇಶ, ಪ್ರಾಂತ್ಯ, ರಾಜ್ಯ, ಸಂಸ್ಥೆ ಹಾಗೂ ಜನಾಂಗಗಳ ಕಥೆ ಎನ್ನುವುದನ್ನು ಮತ್ತೊಮ್ಮೆ ವಿಮರ್ಶೆ ಮಾಡುವುದು ಅಗತ್ಯ. ವಿವಿಧ ಪ್ರದೇಶದಲ್ಲಿರುವ ಜನರ ಜೀವನ ವಿಧಾನ, ಧರ್ಮ, ಸಂಸ್ಕೃತಿ ಆಚರಣೆಗಳಲ್ಲಿ ಭಿನ್ನತೆಗಳಿವೆ. ಇವುಗಳನ್ನು ಒಟ್ಟುಗೂಡಿಸಿ ನಾಡಿನ ಇತಿಹಾಸವನ್ನು ರಚಿಸಬೇಕಾಗಿದೆ.

"ಸಾಲಗುಂದೆ ಎಪ್ಪತ್ತು: ಸಾಂಸ್ಕೃತಿಕ ಅಧ್ಯಯನ" ದಿಂದ ಅನೇಕ ಮಹತ್ವದ ಅಂಶಗಳು ಬೆಳಕಿಗೆ ಬಂದಿವೆ. ಈ ಹಿಂದೆ ಈ ಪರಿಸರದಲ್ಲಿಂತಹ ಅನೇಕ ಪ್ರಾಗಿತಿಹಾಸ ನೆಲೆಗಳು ಈ ಭಾಗದ ಇತಿಹಾಸ ರಚನೆಗೆ ಪ್ರಮುಖ ವಿಷಯಗಳನ್ನು ಒದಗಿಸಿಕೊಡುತ್ತವೆ. ಸೋಮಲಾಪುರ ಗ್ರಾಮದ ಹಾಳೂರಿನಲ್ಲಿ ನವಶಿಲಾಯುಗದ ವಿವಿಧ ಬಗೆಯ ಮಡಕೆ ಚೂರುಗಳು, ಆಯುಧಗಳು, ಹಾಗೂ ಅದೇ ಗ್ರಾಮದ ಕಡಿರ್ತಿರ್ನ ಕಂಟಿಯಲ್ಲಿ ಬೃಹತ್ ಶಿಲಾಯುಗದ ಕಲ್ಲುವೃತ್ತ ಮಾದರಿಯ ಸಮಾಧಿಗಳು, ಆದಿ ಇತಿಹಾಸ ಕಾಲದ ಮಣ್ಪಾತ್ರೆಗಳು, ಒರಳುಕಲ್ಲುಗಳು, ಮಣ್ಣಿನ ಮನೆಗಳ ಅವಶೇಷಗಳು ಅನೇಕ ಪರಿಕರಗಳು ಕಂಡು ಬಂದಿವೆ.

ಮೌರ್ಯ ಚಕ್ರವರ್ತಿ ದೇವನಾಂಪ್ರಿಯ ಅಶೋಕನಿಂದ ಪ್ರಾರಂಭವಾಗುವ ಇಲ್ಲಿನ ರಾಜಕೀಯ ಇತಿಹಾಸ ಕ್ರಮೇಣವಾಗಿ ಸ್ಥಳೀಯ ಪಾಳೆಪಟ್ಟುಗಳ ಆಳ್ವಿಕೆಯವರೆಗೂ ವಿಸ್ತರಿಸಿಕೊಂಡಿದೆ. ಕಲ್ಯಾಣ ಚಾಲುಕ್ಯ ವಿಜಯನಗರ ಅರಸರ ಕಾಲದಲ್ಲಿ ಪ್ರಮುಖ ಆಡಳಿತ ಕೇಂದ್ರವಾಗಿದ್ದ ಈ ಪ್ರದೇಶವು ಎಡೆದೊರೆ ೨೦೦೦ ನಾಡಿನ ಕೆಳವಾಡಿ ೩೦೦ರಲ್ಲಿ ಸಾಲಗುಂದೆ ೭೦ ಎಂಬ ಆಡಳಿತ ಘಟಕವಾಗಿತ್ತು. ಇದರ ಸುತ್ತಮುತ್ತಲಿರುವ ಭೌಗೋಳಿಕ ಪರಿಸರವೇ ಈ ಆಡಳಿತ ಘಟಕದ ವ್ಯಾಪ್ತಿ. ಇದಕ್ಕೆ ಪುಷ್ಟಿ ನೀಡುವಂತೆ ಸುತ್ತಲಿನ ಅನೇಕ ಗ್ರಾಮಗಳಲ್ಲಿ ಕಲ್ಯಾಣ ಚಾಲುಕ್ಯರ ಕಾಲದ ದೇವಾಲಯಗಳು, ಮೂರ್ತಿಶಿಲ್ಪಗಳು ಹಾಗೂ ವೀರಗಲ್ಲುಗಳು ಕಂಡುಬಂದಿವೆ. ಈ ಪರಿಸರದ ಪ್ರತಿಯೊಂದು ಗ್ರಾಮದ

ಸ್ಥಳನಾಮಗಳು ಐತಿಹಾಸಿಕ ಮಹತ್ವತೆಯನ್ನು ಹೊಂದಿವೆ. ಇವು ಇತಿಹಾಸ ರಚನೆಯಲ್ಲಿ ಸಹಾಯಕವಾಗಿವೆ.

ಇಲ್ಲಿನ ಶಾಸನಗಳು ಹಲವು ವಿಷಯಗಳನ್ನು ಹೊಂದಿವೆ, ಈ ಪೂರ್ವದ ಕೆಲವು ಅಧ್ಯಯನಗಳು ಶಾಸನ ಆಧಾರಗಳು ಇದ್ದರೂ ಸಹಃ ಸಾಲಗುಂದೆ ಸಿಂಧರಲ್ಲಿ ಬಾಚಿದೇವ ಸಿಂಧವಂಶದವನಲ್ಲ ನಾಗ ವಂಶದವನು ಇದಕ್ಕೆ ಕಾಲವೆ ಉತ್ತರಿಸಬೇಕೆಂದೂ ಹೇಳಲಾಗುತ್ತಿವೆ. ಕಾಲದ ಬದಲಿಗೆ ಶಾಸನಗಳೇ ಇದಕ್ಕೆ ಉತ್ತರವನ್ನು ಕೊಡುತ್ತಿವೆ. ಸಿಂಧರು ತಮ್ಮನ್ನು ತಾವು ನಾಗವಂಶದವರೆಂದೂ ನಮ್ಮ ಪೂರ್ವಜರು ನಾಗೇಂದ್ರ ನಾಗಿಣಿಯರೆಂದೂ ಕ್ರಿ.ಶ. ೧೦೬೩ರ ಸಾಲಗುಂದ ಶಾಸನ ಹಾಗೂ ಕ್ರಿ.ಶ. ೧೦೮೮ರ ಮುಕ್ಕುಂದ ಶಾಸನದಲ್ಲಿ ಉಲ್ಲೇಖವಿದೆ. ಅದರಂತೆ ಈ ಪರಿಸರದ ಶಾಸನೋಕ್ತ ಗ್ರಾಮಗಳನ್ನು ಅವುಗಳ ಐತಿಹಾಸಿಕತೆಯನ್ನು ತಿಳಿಸುವ ಸ್ಥಳನಾಮಗಳನ್ನು ಗುರುತಿಸುವ ಪ್ರಯತ್ನ ಮಾಡಲಾಗಿದೆ.

ಉತ್ತಮ ಕಲೆ ಮತ್ತು ವಾಸ್ತುಶೈಲಿಯನ್ನು ಹೊಂದಿರುವ ಶೈವ, ವೈಷ್ಣವ ಮತ್ತು ಇತರೆ ದೇವಾಲಯಗಳು ಇಲ್ಲಿವೆ. ಹೆಚ್ಚಾಗಿ ಕಲ್ಯಾಣ ಚಾಲುಕ್ಯ ಶೈಲಿಯ ದೇವಾಲಯಗಳು ಕಂಡುಬರುತ್ತವೆ. ಇದು ಈ ಪರಿಸರದಲ್ಲಿ ಅವರ ಆಳ್ವಿಕೆಯ ಭದ್ರತೆಯನ್ನು ತೋರಿಸಿಕೊಡುತ್ತದೆ. ಕಲೆ ಮತ್ತು ವಾಸ್ತುಶಿಲ್ಪ ವಿಷಯವನ್ನು ಗಮನದಲ್ಲಿರಿಸಿಕೊಂಡು ಅಧ್ಯಯನ ಮಾಡಲಾಗಿದೆ.

ಮೂರ್ತಿಶಿಲ್ಪಗಳು, ಸ್ಮಾರಕಶಿಲ್ಪಗಳು, ರಕ್ಷಣಾ ವಾಸ್ತುಶಿಲ್ಪಗಳಿಂದ ಈ ಪರಿಸರ ಮಹತ್ವವನ್ನು ಪಡೆಯುತ್ತದೆ. ಶೈವ, ವೈಷ್ಣವ ಮತ್ತು ಇತರೆ ಮೂರ್ತಿಶಿಲ್ಪಗಳೆಂದೂ ವಿಭಾಗಿಸಿಕೊಂಡು ಅಧ್ಯಯನ ನಡೆಸಲಾಗಿದೆ. ಸ್ಮಾರಕ ಶಿಲ್ಪಗಳಲ್ಲಿ ವೀರಗಲ್ಲುಗಳೆ ಹೆಚ್ಚಾಗಿ ಕಂಡುಬಂದಿವೆ. ಉಪ್ಪಳ ಗ್ರಾಮದ ಹಾಳೂರಿನಲ್ಲಿ ಕಾಣಸಿಗುವ ಕಲ್ಯಾಣ ಚಾಲುಕ್ಯರ ಅವಧಿಯಲ್ಲಿನ ವೀರಗಲ್ಲುಗಳು ಬಿಲ್ಲು ಬಾಣ ಹಿಡಿದು ಹೋರಾಟಕ್ಕೆ ಸಜ್ಜಾಗಿ ನಿಂತಿರುವಂತೆ ಚಿತ್ರಿಸಲಾಗಿದೆ. ಸೋಮಲಾಪುರ ಗ್ರಾಮದಲ್ಲಿ ಹಾಗೂ ಹಾಳೂರಿನಲ್ಲಿ ಸಿಗುವ ವಿಜಯನಗರ ಕಾಲದ ವೀರಗಲ್ಲುಗಳು ಖಡ್ಗ, ಗುರಾಣಿ ಹಿಡಿದು ನಿಂತಿವೆ. ಬಸ್ಸಾಪೂರ ಡಿ ಗ್ರಾಮದಲ್ಲಿನ ವಿಜಯನಗರೋತ್ತರ ವೀರಗಲ್ಲು ಖಡ್ಗವನ್ನು ಹಿಡಿದು ನಿಂತಿದೆ, ಕೆಂಗಲ್ ಗ್ರಾಮದಲ್ಲಿನ ವಿಜನಗರೋತ್ತರ ವೀರಗಲ್ಲು ಖಡ್ಗದ ಜೊತೆಗೆ ಬಂದೂಕು ಹಿಡಿದುಕೊಂಡು ನಿಂತಿದೆ. ವಿಜಯನಗರ ಮತ್ತು ನಂತರದ ಪಾಳೆಯಗಾರರು ಪ್ರಥಮವಾಗಿ ಯುದ್ಧಗಳಲ್ಲಿ ಬಳಸಿದ ಸಿಡಿಮದ್ದಿನ ಪ್ರತೀಕವಿದು. ಇವು ಈ ಪರಿಸರದ ಪ್ರಭುತ್ವ ಮತ್ತು ವೀರತ್ವವನ್ನು ಸಾರುತ್ತವೆ.

ರಕ್ಷಣಾ ವಾಸ್ತುಶಿಲ್ಪವನ್ನು ಪ್ರತಿನಿಧಿಸುವ ಕೋಟೆ ಕೊತ್ತಲು, ಬುರುಜುಗಳು ಈ ಪರಿಸರದಲ್ಲಿ ನೆಲೆಯೂರಿ ಆಳ್ವಿಕೆ ನಡೆಸಿದ ಪ್ರಭುತ್ವಗಳ ಕಡೆಗೆ ಗಮನ ಸೆಳೆಯುತ್ತವೆ. ಈ ಪರಿಸರದ ಬೆಟ್ಟಗಳ ಅಂಚಿನಲ್ಲಿ ಕಟ್ಟಲಾಗಿರುವ ಮುಕ್ಕಂದ, ರವುಡಕುಂದ, ಸಾಲಗುಂದ ಕೋಟೆಗಳ ರಕ್ಷಣಾ ವಾಸ್ತುಶಿಲ್ಪವನ್ನು ವಿಶ್ಲೇಷಣೆ ಮಾಡಲಾಗಿದೆ.ಈ ಭಾಗದ ಐತಿಹ್ಯ, ನಂಬಿಕೆ ಆಚರಣೆಗಳು ಹಾಗೂ ಜಾತ್ರೆ ಉತ್ಸವಗಳು ಐತಿಹಾಸಿಕ ಮತ್ತು ಸಾಂಸ್ಕೃತಿಕ ಇತಿಹಾಸಕ್ಕೆ ಸಂಬಂಧಿಸಿದಂತೆ ಹಲವು ವಿಚಾರಗಳನ್ನು ತಿಳಿಸುತ್ತವೆ.

ಒಟ್ಟಾರೆಯಾಗಿ ಈ ಅಧ್ಯಯನ ಕುರಿತು ಹೇಳುವುದಾದರೆ, ಇಲ್ಲಿನ ಪುರಾತತ್ವ ಆಕಾರಗಳು, ಶಾಸನಗಳು, ದೇವಾಲಯಗಳು, ಮೂರ್ತಿಶಿಲ್ಪಗಳು, ಸ್ಮಾರಕ ಶಿಲ್ಪಗಳು, ರಕ್ಷಣಾ ವಾಸ್ತುಶಿಲ್ಪ, ನಂಬಿಕೆ ಆಚರಣೆಗಳು ಹಾಗೂ ಇತರ ಪ್ರಮುಖ ವಿಷಯಗಳು ಪ್ರಾದೇಶಿಕವಾಗಿ ನಾಡಿನ ಸಾಂಸ್ಕೃತಿಕ ಇತಿಹಾಸದ ವಿವಿಧ ವಿಷಯಗಳ ಅಧ್ಯಯನಕ್ಕೆ ಅಪಾರವಾದ ಕೊಡುಗೆಗಳನ್ನು ನೀಡುತ್ತವೆ. ಆದರೆ ಸಂಸ್ಕೃತಿಯ ವಿವಿಧ ವಿಷಯಗಳ ಅಧ್ಯಯನಕ್ಕೆ ಪೂರಕವಾಗಿರುವ ಈ ಪರಿಸರದ ಅವಶೇಷಗಳು ವಿನಾಶದಂಚಿನಲ್ಲಿವೆ.

ಇಲ್ಲಿನ ಸ್ಮಾರಕಗಳು ನೈಸರ್ಗಿಕ ವಿಕೋಪಗಳಿಗೆ, ಮೂಢನಂಬಿಕೆಗಳಿಗೆ ಹಾಗೂ ಮಾನವನ ಸ್ವಾರ್ಥದ ಬದುಕಿಗೆ ತುತ್ತಾಗಿ ಕಾಲಗರ್ಭದಲ್ಲಿ ಲೀನವಾಗುತ್ತಿವೆ. ಈ ಪರಿಸರದ ಪ್ರಮುಖ ಪ್ರಾಗಿತಿಹಾಸ ನೆಲೆಯಲ್ಲಿ ನಿಧಿ ಸಲುವಾಗಿ ವಾಮಚಾರ ನಡೆಸಿ, ಮನಬಂದತೆ ಅನೇಕ ಗುಂಡಿಗಳನ್ನು ತೊಡಿದ್ದಾರೆ, ಇಲ್ಲಿರುವ ಪುರಾತತ್ವ ಪರಿಸರ ನಾಶವಾಗದಂತೆ ಸಂಬಂಧಿಸಿದ ಇಲಾಖೆಗಳು ಕ್ರಮ ತೆಗೆದುಕೊಳ್ಳಬೇಕಾಗಿದೆ. ಇಲ್ಲಿನ ದೇವಾಲಯಗಳಿಗೆ ಸೂಕ್ತ ಭದ್ರತೆ, ರಕ್ಷಣೆ ಮತ್ತು ಕಾಳಜಿ ಇಲ್ಲದಿರುವ ಪರಿಣಾಮ ಶಿಥಿಲಾವ್ಯಸ್ಥೆಯಲ್ಲಿವೆ. ಸಾಲಗುಂದದಲ್ಲಿರುವ ಆನೆಶಂಕರ ದೇವಾಲಯದ ಗರ್ಭಗೃಹದ ಉತ್ತರಕ್ಕಿರುವ ಭಿತ್ತಿಯು ಶಿಥಿಲಾವ್ಯಸ್ಥೆಯಲ್ಲಿದ್ದು ನಶಿಸುತ್ತಿದೆ.

ಜಕ್ಕಮ ಗುಡಿ, ನೀಲಕಂಠ ದೇವಾಲಯಗಳ ಮೇಲೆ ಸ್ಥಳೀಯರು ಈ ಹಿಂದೆ ಬಣವೆ ಹಾಕಲು ಮತ್ತು ಕುರುಳು ತಟ್ಟಲು ಉಪಯೋಗಿಸಿಕೊಳ್ಳುತ್ತಿದ್ದರು, ಪ್ರಸ್ತುತ ಮಲ, ಮೂತ್ರ ವಿಸರ್ಜನೆ ಇತ್ಯಾದಿ ಅನೈತಿಕ ಚಟುವಟಿಕೆಗಳಿಗೆ ಉಪಯೋಗಿಸಿಕೊಳ್ಳುತ್ತಿದ್ದಾರೆ. ಜಕ್ಕಮ್ಮಬಾವಿ ಎಂದೂ ಕರೆಯಲ್ಪಡುವ ಇಲ್ಲಿನ ಹೊಕ್ಕರಣಿಯು ಸಹಃ ಶಿಥಿಲಾವ್ಯಸ್ಥೆಯಲ್ಲಿದೆ. ಸಾಲಗುಂದ ಪರಿಸರದ ಐತಿಹಾಸಿಕ ಪರಂಪರೆಯನ್ನು ಪ್ರತಿನಿಧಿಸುವ ಸ್ಮಾರಕಗಳ ಪರಿಕಲ್ಪನೆ ಹಾಗೂ ಇತಿಹಾಸ ಜಾಗೃತಿಯ ಕೊರತೆ ಇಲ್ಲದಿರುವುದು ದೊಡ್ಡ ದುರಂತವೇ ಸರಿ.

ಉಪ್ಪಳ ಗ್ರಾಮದ ಹಾಳೂರಿನಲ್ಲಿ ಸಿಗುವ ಕಲ್ಯಾಣ ಚಾಲುಕ್ಯರ ಈಶ್ವರ, ಬೈರವ ಹಾಗೂ ಸೂರ್ಯ ದೇವಾಲಯಗಳು ನಶಿಸಿದ್ದು ಗರ್ಭಗೃಹಗಳು ಇವತ್ತೋ ನಾಳೆ ಬೀಳುವ ಹಂತವನ್ನು ತಲುಪಿವೆ. ದಢೇಸೂಗೂರು ಗ್ರಾಮದ ಹಾಳೂರಿನಲ್ಲಿ ಕಲ್ಯಾಣ ಚಾಲುಕ್ಯ ಶೈಲಿಯ ಶಿವ ಅಥವಾ ಈಶ್ವರ ದೇವಾಲಯ ನಾಶವಾಗಿ ಹೋಗಿದೆ. ಪ್ರಸ್ತುತ ಮೂರು ಶಿವಲಿಂಗಗಳು, ವಿನಾಯಕ, ಸುಬ್ರಹ್ಮಣ್ಯ, ನಂದಿ ಶಿಲ್ಪಗಳು ಹಾಗೂ ದೇವಾಲಯ ಅವಶೇಷಗಳು ಕಾಣಸಿಗುತ್ತವೆ. ಈ ನಿಟ್ಟಿನಲ್ಲಿ ಸಂಬಂಧಿಸಿದ ಇಲಾಖೆಗಳು, ಸಂಘ ಸಂಸ್ಥೆಗಳು ಮತ್ತು ಜನರು ಇವುಗಳ ಸಂರಕ್ಷಣೆಗೆ ಮುಂದಾಗಬೇಕಿದೆ ಇಲ್ಲದಿದ್ದರೆ ಸಾಲಗುಂದ ಪರಿಸರದ ಐತಿಹಾಸಿಕ ದಾಖಲೆಗಳು ಕಣ್ಮರೆಯಾಗುವ ಕಾಲ ಬಹುದೂರವಿಲ್ಲ.

ಈ ಪರಿಸರದ ಬಗ್ಗೆ ವ್ಯವಸ್ಥಿತವಾದ ಅಧ್ಯಯನಗಳು ನಡೆದಿದ್ದರೆ, ಇನ್ನೂ ಹೆಚ್ಚಿನ ಅಂಶಗಳು ಬೆಳಕಿಗೆ ಬರುತ್ತಿದ್ದವೆಂಬುದರಲ್ಲಿ ಸಂದೇಹವಿಲ್ಲ. ಈ ಪೂರ್ವದ ಕೆಲವು ಅಧ್ಯಯನಗಳು ವಾಸ್ತವಿಕತೆಯನ್ನು ಮರೆಮಾಚಿ ಉತ್ಪ್ರೇಕ್ಷಿತ ಬರವಣಿಗೆಗೆ ಮಹತ್ವ ನೀಡಿದಂತೆ ಕಾಣುತ್ತವೆ. ಸರಿಯಾದ ಆಕಾರಗಳು ಲಭ್ಯವಿದ್ದರೂ ಕೆಲವು ಕೃತಿಗಳು ಅವುಗಳನ್ನು ಬಳಸಿಕೊಳ್ಳದೆ ತಪ್ಪಾದ ಮಾಹಿತಿಯನ್ನು ಒದಗಿಸುತ್ತಿವೆ. ವ್ಯವಸ್ಥಿತ ಅಧ್ಯಯನಗಳ ಕೊರತೆಯನ್ನು ನೀಗಿಸಲು ಈ ಪರಿಸರದಲ್ಲಿ ಹೆಚ್ಚು ಹೆಚ್ಚು ಅಧ್ಯಯನಗಳು ವ್ಯವಸ್ಥಿತವಾಗಿ ಹಾಗೂ ತುರ್ತಾಗಿ ನಡೆದಾಗ ಮಾತ್ರ ನಾಡಿನ ಇತಿಹಾಸದ ಪುಟಗಳಲ್ಲಿ ಅವುಗಳ ಪಾತ್ರ ಮತ್ತು ಮಹತ್ವ ಏನೆಂದೂ ತಿಳಿದುಬರುತ್ತದೆ.

ಅಧ್ಯಯನದ ಫಲಿತಗಳು

- ಪ್ರಸ್ತುತ ಅಧ್ಯಯನದ ಕ್ಷೇತ್ರಕಾರ್ಯ ಕೈಗೊಂಡಾಗ ಬೆಟ್ಟಗಳ ಅಂಚಿನಲ್ಲಿರುವ ಸೋಮಲಾಪುರ ಗ್ರಾಮದ ಹಾಳೂರಿನಲ್ಲಿ ನವಶಿಲಾಯುಗಕ್ಕೆ ಸಂಬಂಧಿಸಿದ ಆಯುಧಗಳು ದೊರೆತಿದ್ದು, ಇದರಲ್ಲಿ ಉಜ್ಜಿನಯಗೊಳಿಸಿದ ಕೈಕೊಡಲಿಗಳು, ಬಟ್ಟತಲೆ ಉಪಕರಣಗಳು ಹಾಗೂ ಕಪ್ಪು, ಬೂದು ಮಿಶ್ರಿತ ನುಣುಪಾದ ಮಡಕೆ ಚೂರುಗಳನ್ನು ಪತ್ತೆಹಚ್ಚಲಾಗಿದೆ.
- ಪ್ರಸ್ತುತ ಅಧ್ಯಯನದಲ್ಲಿ ಸೋಮಲಾಪುರ ಗ್ರಾಮದ ಹಾಳೂರಿನಲ್ಲಿ ನವಶಿಲಾಯುಗ ಮತ್ತು ಸೂಕ್ಷ್ಮ ಶಿಲಾಯುಗಕ್ಕೆ ಸಂಬಂದಿಸಿದ ಕೈಕೊಡಲಿ, ಮತ್ತು ಬೂದು, ಕಪ್ಪು ಮಿಶ್ರಿತ ನುಣುಪಾದ ಮಡಕೆ ಚೂರುಗಳು ಕಂಡುಬಂದಿವೆ. ಅಲ್ಲಿಂದ ಮುಂದೆ ೧.೫ ಕಿ.ಮೀ ದೂರದಲ್ಲಿ ಸಿಗುವ ಕಡುತುರ ಕಂಟಿಯಲ್ಲಿ ಆದಿ ಹಳೆಶಿಲಾಯುಗ (ಕೈಯಿಂದ ತಯಾರಿಸಿದ ಕಪ್ಪು, ಬೂದು ಬಣ್ಣದ ಮಡಕೆ ಚೂರುಗಳು), ಸೂಕ್ಷ್ಮ ಶಿಲಾಯುಗ (ಚಕ್ಕೆ ಎಬ್ಬಿಸಿದ ಕೈಕೊಡಲಿ), ನವಶಿಲಾಯುಗ (ಉಜ್ಜಿ ನಯಗೊಳಿಸಿದ ಕೈ ಕೊಡಲಿ, ನುಣುಪಾದ ಬೂದು, ಕಪ್ಪು ಮಿಶ್ರಿತ

ಮಡಕೆ ಚೂರುಗಳು), ಶಿಲಾ ತಾಮ್ರಯುಗ (ತ್ರಿಕೋನಾಕಾರದ ಉಪಕರಣ, ಕೈ ಕೊಡಲಿ ಮತ್ತು ನುಣುಪಾದ ಮಡಕೆ ಚೂರುಗಳು),ಬೃಹತ್ ಶಿಲಾಯುಗ (ಕಲ್ಲು ವೃತ್ತ ಮಾದರಿಯ ಸಮಾಧಿಗಳು, ಕಪ್ಪು, ಕೆಂಪು ಮಿಶ್ರಿತ ಮಡಕಡ ಚೂರುಗಳು), ಮತ್ತು ಆದಿ ಇತಿಹಾಸಕಾಲ (ಒರಳು ಕಲ್ಲುಗಳು, ಮಣ್ಣಿನ ಮನೆಗಳ ತಳಪಾಯದ ಅವಶೇಷಗಳು)ಸಂಸ್ಕೃತಿಗಳಿಗೆ ಸಂಬಂಧಿಸಿದಂತೆ ಹಲವು ಪ್ರಾಚ್ಯಾವಶೇಷಗಳನ್ನು ಪತ್ತೆಹಚ್ಚಿ ದಾಖಲಿಸಲಾಗಿದೆ.

- ಸಾಲಗುಂದೆ ಎಪ್ಪತ್ತು ಆಡಳಿತ ಘಟಕಕ್ಕೆ ಸಂಬಂಧಿಸಿದಂತೆ ಈ ಪೂರ್ವದ ಅಧ್ಯಯನಗಳು ಇದರ ವ್ಯಾಪ್ತಿಯಲ್ಲಿ ಬರುವ ಗ್ರಾಮಗಳನ್ನು ಗುರುತಿಸಿಲ್ಲ. ಒಟ್ಟು ೭೦ ಗ್ರಾಮಗಳ ಪೈಕಿ ೨೩ ಗ್ರಾಮಗಳನ್ನು ಆಕರಗಳ ಸಮೇತ ಗುರುತಿಸಿ ಸಾಲಗುಂದೆ ೭೦ರ ಆಡಳಿತ ಘಟಕಕ್ಕೆ ಒಳಪಟ್ಟಿದ್ದವು ಎಂದು ಸಾಬಿತುಪಡಿಸಲಾಗಿದೆ.
- ದಢೇಸೂಗೂರು ಗ್ರಾಮದ ತುಂಗಭದ್ರಾ ನದಿ ದಂಡೆಯ ಮೇಲಿರುವ ಹಾಳೂರಿನಲ್ಲಿ ನಶಿಸಿಹೋದ ಕಲ್ಯಾಣ ಚಾಲುಕ್ಯ ಶೈಲಿಯ ಶಿವ ಅಥವಾ ಈಶ್ವರ ದೇವಾಲಯವನ್ನು ಅಲ್ಲಿರುವ ಕುರುಹುಗಳ ಮೂಲಕ ಗುರುತಿಸಿ ದಾಖಲಿಸಲಾಗಿದೆ.
- ಉಪ್ಪಳ ಗ್ರಾಮದಲ್ಲಿ ಕಲ್ಯಾಣ ಚಾಲುಕ್ಯರ ಕಾಲದಲ್ಲಿ ನಿರ್ಮಿಸಿರಬಹುದಾದ ಈಶ್ವರ, ಭೈರವ ಮತ್ತು ಸೂರ್ಯ ದೇವಾಲಯಗಳನ್ನು ಅಲ್ಲಿ ದೊರೆತ ಕುರುಹುಗಳ ಮೂಲಕ ಸಾಬಿತುಪಡಿಸಿ ದಾಖಲಿಸಿಲಾಗಿದೆ. ಪ್ರಸ್ತುತ ಇವು ಶಿಥಿಲಾವಸ್ಥೆಯಲ್ಲಿದ್ದು ಶಿಖರ ಭಾಗವಿಲ್ಲದ ಗರ್ಭಗೃಹಗಳು ಮಾತ್ರ ಕಾಣಸಿಗುತ್ತವೆ.
- ಈ ಪರಿಸರದಲ್ಲಿ ಸಿಗುವ ಮೂರ್ತಿಶಿಲ್ಪಗಳ ಅಧ್ಯಯನ ಸಂದರ್ಭದಲ್ಲಿ, ೦೮ ಶೈವ ಶಿಲ್ಪಗಳನ್ನು, ೦೫ ವೈಷ್ಣವ ಶಿಲ್ಪಗಳನ್ನು ಹಾಗೂ ೦೩ ಇತರೆ ಶಿಲ್ಪಗಳನ್ನು ಒಟ್ಟು ೧೬ ಮೂರ್ತಿಶಿಲ್ಪಗಳನ್ನು ವಿವೇಚಿಸಿ ದಾಖಲಿಸಲಾಗಿದೆ.
- ಪ್ರಸ್ತುತ ಈ ಅಧ್ಯಯನದ ಸ್ಮಾರಕಶಿಲ್ಪಗಳಲ್ಲಿ ಅದರಲ್ಲಿ ವೀರಗಲ್ಲುಗಳಿಗೆ ಸಂಬಂಧಿಸಿದಂತೆ, ಉಪ್ಪಳ ಗ್ರಾಮದ ಹಾಳೂರಿನಲ್ಲಿ ಕಲ್ಯಾಣ ಚಾಲುಕ್ಯರ ಕಾಲದಲ್ಲಿ ಹಾಕಿಸಿರಬಹುದಾದ ಬಿಲ್ಲು ಬಾಣ ಹಿಡಿದು ನಿಂತಿರುವ ೦೨ ವೀರಗಲ್ಲುಗಳನ್ನು, ವಿಜಯನಗರ ಕಾಲದಲ್ಲಿ ಹಾಕಿಸಿರಬಹುದಾದ ೦೧ ವೀರ ಮಾಸ್ತಿಗಲ್ಲುನ್ನು ಸಹಃ ಗುರುತಿಸಿ ದಾಖಲಿಸಲಾಗಿದೆ. ಅದೇರೀತಿ ಕೆಂಗಲ್ ಗ್ರಾಮದಲ್ಲಿ ವಿಜಯನಗರೋತ್ತರ ಕಾಲದ ೦೧ ಬಂದೂಕು ವೀರಗಲ್ಲು, ಬಸ್ಸಾಪೂರ ಡಿ ಗ್ರಾಮದಲ್ಲಿ ವಿಜಯನಗರೋತ್ತರ ಕಾಲದ ೦೧ ವೀರಗಲ್ಲು, ಸೋಮಲಾಪುರ ಗ್ರಾಮದ ಹಾಳೂರಿನಲ್ಲಿ ವಿಜಯನಗರೋತ್ತರ ಕಾಲದ ೦೧ ವೀರಗಲ್ಲು, ಇದೇ ಗ್ರಾಮದಲ್ಲಿ

೦೧ ವೀರಸತಿಗಲ್ಲು ಇವುಗಳನ್ನು ಅಧ್ಯಯನಕ್ಕೆ ಒಳಪಡಿಸಿ ವಿವೇಚಿಸಲಾಗಿದೆ. ಒಟ್ಟಾರೆಯಾಗಿ ೦೧ ಬಂದೂಕು ವೀರಗಲ್ಲು, ೦೨ ವೀರ ಮಾಸ್ತಿಗಲ್ಲು, ೦೫ ವೀರಗಲ್ಲು ಒಟ್ಟು ೦೮ ವೀರಗಲ್ಲುಗಳನ್ನು ವಿಶ್ಲೇಷಿಸಿ ದಾಖಲಿಸಲಾಗಿದೆ.

- ಪ್ರಸ್ತುತ ಅಧ್ಯಯನದ ರಕ್ಷಣಾ ವಾಸ್ತುಶಿಲ್ಪಕ್ಕೆ ಸಂಬಂಧಿಸಿದಂತೆ ಸಾಲಗುಂದ ಗ್ರಾಮದಲ್ಲಿನ ಬೆಟ್ಟಗಳ ಮೇಲೆ ನಿರ್ಮಾಣವಾಗಿರುವ ಏಳು ಬುರುಜುಗಳನ್ನು ಮತ್ತು ಬೆಟ್ಟಗಳಲ್ಲಿ ಕಡಿದಾದ ಅಂಚಿನಲ್ಲಿ ಶಿಥಿಲಾವ್ಯಸ್ಥೆಯಲ್ಲಿರುವ ಕೋಟೆಯ ಗೋಡೆಗಳನ್ನು ಗುರುತಿಸಿ ದಾಖಲಿಸಲಾಗಿದೆ.
- ಈ ಪರಿಸರದಲ್ಲಿ ಮೌಖಿಕ ಪರಂಪರೆಯ ಮೂಲಕ ಇತಿಹಾಸದ ಕೆಲವು ಅಂಶಗಳನ್ನು ಒಳಗೊಂಡು ಆಚರಣೆಯಲ್ಲಿರುವ ಐತಿಹ್ಯ, ನಂಬಿಕೆ ಆಚರಣೆಗಳು ಹಾಗೂ ಜಾತ್ರೆ ಉತ್ಸವಗಳನ್ನು ವಿಶ್ಲೇಷಿಸಿ ದಾಖಲಿಸಲಾಗಿದೆ.

ಅನುಬಂಧಗಳು

ಪರಾಮರ್ಶನ ಗ್ರಂಥಗಳು

ನಕ್ಷೆಗಳು

ತಲನಕ್ಷೆಗಳು

ಫೈ ನಕ್ಷೆಗಳು

ಕೋಷ್ಟಕಗಳು

ಛಾಯಾಚಿತ್ರಗಳು

ಅನುಬಂಧಗಳು

ಪರಾಮರ್ಶನ ಗ್ರಂಥಗಳು

ಪ್ರಾಥಮಿಕ ಆಕರಗಳು

ಕನ್ನಡ ಆಕರಗಳು

ಅಂಬಳಿಕೆ ಹಿರಿಯಣ್ಣ (ಪ್ರ.ಸಂ), ೨೦೦೯, ಕನ್ನಡ ವಿಷಯ ವಿಶ್ವಕೋಶ ಇತಿಹಾಸ ಮತ್ತು ಪುರಾತತ್ವ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

ಅಭಿಶಂಕರ ಕೆ (ಪ್ರ.ಸಂ), ೧೯೭೦, ರಾಯಚೂರು ಜಿಲ್ಲೆ ಗ್ಯಾಸೆಟಿಯರ್, ಕರ್ನಾಟಕ ಸರಕಾರ ಬೆಂಗಳೂರು.

ದೇವರಕೊಂಡಾರೆಡ್ಡಿ (ಸಂ), ೨೦೧೨, ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ: ೭ ರಾಯಚೂರು ಜಿಲ್ಲೆ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ, ವಿದ್ಯಾರಣ್ಯ.

ಇಂಗ್ಲೀಷ್ ಆಕರಗಳು

Annual Reports of Indian Epigraphy.

Epigraphia Indica.

Indian Antiquery.

Inscriptions of Karnataka Vol. III and IV.

Channabasappa.S.Patil.,Vinoda.C.Patil., (Ed), 1998, Inscription's of Karnataka VOL.IV, Raichur District, Directorate of Archaeology and Museums, Mysore.

ಅನುಷಂಗಿಕ ಆಕರಗಳು

ಅಪರ್ಣಾ ಕೂ.ಸ., ೧೯೯೯, ದೇವಾಲಯ ವಾಸ್ತುಶಿಲ್ಪ ಪರಿಚಯ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ.

ಕಲಬುರ್ಗಿ ಎಂ.ಎಂ., ೧೯೮೦, ಸಮಾಧಿ–ಬಲಿದಾನ–ವೀರಮರಣ ಸ್ಮಾರಕಗಳು, ಸ್ವಪ್ನ ಬುಕ್ ಹೌಸ್, ಬೆಂಗಳೂರು.

ಚನ್ನಬಸಪ್ಪ ಬಿ., ೨೦೧೦, ರಾಯಚೂರು ಜಿಲ್ಲೆಯ ಚರಿತ್ರೆ: ಶಾಸನಗಳ ಹಿನ್ನೆಲೆಯಲ್ಲಿ, ಅಕ್ಷರ ಮಂಟಪ, ಬೆಂಗಳೂರು.

ಚನ್ನಬಸಪ್ಪ ಹಿರೇಮಠ, ೧೯೯೯, ರಾಯಚೂರು-ಕೊಪ್ಪಳ ಜಿಲ್ಲೆಯ ಶಾಸನಗಳು, ಚೇತನ ಪ್ರಕಾಶನ, ಮಸ್ಕಿ.

ಚನ್ನಬಸವ ಹಿರೇಮಠ, ೨೦೦೦, ಎಡದೊರೆ ನಾಡು, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಚನ್ನಬಸವಯ್ಯ ಹಿರೇಮಠ, ೨೦೧೪, ಪ್ರಾಚೀನ ಕರ್ನಾಟಕದ ರಾಜಕೀಯ ವಿಭಾಗಗಳು, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ, ವಿದ್ಯಾರಣ್ಯ.

ಚಿದಾನಂದಮೂರ್ತಿ ಎಂ, ೨೦೦೨., ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಸಪ್ನ ಬುಕ್ ಹೌಸ್ ಗಾಂಧಿನಗರ, ಬೆಂಗಳೂರು.

ದೇವರಕೊಂಡಾರೆಡ್ಡಿ, ೨೦೦೨, ಲಿಪಿಯ ಹುಟ್ಟು ಮತ್ತು ಬೆಳವಣಿಗೆ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.

ನರಸಿಂಹಮೂರ್ತಿ ಎ.ವಿ., ಗೋಪಾಲ್ ಆರ್., ೨೦೧೦, ಕರ್ನಾಟಕ ವಾಸ್ತುಶಿಲ್ಪ ಉದ್ಯಾನ, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು.

ಪಂಚಮುಖಿ ಆರ್.ಎಸ್., ೧೯೮೧, ಕನಾಟಕದ ಶಾಸನಗಳು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

ಪ್ರಭಾಕರ್ ಎಂ.ಎನ್., ೨೦೧೭, ದೇವಾಲಯ ವಾಸ್ತುಶಿಲ್ಪ, ಕರ್ನಾಟಕ ಇತಿಹಾಸ ಸಂಶೋಧನ ಮಂಡಲ, ಧಾರವಾಡ.

ಮನೋಜ್ ಜಿ., ೨೦೧೫, ದೇವಾಲಯ ವಾಸ್ತು ವಿಜ್ಞಾನ ಶಾಸ್ತ್ರಗಳ ಹಿನ್ನೆಲೆಯಲ್ಲಿ, ಸುಬೋಧಿನಿ ಬುಕ್ ಪಬ್ಲಿಷರ್ಸ್ ಮತ್ತು ನಾಲೆಡ್ಜ್ ಅಕಾಡೆಮಿ, ಚಿತ್ರದುರ್ಗ.

ಮೋಹನ್ ಆರ್., ೨೦೧೯, ಕರ್ನಾಟಕದ ಆದಿಮ ಚಿತ್ರಕಲೆ, ಇತಿಹಾಸ ದರ್ಪಣ ಪ್ರಕಾಶನ, ಬೆಂಗಳೂರು.

ರಂಗರಾಜವನದುರ್ಗ, ೨೦೦೨, ಸಾಂಸ್ಕೃತಿಕ ಮುಖಾಮುಖಿ ರಾಯಚೂರು ಜಿಲ್ಲೆಯ ಶಾಸನಗಳ ಸಾಂಸ್ಕೃತಿಕ ವಿವೇಚನೆ, ಕನ್ನಡ ಸಾಹಿತ್ಯ ಪ್ರತಿಷ್ಠಾನ, ಬೆಂಗಳೂರು.

ರಮೇಶ ನಾಯಕ (ಸಂ), ೨೦೦೭, ಕರ್ನಾಟಕ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನಗಳು ಮರುಚಿಂತನೆ, ಪ್ರಾಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ, ವಿದ್ಯಾರಣ್ಯ.

ರಾಜಶೇಖರ ಸಿಂದಿಗಿ, ೧೯೮೮, ಕರ್ನಾಟಕದ ವಾಸ್ತುಶಿಲ್ಪ ಮತ್ತು ಚಿತ್ರಕಲೆ, ಸುಜಾತ ಪಬ್ಲಿಕೇಶನ್ಸ್, ಧಾರವಾಡ.

ಲಕ್ಷ್ಮಣ ತೆಲಗಾವಿ, ೨೦೦೪, ಮೌರ್ಯ ಮತ್ತು ಶಾತವಾಹನ ಯುಗ, ಕನ್ನಡ ವಿಶ್ವವಿದ್ಯಾಲಯ ಹಂಪಿ, ವಿದ್ಯಾರಣ್ಯ.

ವಾಸುದೇವ ಬಡಿಗೇರ, ೨೦೧೨, ಬಳ್ಳಾರಿ ಪರಿಸರದ ಸಾಂಸ್ಕೃತಿಕ ಪರಂಪರೆ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.

ವಾಸುದೇವನ್ ಸಿ.ಎಸ್., ೨೦೧೨, ಕರ್ನಾಟಕ ದೇವಾಲಯ ಕೋಶ ರಾಯಚೂರು ಜಿಲ್ಲೆ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ, ವಿದ್ಯಾರಣ್ಯ.

ಶಿವತಾರಕ ಕೆ.ಬಿ., ೨೦೦೧, ಕರ್ನಾಟಕ ಪುರಾತತ್ವ ನೆಲೆಗಳು, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ, ವಿದ್ಯಾರಣ್ಯ.

ಶ್ರೀನಿವಾಸ ಪಾಡಿಗಾರ, ೨೦೧೬, ಪುರಾತತ್ವಶಾಸ್ತ್ರ ಪರಿಚಯ, ರಾಮಾಶ್ರಯ ಚೈತನ್ಯ ಪ್ರಕಾಶನ, ಧಾರವಾಡ.

ಶೇಷಶಾಸ್ತ್ರಿ ಆರ್, ೨೦೧೭, ಕರ್ನಾಟಕದ ವೀರಗಲ್ಲುಗಳು, ಕಾಮಧೇನು ಪುಸ್ತಕ ಭವನ, ಬೆಂಗಳೂರು.

ಹೀರೆಮಠ ಎಸ್.ಎಂ., ೨೦೦೬, ಶಾಸನ ಪರಿಭಾಷೆ, ವಿದ್ಯಾನಿಧಿ ಪ್ರಕಾಶನ, ಗದಗ.

ಅನುವಾದಿತ ಕೃತಿಗಳು

ಆಲ್ಬರ್ಟಿನ್ ಗೌರ್ (ಮೂಲ), ಶ್ರೀನಿವಾಸ ಹಾವನೂರು, ಲಕ್ಷ್ಮೀನಾರಯಣ ಆರೋರಾ (ಅನು), ೨೦೦೩, ಪ್ರಾಚೀನ ಲೇಖನ ಸಾಮಾಗ್ರಿಗಳು, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ, ವಿದ್ಯಾರಣ್ಯ.

ಫ್ಲೀಟ್ ಜೆ.ಎಫ್ (ಮೂಲ), ಸಿ.ಪಿ.ಕೆ. (ಅನು), ೨೦೦೧, ಭಾರತೀಯ ಶಾಸನಶಾಸ್ತ್ರ ಪರಿಚಯ, ಲಕ್ಷ್ಮಿ ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್, ಮೈಸೂರು.

ಎಂ.ಫಿಲ್ ಪ್ರೌಢಪ್ರಬಂಧಗಳು

ಚನ್ನಬಸಪ್ಪ ಬಿ., ೨೦೦೦, ದೇವದುರ್ಗ ತಾಲ್ಲೂಕು ಒಂದು ಸಾಂಸ್ಕೃತಿಕ ಅಧ್ಯಯನ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

ತಿರುಪತಿ ಜಿ., ೨೦೦೭, ಮುಕ್ಕುಂದಿ ಇತಿಹಾಸ ದೇವಾಲಯ ಮತ್ತು ಶಾಸನಗಳ ಹಿನ್ನೆಲೆಯಲ್ಲಿ, ಕನ್ನಡ ವಿಶ್ವವಿದ್ಯಾಲಯ ಹಂಪಿ, ವಿದ್ಯಾರಣ್ಯ.

ನಾಗರಾಜ, ೨೦೧೮, ಮಸ್ಕಿ ಪರಿಸರದ ಇತಿಹಾಸ ಮತ್ತು ಪುರಾತತ್ವ ಅಧ್ಯಯನ, ಕನ್ನಡ ವಿಶ್ವವಿದ್ಯಾಲಯ ಹಂಪಿ, ವಿದ್ಯಾರಣ್ಯ.

ಪಿಎಚ್.ಡಿ ಮಹಾಪ್ರಬಂಧಗಳು

ಅಮರೇಶ ಹನುಮಂತ, ೨೦೧೪, ರಾಯಚೂರು ದೋ-ಅಬ್ ಪ್ರದೇಶ: ಅಧಿಕಾರ ಮತ್ತು ಹೋರಾಟ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ದೀಪಕ ಆಲೂರು, ೨೦೧೨, ಸಿಂಧ ಮನೆತನಗಳ ರಾಜಕೀಯ ಮತ್ತು ಸಾಂಸ್ಕೃತಿಕ ಅಧ್ಯಯನ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ.

ಪದ್ಮಜಾ ದೇಸಾಯಿ, ೨೦೧೫, ಹಂಪಿ ಪರಿಸರದ ವೈಷ್ಣವಶಿಲ್ಪಗಳು, ಕನ್ನಡ ವಿಶ್ವವಿದ್ಯಾಲಯ ಹಂಪಿ, ವಿದ್ಯಾರಣ್ಯ.

ಮೆಣಸಗಿ ಹೇಮಾವತಿ ಶಿವಾನಂದ, ೨೦೧೬, ಹಂಪಿ ಪರಿಸರದ ಶೈವಶಿಲ್ಪಗಳು, ಕನ್ನಡ ವಿಶ್ವವಿದ್ಯಾಲಯ ಹಂಪಿ, ವಿದ್ಯಾರಣ್ಯ.

ಸುಜಾತ ಮಲ್ಲನಗೌಡ, ೨೦೦೦, ರಾಯಚೂರು ಮತ್ತು ಕೊಪ್ಪಳ ಜಿಲ್ಲೆಗಳ ಕೋಟೆಗಳು ಒಂದು ಅಧ್ಯಯನ, ಕನ್ನಡ ವಿಶ್ವವಿದ್ಯಾಲಯ ಹಂಪಿ, ವಿದ್ಯಾರಣ್ಯ.

ದಿನಪತ್ರಿಕೆಗಳು

ಪ್ರಜಾವಾಣಿ ದಿನಪತ್ರಿಕೆ, ೨೪ ಫೆಬ್ರುವರಿ, ೨೦೧೧, ರಾಯಚೂರು ಇತಿಹಾಸ ಸಂಸ್ಕೃತಿ.

ವಿಜಯ ಕರ್ನಾಟಕ ದಿನಪತ್ರಿಕೆ, ೨೦ ಅಕ್ಟೋಬರ್, ೨೦೧೫, ಇತಿಹಾಸ ಸಾರುವ ಅಂಬಾದೇವಿ.

ಸಂಶೋಧನಾ ನಿಯತಕಾಲಿಕೆಗಳು

ಇತಿಹಾಸ ದರ್ಶನ, ಕರ್ನಾಟಕ ಇತಿಹಾಸ ಅಕಾದೆಮಿ, ಬೆಂಗಳೂರು.

ಕರ್ನಾಡಕ ಭಾರತಿ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

ಕನ್ನಡ ಸಾಹಿತ್ಯ ಪರಿಷತ್ ಪತ್ರಿಕೆ.

ಪ್ರಬುದ್ಧ ಕರ್ನಾಟಕ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು.

ಸಂಪಾದಕ ಕೃತಿಗಳು

ಅಮರೇಶ ಯತಗಲ್ (ಸಂ), ೨೦೧೦, ದೋ-ಅಬ್ ರಾಯಚೂರು ಇತಿಹಾಸ, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ರಾಯಚೂರು.

ಸಂಪುಟಗಳು

ಷೇಕ್‌ಅಲಿ ಬಿ (ಪ್ರ.ಸಂ), ೨೦೧೮, ಕರ್ನಾಟಕ ಚರಿತ್ರೆ ಸಂಪುಟಗಳು ೧ ರಿಂದ ೭, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ, ವಿದ್ಯಾರಣ್ಯ.


ಸ್ಮರಣಾ ಸಂಚಿಕೆಗಳು

ಬಸವಪ್ರಭು ಪಾಟಿಲ್ ಬೆಟ್ಟದೂರು (ಸಂ), ೨೦೧೬, ಎಡೆದೊರೆ ರಾಯಚೂರು ಜಿಲ್ಲಾ ದರ್ಶನ, ಸ್ವಾಗತ ಸಮಿತಿ ೮೨ನೆ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ, ರಾಯಚೂರು.

ಶಾಶ್ವತಸ್ವಾಮಿ ಮುಕ್ಕುಂದಿಮಠ (ಸಂ), ೧೯೯೪, ಹೊನ್ನಸಿರಿ, ರಾಯಚೂರು ಜಿಲ್ಲಾ ೩ನೆಯ ಕನ್ನಡ ಸಾಹಿತ್ಯ ಸಮ್ಮೇಳನ, ಸಿಂಧನೂರು, ರಾಯಚೂರು.


ನಕ್ಷೆಗಳು

ಕರ್ನಾಟಕ ರಾಜ್ಯ




ಕೃಪೆ : *www.onefivenine.com*

ರಾಯಚೂರು ಜಿಲ್ಲೆ



ಕೃಪೆ : *www.raichur.nic.in*

ಸಿಂಧನೂರು ತಾಲೂಕು



ಕೃಪೆ : ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ: ೭ ರಾಯಚೂರು ಜಿಲ್ಲೆ



ಕೃಪೆ : ಪ್ರಾಚೀನ ಕರ್ನಾಟಕದ ರಾಜಕೀಯ ವಿಭಾಗಳು

ಸಾಲಗುಂದೆ ೭೦




(ಅಳತೆಗೆ ಅನುಗುಣವಾಗಿಲ್ಲ)



ತಲನಕ್ಷೆಗಳು

ನೀಲಕಂಠೇಶ್ವರ ದೇವಾಲಯದ ತಲನಕ್ಷೆ




೧. ಗರ್ಭಗೃಹ


೨. ಅಂತರಾಳ

೩. ನವರಂಗ

೪. ಸೋಪಾನ

ಕಾಲಕಾಲೇಶ್ವರ ದೇವಾಲಯದ ತಲನಕ್ಷೆ





೧. ಗರ್ಭಗೃಹ


೨. ಅಂತರಾಳ

೩. ನವರಂಗ

೪. ದೇವಕೋಷ್ಠ

೫. ಶಾಸನ ಶಿಲೆ

ಜಕ್ಕಮ್ಮ ಗುಡಿಯ ತಲನಕ್ಷೆ




೧. ಗರ್ಭಗೃಹ


೨. ಅಂತರಾಳ

೩. ಸಭಾಮಂಟಪ


೪. ಸೋಪಾನ




ಪೈ ನಕ್ಷೆಗಳು




ದೇವಾಲಯಗಳ ಪಂಥವನ್ನು ಸೂಚಿಸುವ ಶೇಕಡವಾರು ಪೈ ನಕ್ಷೆ




ಮೂರ್ತಿಶಿಲ್ಪಗಳ ಪಂಥವನ್ನು ಸೂಚಿಸುವ ಶೇಕಡವಾರು ಪೈ ನಕ್ಷೆ



ಸ್ಮಾರಕ ಶಿಲ್ಪಗಳ ಬಗೆಗಳನ್ನು ಸೂಚಿಸುವ ಶೇಕಡವಾರು ಪೈ ನಕ್ಷೆ



ದೇವಾಲಯಗಳ ವಾಸ್ತು ಶೈಲಿ, ಕಾಲಮಾನ, ಸಂಖ್ಯೆ ಹಾಗೂ ಶೇಕಡವಾರು ಪ್ರಮಾಣವನ್ನು ಸೂಚಿಸುವ ಫೈ ನಕ್ಷೆ



ವಿವಿಧ ಮನೆತನಗಳ ಶಾಸನಗಳನ್ನು ಸೂಚಿಸುವ ಶೇಕಡವಾರು ಫೈ ನಕ್ಷೆ

ಕೋಷ್ಟಕಗಳು

ಕೋಷ್ಟಕ–೦೧ : ದೇವಾಲಯಗಳು

ಕ್ರ.ಸಂ.	ದೇವಾಲಯ	ಊರು	ವಾಸ್ತು ಶೈಲಿ	ಕಾಲ	ಪಂಥ	ಪ್ರಕಟಣೆ
೦೧	ಅಂಭಾದೇವಿ	ಅಂಭಾಮಠ	ವಿಜಯನಗರೋತ್ತರ	೧೬–೧೭ನೆ ಶತಮಾನ	ಶಾಕ್ತ	---
೦೨	ಆಂಜನೇಯ	ಸೋಮಲಾಪುರ	ವಿಜಯನಗರೋತ್ತರ	೧೭–೧೮ನೆ ಶತಮಾನ	ವೈಷ್ಣವ	---
೦೩	ಆನೆಶಂಕರ	ಸಾಲಗುಂದ	ಕಲ್ಯಾಣ ಚಾಲುಕ್ಯ	೧೨–೧೩ನೆ ಶತಮಾನ	ಶೈವ	ಕ.ದೇ.ಕೋ. ರಾ.
೦೪	ಈಶ್ವರ	ಉಪ್ಪಳ	ಕಲ್ಯಾಣ ಚಾಲುಕ್ಯ	೧೨–೧೩ನೆ ಶತಮಾನ	ಶೈವ	---
೦೫	ಈಶ್ವರ	ದಢೇಸೂಗೂರು	ಕಲ್ಯಾಣ ಚಾಲುಕ್ಯ	೧೨–೧೩ನೆ ಶತಮಾನ	ಶೈವ	---
೦೬	ಈಶ್ವರ (ಕಾಪಾಳೇಶ್ವರ)	ಮುಕ್ಕುಂದ	ವಿಜಯನಗರ	೧೪–೧೫ನೆ ಶತಮಾನ	ಶೈವ	ಕ.ದೇ.ಕೋ. ರಾ.
೦೭	ಕಾಲ ಕಾಲೇಶ್ವರ	ಸಾಲಗುಂದ	ಕಲ್ಯಾಣ ಚಾಲುಕ್ಯ	೧೨–೧೩ನೆ ಶತಮಾನ	ಶೈವ	ಕ.ದೇ.ಕೋ. ರಾ.
೦೮	ಚಿದಾನಂದ ಅವಧೂತ	ಅಂಭಾಮಠ	ವಿಜಯನಗರೋತ್ತರ	೧೬–೧೭ನೆ ಶತಮಾನ	ಶೈವ	ಕ.ದೇ.ಕೋ. ರಾ.
೦೯	ಜಕ್ಕಮ್ಮ	ಸಾಲಗುಂದ	ಕಲ್ಯಾಣ ಚಾಲುಕ್ಯ	೧೦–೧೧ನೆ ಶತಮಾನ	ಶೈವ	ಕ.ದೇ.ಕೋ. ರಾ.
೧೦	ಬಂಡೇರಂಗನಾಥ	ರವುಡಕುಂದ	ವಿಜಯನಗರೋತ್ತರ	೧೭–೧೮ನೆ ಶತಮಾನ	ವೈಷ್ಣವ	---
೧೧	ಭೈರವ	ಉಪ್ಪಳ	ಕಲ್ಯಾಣ ಚಾಲುಕ್ಯ	೧೨–೧೩ನೆ ಶತಮಾನ	ಶೈವ	---
೧೨	ಮುರಾರಿ	ಮುಕ್ಕುಂದ	ಕಲ್ಯಾಣ ಚಾಲುಕ್ಯ	೧೨–೧೩ನೆ ಶತಮಾನ	ವೈಷ್ಣವ	ಕ.ದೇ.ಕೋ. ರಾ.
೧೩	ನೀಲಕಂಠೇಶ್ವರ	ಸಾಲಗುಂದ	ಕಲ್ಯಾಣ ಚಾಲುಕ್ಯ	೧೧–೧೨ನೆ ಶತಮಾನ	ಶೈವ	ಕ.ದೇ.ಕೋ. ರಾ.
೧೪	ಸೂರ್ಯ	ಉಪ್ಪಳ	ಕಲ್ಯಾಣ ಚಾಲುಕ್ಯ	೧೧–೧೨ನೆ	ವೈಷ್ಣವ	ಕ.ದೇ.ಕೋ.

				ಶತಮಾನ		ರಾ.
೧೫	ಹನುಮಂತ	ಮುಕ್ಕುಂದ	ವಿಜಯನಗರೋತ್ತರ	೧೭–೧೮ನೆ ಶತಮಾನ	ವೈಷ್ಣವ	ಕ.ದೇ.ಕೋ. ರಾ.

ಕೋಷ್ಟಕ–೦೨ : ಮೂರ್ತಿಶಿಲ್ಪಗಳು

ಕ್ರ.ಸಂ.	ಮೂರ್ತಿಶಿಲ್ಪ	ಊರು	ಶೈಲಿ	ಕಾಲ	ಪಂಥ
೦೧	ಆಂಜನೇಯ	ಕೆಂಗಲ್	ವಿಜಯನಗರೋತ್ತರ	೧೭–೧೮ನೆ ಶತಮಾನ	ವೈಷ್ಣವ
೦೨	ಆಂಜನೇಯ	ಬಸ್ಸಾಪೂರ ಡಿ	ವಿಜಯನಗರೋತ್ತರ	೧೭–೧೮ನೆ ಶತಮಾನ	ವೈಷ್ಣವ
೦೩	ಆಂಜನೇಯ	ಸೋಮಲಾಪುರ	ವಿಜಯನಗರೋತ್ತರ	೧೭–೧೮ನೆ ಶತಮಾನ	ವೈಷ್ಣವ
೦೪	ಆಂಜನೇಯ	ದಢೇಸೂಗೂರು	ವಿಜಯನಗರೋತ್ತರ	೧೭–೧೮ನೆ ಶತಮಾನ	ವೈಷ್ಣವ
೦೫	ಜಯ–ವಿಜಯ	ಸಾಲಗುಂದ	ಕಲ್ಯಾಣ ಚಾಲುಕ್ಯ	೧೨–೧೩ನೆ ಶತಮಾನ	ಶೈವ
೦೬	ತೃಟಿತ ಶಿಲ್ಪಗಳು	ಸಾಲಗುಂದ	ಕಲ್ಯಾಣ ಚಾಲುಕ್ಯ	೧೨–೧೩ನೆ ಶತಮಾನ	---
೦೭	ನಂದಿಶಿಲ್ಪಗಳು	ಕೆಂಗಲ್	ಕಲ್ಯಾಣ ಚಾಲುಕ್ಯ	೧೨–೧೩ನೆ ಶತಮಾನ	ಶೈವ
೦೮	ನಾಗಶಿಲ್ಪ	ಸಾಲಗುಂದ	ಕಲ್ಯಾಣ ಚಾಲುಕ್ಯ	೧೨–೧೩ನೆ ಶತಮಾನ	ಶೈವ
೦೯	ಬಂಡೇರಂಗನಾಥ	ರವುಡಕುಂದ	ವಿಜಯನಗರೋತ್ತರ	೧೮–೧೯ನೆ ಶತಮಾನ	ವೈಷ್ಣವ
೧೦	ಭೈರವ	ಉಪ್ಪಳ	ಕಲ್ಯಾಣ ಚಾಲುಕ್ಯ	೧೨–೧೩ನೆ ಶತಮಾನ	ಶೈವ
೧೧	ಮದನಿಕೆ	ಸಾಲಗುಂದ	ಕಲ್ಯಾಣ ಚಾಲುಕ್ಯ	೧೨–೧೩ನೆ ಶತಮಾನ	---
೧೨	ವಿನಾಯಕ	ದಢೇಸೂಗೂರು	ಕಲ್ಯಾಣ ಚಾಲುಕ್ಯ	೧೨–೧೩ನೆ ಶತಮಾನ	ಶೈವ

೧೩	ವಿನಾಯಕ	ಉಪ್ಪಳ	ಕಲ್ಯಾಣ ಚಾಲುಕ್ಯ	೧೨-೧೩ನೆ ಶತಮಾನ	ಶೈವ
೧೪	ವಿನಾಯಕ	ರವುಡಕುಂದ	ಕಲ್ಯಾಣ ಚಾಲುಕ್ಯ	೧೨-೧೩ನೆ ಶತಮಾನ	ಶೈವ
೧೫	ವಿನಾಯಕ	ಸಾಲಗುಂದ	ಕಲ್ಯಾಣ ಚಾಲುಕ್ಯ	೧೨-೧೩ನೆ ಶತಮಾನ	ಶೈವ
೧೬	ಸುಬ್ರಹ್ಮಣ್ಯ	ದಢೇಸೂಗುರು	ಕಲ್ಯಾಣ ಚಾಲುಕ್ಯ	೧೨-೧೩ನೆ ಶತಮಾನ	ಶೈವ
೧೭	ಸುಬ್ರಹ್ಮಣ್ಯ	ಸಾಲಗುಂದ	ಕಲ್ಯಾಣ ಚಾಲುಕ್ಯ	೧೨-೧೩ನೆ ಶತಮಾನ	ಶೈವ

ಕೋಷ್ಠಕ-೦೩ : ಸ್ಮಾರಕಗಳು

ಕ್ರಸಂ	ಸ್ಮಾರಕ	ಊರು	ಶೈಲಿ	ಕಾಲ	ಪ್ರಕಟಣೆ
೦೧	ಜಕ್ಕಮ್ಮ ಬಾವಿ	ಸಾಲಗುಂದ	ಕಲ್ಯಾಣ ಚಾಲುಕ್ಯ	೧೨-೧೩ನೆ ಶತಮಾನ	ಕ.ದೇ.ಕೋ.ರಾ
೦೨	ಮುಕ್ಕುಂದ ಕೋಟೆ	ಮುಕ್ಕುಂದ	---	---	ರಾ.ಕೊ.ಜಿ.ಕೋ.ಅ
೦೩	ರವುಡಕುಂದ ಕೋಟೆ	ರವುಡಕುಂದ	---	---	ರಾ.ಕೊ.ಜಿ.ಕೋ.ಅ
೦೪	ಸಾಲಗುಂದ ಕೋಟೆ	ಸಾಲಗುಂದ	---	---	---

ಕೋಷ್ಠಕ-೦೪ : ಸ್ಮಾರಕ ಶಿಲ್ಪಗಳು

ಕ್ರಸಂ.	ಸ್ಮಾರಕ ಶಿಲ್ಪ	ಊರು	ರಾಜಮನೆತನ	ಕಾಲ	ಪ್ರಕಟಣೆ
೦೧	ವೀರಗಲ್ಲು	ಉಪ್ಪಳ	ಕಲ್ಯಾಣ ಚಾಲುಕ್ಯ	೧೧-೧೨ನೆ ಶತಮಾನ	---
೦೨	ವೀರಗಲ್ಲು	ಉಪ್ಪಳ	ಕಲ್ಯಾಣ ಚಾಲುಕ್ಯ	೧೧-೧೨ನೆ ಶತಮಾನ	---

೦೩	ವೀರಗಲ್ಲು	ರವುಡಕುಂದ	ಕಲ್ಯಾಣ ಚಾಲುಕ್ಯ	೧೧-೧೨ನೆ ಶತಮಾನ	---
೦೪	ವೀರಗಲ್ಲು	ಮುಕ್ಕುಂದ	ವಿಜಯನಗರೋತ್ತರ	೧೫-೧೬ನೆ ಶತಮಾನ	ಮು.ಇ.
೦೫	ವೀರಗಲ್ಲು	ಸೋಮಲಾಪುರ	ವಿಜಯನಗರೋತ್ತರ	೧೫-೧೬ನೆ ಶತಮಾನ	---
೦೬	ಬಂದೂಕು ವೀರಗಲ್ಲು	ಕೆಂಗಲ್	ವಿಜಯನಗರೋತ್ತರ	೧೫-೧೬ನೆ ಶತಮಾನ	---
೦೭	ವೀರಗಲ್ಲು	ಬಸ್ಸಾಪೂರ ಡಿ	ವಿಜಯನಗರೋತ್ತರ	೧೫-೧೬ನೆ ಶತಮಾನ	---
೦೮	ಬಂದೂಕು ವೀರಗಲ್ಲು	ಮುಕ್ಕುಂದ	ವಿಜಯನಗರೋತ್ತರ	೧೫-೧೬ನೆ ಶತಮಾನ	ಮು.ಇ.
೦೯	ಮಹಾಸತಿಗಲ್ಲು	ಉಪ್ಪಳ	ವಿಜಯನಗರ	೧೪-೧೫ನೆ ಶತಮಾನ	---
೧೦	ವೀರಸತಿಗಲ್ಲು	ಸೋಮಲಾಪುರ	ವಿಜಯನಗರ	೧೪-೧೫ನೆ ಶತಮಾನ	---


ಕೋಷ್ಟಕ-೦೫ : ಶಾಸನಗಳು


ಕ್ರ.ಸಂ.	ರಾಜಮನೆತನ	ಅರಸ	ಶಾಸನ ಇರುವ ಸ್ಥಳ	ಶಾಸನ ಕಾಲ	ಪ್ರಕಟಣೆ
೦೧	ಸಿಂಧರು	ಕಣ್ಣರಸ	ಮುಕ್ಕುಂದಕೋಟೆ ಬಳಿ	ಕ್ರಿ.ಶ.೧೦೨೧	ಕ.ವಿ.ಶಾ.ಸಂ.ರಾ.
೦೨	ಕಲ್ಯಾಣ ಚಾಲುಕ್ಯ	---	ಮುಕ್ಕುಂದ ಮುರಹರಿ ದೇವಾಲಯದ ಬಳಿ	---	ಕ.ವಿ.ಶಾ.ಸಂ.ರಾ.
೦೩	ಕಲ್ಯಾಣ ಚಾಲುಕ್ಯ	ತ್ರೈಲೋಕ್ಯಮಲ್ಲ	ರವುಡಕುಂದ ಬಂಡೇ ರಂಗನಾಥ	---	*A.R.No. B 104 of 1985-86;*

			ದೇವಾಲಯದ ಹತ್ತಿರ		ಕು.ಸೀ.ನಂ೨೩;*I.K.III.No.304*
೦೪	ಕಲ್ಯಾಣ ಚಾಲುಕ್ಯ	ವಿಕ್ರಮಾದಿತ್ಯ	ಸಾಲಗುಂದ ನೀಲಕಂಠೇಶ್ವರ ದೇವಾಲದ ನವರಂಗ	ಕ್ರಿ.ಶ.೧೦೯೩	*A.R.No. B 105 of 1985-86;* ಕು.ಸೀ.ನಂ ೨೪;*I.K.III.No.305.*
೦೫	ಕಲ್ಯಾಣ ಚಾಲುಕ್ಯ	ತ್ರೈಲೋಕ್ಯಮಲ್ಲ	ಮುಕ್ಕುಂದ ಪಾಪನಾತೇಶ್ವರ ದೇವಾಲಯ	ಕ್ರಿ.ಶ.೧೦೬೬	*A.R.No. B 101 of 1985-86; I.K.III.No.302.*
೦೬	ಕಲ್ಯಾಣ ಚಾಲುಕ್ಯ	ತ್ರಿಭುವನಮಲ್ಲ	ಮುಕ್ಕುಂದ ಮುರಹರಿ ದೇವಾಲಯದ ಬಳಿ	ಕ್ರಿ.ಶ.೧೦೮೮.	*A.R.No. B 169 of 1980-81; I.K.III.No.300.*
೦೭	ಕಲ್ಯಾಣ ಚಾಲುಕ್ಯ	ವಿಕ್ರಮಾದಿತ್ಯ	ಮುಕ್ಕುಂದ ಮುರಹರಿ ದೇವಾಲಯದ ಬಲಗಡೆ	ಕ್ರಿ.ಶ.೧೦೮೮	*A.R.No. B 169 of 1980-81; I.K.III.No.300.*
೦೮	ಕಲ್ಯಾಣ ಚಾಲುಕ್ಯ	ತ್ರಿಭುವನಮಲ್ಲ	ಜಾಲಿಹಾಳು ಈಶ್ವರ ದೇವರಗುಡಿ ಬಳಿ	ಕ್ರಿ.ಶ.೧೧೦೬	ಕ.ವಿ.ಶಾ.ಸಂ.ರಾ.
೦೯	ಕಲ್ಯಾಣ ಚಾಲುಕ್ಯ	ಭೂಲೋಕಮಲ್ಲ	ಮುಕ್ಕುಂದ ಮುರಹರಿ ದೇವಾಲಯದ ಬಲಗಡೆ	ಕ್ರಿ.ಶ.೧೧೩೪	*A.R.No. B 169 of 1980-81; I.K.III.No.300*
೧೦	ಕಲ್ಯಾಣ ಚಾಲುಕ್ಯ	ಭೂಲೋಕಮಲ್ಲ	ಮುಕ್ಕುಂದ ಮುರಹರಿ ದೇವಾಲದ ನವರಂಗ	ಕ್ರಿ.ಶ.೧೧೩೪	ಕ.ವಿ.ಶಾ.ಸಂ.ರಾ.
೧೧	ಕಲ್ಯಾಣ ಚಾಲುಕ್ಯ	ಮಲ್ಲಿಕಾರ್ಜುನ	ಸಾಲಗುಂದ ಕಾಲಕಾಲೇಶ್ವರ ದೇವಾಲಯ	ಕ್ರಿ.ಶ.೧೧೫೩	*A.R.No. B 107 of 1985-86; I.K.III.No.307.*
೧೨	---	---	ಸಿದ್ಧರಾಂಪುರ ಅಂದರಕಲ್ಲು	ಕ್ರಿ.ಶ.೧೫೨೬	ಕ.ವಿ.ಶಾ.ಸಂ.ರಾ.


			ಮಂಟಪದ ಬಳಿ		
೧೩	ವಿಜಯನಗರ	ಶ್ರೀಕೃಷ್ಣದೇವರಾಯ	ಸಾಲಗುಂದ ಮಾಬಮ್ಮನ ಮನೆ ಸಮೀಪ	ಕ್ರಿ.ಶ.೧೫೨೮	*A.R.No. B 108 of 1985-86; I.K.III.No.308.*
೧೪	ವಿಜಯನಗರ	ಸದಾಶಿವದೇವ	ಮುಕ್ಕುಂದ ಕೋಟೆಯ ಕೆಳಭಾಗ	ಕ್ರಿ.ಶ.೧೫೫೬	ಕ.ವಿ.ಶಾ.ಸಂ.ರಾ.
೧೫	ವಿಜಯನಗರ	---	ಮುಕ್ಕುಂದ ಸಂಜೀವರೆಡ್ಡಿಯವರ ತೋಟದಲ್ಲಿ	ಕ್ರಿ.ಶ.೧೫೬೧	ಕ.ವಿ.ಶಾ.ಸಂ.ರಾ.
೧೬	---	---	ಮುಕ್ಕುಂದ ವೀರೇಶಪ್ಪನ ಹೊಲದ ಹಿತ್ತಲಲ್ಲಿ	ಕ್ರಿ.ಶ.೧೫೮೫	ಕ.ವಿ.ಶಾ.ಸಂ.ರಾ.
೧೭	ವಿಜಯನಗರೋತ್ತರ	---	ಮುಕ್ಕುಂದ ಬೀರಲಿಂಗೇಶ್ವರ ದೇವಾಲಯದ ಬಲಗಡೆ	ಕ್ರಿ.ಶ.೧೫೯೪	ಕ.ವಿ.ಶಾ.ಸಂ.ರಾ.
೧೮	---	---	ಅರಳಿಹಳ್ಳಿ ಮುಕ್ಕುಂದ ಗ್ರಾಮದ ಸಮೀಪ	ಕ್ರಿ.ಶ.೧೬೦೩	ಕ.ವಿ.ಶಾ.ಸಂ.ರಾ.
೧೯	---	---	ಮುಕ್ಕುಂದ ಪಶ್ಚಿಮಕ್ಕೆ ಹೊಲದಲ್ಲಿ	ಕ್ರಿ.ಶ.೧೬೮೬	ಕ.ವಿ.ಶಾ.ಸಂ.ರಾ.
೨೦	---	---	ಮುಕ್ಕುಂದ ರಾಮಲಿಂಗೇಶ್ವರ ದೇವಾಲಯದ ಬಳಿ	೧೨ನೆ ಶತಮಾನ	ಕ.ವಿ.ಶಾ.ಸಂ.ರಾ.
೨೧	---	---	ಮುಕ್ಕುಂದ ನದಿ ದಡದ ನೆಲಮಟ್ಟದಲ್ಲಿ	೧೮ನೆ ಶತಮಾನ	ಕ.ವಿ.ಶಾ.ಸಂ.ರಾ.


ಛಾಯಾಚಿತ್ರಗಳು





ಕಡತುರ ಕಂಟಿಯಲ್ಲಿ ದೊರೆತ ಆದಿ ಹಳೆ ಶಿಲಾಯುಗ ಕಾಲದ ಮಡಕೆ ಚೂರುಗಳು (***Hand Made Potterys)*** ಸೋಮಲಾಪುರ (ಕ್ರಮವಾಗಿ ಎಡದಿಂದ ಬಲಕ್ಕೆ, ಹೊರಭಾಗ ಮತ್ತು ಒಳಭಾಗ)







ಸೋಮಲಾಪುರದ ಕಡತುರ ಕಂಟಿಯಲ್ಲಿ ದೊರೆತ ನವಶಿಲಾಯುಗ ಮತ್ತು ಸೂಕ್ಷ್ಮ ಶಿಲಾಯುಗದ ಮಡಕೆ ಚೂರುಗಳು (ಕ್ರಮವಾಗಿ ಎಡದಿಂದ ಬಲಕ್ಕೆ, ಹೊರಭಾಗ ಮತ್ತು ಒಳಭಾಗ)



ಹಾಳೂರು ಮತ್ತು ಕಡತುರ ಕಂಟಿಯಲ್ಲಿ ದೊರೆತ ಪ್ರಾಗಿತಿಹಾಸ ಕಾಲದ ಆಯುಧಗಳು, ಸೋಮಲಾಪುರ



ಸೋಮಲಾಪುರದ ಹಾಳೂರು ಮತ್ತು ಅಲ್ಲಿನ ಕಡತುರ ಕಂಟಿಯಲ್ಲಿ ದೊರೆತ ಆಯುಧಗಳು (ಕ್ರಮವಾಗಿ ಎಡದಿಂದ ಬಲಕ್ಕೆ, ಸೂಕ್ಷ್ಮ ಶಿಲಾಯುಗದ ಕೈಕೊಡಲಿ, ನವ ಶಿಲಾಯುಗದ ಕೈಕೊಡಲಿ, ತಾಮ್ರ ಶಿಲಾಯುಗದ ಕೈಕೊಡಲಿ)



ಅದೇ ನೆಲೆಯಲ್ಲಿ ದೊರೆತ ತ್ರಿಕೋನಾಕಾರದ ಆಯುಧಗಳು



ಅದೇ ನೆಲೆಯಲ್ಲಿ ಕಾಣಸಿಗುವ ಬೃಹತ್ ಶಿಲಾಯುಗ ಕಾಲದ ಕಲ್ಲುವೃತ್ತ ಮಾದರಿಯ ಸಮಾಧಿಗಳು




ಸೋಮಲಾಪುರದ ಹಾಳೂರಿನಿಂದ ೧.೫ ಕಿ.ಮೀ ದೂರದಲ್ಲಿ ಸಿಗುವ ಪ್ರಾಗಿತಿಹಾಸ ನೆಲೆಯ ಒಂದು ನೋಟ



ಅದೇ ನೆಲೆಯ ಮತ್ತೊಂದು ನೋಟ



ಹಾಳೂರು ಪರಿಸರದ ಒಂದು ನೋಟ, ಸೋಮಲಾಪುರ






ಕಾಲಕಾಲೇಶ್ವರ ದೇವಾಲಯದ ಗರ್ಭಗೃಹದ ಬಾಗಿಲವಾಡ ಮತ್ತು ನವರಂಗದಲ್ಲಿನ ಕಂಬಗಳು

ಹಾಗೂ ಶಾಸನ ಶಿಲೆ, ಸಾಲಗುಂದ





ಆನೆ ಶಂಕರ ದೇವಾಲಯ ಮತ್ತು ನವರಂಗದಲ್ಲಿನ ಕಂಬ, ಸಾಲಗುಂದ







ಆನೆ ಶಂಕರ ದೇವಾಲಯದ ಗರ್ಭಗೃಹದ ಬಾಗಿಲವಾಡ ಹಾಗೂ ಭಿತ್ತಿ, ಸಾಲಗುಂದ



ಜಕ್ಕಮ್ಮ ಗುಡಿ, ನೀಲಕಂಠೇಶ್ವರ ದೇವಾಲಯ ಹಾಗೂ ಅವುಗಳ ಮುಂದೆ ಕಾಣುವ ಪುಷ್ಕರಣಿ,

ಸಾಲಗುಂದ





ಜಕ್ಕಮ್ಮ ಗುಡಿ ಹಾಗೂ ಬಾವಿಯ ಒಂದು ನೋಟ, ಸಾಲಗುಂದ






ನೀಲಕಂಠೇಶ್ವರ ದೇವಾಲಯದ ನವರಂಗದ ಕಂಬ, ಹಾಗೂ ನವರಂಗ, ಸಾಲಗುಂದ



ಹಾಳೂರಿನಲ್ಲಿರುವ ಕಲ್ಯಾಣ ಚಾಲುಕ್ಯರ ಕಾಲದ ಬಿಲ್ಲು ಬಾಣ ಹಿಡಿದು ನಿಂತಿರುವ ವೀರಗಲ್ಲುಗಳು,
ಉಪ್ಪಳ




ಹಾಳೂರಿನಲ್ಲಿರುವ ವಿಜಯನಗರ ಕಾಲದ ವೀರಮಾಸ್ತಿಗಲ್ಲು, ಉಪ್ಪಳ





ವಿಜಯನಗರ ಕಾಲದ ವೀರಗಲ್ಲುಗಳು, ಸೋಮಲಾಪುರ





ತೃಟಿತ ಮೂರ್ತಿಶಿಲ್ಪ, ಸಾಲಗುಂದ ಹಾಗೂ ಹಾಳೂರಿನಲ್ಲಿ ಕಾಣಸಿಗುವ ಭೈರವ ಶಿಲ್ಪ, ಉಪ್ಪಳ

ಕನ್ನಡ ವಿಶ್ವವಿದ್ಯಾಲಯ

ಮಾತೆಂಬುದು ಜ್ಯೋತಿರ್ಲಿಂಗ



ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ